# ಇತಿಹಾಸ ಮತ್ತು ನಾಗರಿಕಶಾಸ್ತ್ರ

## ಎಂಟನೆಯ ಇಯತ್ತೆ














# ಭಾರತದ ಸಂವಿಧಾನ

## ಭಾಗ 4 ಕ

## ನಾಗರಿಕರ ಮೂಲಭೂತ ಕರ್ತವ್ಯಗಳು

**ಅನುಚ್ಛೇದ 51 ಕ**

**ಮೂಲಭೂತ ಕರ್ತವ್ಯಗಳು- ಪ್ರತಿಯೊಬ್ಬ ಭಾರತೀಯ ನಾಗರಿಕನ ಈ ಕರ್ತವ್ಯಗಳು ಇರುತ್ತವೆಯೆಂದರೆ ಅವನು-**

(ಕ) ಪ್ರತಿಯೊಬ್ಬ ನಾಗರಿಕನು ಸಂವಿಧಾನವನ್ನು ಪಾಲಿಸಬೇಕು. ಸಂವಿಧಾನದಲ್ಲಿಯ ಆದರ್ಶಗಳು ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆಗಳನ್ನು ಗೌರವಿಸಬೇಕು.

(ಖ) ಸ್ವಾತಂತ್ರ್ಯಕ್ಕಾಗಿ ನಡೆದ ಹೋರಾಟಕ್ಕೆ ಸ್ಫೂರ್ತಿ ನೀಡಿದ ಆದರ್ಶಗಳನ್ನು ಪಾಲಿಸಬೇಕು.

(ಗ) ದೇಶದ ಸಾರ್ವಭೌಮತ್ವ, ಐಕ್ಯತೆ ಮತ್ತು ಸಮಗ್ರತೆಯನ್ನು ಸುರಕ್ಷಿತವಾಗಿಡುವ ಸಲುವಾಗಿ ಪ್ರಯತ್ನಶೀಲರಾಗಿರಬೇಕು.

(ಘ) ನಮ್ಮ ದೇಶದ ರಕ್ಷಣೆ ಮಾಡಬೇಕು. ದೇಶದ ಸೇವೆ ಮಾಡಬೇಕು.

(ಙ) ಎಲ್ಲ ಪ್ರಕಾರದ ಭೇದಭಾವಗಳನ್ನು ಮರೆತು ಒಗ್ಗಟ್ಟನ್ನು ಬೆಳೆಸಬೇಕು ಹಾಗೂ ಸಹೋದರ ಭಾವನೆಯನ್ನು ಉತ್ತೇಜಿಸಬೇಕು. ಸ್ತ್ರೀಯರ ಗೌರವಕ್ಕೆ ಚ್ಯುತಿ ತರುವಂತಹ ರೂಢಿಗಳನ್ನು ತ್ಯಜಿಸಬೇಕು.

(ಚ) ನಮ್ಮ ಸಮ್ಮಿಶ್ರ ಸಂಸ್ಕೃತಿಯ ಪರಂಪರೆಯನ್ನು ಕಾಪಾಡಬೇಕು.

(ಛ) ನೈಸರ್ಗಿಕ ಪರಿಸರವನ್ನು ಸಂರಕ್ಷಿಸಬೇಕು. ಸಜೀವ ಪ್ರಾಣಿಗಳ ಮೇಲೆ ದಯೆ ತೋರಿಸಿರಿ.

(ಜ) ವೈಜ್ಞಾನಿಕ ಮನೋಭಾವನೆ, ಮಾನವೀಯತೆ ಮತ್ತು ಜಿಜ್ಞಾಸು ಪ್ರವೃತ್ತಿಯನ್ನು ಬೆಳೆಸಿಕೊಳ್ಳಬೇಕು.

(ಝ) ಸಾರ್ವಜನಿಕ ಆಸ್ತಿ-ಪಾಸ್ತಿಗಳನ್ನು ರಕ್ಷಿಸಬೇಕು. ಹಿಂಸಾಚಾರವನ್ನು ತ್ಯಜಿಸಬೇಕು.

(ಞ) ರಾಷ್ಟ್ರದ ಉತ್ತರೋತ್ತರ ಪ್ರಗತಿಯನ್ನು ಸಾಧಿಸಲು ವೈಯಕ್ತಿಕ ಹಾಗೂ ಸಾಮೂಹಿಕ ಚಟುವಟಿಕೆಗಳಲ್ಲಿ ಭಾಗವಹಿಸಬೇಕು.

(ಟ) 6 ರಿಂದ 14 ವರ್ಷ ವಯೋಮಾನದಲ್ಲಿಯ ತಮ್ಮ ಮಕ್ಕಳಿಗೆ ಪೋಷಕರು ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಡಬೇಕು.

ಸರಕಾರ ನಿರ್ಣಯ ಕ್ರಮಾಂಕ: ಅಭ್ಯಾಸ - 2116/(ಪ್ರ.ಕ. 43/16) ಎಸ್‌ಡಿ-4 ದಿನಾಂಕ 25.4.2016 ಅನ್ವಯ ಸ್ಥಾಪಿಸಲಾದ ಸಮನ್ವಯ ಸಮಿತಿಯು ದಿನಾಂಕ 29.12.2017ರಂದು ನಡೆದ ಸಭೆಯಲ್ಲಿ ಈ ಪಠ್ಯಪುಸ್ತಕವನ್ನು ಕ್ರಿ.ಶ. 2018-19 ಈ ಶೈಕ್ಷಣಿಕ ವರ್ಷದಿಂದ ನಿರ್ಧರಿಸಲು ಮಾನ್ಯತೆ ಕೊಡಲಾಗಿದೆ.

# ಇತಿಹಾಸ ಮತ್ತು ನಾಗರಿಕಶಾಸ್ತ್ರ

## ಎಂಟನೆಯ ಇಯತ್ತೆ

ಮಹಾರಾಷ್ಟ್ರ ರಾಜ್ಯ, ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4.

AKFAVJ

ತಮ್ಮ ಸ್ಮಾರ್ಟಫೋನದ ಮೇಲೆ DIKSHA App ಮೂಲಕ ಪಠ್ಯಪುಸ್ತಕದ ಮೊದಲನೆಯ ಪುಟದ ಮೇಲಿರುವ Q.R. Codeದ ಮೂಲಕ ಡಿಜಿಟಲ್ ಪಠ್ಯಪುಸ್ತಕ ಮತ್ತು ಪ್ರತಿಯೊಂದು ಪಾಠದಲ್ಲಿರುವ Q.R. Codeದ ಮೂಲಕ ಆ ಪಾಠಕ್ಕೆ ಸಂಬಂಧಿಸಿದಂತೆ ಅಧ್ಯಯನ-ಅಧ್ಯಾಪನದ ಸಲುವಾಗಿ ಉಪಯುಕ್ತ ದೃಕ್-ಶ್ರಾವ್ಯ ಸಾಹಿತ್ಯ ಉಪಲಬ್ಧವಾಗುವುದು.

ಪ್ರಥಮಾವೃತ್ತಿ : 2018
ಪುನರ್ಮುದ್ರಣ :
ಸಪ್ಟೆಂಬರ 2021

© ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 411004.

ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಕಡೆಗೆ ಈ ಪುಸ್ತಕದ ಎಲ್ಲ ಹಕ್ಕುಗಳು ಇರುತ್ತವೆ. ಈ ಪುಸ್ತಕದಲ್ಲಿಯ ಯಾವುದೇ ಭಾಗವನ್ನು ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳದ ಸಂಚಾಲಕರ ಲಿಖಿತ ಅನುಮತಿ ಇಲ್ಲದೆ ಉದ್ಧೃತಗೊಳಿಸಬಾರದು.

**ಇತಿಹಾಸ ವಿಷಯ ಸಮಿತಿ**

ಡಾ. ಸದಾನಂದ ಮೋರೆ, ಅಧ್ಯಕ್ಷ
ಶ್ರೀ. ಮೋಹನ ಶೇಟೆ, ಸದಸ್ಯ
ಶ್ರೀ. ಪಾಂಡುರಂಗ ಬಲಕವಡೆ, ಸದಸ್ಯ
ಡಾ. ಶುಭಾಂಗನಾ ಅತ್ರೆ, ಸದಸ್ಯ
ಡಾ. ಸೋಮನಾಥ ರೋಡೆ, ಸದಸ್ಯ
ಶ್ರೀ. ಬಾಪುಸಾಹೇಬ ಶಿಂದೆ, ಸದಸ್ಯ
ಶ್ರೀ. ಬಾಳಕೃಷ್ಣ ಚೋಪಡೆ, ಸದಸ್ಯ
ಶ್ರೀ. ಪ್ರಶಾಂತ ಸರೂಡಕರ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ - ಸಚಿವ

**ನಾಗರಿಕಶಾಸ್ತ್ರ ವಿಷಯ ಸಮಿತಿ**

ಡಾ. ಶ್ರೀಕಾಂತ ಪರಾಂಜಪೆ, ಅಧ್ಯಕ್ಷ
ಪ್ರಾ. ಸಾಧನಾ ಕುಲಕರ್ಣಿ, ಸದಸ್ಯ
ಡಾ. ಪ್ರಕಾಶ ಪವಾರ, ಸದಸ್ಯ
ಪ್ರಾ. ಅಜಿಂಕ್ಯ ಗಾಯಕವಾಡ, ಸದಸ್ಯ
ಪ್ರಾ. ಸಂಗೀತಾ ಆಹೇರ, ಸದಸ್ಯ
ಶ್ರೀ. ವೈಜನಾಥ ಕಾಳೆ, ಸದಸ್ಯ
ಶ್ರೀ. ಮೊಗಲ ಜಾಧವ, ಸದಸ್ಯ - ಸಚಿವ

**ಇತಿಹಾಸ ಮತ್ತು ನಾಗರಿಕಶಾಸ್ತ್ರ ಅಭ್ಯಾಸಗಟ**

ಶ್ರೀ. ರಾಹುಲ ಪ್ರಭು
ಶ್ರೀ. ಸಂಜಯ ವರ್ಝುರೇಕರ
ಶ್ರೀ. ಸುಭಾಷ ರಾಠೋಡ
ಸೌ. ಸುನೀತಾ ದಳವಿ
ಡಾ. ಶಿವಾನಿ ಲಿಮಯೆ
ಶ್ರೀ. ಭಾವುಸಾಹೇಬ ಉಮಾಟೆ
ಡಾ. ನಾಗನಾಥ ಯೆವಲೆ
ಶ್ರೀ. ಸದಾನಂದ ಡೊಂಗರೆ
ಶ್ರೀ. ರವೀಂದ್ರ ಪಾಟೀಲ
ಸೌ. ರೂಪಾಲಿ ಗಿರಕರ
ಡಾ. ಮೀನಾಕ್ಷಿ ಉಪಾಧ್ಯಾಯ
ಡಾ. ರಾವಸಾಹೇಬ ಶೆಳಕೆ
ಡಾ. ಸತೀಶ ಚಾಪಲೆ
ಶ್ರೀ. ವಿಶಾಲ ಕುಲಕರ್ಣಿ
ಪ್ರಾ. ಶೇಖರ ಪಾಟೀಲ
ಶ್ರೀ. ರಾಮದಾಸ ಠಾಕರ
ಡಾ. ಅಜಿತ ಆಪಟೆ
ಡಾ. ಮೋಹನ ಖಡಸೆ
ಸೌ. ಶಿವಕನ್ಯಾ ಕದೇರಕರ
ಶ್ರೀ. ಗೌತಮ ಡಾಂಗೆ
ಡಾ. ವೆಂಕಟೇಶ ಖರಾತ
ಶ್ರೀ. ರವೀಂದ್ರ ಜಿಂದೆ
ಡಾ. ಪ್ರಭಾಕರ ಲೊಂಡೆ
ಡಾ. ಮಂಜಿರಿ ಭಾಲೇರಾವ
ಪ್ರಾ. ಶಶಿ ನಿಘೋಜಕರ

**ಲೇಖಕಗಟ**

ಶ್ರೀ ರಾಹುಲ ಪ್ರಭು
ಶ್ರೀ ಭಾವುಸಾಹೇಬ ಉಮಾಟೆ
ಶ್ರೀ ಪ್ರಶಾಂತ ಸರೂಡಕರ
ಪ್ರಾ. ಶಿವಾನಿ ಲಿಮಯೆ
ಶ್ರೀ ಸಂಜಯ ವರ್ಝುರೇಕರ
ಪ್ರಾ. ಸಾಧನಾ ಕುಲಕರ್ಣಿ

**ಮುಖಪುಟ ಮತ್ತು ಅಲಂಕಾರ**

ಶ್ರೀ. ದಿಲೀಪ ಕದಮ

**ನಕಾಶೆಕಾರ**

ಶ್ರೀ. ರವಿಕಿರಣ ಜಾಧವ

ಶ್ರೀ ಎನ್. ಎಮ್. ಕುಲಕರ್ಣಿ, ಭಾಷಾಂತರಕಾರ
ಶ್ರೀಮತಿ ವಿಜಯಲಕ್ಷ್ಮಿ ಆರ್. ರೇವಣಕರ, ಸಮೀಕ್ಷೆ

**ಅಕ್ಷರಜೋಡಣೆ**

ಕೇಸನ್ ಲ್ಯಾಂಗ್ವೇಜ್ ಬ್ಯೂರೋ, ಮುಂಬಯಿ.

**ಕಾಗದ :** 70 ಜಿ. ಎಸ್. ಎಮ್. ಕ್ರೀಮ್‌ವೋವ್ಹ್

**ಮುದ್ರಣಾದೇಶ :** N/PB/2022-23/Qty.- 3,000

**ಮುದ್ರಕ :** M/s. Sharp Industries, Raigad

**ಸಂಯೋಜಕರು**

ಡಾ. ಸದಾನಂದ ಎಂ. ಬಿಳ್ಳೂರ
ವಿಶೇಷಾಧಿಕಾರಿ, ಕನ್ನಡ
ಶ್ರೀ. ಆರ್. ಎಮ್. ಗಣಾಚಾರಿ,
ವಿಷಯ ಸಹಾಯಕ, ಕನ್ನಡ
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪುಣೆ.

**ನಿರ್ಮಿತಿ**

ಶ್ರೀ. ಸಚ್ಚಿತಾನಂದ ಆಫಳೆ,
ಮುಖ್ಯ ನಿರ್ಮಿತಿ ಅಧಿಕಾರಿ
ಶ್ರೀ. ಪ್ರಭಾಕರ ಪರಬ,
ನಿರ್ಮಿತಿ ಅಧಿಕಾರಿ
ಶ್ರೀ. ಶಶಾಂಕ ಕಣಿಕದಳೆ,
ಸಹಾಯಕ ನಿರ್ಮಿತಿ ಅಧಿಕಾರಿ

**ಪ್ರಕಾಶಕ**

ಶ್ರೀ. ವಿವೇಕ ಉತ್ತಮ ಗೋಸಾವಿ,
ನಿಯಂತ್ರಕ
ಪಾಠ್ಯಪುಸ್ತಕ ನಿರ್ಮಿತಿ ಮಂಡಳ, ಪ್ರಭಾದೇವಿ, ಮುಂಬಯಿ-25.

# ಭಾರತದ ಸಂವಿಧಾನ

**ಪೀಠಿಕೆ**

**ಭಾರತದ ಪ್ರಜೆಗಳಾದ ನಾವು, ಭಾರತವನ್ನು ಒಂದು ಸಾರ್ವಭೌಮ ಸಮಾಜವಾದಿ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ** ನಿರ್ಮಿಸಲು ಹಾಗೂ ಅದರ ಸಮಸ್ತ ನಾಗರಿಕರಿಗೆ :

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ;**

ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಶ್ರದ್ಧೆ

ಮತ್ತು ಉಪಾಸನಾ **ಸ್ವಾತಂತ್ರ್ಯ;**

ಸ್ಥಾನಮಾನ ಹಾಗೂ ಅವಕಾಶ **ಸಮಾನತೆಯು;**

ನಿಶ್ಚಿತವಾಗಿ ದೊರೆಯುವಂತೆ ಮಾಡಲು

ಮತ್ತು ವ್ಯಕ್ತಿಗೌರವವನ್ನು

ಹಾಗೂ ರಾಷ್ಟ್ರದ ಐಕ್ಯತೆ ಮತ್ತು ಏಕಾತ್ಮತೆಯನ್ನು

ಆಶ್ವಾಸನೆ ನೀಡುವ **ಬಂಧುತ್ವವನ್ನು**

ವೃದ್ಧಿಗೊಳಿಸಲು ದೃಢಸಂಕಲ್ಪದ ನಿರ್ಧಾರ ಮಾಡಿ ;

**ನಮ್ಮ ಸಂವಿಧಾನ ಸಭೆಯಲ್ಲಿ**

ಇಂದು ದಿನಾಂಕ ಇಪ್ಪತ್ತಾರನೆಯ ನವೆಂಬರ, ೧೯೪೯ ನೆಯ ಇಸವಿ

**ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ ಮತ್ತು ಅಧಿನಿಯಮಿತ ಗೊಳಿಸಿ ಸ್ವತ: ಅರ್ಪಿಸಿಕೊಂಡಿದ್ದೇವೆ.**

## ರಾಷ್ಟ್ರಗೀತೆ

ಜನಗಣಮನ-ಅಧಿನಾಯಕ ಜಯ ಹೇ
ಭಾರತ-ಭಾಗ್ಯವಿಧಾತಾ ।

ಪಂಜಾಬ, ಸಿಂಧು, ಗುಜರಾತ, ಮರಾಠಾ,
ದ್ರಾವಿಡ, ಉತ್ಕಲ, ಬಂಗ,

ವಿಂಧ್ಯ, ಹಿಮಾಚಲ, ಯಮುನಾ, ಗಂಗಾ,
ಉಚ್ಛಲ ಜಲಧಿತರಂಗ,

ತವ ಶುಭ ನಾಮೇ ಜಾಗೇ, ತವ ಶುಭ ಆಶಿಸ ಮಾಗೇ,
ಗಾಹೇ ತವ ಜಯಗಾಥಾ,

ಜನಗಣ ಮಂಗಲದಾಯಕ ಜಯ ಹೇ,
ಭಾರತ-ಭಾಗ್ಯವಿಧಾತಾ ।

ಜಯ ಹೇ, ಜಯ ಹೇ, ಜಯ ಹೇ,
ಜಯ ಜಯ ಜಯ, ಜಯ ಹೇ ॥

## ಪ್ರತಿಜ್ಞೆ

ಭಾರತ ನನ್ನ ದೇಶ. ಭಾರತೀಯರೆಲ್ಲರೂ ನನ್ನ ಬಂಧು-ಭಗಿನಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ನನಗೆ ನನ್ನ ದೇಶದ ಸಮೃದ್ಧವಾದ ಹಾಗೂ ಬಹುವಿಧವಾದ ಪರಂಪರೆಯ ಬಗ್ಗೆ ಅಭಿಮಾನವಿದೆ. ಈ ಪರಂಪರೆಗೆ ತಕ್ಕವನಾಗಿರಲು ನಾನು ಯಾವಾಗಲೂ ಪ್ರಯತ್ನಿಸುತ್ತೇನೆ.

ನಾನು ನನ್ನ ತಾಯಿ-ತಂದೆ, ಗುರು-ಹಿರಿಯರನ್ನು ಆದರಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ನಡೆದುಕೊಳ್ಳುತ್ತೇನೆ.

ನಾನು ನನ್ನ ದೇಶ ಹಾಗೂ ನನ್ನ ದೇಶ ಬಾಂಧವರಲ್ಲಿ ನಿಷ್ಠೆ ಇಡುವೆನೆಂದು ಪ್ರತಿಜ್ಞೆ ಮಾಡುತ್ತೇನೆ. ಅವರ ಕಲ್ಯಾಣ ಹಾಗೂ ಉತ್ಕರ್ಷ ಇವುಗಳಲ್ಲಿಯೇ ನನ್ನ ಸುಖವುಂಟು.

# ಪ್ರಸ್ತಾವನೆ

ವಿದ್ಯಾರ್ಥಿ ಮಿತ್ರರೇ,

ಮೂರನೆಯ ಇಯತ್ತೆಯಿಂದ ಐದನೆಯ ಇಯತ್ತೆಯವರೆಗಿನ ಇತಿಹಾಸ ಮತ್ತು ನಾಗರಿಕಶಾಸ್ತ್ರ ವಿಷಯದ ಅಧ್ಯಯನವನ್ನು ನೀವು 'ಪರಿಸರ ಅಭ್ಯಾಸ'ದಲ್ಲಿ ಮಾಡಿದ್ದೀರಿ. ಆರನೆಯ ಇಯತ್ತೆಯಿಂದ ಅಭ್ಯಾಸಕ್ರಮದಲ್ಲಿ ಇತಿಹಾಸ ಮತ್ತು ನಾಗರಿಕಶಾಸ್ತ್ರ ಇವು ಸ್ವತಂತ್ರ ವಿಷಯಗಳಿವೆ. ಆರನೆಯ ಇಯತ್ತೆಯಿಂದ ಒಂದೇ ಪಠ್ಯ ಪುಸ್ತಕದಲ್ಲಿ ಈ ಎರಡೂ ವಿಷಯಗಳ ಸಮಾವೇಶವನ್ನು ಮಾಡಲಾಗಿದೆ. ಎಂಟನೆಯ ಇಯತ್ತೆಯ ಪಠ್ಯಪುಸ್ತಕವನ್ನು ನಿಮ್ಮ ಕೈಗೆ ನೀಡಲು ತುಂಬಾ ಆನಂದವೆನಿಸುತ್ತದೆ.

ವಿಷಯವು ಚೆನ್ನಾಗಿ ತಿಳಿಯಬೇಕು, ಮನರಂಜಕವೆನಿಸಬೇಕು ಹಾಗೂ ನಮ್ಮ ಪೂರ್ವಜರು ಮಾಡಿದ ಕಾರ್ಯಗಳಿಂದ ಪ್ರೇರಣೆ ದೊರೆಯಬೇಕು ಎಂಬ ಉದ್ದೇಶದಿಂದ ಪಠ್ಯಪುಸ್ತಕದ ರಚನೆ ಮಾಡಲಾಗಿದೆ. ಈ ಪಠ್ಯಪುಸ್ತಕದ ಅಭ್ಯಾಸದಿಂದ ಜ್ಞಾನದ ಜೊತೆಗೆ ನಿಮ್ಮ ಅಧ್ಯಯನವು ಅರ್ಥಪೂರ್ಣವಾಗುವುದೆಂಬ ವಿಶ್ವಾಸವೆನಿಸುತ್ತದೆ. ಅದರ ಸಲುವಾಗಿ ಪಠ್ಯಪುಸ್ತಕದಲ್ಲಿ ಬಣ್ಣಬಣ್ಣದ ಚಿತ್ರಗಳು ಹಾಗೂ ನಕಾಶೆಗಳನ್ನು ಕೊಡಲಾಗಿದೆ. ಪಠ್ಯಪುಸ್ತಕದಲ್ಲಿಯ ಪ್ರತಿಯೊಂದು ಪಾಠವನ್ನು ಲಕ್ಷಪೂರ್ವಕವಾಗಿ ಅಭ್ಯಸಿಸಬೇಕು. ಅದರಲ್ಲಿಯ ಯಾವ ಭಾಗವು ನಿಮಗೆ ತಿಳಿಯುವದಿಲ್ಲವೋ ಅದನ್ನು ಶಿಕ್ಷಕರ ಮತ್ತು ಪೋಷಕರ ಕಡೆಯಿಂದ ತಿಳಿಸಿಕೊಳ್ಳಬೇಕು. ಕೊಟ್ಟ ಚೌಕಟ್ಟುಗಳಲ್ಲಿಯ ವಿಷಯವು ನಿಮ್ಮ ಜಿಜ್ಞಾಸೆಯನ್ನು ಹೆಚ್ಚಿಸುವಂತಹವಾಗಿದೆ! ನಿಮಗೆ ಹೆಚ್ಚಿನದನ್ನು ಅರಿತುಕೊಳ್ಳುವುದಿದ್ದರೆ 'ಆ್ಯಪದ' ಮೂಲಕ ಕ್ಯೂ.ಆರ್. ಕೋಡ ಮುಖಾಂತರ ಪ್ರತಿಯೊಂದು ಪಾಠಕ್ಕೆ ಸಂಬಂಧಿತ ಉಪಯುಕ್ತ ದೃಶ್ಯ ಶ್ರಾವ್ಯ ಸಾಹಿತ್ಯವು ನಿಮಗೆ ಲಭ್ಯವಾಗಲಿದೆ. ಅಧ್ಯಯನಕ್ಕಾಗಿ ನಿಶ್ಚಿತವಾಗಿ ಅದರ ಉಪಯೋಗವಾಗುವುದು. ಇತಿಹಾಸ ವಿಷಯವನ್ನು ರಂಜಕವನ್ನಾಗಿ ಮಾಡುವ ಪ್ರಯತ್ನ ಮಾಡಲಾಗಿದ್ದು ಅದರಿಂದಾಗಿ ನಿಮಗೆ ಈ ವಿಷಯದ ಬಗ್ಗೆ ಅಭಿರುಚಿ ನಿರ್ಮಾಣವಾಗಲಿದೆ.

ಇತಿಹಾಸದ ಭಾಗದಲ್ಲಿ 'ಆಧುನಿಕ ಭಾರತದ ಇತಿಹಾಸ'ವನ್ನು ಕೊಡಲಾಗಿದೆ. ಇತಿಹಾಸದಲ್ಲಿಯ ಹೊಸ ಪ್ರವಾಹಗಳು ಹಾಗೂ ಶಿಕ್ಷಣದ ರಾಷ್ಟ್ರೀಯ ಸಾರತತ್ವಗಳು ಮತ್ತು ಅಧ್ಯಯನ ನಿಷ್ಪತ್ತಿ ಇವುಗಳಲ್ಲಿ ಹೊಂದಾಣಿಕೆಯನ್ನು ಮಾಡಿ ಈ ಪಠ್ಯ ಪುಸ್ತಕದ ಲೇಖನ ಮಾಡಲಾಗಿದೆ. ಆಧುನಿಕ ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯ, ಸಮತೆ, ಬಂಧುತ್ವ ಮತ್ತು ನ್ಯಾಯ ಈ ತತ್ವಗಳ ಅವಿಷ್ಕರಣವು ಹೇಗೆ ಆಗುತ್ತ ಹೋಯಿತೆಂಬುದು ಪಠ್ಯ ಪುಸ್ತಕದ ಅಭ್ಯಾಸದಿಂದ ಸ್ಪಷ್ಟವಾಗಬಲ್ಲದು. ಪಠ್ಯ ಪುಸ್ತಕದಲ್ಲಿ ಆಧುನಿಕ ಭಾರತದ ಇತಿಹಾಸದ ಸಾಧನಗಳ ಪರಿಚಯವಿದೆ. ಅದರಂತೆ ಭಾರತದಲ್ಲಿ ಬ್ರಿಟಿಶ ಆಡಳಿತದ ವಿಸ್ತಾರವು ಹೇಗೆ ಆಗುತ್ತ ಹೋಯಿತು ಎಂಬುದರ ಸಿಂಹಾವಲೋಕನವನ್ನು ಮಾಡಲಾಗಿದೆ. ಬ್ರಿಟಿಶ ಅಧಿಪತ್ಯದ ದಾಸ್ಯದಿಂದ ಭಾರತವನ್ನು ಸ್ವತಂತ್ರಗೊಳಿಸುವ ಸಲುವಾಗಿ ಭಾರತೀಯ ಜನತೆಯು ಮಾಡಿದ ಅವಿಸ್ಮರಣೀಯ ಹೋರಾಟ, ತ್ಯಾಗ ಇವುಗಳ ಮಾಹಿತಿಯನ್ನು ಇತಿಹಾಸದ ಭಾಗದಲ್ಲಿ ನೀಡಲಾಗಿದೆ.

ನಾಗರಿಕ ಶಾಸ್ತ್ರದ ಭಾಗದಲ್ಲಿ ಸಂಸದೀಯ ಸರಕಾರ ಪದ್ಧತಿಯ ಪರಿಚಯವನ್ನು ಮಾಡಿಕೊಡಲಾಗಿದೆ. ನಮ್ಮ ದೇಶದಲ್ಲಿಯ ಆಡಳಿತವು ಸಂವಿಧಾನ, ಕಾಯ್ದೆ ಮತ್ತು ನಿಯಮಗಳಿಗನುಸಾರವಾಗಿ ನಡೆಯುತ್ತದೆ ಎಂಬುದನ್ನು ಹೇಳಲಾಗಿದೆ. ಪಠ್ಯಪುಸ್ತಕದಲ್ಲಿ ಭಾರತದ ಸಂಸತ್ತು, ಕೇಂದ್ರೀಯ ಕಾರ್ಯಾಂಗ, ಭಾರತದಲ್ಲಿಯ ನ್ಯಾಯಾಂಗ ವ್ಯವಸ್ಥೆ, ರಾಜ್ಯಸರಕಾರದ ಆಡಳಿತ, ನೌಕರಶಾಹಿಯ ರಚನೆ ಮತ್ತು ಸಮಾಜದ ಪ್ರಜಾಪ್ರಭುತ್ವಕರಣದ ಪ್ರಕ್ರಿಯೆಯಲ್ಲಿಯ ಇವೆಲ್ಲವುಗಳ ಪಾತ್ರಗಳನ್ನು ಸ್ಪಷ್ಟಪಡಿಸಲಾಗಿದೆ.

**(ಡಾ.ಸುನಿಲ ಮಗರ)**
ಸಂಚಾಲಕ
ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು
ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ

ಪುಣೆ
ದಿನಾಂಕ: 18 ಎಪ್ರಿಲ 2018, ಅಕ್ಷಯ ತೃತೀಯಾ
ಭಾರತೀಯ ಸೌರ ದಿನಾಂಕ: 28 ಚೈತ್ರ 1940

# ಶಿಕ್ಷಕರಿಗಾಗಿ

ಆರನೆಯ ಮತ್ತು ಏಳನೆಯ ಇಯತ್ತೆಯ ಅಭ್ಯಾಸಕ್ರಮದಲ್ಲಿ ನಾವು ಅನುಕ್ರಮವಾಗಿ ಪ್ರಾಚೀನ ಮತ್ತು ಮಧ್ಯಯುಗೀನ ಭಾರತದ ಇತಿಹಾಸವನ್ನು ಅಭ್ಯಸಿಸಿದೆವು. ಎಂಟನೆಯ ಇಯತ್ತೆಯ ಇತಿಹಾಸದಲ್ಲಿ ಭಾರತದಲ್ಲಿಯ ವಸಾಹತುಗಳ ಸ್ಥಾಪನೆ ಮತ್ತು ವಸಾಹತುಗಳನ್ನು ಬಿಟ್ಟುಹೋಗುವ ಪ್ರಕ್ರಿಯೆ ಅದರಂತೆ ಸ್ವಾತಂತ್ರ್ಯೋತ್ತರ ಕಾಲಖಂಡದಲ್ಲಿಯ ಸಂಯುಕ್ತ ಮಹಾರಾಷ್ಟ್ರ ಆಂದೋಲನದ ಸಮಾವೇಶವಿದೆ. ಸ್ವಾತಂತ್ರ್ಯ ಹೋರಾಟದ ಹಿಂದಿನ ವೈಚಾರಿಕ ಪ್ರೇರಣೆ, ಭಾರತದಲ್ಲಿ ರಾಷ್ಟ್ರವಾದದ ಉದಯ ಮತ್ತು ವಿಕಾಸ, ಸ್ವಾತಂತ್ರ್ಯ ಸೇನಾನಿಗಳ ಕೊಡುಗೆ ಇವುಗಳನ್ನು ಅಭ್ಯಸಿಸುವುದರಿಂದ ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ಹೊಣೆಗಾರಿಕೆಯ ಪ್ರಜ್ಞೆ ಮತ್ತು ರಾಷ್ಟ್ರಾಭಿಮಾನಗಳು ವೃದ್ಧಿಂಗತವಾಗುವವು.

ಇತಿಹಾಸವು ಶಾಸ್ತ್ರಶುದ್ಧ ಅಭ್ಯಾಸದ ವಿಷಯವಾಗಿದ್ದು ಅದರಲ್ಲಿ ಇತಿಹಾಸದ ಸಾಧನಗಳಿಗೆ ಅನನ್ಯಸಾಧಾರಣ ಮಹತ್ವವಿದೆ. ಕಾಲಖಂಡಕ್ಕನುಸಾರವಾಗಿ ಇತಿಹಾಸದ ಸಾಧನಗಳ ಬದಲಾಗುತ್ತಿರುವ ಸ್ವರೂಪವನ್ನು ಗಮನಿಸಿ ಮೊದಲನೆಯ ಘಟಕದಲ್ಲಿ ಇತಿಹಾಸದ ಸಾಧನಗಳನ್ನು ಸಮಾವೇಶಗೊಳಿಸಲಾಗಿದೆ. ಯುರೋಪ್‌ನಲ್ಲಿಯ ಪುನರುಜ್ಜೀವನದ ಯುಗ ಮತ್ತು ಕ್ರಾಂತಿಯುಗದಿಂದಾಗಿ ಸಾಮ್ರಾಜ್ಯವಾದವು ಬೆಳೆದು ಏಶಿಯಾ ಮತ್ತು ಆಫ್ರಿಕಾ ಖಂಡಗಳಲ್ಲಿ ವಸಾಹತು ಸ್ಥಾಪನೆಯ ಪ್ರಕ್ರಿಯೆಯಲ್ಲಿ ವೃದ್ಧಿಯಾಯಿತು. ಭಾರತವು ಕೂಡ ಈ ಪಾಶ್ಚಾತ್ಯ ಸಾಮ್ರಾಜ್ಯವಾದಿ ಮಹತ್ವಾಕಾಂಕ್ಷೆಗೆ ಹೇಗೆ ಬಲಿಯಾಯಿತು, ಬ್ರಿಟಿಶ ಆಡಳಿತದಿಂದ ಭಾರತದ ಮೇಲೆ ಯಾವ ಪರಿಣಾಮಗಳಾದವು, ನಂತರದ ಕಾಲದಲ್ಲಿ ಭಾರತೀಯರ ಸ್ವಾಭಿಮಾನವು ಜಾಗೃತವಾಗಿ ಸ್ವಾತಂತ್ರ್ಯದ ಪ್ರೇರಣೆ ಹೇಗೆ ದೊರಕಿತು ಎಂಬುದರ ವಿಚಾರವನ್ನು ನಾವು ಮಾಡುವವರಿದ್ದೇವೆ.

ಭಾರತೀಯ ಸ್ವಾತಂತ್ರ್ಯ ಹೋರಾಟದ ಅಧ್ಯಾಪನ ಮಾಡುವಾಗ 1857ರ ಸ್ವಾತಂತ್ರ್ಯ ಹೋರಾಟ, ರಾಷ್ಟ್ರೀಯ ಸಭೆಯ ಸ್ಥಾಪನೆ, ಉಗ್ರವಾದಿ ಮತ್ತು ಸೌಮ್ಯವಾದಿ ಕಾಲಖಂಡದಲ್ಲಿಯ ರಾಷ್ಟ್ರೀಯ ಸಭೆಯ ಕಾರ್ಯ, ಗಾಂಧೀಯುಗದಲ್ಲಿ ಸತ್ಯಾಗ್ರಹದ ಮಾರ್ಗದಿಂದಾದ ಚಳುವಳಿಗಳು, ಸಶಸ್ತ್ರ ಕ್ರಾಂತಿಕಾರಿ ಚಳುವಳಿ, ಆಝಾದಹಿಂದ ಸೇನೆಯ ಹೋರಾಟ, ಭಾರತಕ್ಕೆ ಸ್ವಾತಂತ್ರ್ಯಪ್ರಾಪ್ತಿ, ಸಂಸ್ಥಾನಗಳ ವಿಲೀನೀಕರಣ, ಫ್ರೆಂಚ್ ಮತ್ತು ಪೋರ್ತುಗೀಜ ವಸಾಹತುಗಳ ಮುಕ್ತತೆ, ಇಂತಹ ಘಟನೆಗಳ ಸಂಪೂರ್ಣ ಮಾಹಿತಿಯನ್ನು ವಿದ್ಯಾರ್ಥಿಗಳಿಗೆ ದೃಶ್ಯಶ್ರಾವ್ಯ ಸಾಧನಗಳನ್ನು (ಚಲನಚಿತ್ರ, ಮಾಹಿತಿಪಟ, ಬೋಧಪಟ, ಧ್ವನಿಸುರುಳಿ ಇತ್ಯಾದಿ) ಕ್ಷೇತ್ರಭೇಟಿ, ಪ್ರದರ್ಶನಗಳು, ಸಂಚಯನ, ವರ್ತಮಾನ ಪತ್ರ ಇತ್ಯಾದಿ ಮಾಧ್ಯಮಗಳ ಮೂಲಕ ಪೂರೈಸಬಹುದು.

ರಾಜಕೀಯ ಸ್ಥಿತ್ಯಂತರಗಳ ವಿಚಾರ ಮಾಡುವಾಗಲೇ ಭಾರತದ ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹೇಗೆ ಬದಲಾವಣೆಗಳಾಗುತ್ತ ಹೋದವು, ಭಾರತೀಯರಲ್ಲಿ ಸಾಮಾಜಿಕ ಮತ್ತು ರಾಜಕೀಯ ಸಮಾನತೆಯ ವಿಚಾರವು ಹೇಗೆ ಮೂಡಿತು ಎಂಬುದರ ಪರಿಚಯವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡಬಹುದು. ಭಾರತೀಯ ಇತಿಹಾಸದ ಹಿನ್ನೆಲೆಯನ್ನು ಅಭ್ಯಸಿಸುವಾಗ ಮಹಾರಾಷ್ಟ್ರ ರಾಜ್ಯ ನಿರ್ಮಿತಿಯ ಸ್ಥಿತ್ಯಂತರಗಳು ಮತ್ತು ಸಂಯುಕ್ತ ಮಹಾರಾಷ್ಟ್ರ ಆಂದೋಲನದ ವಿಚಾರವನ್ನು ನಾವು ಮಾಡಬೇಕಾಗಿದೆ.

ಏಳನೆಯ ಇಯತ್ತೆಯ ನಾಗರಿಕಶಾಸ್ತ್ರದ ಭಾಗದಲ್ಲಿ ನಾವು ಸಂವಿಧಾನದ ಮೂಲಕ ವ್ಯಕ್ತವಾಗುವ ತತ್ವಜ್ಞಾನ, ಮೌಲ್ಯಗಳು ಇವುಗಳ ಅಭ್ಯಾಸವನ್ನು ಮಾಡಿದ್ದೇವೆ. ಎಂಟನೆಯ ಇಯತ್ತೆಯ ನಾಗರಿಕಶಾಸ್ತ್ರದ ಭಾಗದಲ್ಲಿ ಸಂವಿಧಾನವು ನಿರ್ಮಾಣ ಮಾಡಿದ ಸರಕಾರಪದ್ಧತಿ, ಆಡಳಿತ ವ್ಯವಸ್ಥೆ, ನ್ಯಾಯಾಂಗ ವ್ಯವಸ್ಥೆ ಮತ್ತು ನ್ಯಾಯದಾನ ಪದ್ಧತಿ ಇವುಗಳ ವಿಚಾರವನ್ನು ಮಾಡಲಾಗಿದೆ. ಪ್ರಸ್ತುತ ಆಶಯವನ್ನು ಸಮಕಾಲೀನ ಘಟನೆಗಳ ಆಧಾರದಿಂದ ಕಲಿಸಬೇಕು. ಸಂವಿಧಾನದಲ್ಲಿಯ ತತ್ವಜ್ಞಾನದ ಜೊತೆಗೆ ಹಾಗೂ ಅದರಿಂದ ಪ್ರತಿಬಿಂಬಿತವಾಗುವ ಮೌಲ್ಯ ಮತ್ತು ಆದರ್ಶಗಳ ಜೊತೆಗೆ ಅದರ ಹೊಂದಾಣಿಕೆ ಮಾಡಬೇಕು.

ಸಂವಿಧಾನವು ಒಂದು ಪ್ರವಾಹಿ ದಸ್ತಾವೇಜಾಗಿದ್ದು ಅದರ ಮೂಲಕ ಪ್ರಜಾಪ್ರಭುತ್ವ ಮತ್ತು ಕಾಯ್ದೆಯ ಅಧಿರಾಜ್ಯ ಪ್ರತ್ಯಕ್ಷದಲ್ಲಿ ಬರುತ್ತದೆಯೆಂಬುದರ ಅರಿವನ್ನು ವಿದ್ಯಾರ್ಥಿಗಳಿಗೆ ಮಾಡಿಕೊಡಬೇಕು. ಇದರಿಂದಾಗಿ ವಿದ್ಯಾರ್ಥಿಗಳ ಸಾಮಾಜಿಕ ಮತ್ತು ಆರ್ಥಿಕ ಅರಿವು ಹೆಚ್ಚು ಪ್ರಗಲ್ಭವಾಗಲು ಸಹಾಯಕವಾಗುವುದು. ಪ್ರಜಾಪ್ರಭುತ್ವದ ಸಂಸ್ಥೆಗಳು ಮತ್ತು ವಿವಿಧ ರಾಜಕೀಯ ಪ್ರಕ್ರಿಯೆಗಳಲ್ಲಿಯ ಸಂಬಂಧವನ್ನು ಶೋಧಿಸಲು ವಿದ್ಯಾರ್ಥಿಗಳಿಗೆ ಸಾಧ್ಯವಾಗಬಹುದು. ಪಠ್ಯಪುಸ್ತಕದಲ್ಲಿ ಕೊಡಲಾದ ಆಶಯದ ಆಧಾರದಿಂದ ಚರ್ಚೆ, ಗುಂಪು ಚರ್ಚೆ, ಪ್ರೊಜೆಕ್ಟ್ , ಭಿತ್ತಿಪತ್ರಗಳು, ಒಂದೇ ವಿಷಯದ ಆಧಾರದಿಂದ ಅನೇಕ ರಾಜಕೀಯ ಮಾನದಂಡಗಳನ್ನು ತಿಳಿದುಕೊಳ್ಳಬಹುದು. ವಿದ್ಯಾರ್ಥಿಗಳ ಕಡೆಯಿಂದ ಇಂತಹ ಉಪಕ್ರಮಗಳನ್ನು ಮಾಡಿಸಿಕೊಳ್ಳಬಹುದು.

ಪಠ್ಯಪುಸ್ತಕದ ರಚನೆ ಮಾಡುವಾಗ ಜ್ಞಾನರಚನಾವಾದಿ ಶಿಕ್ಷಣ ಮತ್ತು ಕೃತಿಯುಕ್ತ ಅಧ್ಯಾಪನ ಇವುಗಳಿಗೆ ವಿಶೇಷ ಮಹತ್ವ ನೀಡಲಾಗಿದೆ. ಅದಕ್ಕಾಗಿ ವಿದ್ಯಾರ್ಥಿಗಳ ಸಲುವಾಗಿ ಪಾಠ್ಯಘಟಕಗಳನ್ನು ಕುರಿತು ಅಧಿಕ ಮತ್ತು ರಂಜಕ ಮಾಹಿತಿಯ ಚೌಕಟ್ಟುಗಳನ್ನು ಪಾಠಗಳಲ್ಲಿ ನೀಡಲಾಗಿದೆ. ಅದರ ಜೊತೆಗೆ ಬನ್ನಿ ಚರ್ಚೆ ಮಾಡೋಣ, ಮಾಡಿ ನೋಡಿರಿ ಇವುಗಳ ಮೂಲಕ ವಿದ್ಯಾರ್ಥಿಯು ಅಧ್ಯಯನ ಪ್ರಕ್ರಿಯೆಯಲ್ಲಿ ಯಾವ ರೀತಿ ಕ್ರಿಯಾಶೀಲನಾಗಿ ಇರಬಲ್ಲನು ಎಂಬುದರ ವಿಚಾರ ಮಾಡಲಾಗಿದೆ. ವಿದ್ಯಾರ್ಥಿಗಳ ಕೃತಿಶೀಲತೆಗೆ, ವಿಚಾರಶಕ್ತಿಗೆ ಮತ್ತು ಸ್ವಂತ ಅಭಿಪ್ರಾಯದ ಪ್ರಕಟೀಕರಣಕ್ಕೆ ಅವಕಾಶ ದೊರೆಯಬೇಕೆಂಬ ದೃಷ್ಟಿಕೋನದಿಂದ ಸ್ವಾಧ್ಯಾಯ ಮತ್ತು ಉಪಕ್ರಮಗಳ ರಚನೆ ಮಾಡಲಾಗಿದೆ. ಪಾಠ ವಿಷಯವನ್ನು ಕುರಿತು ಹೆಚ್ಚಿನ ಪೂರಕ ಮಾಹಿತಿಯನ್ನು ನೀಡುವ ಸಲುವಾಗಿ ಪಠ್ಯಪುಸ್ತಕದಲ್ಲಿ QR Codeದ ಸಮಾವೇಶ ಮಾಡಲಾಗಿದೆ. ಅದನ್ನು ಉಪಯೋಗಿಸಿ ಪ್ರಭಾವಶಾಲಿಯಾಗಿ ಅಧ್ಯಾಪನ ಮಾಡುವುದು ನಮಗೆ ಸುಲಭವಾಗಲಿದೆ.

# ಇತಿಹಾಸ
## (ಆಧುನಿಕ ಭಾರತದ ಇತಿಹಾಸ)

### ಅನುಕ್ರಮಣಿಕೆ


| ಅ.ಕ್ರ | ಪಾಠದ ಹೆಸರು | ಪುಟ ಸಂಖ್ಯೆ |
|---|---|---|
| 1. | ಇತಿಹಾಸದ ಸಾಧನಗಳು | 1 |
| 2. | ಯುರೋಪ ಮತ್ತು ಭಾರತ | 5 |
| 3. | ಬ್ರಿಟಿಶ ಆಡಳಿತದ ಪರಿಣಾಮ | 10 |
| 4. | 1857ರ ಸ್ವಾತಂತ್ರ್ಯ ಹೋರಾಟ | 15 |
| 5. | ಸಾಮಾಜಿಕ ಮತ್ತು ಧಾರ್ಮಿಕ ಪುನರುಜ್ಜೀವನ | 21 |
| 6. | ಸ್ವಾತಂತ್ರ್ಯ ಚಳುವಳಿ ಯುಗದ ಆರಂಭ | 25 |
| 7. | ಅಸಹಕಾರ ಚಳುವಳಿ | 31 |
| 8. | ಸವಿನಯ ಕಾಯ್ದೆಭಂಗ ಚಳುವಳಿ | 36 |
| 9. | ಸ್ವಾತಂತ್ರ್ಯ ಹೋರಾಟದ ಅಂತಿಮ ಅಧ್ಯಾಯ | 40 |
| 10. | ಸಶಸ್ತ್ರ ಕ್ರಾಂತಿಕಾರಿ ಚಳುವಳಿ | 45 |
| 11. | ಸಮಾನತೆಯ ಹೋರಾಟ | 50 |
| 12. | ಸ್ವಾತಂತ್ರ್ಯ ಪ್ರಾಪ್ತಿ | 56 |
| 13. | ಸ್ವಾತಂತ್ರ್ಯ ಹೋರಾಟದ ಪರಿಪೂರ್ಣತೆ | 59 |
| 14. | ಮಹಾರಾಷ್ಟ್ರ ರಾಜ್ಯದ ನಿರ್ಮಿತಿ | 62 |


**S.O.I. Note :** The following foot notes are applicable : (1) © Government of India, Copyright : 2018. (2) The responsibility for the correctness of internal details rests with the publisher. (3) The territorial waters of India extend into the sea to a distance of twelve nautical miles measured from the appropriate base line. (4) The administrative headquarters of Chandigarh, Haryana and Punjab are at Chandigarh. (5) The interstate boundaries amongst Arunachal Pradesh, Assam and Meghalaya shown on this map are as interpreted from the "North-Eastern Areas (Reorganisation) Act. 1971," but have yet to be verified. (6) The external boundaries and coastlines of India agree with the Record/Master Copy certified by Survey of India. (7) The state boundaries between Uttarakhand & Uttar Pradesh, Bihar & Jharkhand and Chattisgarh & Madhya Pradesh have not been verified by the Governments concerned. (8) The spellings of names in this map, have been taken from various sources.

# ಅಧ್ಯಯನ ನಿಷ್ಪತ್ತಿ

## ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆಗಳು

**ಅಧ್ಯಯನಾರ್ಥಿಗೆ ಜೊತೆಯಾಗಿ /ಗುಂಪಿನಲ್ಲಿ / ವೈಯಕ್ತಿಕವಾಗಿ ಅಧ್ಯಯನಕ್ಕೆ ಅವಕಾಶ ನೀಡುವುದು ಮತ್ತು ಅವನಿಗೆ ಕೆಳಗಿನ ಸಂಗತಿಗಳಿಗಾಗಿ ಪ್ರವೃತ್ತಗೊಳಿಸುವುದು.**

- ಭಾರತೀಯ ರಾಜರುಗಳ ಅಂತರ್ಗತ ವಂಶಪರಂಪರಾಗತ ಜಗಳದಲ್ಲಿ ಹಸ್ತಕ್ಷೇಪ ಮಾಡುವುದು ಬ್ರಿಟಿಶ ಈಸ್ಟ ಇಂಡಿಯಾ ಕಂಪನಿಗೆ ಏಕೆ ಮಹತ್ವದ್ದೆನಿಸಿತು. ಇತ್ಯಾದಿ ವಿವಿಧ ಸಂಗತಿ ಮತ್ತು ಘಟನೆಗಳ ಮೇಲೆ ಪ್ರಶ್ನೆಗಳು ಉದ್ಭವಿಸುವುದು.
- ವಸಾಹತುವಾದಿ ಆಡಳಿತದ ಕೇಂದ್ರಗಳು ಮತ್ತು ಭಾರತೀಯ ಸ್ವಾತಂತ್ರ್ಯ ಸಂಗ್ರಾಮದಲ್ಲಿಯ ಮಹತ್ವದ ಸ್ಥಳಗಳು ಇತ್ಯಾದಿ ಐತಿಹಾಸಿಕ ದೃಷ್ಟಿಯಿಂದ ಮಹತ್ವದ ಸ್ಥಳಗಳಿಗೆ ಭೇಟಿ ನೀಡುವುದು.
- ಗಾಂಧೀಜಿಯವರ ಅಹಿಂಸೆಯ ಕಲ್ಪನೆ ಮತ್ತು ಭಾರತದ ಸ್ವಾತಂತ್ರ್ಯ/ರಾಷ್ಟ್ರೀಯ ಚಳುವಳಿಯ ಮೇಲಾದ ಅದರ ಪರಿಣಾಮ.
- ಭಾರತೀಯ ಸ್ವಾತಂತ್ರ್ಯ ಚಳುವಳಿಯಲ್ಲಿಯ ಮಹತ್ವದ ಘಟನೆಗಳನ್ನು ತೋರಿಸುವ ಕಾಲರೇಷೆ.
- ಚೌರಿಚೌರಾ ಘಟನೆಯ ಮೇಲೆ ಆಧಾರಿತ ಭೂಮಿಕಾ ಪಾಲನೆಯ ಆಯೋಜನೆ.
- ವಸಾಹತುವಾದಿ ಕಾಲಖಂಡದಲ್ಲಿ ನಗದು ಬೆಳೆಗಳನ್ನು ಬೆಳೆಸಿದ್ದರಿಂದ ಹೆಚ್ಚು ಬಾಧಿತವಾದ ಕ್ಷೇತ್ರಗಳನ್ನು ಭಾರತದ ನಕಾಶದಲ್ಲಿ ತೋರಿಸುವುದು, ಇತ್ಯಾದಿ ಯೋಜನೆ ಮತ್ತು ಕೃತಿ/ ಉಪಕ್ರಮಗಳನ್ನು ಆಯೋಜಿಸುವುದು.
- ಆ ಕಾಲದ ಇತಿಹಾಸವು ತಿಳಿಯುವ ಸಲುವಾಗಿ ಮತ್ತು ಅದರ ಪುನರ್ರಚನೆ ಮಾಡುವ ಸಲುವಾಗಿ ದೇಶಿ ಮತ್ತು ಬ್ರಿಟಿಶ ಲೇಖ, ಆತ್ಮ ಚರಿತ್ರೆ, ಚರಿತ್ರೆ, ಕಾದಂಬರಿಗಳು, ಚಿತ್ರಗಳು, ಭಾವಚಿತ್ರಗಳು, ಸಮಕಾಲೀನ ಬರವಣಿಗೆಗಳು, ಕಾಗದ ಪತ್ರಗಳು, ವರ್ತಮಾನ ಪತ್ರಗಳಲ್ಲಿಯ ಲೇಖಗಳು, ಚಲನಚಿತ್ರಗಳು, ಮಾಹಿತಿಪಟ ಮತ್ತು ಆಧುನಿಕ ಲೇಖನ ಮುಂತಾದ ಸಾಧನಗಳ ಪರಿಚಯ ಮಾಡಿಕೊಳ್ಳುವುದು.
- ಸ್ವ-ಮೌಲ್ಯಮಾಪನಕ್ಕಾಗಿ ಅಧ್ಯಾಪನ ಶಾಸ್ತ್ರೀಯ ದೃಷ್ಟಿಯಿಂದ ನಾವೀನ್ಯಪೂರ್ಣ ಮತ್ತು ಮಾನದಂಡಗಳ ಸಂದರ್ಭದ, ಪ್ರಶ್ನೆಗಳ (ಉದಾ., 'ಪ್ಲಾಸಿ ಕಾಳಗದ' ಕಾರಣಗಳು ಯಾವವು?') ಪರಿಚಯ ಮಾಡಿಕೊಡುವುದು.

## ಅಧ್ಯಯನ ನಿಷ್ಪತ್ತಿ

**ಅಧ್ಯಯನಾರ್ಥಿ**

08.73H.01 ಇತಿಹಾಸದ ವಿವಿಧ ಸಾಧನಗಳನ್ನು ಗುರುತಿಸುತ್ತಾರೆ. ಹಾಗೂ ಈ ಕಾಲದಲ್ಲಿಯ ಇತಿಹಾಸದ ಪುನರ್ಲೇಖನಕ್ಕಾಗಿ ಉಪಯೋಗವನ್ನು ಸ್ಪಷ್ಟಪಡಿಸುತ್ತಾರೆ.

08.73H.02 ವಿವಿಧ ಮೂಲಗಳು ಮತ್ತು ವಿವಿಧ ಪ್ರದೇಶಗಳಿಗಾಗಿ ಉಪಯೋಗಿಸಲಾದ ನಾಮಾವಲಿ ಹಾಗೂ ಆಯಾ ಕಾಲದಲ್ಲಿ ಸಂಭವಿಸಿದ ಐತಿಹಾಸಿಕ ಘಟನೆಗಳ ಆಧಾರದಿಂದ 'ಆಧುನಿಕ ಕಾಲಖಂಡ', 'ಮಧ್ಯಯುಗೀನ ಕಾಲಖಂಡ' ಮತ್ತು 'ಪ್ರಾಚೀನ ಕಾಲಖಂಡ' ಇವುಗಳಲ್ಲಿಯ ವ್ಯತ್ಯಾಸವನ್ನು ಸ್ಪಷ್ಟಪಡಿಸುವರು.

08.73H.03 ಬ್ರಿಟಿಶ ಈಸ್ಟ ಇಂಡಿಯಾ ಕಂಪನಿಯು ಅತ್ಯಂತ ಪ್ರಬಲವಾದ ಅಧಿಪತ್ಯ ಹೇಗೆ ಆಯಿತೆಂಬುದನ್ನು ಸ್ಪಷ್ಟಪಡಿಸುತ್ತಾರೆ.

08.73H.04 ವಿವಿಧ ಪ್ರದೇಶಗಳಲ್ಲಿಯ ಬ್ರಿಟಿಶ ಕೃಷಿ ಧೋರಣೆಗಳಲ್ಲಿಯ ವ್ಯತ್ಯಾಸವನ್ನು ಸ್ಪಷ್ಟಪಡಿಸಿ ಹೇಳುತ್ತಾರೆ. ಉದಾ., ನೀಲಿಯ ದಂಗೆ

08.73H.05 ಹತ್ತೊಂಬತ್ತನೆಯ ಶತಮಾನದಲ್ಲಿಯ ಆದಿವಾಸಿ ಸಮಾಜದ ರಚನೆ ಮತ್ತು ಪರಿಸರದ ಜೊತೆ ಇರುವ ಅವರ ಸಂಬಂಧ ಇವುಗಳನ್ನು ವರ್ಣಿಸುತ್ತಾರೆ.

08.73H.06 ಆದಿವಾಸಿ ಸಮಾಜದ ಸಂದರ್ಭದಲ್ಲಿಯ ಬ್ರಿಟಿಶರ ಆಡಳಿತಾತ್ಮಕ ಧೋರಣೆಗಳ ಸ್ಪಷ್ಟೀಕರಣ ನೀಡುತ್ತಾರೆ.

08.73H.07 1857ರ ಸ್ವಾತಂತ್ರ್ಯ ಹೋರಾಟದ ಉಗಮ, ಸ್ವರೂಪ ಮತ್ತು ವಿಸ್ತಾರ ಅದರಂತೆ ಅದರಿಂದ ನಾವು ಕಲಿತ ಪಾಠ ಇವುಗಳ ಸ್ಪಷ್ಟೀಕರಣ ನೀಡುತ್ತಾರೆ.

08.73H.08 ಬ್ರಿಟಿಶ ಅಧಿಪತ್ಯದ ಕಾಲದಲ್ಲಿ ಪ್ರಾಚೀನ, ನಾಗರಿಕ ಹಾಗೂ ವ್ಯಾಪಾರದ ಕೇಂದ್ರಗಳು ಮತ್ತು ಹಸ್ತಕೈಗಾರಿಕೆಗಳ ಮೇಲೆ ಆಧಾರಿತ ಉದ್ಯೋಗಗಳು ನಷ್ಟವಾಗಿ ಹೊಸ ನಾಗರಿಕ ವ್ಯಾಪಾರದ ಕೇಂದ್ರಗಳು ಮತ್ತು ಉದ್ಯೋಗ ಧಂದೆಗಳು ಹೇಗೆ ವಿಕಸಿತವಾದವು ಎಂಬುದರ ವಿಶ್ಲೇಷಣೆ ಮಾಡುತ್ತಾರೆ.

08.73H.09 ಭಾರತದಲ್ಲಿಯ ಹೊಸ ಶಿಕ್ಷಣ ವ್ಯವಸ್ಥೆಯ ಸಂಸ್ಥಾತ್ಮೀಕರಣವು ಹೇಗಾಯಿತು ಎಂಬುದನ್ನು ಸ್ಪಷ್ಟಪಡಿಸುತ್ತಾರೆ.

08.73H.10 ಜಾತಿ ವ್ಯವಸ್ಥೆ, ಸ್ತ್ರೀಯರ ಸ್ಥಾನ, ವಿಧವಾ ಪುನರ್ವಿವಾಹ, ಬಾಲ ವಿವಾಹ, ಸಾಮಾಜಿಕ ಸುಧಾರಣೆಗಳು ಹಾಗೂ ಈ ಪ್ರಶ್ನೆಗಳ ಸಂದರ್ಭದಲ್ಲಿಯ ಬ್ರಿಟಿಶ ಧೋರಣೆಗಳು ಮತ್ತು ಕಾಯ್ದೆ ಇವುಗಳ ವಿಶ್ಲೇಷಣೆ ಮಾಡುತ್ತಾರೆ.

08.73H.11 ಕಲಾಕ್ಷೇತ್ರದಲ್ಲಿ ಆಧುನಿಕ ಕಾಲದಲ್ಲಿ ಸಂಭವಿಸಿದ ಪ್ರಮುಖ ಘಟನೆಗಳ ರೂಪರೇಷೆಯನ್ನು ಹೇಳುತ್ತಾರೆ.

08.73H.12 ಕ್ರಿ.ಶ. 1870ರಿಂದ ಸ್ವಾತಂತ್ರ್ಯ ಪ್ರಾಪ್ತಿಯವರೆಗಿನ ಕಾಲದಲ್ಲಿಯ ಪ್ರಗತಿಯ ಸಿಂಹಾವಲೋಕನ ಮಾಡುತ್ತಾರೆ.

08.73H.13 ರಾಷ್ಟ್ರ ನಿರ್ಮಿತಿಯ ಪ್ರಕ್ರಿಯೆಯಲ್ಲಿಯ ಮಹತ್ವದ ಘಟಕಗಳ ವಿಶ್ಲೇಷಣೆ ಮಾಡುತ್ತಾರೆ.

# 1. ಇತಿಹಾಸದ ಸಾಧನಗಳು

ಪ್ರಾಚೀನ ಮತ್ತು ಮಧ್ಯಯುಗೀನ ಭಾರತದ ಇತಿಹಾಸದ ಸಾಧನಗಳ ಅಭ್ಯಾಸವನ್ನು ನಾವು ಮಾಡಿದ್ದೇವೆ. ಈ ವರ್ಷ ನಾವು ಆಧುನಿಕ ಭಾರತದ ಇತಿಹಾಸದ ಸಾಧನಗಳ ಅಭ್ಯಾಸ ಮಾಡುವವರಿದ್ದೇವೆ. ಇತಿಹಾಸದ ಸಾಧನಗಳಲ್ಲಿ ಭೌತಿಕ, ಲಿಖಿತ ಮತ್ತು ಮೌಖಿಕ ಸಾಧನಗಳ ಸಮಾವೇಶವಾಗುತ್ತದೆ. ಅದೇ ರೀತಿ ಆಧುನಿಕ ತಂತ್ರಜ್ಞಾನದ ಮೇಲೆ ಆಧಾರಿತ ದೃಶ್ಯ, ಶ್ರಾವ್ಯ ಹಾಗೂ ದೃಶ್ಯ-ಶ್ರಾವ್ಯ ಸಾಧನಗಳ ಸಮಾವೇಶವಾಗುತ್ತದೆ.

**ಭೌತಿಕ ಸಾಧನಗಳು :** ಇತಿಹಾಸದ ಭೌತಿಕ ಸಾಧನಗಳಲ್ಲಿ ವಿವಿಧ ವಸ್ತುಗಳು, ವಾಸ್ತುಶಿಲ್ಪಗಳು, ನಾಣ್ಯಗಳು, ವಿಗ್ರಹಗಳು ಮತ್ತು ಪದಕಗಳು ಮುಂತಾದ ಸಾಧನಗಳ ಸಮಾವೇಶ ಮಾಡಬಹುದು.

**ಕಟ್ಟಡಗಳು ಮತ್ತು ವಾಸ್ತುಶಿಲ್ಪಗಳು :** ಆಧುನಿಕ ಭಾರತದ ಇತಿಹಾಸದಲ್ಲಿಯ ಕಾಲಖಂಡವನ್ನು ಯುರೋಪದ ವಿಶೇಷತಃ ಬ್ರಿಟಿಶ ಆಡಳಿತಗಾರರ ಹಾಗೂ ಸಂಸ್ಥಾನಿಕರ ರಾಜ್ಯಾಡಳಿತದ ಕಾಲವೆಂದು ತಿಳಿಯಲಾಗುತ್ತದೆ. ಈ ಕಾಲದಲ್ಲಿ ವಿವಿಧ ಕಟ್ಟಡಗಳು, ಸೇತುವೆಗಳು, ರಸ್ತೆಗಳು, ಅರವಟ್ಟಿಗೆಗಳು, ಬುಗ್ಗೆಗಳು ಇತ್ಯಾದಿ ವಾಸ್ತುಗಳು ಕಟ್ಟಲ್ಪಟ್ಟವು. ಈ ಕಟ್ಟಡಗಳಲ್ಲಿ ಸರಕಾರಿ ಕಚೇರಿಗಳು, ಅಧಿಕಾರಿಗಳ ಅದರಂತೆ ನೇತಾರರ ಮತ್ತು ಕ್ರಾಂತಿಕಾರರ ನಿವಾಸಸ್ಥಾನಗಳು, ಸಂಸ್ಥಾನಿಕರ ಅರಮನೆಗಳು, ಕೋಟೆಗಳು, ಸೆರೆಮನೆಗಳು ಇತ್ಯಾದಿ ಕಟ್ಟಡಗಳ ಸಮಾವೇಶವಾಗುತ್ತದೆ. ಈ ವಾಸ್ತುಶಿಲ್ಪಗಳಲ್ಲಿಯ ಅನೇಕ ಕಟ್ಟಡಗಳು ಇಂದು ಸುಸ್ಥಿತಿಯಲ್ಲಿ ಕಾಣಸಿಗುತ್ತವೆ. ಕೆಲವು ಕಟ್ಟಡಗಳು ರಾಷ್ಟ್ರೀಯ ಸ್ಮಾರಕಗಳೆಂದು ಘೋಷಿಸಲ್ಪಟ್ಟಿವೆ. ಅಲ್ಲವೆ ಕೆಲವು ಕಟ್ಟಡಗಳಲ್ಲಿ ಸಂಗ್ರಹಾಲಯಗಳು ಸ್ಥಾಪಿಸಲ್ಪಟ್ಟಿವೆ. ಉದಾ., ಅಂದಮಾನದಲ್ಲಿಯ ಸೆಲ್ಯುಲರ ಜೈಲು.

ಈ ಕಟ್ಟಡಗಳಿಗೆ ಭೇಟಿ ನೀಡಿದನಂತರ ನಮಗೆ ಆ ಕಾಲದ ಇತಿಹಾಸ, ವಾಸ್ತುಶಿಲ್ಪ ಹಾಗೂ ಕಟ್ಟಡಗಳ ಸ್ವರೂಪದ ಮೇಲಿಂದ ಆ ಸಮಯದ ಆರ್ಥಿಕ ಸಂಪನ್ನತೆಯ ವಿಷಯವಾಗಿ ಮಾಹಿತಿ ದೊರೆಯುತ್ತದೆ. ಉದಾಹರಣೆಗಾಗಿ ಅಂದಮಾನದಲ್ಲಿಯ ಸೆಲ್ಯುಲರ ಜೈಲಿಗೆ ಭೇಟಿ ನೀಡಿದಾಗ ಸ್ವಾತಂತ್ರ್ಯವೀರ ಸಾವರಕರ ಇವರ ಕ್ರಾಂತಿಕಾರ್ಯದ ವಿಷಯವಾಗಿ, ಮುಂಬಯಿಯಲ್ಲಿಯ ಮಣಿ ಭವನಕ್ಕೆ ಇಲ್ಲವೆ ವರ್ಧಾದಲ್ಲಿಯ ಸೇವಾಗ್ರಾಮ ಆಶ್ರಮಕ್ಕೆ ಭೇಟಿ ನೀಡಿದಾಗ ಗಾಂಧಿಯುಗದ ಇತಿಹಾಸದ ವಿಷಯವಾಗಿ ಮಾಹಿತಿ ದೊರೆಯುತ್ತದೆ.

**ಗೊತ್ತಿದೆಯೇ ನಿಮಗೆ?**

**ವಸ್ತು ಸಂಗ್ರಹಾಲಯಗಳು ಮತ್ತು ಇತಿಹಾಸ :** ಇತಿಹಾಸದ ಅಭ್ಯಾಸಕ್ಕಾಗಿ ವಸ್ತು ಸಂಗ್ರಹಾಲಯಗಳಲ್ಲಿ ವಿವಿಧ ವಸ್ತು, ಚಿತ್ರ, ಛಾಯಾಚಿತ್ರ ಮುಂತಾದ ವಿವಿಧ ಸಂಗತಿಗಳನ್ನು ಸಂರಕ್ಷಿಸಿ ಇಡಲಾಗಿರುತ್ತದೆ. ಪುಣೆಯಲ್ಲಿಯ ಆಗಾಖಾನ ಪ್ಯಾಲೇಸನಲ್ಲಿಯ ಗಾಂಧಿ ಸ್ಮಾರಕ ಸಂಗ್ರಹಾಲಯದಲ್ಲಿ ನಮಗೆ ಮಹಾತ್ಮಾ ಗಾಂಧಿಯವರ ಬಳಕೆಯಲ್ಲಿಯ ಅನೇಕ ವಸ್ತುಗಳು, ಕಾಗದಪತ್ರಗಳು ನೋಡಲು ಸಿಗುತ್ತವೆ.



ಆಗಾಖಾನ ಪ್ಯಾಲೇಸ, ಪುಣೆ

**ಪುತ್ಥಳಿಗಳು ಮತ್ತು ಸ್ಮಾರಕಗಳು :** ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಕಾಲದಲ್ಲಿ ಅನೇಕ ವ್ಯಕ್ತಿಗಳ ಸ್ಮಾರಕಗಳು ಪುತ್ಥಳಿಗಳ ರೂಪದಲ್ಲಿ ಸ್ಥಾಪಿಸಲ್ಪಟ್ಟವು. ಈ ಪುತ್ಥಳಿಗಳು ಕೂಡ ಆಧುನಿಕ ಭಾರತದ ಇತಿಹಾದ ಅಭ್ಯಾಸದ ದೃಷ್ಟಿಯಿಂದ ಮಹತ್ವದ್ದಾಗಿವೆ. ವಿವಿಧ ಪುತ್ಥಳಿಗಳ ಮೇಲಿಂದ ನಮಗೆ ಆ ಕಾಲದಲ್ಲಿಯ ಆಡಳಿತಗಾರರು, ಹಾಗೂ ಸಮಾಜದಲ್ಲಿಯ ಪ್ರತಿಷ್ಠಿತ ವ್ಯಕ್ತಿಗಳ ವಿಷಯವಾಗಿ ಮಾಹಿತಿ ದೊರೆಯುತ್ತದೆ. ಪುತ್ಥಳಿಯ ಮುಂಭಾಗದ ಹಲಗೆಯ ಮೇಲೆ ಸಂಬಂಧಿತ ವ್ಯಕ್ತಿಯ ಪೂರ್ಣ ಹೆಸರು, ಜನ್ಮ-ಮೃತ್ಯುವಿನ ವಿವರ, ಸ್ವಲ್ಪದರಲ್ಲಿ ಆ ವ್ಯಕ್ತಿಯ ಕಾರ್ಯ, ಜೀವನಪಟ ಮುಂತಾದ ವಿಷಯಗಳ ಮಾಹಿತಿ ದೊರೆಯುತ್ತದೆ. ಮಹಾತ್ಮಾ ಜ್ಯೋತಿರಾವ ಫುಲೆ, ಲೋಕಮಾನ್ಯ ಟಿಳಕ, ಡಾ. ಬಾಬಾಸಾಹೇಬ ಅಂಬೇಡಕರ ಇವರ ಪುತ್ಥಳಿಗಳಂತೆ ವಿವಿಧ ಘಟನೆಗಳ ನೆನಪಿಗಾಗಿ ನಿಲ್ಲಿಸಲಾದ ಸ್ಮಾರಕಗಳು ಕೂಡ ಸಂಬಂಧಿತ ಘಟನೆ, ಘಟನೆಯ ಕಾಲ, ಆ ಘಟನೆಗೆ


ಸಂಬಂಧಪಟ್ಟ ವ್ಯಕ್ತಿ ಇತ್ಯಾದಿ ಮಾಹಿತಿ ನೀಡುತ್ತವೆ. ಉದಾ. ವಿವಿಧ ಸ್ಥಳಗಳಲ್ಲಿಯ ಹುತಾತ್ಮರ ಸ್ಮಾರಕಗಳು.



**ಮಾಡಿ ನೋಡಿರಿ.**

ನಿಮ್ಮ ಹತ್ತಿರದ ಪರಿಸರದಲ್ಲಿರುವ ಸ್ಮಾರಕ ಮತ್ತು ಪುತ್ಥಳಿಗಳ ವಿಷಯದ ಮಾಹಿತಿಯನ್ನು ಪಡೆಯಿರಿ. ಅದರ ಮೇಲಿಂದ ನಿಮಗೆ ಆ ಘಟನೆಯ ಅಥವಾ ವ್ಯಕ್ತಿಯ ವಿಷಯವಾಗಿ ಯಾವ ಮಾಹಿತಿ ದೊರೆಯುತ್ತದೆಯೋ ಅದನ್ನು ಬರೆದಿಡಿರಿ.


**ಲಿಖಿತ ಸಾಧನಗಳು :** ಆಧುನಿಕ ಭಾರತದ ಇತಿಹಾಸದ ಲಿಖಿತ ಸಾಧನಗಳಲ್ಲಿ ಕೆಳಗಿನ ಸಂಗತಿಗಳ ಸಮಾವೇಶವಾಗುತ್ತದೆ.




**ವರ್ತಮಾನ ಪತ್ರಗಳು ಮತ್ತು ನಿಯತಕಾಲಿಕಗಳು :** ವರ್ತಮಾನ ಪತ್ರಗಳಿಂದ ಸಮಕಾಲೀನ ಘಟನೆಗಳ ವಿಷಯವಾಗಿ ಮಾಹಿತಿ ದೊರೆಯುತ್ತದೆ. ಅದರ ಜೊತೆಗೆ ಯಾವುದೊಂದು ಘಟನೆಯ ಆಳವಾದ ವಿಶ್ಲೇಷಣೆ, ಮಾನನೀಯರ ಅಭಿಪ್ರಾಯ ಹಾಗೂ ವಿರೋಧಿ ಅಭಿಪ್ರಾಯಗಳು, ಅಗ್ರಲೇಖಗಳು ಪ್ರಕಾಶಿತವಾಗುತ್ತಿರುತ್ತವೆ. ನಮಗೆ ಆ ಕಾಲದಲ್ಲಿಯ ರಾಜಕೀಯ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿಕ ಘಟನೆಗಳ ಮಾಹಿತಿ ದೊರೆಯುತ್ತದೆ. ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಜ್ಞಾನೋದಯ, ಜ್ಞಾನಪ್ರಕಾಶ, ಕೇಸರಿ, ದೀನಬಂಧು, ಅಮೃತ ಬಜಾರ ಪತ್ರಿಕೆ ಇತ್ಯಾದಿ ವರ್ತಮಾನಪತ್ರಗಳು ಜನಜಾಗೃತಿಯ ಮಹತ್ವದ ಸಾಧನಗಳಾಗಿದ್ದವು. ಈ ವರ್ತಮಾನಪತ್ರಗಳ ಮೂಲಕ ನಮಗೆ ಭಾರತದ ಬಗೆಗಿನ ಬ್ರಿಟಿಶ ಸರಕಾರದ ನೀತಿ, ಭಾರತದ ಮೇಲಿನ ಅದರ ಪರಿಣಾಮ ಮುಂತಾದವುಗಳ ಅಭ್ಯಾಸ ಮಾಡಲು ಬರುತ್ತದೆ. ಬ್ರಿಟಿಶ ಕಾಲದಲ್ಲಿ ವರ್ತಮಾನ ಪತ್ರಗಳು ಕೇವಲ ರಾಜಕೀಯ ಅಷ್ಟೇ ಅಲ್ಲ ಸಾಮಾಜಿಕ ಜ್ಞಾನೋದಯದ ಸಾಧನಗಳೆಂದೂ ಕಾರ್ಯ ಮಾಡುತ್ತಿದ್ದವು. ವಿಷ್ಣುಶಾಸ್ತ್ರಿ ಚಿಪಳೂಣಕರ ಇವರು ನಿಬಂಧಮಾಲಾ ಈ ಮಾಸಪತ್ರಿಕೆಯ ಮೂಲಕ, ಲೋಕಹಿತವಾದಿ ಉರ್ಫ್ ಗೋಪಾಳ ಹರಿ ದೇಶಮುಖ ಇವರು 'ಪ್ರಭಾಕರ' ಎಂಬ ವಾರಪತ್ರಿಕೆಯಲ್ಲಿ ಬರೆದ ಶತಪತ್ರಗಳ ಮೂಲಕ ವಿವಿಧ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿಷಯಗಳ ಮೇಲೆ ಭಾಷ್ಯ ಮಾಡಿದರು.

**ಬನ್ನಿ, ಅರಿತುಕೊಳ್ಳೋಣ...**


**ಡಾ. ಬಾಬಾಸಾಹೇಬ ಅಂಬೇಡಕರ ಮತ್ತು ವರ್ತಮಾನ ಪತ್ರಗಳು :** ಡಾ. ಬಾಬಾಸಾಹೇಬ ಅಂಬೇಡಕರ ಇವರು 1920ರ ಜನೇವರಿ ತಿಂಗಳಲ್ಲಿ 'ಮೂಕನಾಯಕ' ಎಂಬ ಪಾಕ್ಷಿಕವನ್ನು ಆರಂಭಿಸಿದರು. ಆದರೆ ಅವರಿಗೆ ಮುಂದಿನ ವಿದ್ಯಾಭ್ಯಾಸಕ್ಕಾಗಿ ಇಂಗ್ಲಂಡಿಗೆ ಹೋಗಬೇಕಾದುದರಿಂದ ಅವರು ಈ ಪಾಕ್ಷಿಕವನ್ನು ತಮ್ಮ ಸಹಕಾರಿಯ ಕಡೆಗೆ ಒಪ್ಪಿಸಿದರು. ಡಾ. ಬಾಬಾಸಾಹೇಬ ಅಂಬೇಡಕರ ಇವರು ಎಪ್ರಿಲ 1927ರಲ್ಲಿ 'ಬಹಿಷ್ಕೃತ ಭಾರತ' ಎಂಬ ಪತ್ರಿಕೆಯನ್ನು ಆರಂಭಿಸಿದರು. ಸಾಮಾನ್ಯ ಜನತೆಯ ಜ್ಞಾನೋದಯ ಮತ್ತು ಸಂಘಟನೆ ಮಾಡುವ ಸಲುವಾಗಿ ಬಹಿಷ್ಕೃತ ಭಾರತ ಪತ್ರಿಕೆಯಲ್ಲಿ ಅವರು ಲೇಖನ ಮಾಡಿದರು. ಇದಲ್ಲದೆ 'ಜನತಾ' ಮತ್ತು 'ಪ್ರಬುದ್ಧ ಭಾರತ' ಎಂಬ ಇನ್ನೆರಡು ವರ್ತಮಾನ ಪತ್ರಗಳನ್ನು ನಡೆಸಿದರು.




**ನಕಾಶಗಳು ಮತ್ತು ಆರೇಖನಗಳು (ರೂಪರೇಷೆಗಳು):** ನಕಾಶೆಯನ್ನು ಕೂಡ ಇತಿಹಾಸದ ಮಹತ್ವದ ಸಾಧನವೆಂದು ತಿಳಿಯಲಾಗುತ್ತದೆ. ನಕಾಶೆಯ ಮೇಲಿಂದ ನಗರಗಳ ಇಲ್ಲವೆ ಯಾವುದೊಂದು ಸ್ಥಳದ ಬದಲಾಗುತ್ತಿರುವ ಸ್ವರೂಪವನ್ನು ಅಭ್ಯಾಸ ಮಾಡಲು ಬರುತ್ತದೆ. ಬ್ರಿಟಿಶ ಕಾಲದಲ್ಲಿ ಸ್ಥಾಪಿಸಲ್ಪಟ್ಟ ಸರ್ವೆ ಆಫ ಇಂಡಿಯಾ ಎಂಬ ಸ್ವತಂತ್ರ ವಿಭಾಗವು ಭಾರತದ, ಭಾರತದ ವಿವಿಧ ಪ್ರಾಂತಗಳ ಹಾಗೂ ಪಟ್ಟಣಗಳ ಶಾಸ್ತ್ರಶುದ್ಧ ಪದ್ಧತಿಯಿಂದ ಸರ್ವೇಕ್ಷಣೆ ಮಾಡಿ ನಕಾಶೆಗಳನ್ನು ತಯಾರಿಸಿದೆ. ನಕಾಶೆಗಳಂತೆ ವಾಸ್ತುಶಿಲ್ಪಿಗಳು ತಯಾರಿಸಿದ ಆರೇಖನ (ರೂಪರೇಷೆ)ಗಳು ಕೂಡ ಕಟ್ಟಡಗಳ ವಾಸ್ತುಶಿಲ್ಪದ ಅದರಂತೆ ಯಾವುದೊಂದು ಭಾಗದ ವಿಕಾಸದ ಹಂತಗಳನ್ನು ಅಭ್ಯಾಸ

ಮಾಡುವ ದೃಷ್ಟಿಯಿಂದ ಮಹತ್ವದ್ದೆನಿಸುತ್ತವೆ. ಉದಾ., ಮುಂಬಯಿ ಪೋರ್ಟ್ ಟ್ರಸ್ಟ್ ಈ ವಿಭಾಗದ ಕಡೆಗೆ ಮುಂಬಯಿ ಬಂದರದ ಮೂಲ ಆರೇಖನಗಳು ಇವೆ. ಈ ಬಂದರವನ್ನು ನಂತರ ವಿಕಸಿತಗೊಳಿಸುವಾಗ ವಾಸ್ತುಶಿಲ್ಪಿಗಳು ಹಾಗೂ ಅಭಿಯಂತರು ತಯಾರಿಸಿದ ಆರೇಖನಗಳ ಮೇಲಿಂದ ನಮಗೆ ಮುಂಬಯಿ ನಗರದ ವಿಕಾಸದ ಮಾಹಿತಿ ದೊರೆಯಬಹುದು.

**ಮೌಖಿಕ ಸಾಧನಗಳು :** ಆಧುನಿಕ ಭಾರತದ ಇತಿಹಾಸದ ಮೌಖಿಕ ಸಾಧನಗಳಲ್ಲಿ ಕೆಳಗೆ ಕೊಟ್ಟ ಸಾಧನಗಳ ಸಮಾವೇಶವಾಗುತ್ತದೆ.




**ಸ್ಫೂರ್ತಿಗೀತೆಗಳು :** ಸ್ವಾತಂತ್ರ್ಯ ಚಳುವಳಿಯ ಕಾಲದಲ್ಲಿ ಅನೇಕ ಸ್ಫೂರ್ತಿಗೀತೆಗಳು ರಚಿಸಲ್ಪಟ್ಟವು ಅವುಗಳಲ್ಲಿಯ ಅನೇಕ ಗೀತೆಗಳು ಇಂದು ಲಿಖಿತ ರೂಪದಲ್ಲಿ ಲಭ್ಯವಾಗಿವೆ. ಆದರೆ ಅನೇಕ ಅಪ್ರಕಾಶಿತ ಸ್ಫೂರ್ತಿಗೀತೆಗಳು ಮುಖೋದ್ಗತವಾಗಿವೆ. ಈ ಸ್ಫೂರ್ತಿಗೀತೆಗಳಿಂದ ನಮಗೆ ಸ್ವಾತಂತ್ರ್ಯಪೂರ್ವ ಕಾಲದಲ್ಲಿಯ ಪರಿಸ್ಥಿತಿ, ಸ್ವಾತಂತ್ರ್ಯ ಚಳುವಳಿಯ ಹಿಂದಿನ ಪ್ರೇರಣೆ ಮುಂತಾದವುಗಳನ್ನು ಕುರಿತು ಮಾಹಿತಿ ದೊರೆಯುತ್ತದೆ.

**ಲಾವಣಿ ಪದಗಳು :** ಲಾವಣಿ ಪದಗಳ ಮೂಲಕ ಐತಿಹಾಸಿಕ ಘಟನೆಯ ಹಾಗೂ ವ್ಯಕ್ತಿಯ ಕಾರ್ಯದ ವಿಷಯವಾಗಿ ಮಾಹಿತಿ ದೊರೆಯುತ್ತದೆ. ಬ್ರಿಟಿಶ ಆಡಳಿತದಲ್ಲಿ 1857ರ ಸ್ವಾತಂತ್ರ್ಯಯುದ್ಧ, ವಿವಿಧ ಕ್ರಾಂತಿಕಾರರು ಮಾಡಿದ ಪರಾಕ್ರಮ ಇವುಗಳ ಮೇಲೆ ಆಧಾರಿತ ಲಾವಣಿಗಳು ರಚಿಸಲ್ಪಟ್ಟವು. ಜನರಲ್ಲಿ ಪ್ರೇರಣೆ ಮತ್ತು ಚೈತನ್ಯವನ್ನು ನಿರ್ಮಾಣಮಾಡಲು ಈ ಲಾವಣಿ ಪದಗಳ ಉಪಯೋಗ ಮಾಡಲಾಗುತ್ತಿತ್ತು. ಸ್ವಾತಂತ್ರ್ಯ ಹೋರಾಟದಂತೆ ಸತ್ಯಶೋಧಕ ಸಮಾಜವು ಲಾವಣಿಗಳ ಮುಖಾಂತರ ಮಾಡಿದ ಶೋಷಿತ ವರ್ಗದಲ್ಲಿಯ ಜಾಗೃತಿ, ಸಂಯುಕ್ತ ಮಹಾರಾಷ್ಟ್ರ ಹೋರಾಟ ಮುಂತಾದ ಘಟನೆಗಳ ಮೇಲೆ ಆಧಾರಿತ ಲಾವಣಿ ಪದಗಳ ರಚನೆ ಮಾಡಲಾಗಿದೆ.



**ಮಾಡಿ ನೋಡಿರಿ.**

ಭಾರತೀಯ ಸ್ವಾತಂತ್ರ್ಯ ಆಂದೋಲನೆಯ ಕಾಲಕ್ಕೆ ಸಂಬಂಧಿಸಿದ ಸ್ಫೂರ್ತಿಗೀತೆಗಳ ಮತ್ತು ಲಾವಣಿ ಪದಗಳ ಸಂಗ್ರಹ ಮಾಡಿರಿ ಮತ್ತು ಅವುಗಳನ್ನು ಸಾದರಪಡಿಸಿರಿ.

**ದೃಶ್ಯ, ಶ್ರಾವ್ಯ ಮತ್ತು ದೃಶ್ಯ-ಶ್ರಾವ್ಯ ಸಾಧನಗಳು :** ಆಧುನಿಕ ಕಾಲದಲ್ಲಿ ತಂತ್ರಜ್ಞಾನದ ವಿಕಾಸದಿಂದಾಗಿ ಛಾಯಾಚಿತ್ರಣ, ಧ್ವನಿ ಮುದ್ರಣ, ಚಲನಚಿತ್ರ ಇತ್ಯಾದಿ ಕಲೆಗಳ ವಿಕಾಸವಾಯಿತು. ಅಂದರೆ ಅವುಗಳಿಂದ ನಿರ್ಮಾಣವಾದ ಛಾಯಾಚಿತ್ರಗಳು ರಿಕಾರ್ಡುಗಳು ಮತ್ತು ಚಲನಚಿತ್ರಗಳನ್ನು ಇತಿಹಾಸದ ಸಾಧನಗಳೆಂದು ಬಳಕೆ ಮಾಡಲು ಬರುತ್ತದೆ.

**ಛಾಯಾಚಿತ್ರಗಳು :** ಛಾಯಾಚಿತ್ರಗಳು ಆಧುನಿಕ ಭಾರತದ ಇತಿಹಾಸದ ದೃಶ್ಯ ಸ್ವರೂಪದ ಸಾಧನಗಳಾಗಿವೆ. ಛಾಯಾಚಿತ್ರಣ ಕಲೆಯ ಶೋಧವಾದ ನಂತರ ವಿವಿಧ ವ್ಯಕ್ತಿ, ಘಟನೆ ಅದರಂತೆ ವಸ್ತು ಮತ್ತು ಕಟ್ಟಡಗಳ ಛಾಯಾಚಿತ್ರಗಳನ್ನು ತೆಗೆಯಲು ಆರಂಭವಾಯಿತು. ಈ ಛಾಯಾಚಿತ್ರಗಳಿಂದ ನಮಗೆ ವ್ಯಕ್ತಿಗಳು ಹಾಗೂ ಪ್ರಸಂಗಗಳು ಹೇಗೆ ಇದ್ದವೊ ಅಥವಾ ಹೇಗೆ ಸಂಭವಿಸಿದವೋ ಎಂಬುದರ ಮಾಹಿತಿಯು ದೃಶ್ಯ ಸ್ವರೂಪದಲ್ಲಿ ದೊರೆಯುತ್ತದೆ. ಮಧ್ಯಯುಗದ ಕಾಲದಲ್ಲಿಯ ವ್ಯಕ್ತಿಗಳು ಹೇಗೆ ಕಾಣಿಸುತ್ತಿದ್ದರು ಇಲ್ಲವೆ ಘಟನೆಗಳು ಹೇಗೆ ಸಂಭವಿಸಿದವು ಎಂಬುದರ ಚಿತ್ರಗಳು ಲಭ್ಯವಾಗಿವೆ. ಆದರೆ ಈ ಚಿತ್ರಗಳು ಎಷ್ಟು ವಿಶ್ವಾಸಾರ್ಹವಾಗಿವೆಯೆಂಬುದನ್ನು ಕುರಿತು ಪ್ರಶ್ನೆಗಳನ್ನು ಉಪಸ್ಥಿತಗೊಳಿಸಲಾಗುತ್ತದೆ. ಅವುಗಳ ತುಲನೆಯಲ್ಲಿ ಛಾಯಾಚಿತ್ರಗಳನ್ನು ಹೆಚ್ಚು ವಿಶ್ವಾಸಾರ್ಹವೆಂದು ತಿಳಿಯಲಾಗುತ್ತದೆ. ವ್ಯಕ್ತಿಗಳ ಛಾಯಾಚಿತ್ರಗಳ ಮೇಲಿಂದ ಆ ವ್ಯಕ್ತಿಯು ಹೇಗೆ ಕಾಣಿಸುತ್ತಿತ್ತು, ಆ ವ್ಯಕ್ತಿಯ ವೇಷಭೂಷಣ ಹೇಗಿತ್ತು ಎಂಬುದರ ಬಗ್ಗೆ ಮಾಹಿತಿ ದೊರೆಯುತ್ತದೆ. ಪ್ರಸಂಗದ ಛಾಯಾಚಿತ್ರದಿಂದ ಸಂಬಂಧಿತ ಪ್ರಸಂಗವು ಕಣ್ಮುಂದೆ ನಿಲ್ಲುತ್ತದೆ. ವಾಸ್ತುಶಿಲ್ಪ ಇಲ್ಲವೆ ವಸ್ತುಗಳ ಛಾಯಾಚಿತ್ರಗಳಿಂದ ಅವುಗಳ ಸ್ವರೂಪವು ಗಮನಕ್ಕೆ ಬರುತ್ತದೆ.

**ರಿಕಾರ್ಡುಗಳು :** ಛಾಯಾಗ್ರಹಣ ಕಲೆಯಂತೆ ಧ್ವನಿಮುದ್ರಣ ತಂತ್ರದ ಶೋಧವೂ ಮಹತ್ವದ್ದಾಗಿದೆ. ರಿಕಾರ್ಡುಗಳು ಇತಿಹಾಸದ ಶ್ರಾವ್ಯ ಸ್ವರೂಪದ ಸಾಧನಗಳಾಗಿವೆ. ಆಧುನಿಕ ಕಾಲದಲ್ಲಿ ನೇತಾರರು ಇಲ್ಲವೆ ಮಹತ್ವದ ವ್ಯಕ್ತಿಗಳು ಮಾಡಿದ ಭಾಷಣಗಳು, ಗೀತೆಗಳು ರಿಕಾರ್ಡುಗಳ ರೂಪದಲ್ಲಿ ಲಭ್ಯವಾಗಿವೆ. ಇತಿಹಾಸದ ಸಾಧನಗಳೆಂದು ಅವುಗಳ ಬಳಕೆಯನ್ನು ಮಾಡಬಹುದು. ಉದಾ., ಸ್ವತಃ ರವೀಂದ್ರನಾಥ ಟಾಗೋರರು ಹಾಡಿದ 'ಜನ

ಗಣ ಮನ' ಈ ರಾಷ್ಟ್ರಗೀತೆ ಇಲ್ಲವೆ ಸುಭಾಷಚಂದ್ರ ಬೋಸ ಇವರ ಭಾಷಣ ಇವುಗಳ ಉಪಯೋಗವನ್ನು ಆಧುನಿಕ ಭಾರತದ ಇತಿಹಾಸದ ಅಭ್ಯಾಸದಲ್ಲಿ ಶ್ರಾವ್ಯಸಾಧನಗಳೆಂದು ಮಾಡಲು ಬರುತ್ತದೆ.

**ಚಲನಚಿತ್ರಗಳು :** ಚಲನಚಿತ್ರವನ್ನು ಆಧುನಿಕ ತಂತ್ರಜ್ಞಾನದ ಒಂದು ಅದ್ವಿತೀಯ ಆವಿಷ್ಕರಣವೆಂದು ತಿಳಿಯಲಾಗುತ್ತದೆ. ಇಪ್ಪತ್ತನೆಯ ಶತಮಾನದಲ್ಲಿ ಚಲನಚಿತ್ರ ತಂತ್ರಜ್ಞಾನದಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಗತಿಯಾಯಿತು. ದಾದಾಸಾಹೇಬ ಫಾಳಕೆಯವರು ಕ್ರಿ.ಶ. 1913ರಲ್ಲಿ ಭಾರತೀಯ ಚಲನಚಿತ್ರ ಸೃಷ್ಟಿಗೆ ಅಡಿಪಾಯವನ್ನು ಹಾಕಿದರು. ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿಯ ದಾಂಡಿಯಾತ್ರೆ, ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳುವಳಿ ಇತ್ಯಾದಿ ಐತಿಹಾಸಿಕ ಪ್ರಸಂಗಗಳ ವೀಡಿಯೋ ಕ್ಯಾಸೆಟ್ ಲಭ್ಯವಾಗಿವೆ. ಈ ವೀಡಿಯೊ ಕ್ಯಾಸೆಟ್‌ಗಳಿಂದಾಗಿ ಸಂಭವಿಸಿದ ಘಟನೆಗಳನ್ನು ಇದ್ದ ಹಾಗೆಯೇ ನಾವು ನೋಡಬಹುದು.

ಪ್ರಾಚೀನ ಹಾಗೂ ಮಧ್ಯಯುಗದ ಕಾಲದ ತುಲನೆಯಲ್ಲಿ ಆಧುನಿಕ ಭಾರತದ ಇತಿಹಾಸದ ಅಭ್ಯಾಸ ಮಾಡುವ ಸಲುವಾಗಿ ವಿಪುಲ ಪ್ರಮಾಣದಲ್ಲಿ ವಿವಿಧ ಪ್ರಕಾರದ ಸಾಧನಗಳು ಉಪಲಬ್ಧವಾಗಿವೆ. ಈ ಕಾಲಖಂಡದಲ್ಲಿಯ ಭೌತಿಕ ಸಾಧನಗಳು ಸಾಕಷ್ಟು ಪ್ರಮಾಣದಲ್ಲಿ ಸುಸ್ಥಿತಿಯಲ್ಲಿವೆ. ಅಭಿಲೇಖಾಗಾರದಲ್ಲಿ ಸಂರಕ್ಷಿಸಿ ಇಡಲಾದ ಅನೇಕ ಲಿಖಿತ ಸಾಧನಗಳು ಕೂಡ ಲಭ್ಯವಾಗಿವೆ, ಲಿಖಿತ ಸಾಧನಗಳ ಬಳಕೆ ಮಾಡುವಾಗ ಮಾತ್ರ, ಆ ವಿಚಾರಗಳು ಯಾವ ವಿಚಾರಗಳಿಂದ ಪ್ರೇರಿತವಾಗಿವೆ. ಯಾವುದೊಂದು ಘಟನೆಯ ಕಡೆಗೆ ನೋಡುವ ಸಾಧನಕರ್ತನ ದೃಷ್ಟಿಕೋನವು ಏನಿದೆಯೆಂಬುದನ್ನು ಪರೀಕ್ಷಿಸಿಕೊಳ್ಳಬೇಕಾಗುತ್ತದೆ. ಇಂಥ ಸಾಧನಗಳನ್ನು ಸಂರಕ್ಷಿಸುವುದು ಅವಶ್ಯಕವಾಗಿದೆ, ಐತಿಹಾಸಿಕ ಸಾಧನಗಳ ಸಂರಕ್ಷಣೆ ಮಾಡಿರುವುದರಿಂದ ನಾವು ಇತಿಹಾಸದ ಈ ಸಮೃದ್ಧ ಪರಂಪರೆಯನ್ನು ಭಾವೀ ತಲೆಮಾರಿಗೆ ಒಪ್ಪಿಸಬಹುದು.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ಇತಿಹಾಸದ ಸಾಧನಗಳಲ್ಲಿಯ ............. ಸಾಧನಗಳು ಆಧುನಿಕ ತಂತ್ರಜ್ಞಾನದ ಮೇಲೆ ಆಧಾರಿತವಾಗಿವೆ.
(ಅ) ಲಿಖಿತ (ಬ) ಮೌಖಿಕ
(ಕ) ಭೌತಿಕ (ಡ) ದೃಶ್ಯ-ಶ್ರಾವ್ಯ

(2) ಪುಣೆಯಲ್ಲಿಯ .......... ಈ ಗಾಂಧಿ ಸ್ಮಾರಕ ಸಂಗ್ರಹಾಲಯದಲ್ಲಿ ಗಾಂಧೀಜಿಯವರ ಇತಿಹಾಸದ ವಿಷಯವಾಗಿ ಮಾಹಿತಿ ದೊರೆಯುತ್ತದೆ.
(ಅ) ಆಗಾಖಾನ ಪ್ಯಾಲೇಸ (ಬ) ಸಾಬರಮತಿ ಆಶ್ರಮ
(ಕ) ಸೆಲ್ಯುಲರ ಜೈಲು (ಡ) ಲಕ್ಷ್ಮೀವಿಲಾಸ ಪ್ಯಾಲೇಸ

(3) ಇಪ್ಪತ್ತನೆಯ ಶತಮಾನದಲ್ಲಿಯ ಆಧುನಿಕ ತಂತ್ರಜ್ಞಾನದ ಒಂದು ಅದ್ವಿತೀಯ ಆವಿಷ್ಕರಣವೆಂದರೆ ...........
(ಅ) ಲಾವಣಿ (ಬ) ಛಾಯಾಚಿತ್ರ
(ಕ) ಸಂದರ್ಶನ (ಡ) ಚಲನಚಿತ್ರ


**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಬ್ರಿಟಿಶ ಕಾಲದಲ್ಲಿ ವರ್ತಮಾನ ಪತ್ರಗಳು ಸಾಮಾಜಿಕ ಜ್ಞಾನೋದಯದ ಸಾಧನಗಳೆಂದೂ ಕಾರ್ಯಮಾಡುತ್ತಿದ್ದವು.
(2) ಚಿತ್ರ ಧ್ವನಿ ಸುರಳಿಯನ್ನು ಆಧುನಿಕ ಭಾರತದ ಇತಿಹಾಸದ ಅಭ್ಯಾಸದಲ್ಲಿ ಅತ್ಯಂತ ವಿಶ್ವಾಸಾರ್ಹ ಸಾಧನವೆಂದು ತಿಳಿಯಲಾಗುತ್ತದೆ.

**3. ಟಿಪ್ಪಣಿ ಬರೆಯಿರಿ.**

(1) ಛಾಯಾಚಿತ್ರಗಳು (2) ವಸ್ತು ಸಂಗ್ರಹಾಲಯಗಳು ಮತ್ತು ಇತಿಹಾಸ (3) ಶ್ರಾವ್ಯ ಸಾಧನಗಳು

**4. ಕೆಳಗಿನ ಕಲ್ಪನಾಚಿತ್ರವನ್ನು ಪೂರ್ಣಮಾಡಿರಿ.**




**ಉಪಕ್ರಮ**

(1) ಇಂಟರ್ನೆಟ್ ಸಹಾಯದಿಂದ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿಯ ವಿವಿಧ ಘಟನೆಗಳ ಛಾಯಾಚಿತ್ರಗಳ ಸಂಗ್ರಹ ಮಾಡಿರಿ.
(2) ಸ್ವಾತಂತ್ರ್ಯ ಹೋರಾಟದಲ್ಲಿಯ ಪ್ರಸಿದ್ಧ ನೇತಾರರು ಮತ್ತು ಅವರ ಚರಿತ್ರೆಗಳನ್ನು ಕುರಿತು ಮಾಹಿತಿ ಪಡೆದು ಅದರ ವಾಚನ ಮಾಡಿರಿ.

AKP6X7

# 2. ಯುರೋಪ ಮತ್ತು ಭಾರತ

ಆಧುನಿಕ ಕಾಲಖಂಡದಲ್ಲಿ ಯುರೋಪನಲ್ಲಿ ಸಂಭವಿಸುವ ವಿವಿಧ ಘಟನೆಗಳ ಪ್ರತಿಧ್ವನಿಯು ಭಾರತದಲ್ಲಿ ಉಂಟಾಗುತ್ತಿತ್ತು. ಅದರಿಂದಾಗಿ ಆಧುನಿಕ ಭಾರತದ ಇತಿಹಾಸದ ಕಾಲಖಂಡವನ್ನು ಅಭ್ಯಸಿಸುವಾಗ ನಾವು ಈ ಕಾಲದಲ್ಲಿ ಯುರೋಪನಲ್ಲಿ ಸಂಭವಿಸುವ ಘಟನೆಗಳ ಅಭ್ಯಾಸವನ್ನು ಮಾಡಬೇಕಾಗುತ್ತದೆ.

**ಪುನರುಜ್ಜೀವನ ಯುಗ :** ಯುರೋಪದ ಇತಿಹಾಸದಲ್ಲಿ ಮಧ್ಯಯುಗದ ಕೊನೆಯ ಹಂತ ಅಂದರೆ ಕ್ರಿಸ್ತಶಕದ 13ರಿಂದ 16ನೇ ಶತಮಾನವು ಪುನರುಜ್ಜೀವನ ಯುಗವೆಂದು ಗುರುತಿಸಲ್ಪಡುತ್ತದೆ. ಈ ಕಾಲಖಂಡದಲ್ಲಿ ಪುನರುಜ್ಜೀವನ, ಧರ್ಮಸುಧಾರಣೆಯ ಚಳುವಳಿ ಹಾಗೂ ಭೌಗೋಲಿಕ ಶೋಧ ಈ ಘಟನೆಗಳಿಂದಾಗಿ ಆಧುನಿಕ ಯುಗದ ಅಡಿಪಾಯವನ್ನು ಹಾಕಲಾಯಿತು. ಆದ್ದರಿಂದಲೇ ಈ ಕಾಲಕ್ಕೆ ಪುನರುಜ್ಜೀವನ ಯುಗ ಎಂದು ಕರೆಯುತ್ತಾರೆ.

ಪುನರುಜ್ಜೀವನ ಯುಗದಲ್ಲಿ ಯುರೋಪನಲ್ಲಿ ಕಲೆ, ವಾಸ್ತುಶಿಲ್ಪ, ತತ್ವಜ್ಞಾನ ಇತ್ಯಾದಿ ಕ್ಷೇತ್ರಗಳಲ್ಲಿ ಗ್ರೀಕ ಮತ್ತು ರೋಮನ್ ಪರಂಪರೆಗಳ ಪುನರುಜ್ಜೀವನ ಸಂಭವಿಸಿತು. ಇದರಿಂದಲೇ ಸರ್ವಾಂಗೀಣ ಪ್ರಗತಿಗೆ ಚಾಲನೆ ದೊರಕಿತು. ಮಾನವನ ಕಡೆಗೆ ನೋಡುವ ಮಾನವನ ದೃಷ್ಟಿಕೋನದಲ್ಲಿ ಬದಲಾವಣೆಯಾಯಿತು. ಮನುಷ್ಯನು ಧರ್ಮದ ಬದಲಾಗಿ ಸರ್ವ ವಿಚಾರಗಳ ಕೇಂದ್ರಬಿಂದುವಾದನು.

**ಲಿಯೋನಾರ್ದೋ-ದ-ವಿಂಚಿ :** ಇವನನ್ನು ಪುನರುಜ್ಜೀವನ ಕಾಲದಲ್ಲಿಯ ಬಹುಮುಖ ಪ್ರತಿಭೆಯ ವ್ಯಕ್ತಿ ಎಂದು ತಿಳಿಯಲಾಗುತ್ತದೆ. ಇವನು ಅನೇಕ ಶಾಸ್ತ್ರ ಮತ್ತು ಕಲೆಗಳಲ್ಲಿ ಪಾರಂಗತನಾಗಿದ್ದನು. ಶಿಲ್ಪಕಲೆ, ವಾಸ್ತುಶಿಲ್ಪ, ಗಣಿತ, ಯಂತ್ರವಿದ್ಯೆ, ಸಂಗೀತ, ಖಗೋಲ ವಿಜ್ಞಾನ ಮುಂತಾದ ವಿವಿಧ ವಿಷಯಗಳ ಮೇಲೆ ಅವನ ಪ್ರಭುತ್ವವಿತ್ತು ಆದರೆ ಅವನು ಚಿತ್ರಕಾರನೆಂದು ಜಗತ್ಪ್ರಸಿದ್ಧನಾದನು. ಅವನ 'ಮೊನಾಲಿಸಾ' ಮತ್ತು 'ದ ಲಾಸ್ಟ ಸಪರ' ಈ ಚಿತ್ರಗಳು ಅಜರಾಮರವಾದವು.



ಪುನರುಜ್ಜೀವನ ಚಳುವಳಿಯು ಮಾನವ ಜೀವನದ ಎಲ್ಲಾ ರಂಗಗಳನ್ನು ವ್ಯಾಪಿಸಿಬಿಟ್ಟಿತು. ವಿಜ್ಞಾನ ಮತ್ತು ವಿವಿಧ ಕಲೆಗಳ ಕ್ಷೇತ್ರಗಳಲ್ಲಿ ನಮಗೆ ಪುನರುಜ್ಜೀವನ ಚಳುವಳಿಯ ಆವಿಷ್ಕರಣವು ಕಾಣಸಿಗುತ್ತದೆ. ಪುನರುಜ್ಜೀವನ ಕಾಲದ ಮತ್ತು ಸಾಹಿತ್ಯಗಳಲ್ಲಿ ಮಾನವೀ ಭಾವನೆ ಮತ್ತು ಸಂವೇದನೆಗಳು ಚಿತ್ರಿತವಾಗತೊಡಗಿದವು. ಜನರಿಗೆ ತಿಳಿಯುವಂತಹ ಪ್ರಾದೇಶಿಕ ಭಾಷೆಗಳಲ್ಲಿ ಸಾಹಿತ್ಯ ನಿರ್ಮಾಣವಾಗತೊಡಗಿತು. ಕ್ರಿ.ಶ. 1450ರ ಸುಮಾರು ಜರ್ಮನಿಯ ಜೋಹಾನ್ಸ ಗುಟೆನಬರ್ಗ ಇವನು ಮುದ್ರಣಯಂತ್ರವನ್ನು ಶೋಧಿಸಿದನು. ಮುದ್ರಣಯಂತ್ರದ ಶೋಧದಿಂದಾಗಿ ಹೊಸ ವಿಚಾರ, ಹೊಸ ಕಲ್ಪನೆ ಮತ್ತು ಜ್ಞಾನಗಳು ಸಮಾಜದಲ್ಲಿ ಎಲ್ಲರ ವರೆಗೆ ತಲುಪತೊಡಗಿದವು.

**ಧರ್ಮಸುಧಾರಣೆಯ ಚಳುವಳಿ :** ಸ್ವತಂತ್ರ ಬುದ್ಧಿಯಿಂದ ವಿಚಾರ ಮಾಡುವ ವಿಚಾರವಂತರು ರೋಮನ್ ಕ್ಯಾಥಾಲಿಕ್ ಚರ್ಚನ ಹಳೆಯ ಧಾರ್ಮಿಕ ಕಲ್ಪನೆಗಳ ಮೇಲೆ ದಾಳಿ ಮಾಡಿದರು. ಜನರಲ್ಲಿಯ ಅಜ್ಞಾನದ ಲಾಭವನ್ನು ಪಡೆದುಕೊಂಡು ದುರುಪಯೋಗ ಪಡೆದು ಖ್ರಿಸ್ತಿ ಧರ್ಮಗುರುಗಳು ಕರ್ಮಕಾಂಡದ ಅತಿರಂಜಿತ ವರ್ಣನೆ ಮಾಡುತ್ತಿದ್ದರು. ಧರ್ಮದ ಹೆಸರಿನಲ್ಲಿ ಜನರನ್ನು ಸುಲಿಯುತ್ತಿದ್ದರು. ಇದರ ವಿರುದ್ಧ ಯುರೋಪನಲ್ಲಿ ನಡೆದ ಚಳುವಳಿಗೆ 'ಧರ್ಮಸುಧಾರಣೆಯ ಚಳುವಳಿ' ಎಂದು ಕರೆಯುತ್ತಾರೆ. ಈ ಚಳುವಳಿಯಿಂದಾಗಿ ಧಾರ್ಮಿಕ ಕ್ಷೇತ್ರದಲ್ಲಿ ಮನುಷ್ಯನ ಸ್ವಾತಂತ್ರ್ಯ ಮತ್ತು ಬುದ್ಧಿ ಪ್ರಾಮಾಣ್ಯ ಈ ತತ್ವಗಳಿಗೆ ಮಹತ್ವ ಪ್ರಾಪ್ತವಾಯಿತು.

**ಭೌಗೋಲಿಕ ಶೋಧ :** ಕ್ರಿ.ಶ. 1453ರಲ್ಲಿ ಆಟೋಮನ್ ತುರ್ಕರು ಬೈಝಂಟೈನ ಸಾಮ್ರಾಜ್ಯದ ರಾಜಧಾನಿಯಾದ ಕಾನಸ್ಟಂಟಿನೋಪಲ್ (ಇಸ್ತಂಬೂಲ) ಗೆದ್ದುಕೊಂಡರು. ಏಶಿಯಾ ಮತ್ತು ಯುರೋಪಗಳನ್ನು ಜೋಡಿಸುವ ವ್ಯಾಪಾರದ ಭೂಮಾರ್ಗವು ಈ ಪಟ್ಟಣದೊಳಗಿಂದ ಹೋಗುತ್ತಿತ್ತು. ತುರ್ಕರು ಈ ಮಾರ್ಗವನ್ನು ತಡೆಗಟ್ಟಿದ್ದರಿಂದ ಯುರೋಪಿಯನ್ ದೇಶಗಳಿಗೆ ಏಶಿಯಾದ ಕಡೆಗೆ ಹೋಗುವ ಹೊಸ ಮಾರ್ಗವನ್ನು ಶೋಧಿಸುವುದು ಅವಶ್ಯಕವೆನಿಸತೊಡಗಿತು. ಇದರಿಂದಲೇ ಭೌಗೋಲಿಕ ಶೋಧಗಳ ಹೊಸ ಅಧ್ಯಾಯ ಆರಂಭವಾಯಿತು.

**ಇದನ್ನು ತಿಳಿದುಕೊಳ್ಳೋಣ.**

**ಭೌಗೋಲಿಕ ಶೋಧ :** ಹದಿನೈದನೆಯ ಶತಮಾನದಲ್ಲಿ ಯುರೋಪನ ನಾವಿಕರು ಭಾರತದ ಕಡೆಗೆ ಹೋಗುವ ಜಲಮಾರ್ಗವನ್ನು ಶೋಧಿಸುವ ಸಲುವಾಗಿ ಸಮುದ್ರ ಪರ್ಯಟನೆಗಾಗಿ ಹೊರಟರು.

- ಕ್ರಿ.ಶ. 1487ರಲ್ಲಿ ಬಾರ್ಥೊಲೋಮ್ಯು ಡಾಯಸ ಎಂಬ ಪೊರ್ತುಗೀಜ ನಾವಿಕನು ಭಾರತವನ್ನು ಶೋಧಿಸುವ ಸಲುವಾಗಿ ಹೊರಟನು ಆದರೆ ಅವನು ಆಫ್ರಿಕಾದ ದಕ್ಷಿಣ ತುದಿಯವರೆಗೆ ಅಂದರೆ ಕೇಪ ಆಫ ಗುಡ್‌ಹೋಪ ವರೆಗೆ ತಲುಪಿದನು.
- ಕ್ರಿ.ಶ. 1492ರಲ್ಲಿ ಭಾರತದ ಪಶ್ಚಿಮದ ಕಡೆಗೆ ಹೋಗಿ ಭಾರತವನ್ನು ಶೋಧಿಸುವ ಪ್ರಯತ್ನದಲ್ಲಿ ಖ್ರಿಸ್ತೋಫರ ಕೋಲಂಬಸನು ಅಮೇರಿಕಾ ಖಂಡದ ಪೂರ್ವದ ದಂಡೆಯನ್ನು ತಲುಪಿದನು.
- ಕ್ರಿ.ಶ. 1498ರಲ್ಲಿ ಪೋರ್ತುಗೀಜ ನಾವಿಕನಾದ ವಾಸ್ಕೊ-ದ-ಗಾಮಾ ಇವನು ಆಫ್ರಿಕಾದ ದಕ್ಷಿಣ ತುದಿಯನ್ನು ಸುತ್ತು ಹಾಕಿ ಭಾರತದ ಪಶ್ಚಿಮದ ದಂಡೆಯ ಕಾಲಿಕತ ಬಂದರವನ್ನು ತಲುಪಿದನು.



**ಮಾಡಿ ನೋಡಿರಿ.**

- ಜಗತ್ತಿನ ನಕಾಶದಲ್ಲಿ ನಾವಿಕರು ಶೋಧಿಸಿದ ಹೊಸ ಸಮುದ್ರ ಮಾರ್ಗ ಮತ್ತು ಪ್ರದೇಶಗಳನ್ನು ತೋರಿಸಿರಿ.

**ಯುರೋಪಿನಲ್ಲಿಯ ವೈಚಾರಿಕ ಕ್ರಾಂತಿ:** ಪುನರುಜ್ಜೀವನದ ಕಾಲದಲ್ಲಿ ಉಂಟಾದ ಬದಲಾವಣೆಗಳಿಂದಾಗಿ ಮಧ್ಯಯುಗದಿಂದ ಆಧುನಿಕ ಯುಗದೆಡೆಗೆ ಯುರೋಪಿನ ಮುನ್ನಡೆ ಆರಂಭವಾಯಿತು. ಇದೇ ಕಾಲದಲ್ಲಿ ಯುರೋಪಿನಲ್ಲಿ ವೈಚಾರಿಕ ಕ್ರಾಂತಿ ಸಂಭವಿಸಿತು. ಹಿಂದಿನ ಅಜ್ಞಾನ ಮತ್ತು ಅಂಧಶ್ರದ್ಧೆಗಳೊಳಗಿಂದ ಸಮಾಜವು ಹೊರಗೆ ಬರತೊಡಗಿತು. ನೆಲೆಗೊಂಡ ರೂಢಿ ಮತ್ತು ಪರಂಪರೆ ಹಾಗೂ ಸಂಭವಿಸುವ ಘಟನೆಗಳ ಕಡೆಗೆ ವಿಮರ್ಶಾತ್ಮಕ ದೃಷ್ಟಿಕೋನದಿಂದ ನೋಡುವುದು ಆರಂಭವಾಯಿತು. ಈ ಸಂಪೂರ್ಣ ಬದಲಾವಣೆಗಳಿಗೆ 'ವೈಚಾರಿಕ ಕ್ರಾಂತಿ' ಎಂದು ಕರೆಯಲಾಗುತ್ತದೆ. ಈ ವೈಚಾರಿಕ ಕ್ರಾಂತಿಯಿಂದ ಯುರೋಪಿನಲ್ಲಿ ವೈಜ್ಞಾನಿಕ ಕ್ಷೇತ್ರದಲ್ಲಿಯ ಸಂಶೋಧನೆಗೆ ಚಾಲನೆ ದೊರಕಿತು.

**ರಾಜಕೀಯ ಕ್ಷೇತ್ರದಲ್ಲಿಯ ಕ್ರಾಂತಿ :** ಆಧುನಿಕ ಕಾಲಖಂಡದ ಆರಂಭದ ಹಂತದಲ್ಲಿ ಯುರೋಪಿನಲ್ಲಿ ಅನೇಕ ರಾಜಕೀಯ ಸ್ಥಿತ್ಯಂತರಗಳಾದವು. 18 ಮತ್ತು 19ನೇ ಶತಮಾನಗಳಲ್ಲಿ ಸಂಭವಿಸಿದ ಅನೇಕ ಕ್ರಾಂತಿಕಾರಕ ಘಟನೆಗಳಿಂದಾಗಿ ಈ ಕಾಲಖಂಡವು 'ಕ್ರಾಂತಿಯುಗ' ವೆಂದು ಗುರುತಿಸಲ್ಪಡುತ್ತದೆ. ಈ ಕಾಲದಲ್ಲಿ ಇಂಗ್ಲಂಡಿನಲ್ಲಿ ಸಂಸದೀಯ ಪ್ರಜಾಪ್ರಭುತ್ವದ ವಿಕಾಸವಾಯಿತು. ಕ್ಯಾಬಿನೆಟ್ ಪದ್ಧತಿಯ ಸ್ವರೂಪದಲ್ಲಿ ಬದಲಾವಣೆಯಾಯಿತು. ಕ್ರಿ.ಶ. 1689ರ ಬಿಲ್ ಆಫ ರೈಟ್ಸ್‌ನಿಂದಾಗಿ ರಾಜನ ಅಧಿಕಾರಗಳ ಮೇಲೆ ನಿರ್ಬಂಧ ಹಾಕಲಾಯಿತು. ಪಾರ್ಲಿಮೆಂಟಿನ ಸಾರ್ವಭೌಮತ್ವವು ಸ್ಥಾಪಿಸಲ್ಪಟ್ಟಿತು.

**ಅಮೇರಿಕೆಯ ಸ್ವಾತಂತ್ರ್ಯಯುದ್ಧ :** ಯುರೋಪಿನಲ್ಲಿ ಸಂಭವಿಸಿದ ಕ್ರಾಂತಿಕಾರಕ ಘಟನೆಗಳ ಹಿನ್ನೆಲೆಯಲ್ಲಿ ಅಮೇರಿಕೆಯಲ್ಲಿಯ ಸ್ವಾತಂತ್ರ್ಯಯುದ್ಧದ ವಿಚಾರ ಮಾಡುವುದು ಮಹತ್ವದ್ದಾಗಿರುತ್ತದೆ. ಅಮೇರಿಕಾ ಖಂಡದ ಶೋಧದ ನಂತರ ಯುರೋಪಿಯನ್ ದೇಶಗಳು ಈ ಖಂಡದ ಕಡೆಗೆ ತಮ್ಮ ಗಮನ ಹರಿಸಿದವು. ಸಾಮ್ರಾಜ್ಯವಾದಿ ಯುರೋಪಿಯನ್ ದೇಶಗಳು ಅಮೇರಿಕಾ ಖಂಡದ ವಿವಿಧ ಪ್ರದೇಶಗಳನ್ನು ವಶಪಡಿಸಿಕೊಂಡು ಅಲ್ಲಿ ತಮ್ಮ ವಸಾಹತುಗಳನ್ನು ಸ್ಥಾಪಿಸಿದವು ಇಂಗ್ಲಂಡ ದೇಶವು ಉತ್ತರ ಅಮೇರಿಕೆಯ ಪೂರ್ವ ಕರಾವಳಿಯಲ್ಲಿ ಹದಿಮೂರು ವಸಾಹತುಗಳನ್ನು ಸ್ಥಾಪನೆ ಮಾಡಿತು. ಆರಂಭದಲ್ಲಿ ಈ ವಸಾಹತುಗಳ ಮೇಲೆ ಇಂಗ್ಲಂಡಿನ ನಾಮಮಾತ್ರ ವರ್ಚಸ್ಸು ಇತ್ತು. ಆದರೆ ನಂತರದ ಕಾಲದಲ್ಲಿ ಇಂಗ್ಲಂಡಿನ ಪಾರ್ಲಿಮೆಂಟು ಅಮೇರಿಕೆಯ ವಸಾಹತುಗಳ ಮೇಲೆ ಅನ್ಯಾಯಕಾರಕ ನಿರ್ಬಂಧಗಳನ್ನು ಹಾಗೂ ಕರಗಳನ್ನು ಹೇರಲು ಆರಂಭಿಸಿತು. ಅಮೇರಿಕೆಯ ವಸಾಹತುಗಳಲ್ಲಿಯ ಸ್ವಾತಂತ್ರ್ಯಪ್ರಿಯ ಜನತೆಯು ಇದನ್ನು ವಿರೋಧಿಸಿತು. ವಸಾಹತುಗಳನ್ನು ನಿಗ್ರಹಿಸುವ ಸಲುವಾಗಿ ಇಂಗ್ಲಂಡ ವಸಾಹತುಗಳ ವಿರುದ್ಧ ಯುದ್ಧಸಾರಿತು. ಅಮೇರಿಕೆಯ ವಸಾಹತುಗಳು ಜಾರ್ಜ ವಾಶಿಂಗಟನ್‌ರ ನೇತೃತ್ವದಲ್ಲಿ ಸೈನ್ಯವನ್ನು ಸಂಘಟಿಸಿ ಪ್ರತಿಭಟನೆ ಮಾಡಿದವು. ಕೊನೆಗೆ ವಸಾಹತುಗಳ ಸೈನ್ಯವು ಜಯಶಾಲಿಯಾಯಿತು. ಈ ಘಟನೆಯು 'ಅಮೇರಿಕೆಯ ಸ್ವಾತಂತ್ರ್ಯಯುದ್ಧ'ವೆಂದು ಗುರುತಿಸಲ್ಪಡುತ್ತದೆ. ಇದರೊಳಗಿಂದಲೇ ಅಮೇರಿಕೆಯ ಸಂಯುಕ್ತ ಸಂಸ್ಥಾನ ಎಂಬ ಒಕ್ಕೂಟ ಸರಕಾರ ಪದ್ಧತಿ, ಲಿಖಿತ ರಾಜ್ಯ ಘಟನೆಯನ್ನು ಹೊಂದಿರುವ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಒಳಗೊಂಡ ಹೊಸ ದೇಶವು ಅಸ್ತಿತ್ವದಲ್ಲಿ ಬಂದಿತು.

**ಫ್ರೆಂಚ ರಾಜ್ಯಕ್ರಾಂತಿ :** ಕ್ರಿ.ಶ. 1789ರಲ್ಲಿ ಫ್ರಾನ್ಸಿನಲ್ಲಿಯ ಜನರು ಅಲ್ಲಿಯ ನಿರಂಕುಶವಾದ ಅನ್ಯಾಯಕಾರಕ ರಾಜಪ್ರಭುತ್ವ ಮತ್ತು ಸರಂಜಾಮಶಾಹಿಯ ವಿರುದ್ಧ ದಂಗೆಯೆದ್ದರು ಹಾಗೂ ಪ್ರಜಾಪ್ರಭುತ್ವದ ಸ್ಥಾಪನೆ ಮಾಡಿದರು. ಈ ಘಟನೆಯು 'ಫ್ರೆಂಚ ರಾಜ್ಯಕ್ರಾಂತಿ' ಎಂದು ಗುರುತಿಸಲ್ಪಡುತ್ತದೆ. ಫ್ರೆಂಚ್ ರಾಜ್ಯಕ್ರಾಂತಿಯು ಜಗತ್ತಿಗೆ ಸ್ವಾತಂತ್ರ್ಯ, ಸಮತೆ ಮತ್ತು ಬಂಧುತ್ವ ಈ ಅಮೂಲ್ಯ ತತ್ವಗಳ ದೇಣಿಗೆಯನ್ನು ನೀಡಿತು.

ಜಗತ್ತಿನ ಇತಿಹಾಸದಲ್ಲಿಯ ರಾಜಕೀಯ ಕ್ರಾಂತಿಗಳಲ್ಲಿ

ಅಮೇರಿಕೆಯ ಸ್ವಾತಂತ್ರ್ಯಯುದ್ಧ ಮತ್ತು ಫ್ರೆಂಚ್ ರಾಜ್ಯಕ್ರಾಂತಿ ಇವುಗಳಿಗೆ ವಿಶೇಷ ಮಹತ್ವದ ಸ್ಥಾನವಿದೆ.

**ಔದ್ಯೋಗಿಕ ಕ್ರಾಂತಿ :** ಹದಿನೆಂಟನೆಯ ಶತಮಾನದ ಉತ್ತರಾರ್ಧದಿಂದ ಯುರೋಪಿನ ಔದ್ಯೋಗಿಕ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳಾತೊಡಗಿದವು. ಬಾಷ್ಪಶಕ್ತಿಯ ಮೇಲೆ ನಡೆಯುವ ಯಂತ್ರಗಳ ಸಹಾಯದಿಂದ ಉತ್ಪಾದನೆಯಾಗತೊಡಗಿತು. ಸಣ್ಣ ಮನೆಮಾರಿಗೆ ಉದ್ಯೋಗಗಳ ಸ್ಥಾನವನ್ನು ದೊಡ್ಡ ಕಾರ್ಖಾನೆಗಳು ಆಕ್ರಮಿಸಿದವು. ಕೈಮಗ್ಗದ ಬದಲಾಗಿ ಯಂತ್ರಮಗ್ಗದ ಬಳಕೆ ಆರಂಭವಾಯಿತು. ಉಗಿ ಬಂಡಿ ಮತ್ತು ಉಗಿ ಹಡಗುಗಳಂತಹ ಸಾರಿಗೆಯ ಹೊಸ ಸಾಧನಗಳು ಬಂದವು. ಯಂತ್ರಯುಗವು ಅವತರಿಸಿತು. ಇದಕ್ಕೇನೆ 'ಔದ್ಯೋಗಿಕ ಕ್ರಾಂತಿ' ಎಂದು ಕರೆಯುತ್ತಾರೆ.

ಔದ್ಯೋಗಿಕ ಕ್ರಾಂತಿಯು ಇಂಗ್ಲಂಡಿನಲ್ಲಿ ಆರಂಭವಾಯಿತು ಹಾಗೂ ನಂತರ ಅದು ಹಂತಹಂತವಾಗಿ ಪಾಶ್ಚಿಮಾತ್ಯ ಜಗತ್ತಿನಲ್ಲಿ ಪಸರಿಸಿತು. ಈ ಕಾಲದಲ್ಲಿ ಇಂಗ್ಲೆಂಡಿನ ಔದ್ಯೋಗಿಕ ಪ್ರಗತಿಯು ಎಷ್ಟು ಸಮೃದ್ಧವಾಗಿತ್ತೆಂದರೆ ಇಂಗ್ಲಂಡ ದೇಶವನ್ನು 'ಜಗತ್ತಿನ ಕಾರ್ಖಾನೆ' ಎಂದು ವರ್ಣಿಸಲಾಯಿತು.

**ಬಂಡವಾಳಶಾಹಿಯ ಉದಯ :** ಹೊಸ ಸಮುದ್ರಮಾರ್ಗಗಳ ಶೋಧದ ನಂತರ ಯುರೋಪ ಮತ್ತು ಏಶಿಯಾದ ದೇಶಗಳಲ್ಲಿಯ ವ್ಯಾಪಾರದ ಹೊಸ ಅಧ್ಯಾಯ ಆರಂಭವಾಯಿತು. ಸಮುದ್ರ ಮಾರ್ಗದಿಂದ ಪೂರ್ವದ ಕಡೆಯ ದೇಶಗಳೊಡನೆ ವ್ಯಾಪಾರ ಮಾಡಲು ಅನೇಕ ವ್ಯಾಪಾರಿಗಳು ಮುಂದೆ ಬಂದರು. ಆದರೆ ಒಬ್ಬ ವ್ಯಾಪಾರಿಯು ಹಡಗಿನಿಂದ ವಸ್ತುಗಳನ್ನು ವಿದೇಶಗಳಿಗೆ ಕಳಿಸುವುದು ಸಾಧ್ಯವಿರಲಿಲ್ಲ. ಆದರಿಂದಾಗಿ ಅನೇಕ ವ್ಯಾಪಾರಿಗಳು ಒಂದೆಡೆ ಬಂದು ವ್ಯಾಪಾರವನ್ನು ಆರಂಭಿಸಿದರು. ಇದರಿಂದಲೇ ಬಂಡವಾಳವನ್ನು ಹೊಂದಿದ ಅನೇಕ ವ್ಯಾಪಾರಿ ಕಂಪನಿಗಳು ಉದಯವಾದವು. ಪೌರ್ವಾತ್ಯ ದೇಶಗಳೊಡನೆ ನಡೆಯುವ ವ್ಯಾಪಾರವು ಲಾಭದಾಯಕವಾಗಿತ್ತು. ಈ ವ್ಯಾಪಾರದಿಂದ ದೇಶಗಳ ಆರ್ಥಿಕ ಅಭಿವೃದ್ಧಿಯಾಗುತ್ತಿತ್ತು. ಅದರಿಂದಾಗಿ ಯುರೋಪಿನಲ್ಲಿಯ ರಾಜರು ವ್ಯಾಪಾರಿ ಕಂಪನಿಗಳಿಗೆ ಸೈನಿಕ ಸಂರಕ್ಷಣೆ ಮತ್ತು ವ್ಯಾಪಾರಿ ಸವಲತ್ತುಗಳನ್ನು ನೀಡತೊಡಗಿದರು. ಈ ವ್ಯಾಪಾರದಿಂದಾಗಿ ಯುರೋಪಿಯನ್ ದೇಶಗಳಲ್ಲಿ ಧನಸಂಚಯ ಹೆಚ್ಚತೊಡಗಿತು. ಈ ಸಂಪತ್ತಿನ ಬಳಕೆಯನ್ನು ಬಂಡವಾಳದ ರೂಪದಲ್ಲಿ ವ್ಯಾಪಾರ ಮತ್ತು ಉದ್ಯೋಗಂದೆಗಳಲ್ಲಿ ಮಾಡಲು ಆರಂಭವಾಯಿತು. ಇದರಿಂದಾಗಿ ಯುರೋಪಿಯನ್ ದೇಶಗಳಲ್ಲಿ ಬಂಡವಾಳಶಾಹಿ ಅರ್ಥವ್ಯವಸ್ಥೆಯ ಉದಯವಾಯಿತು.

**ವಸಾಹತುವಾದ :** ಒಂದು ದೇಶದಲ್ಲಿಯ ಕೆಲವು ಜನರು ಬೇರೆ ಭೂಪ್ರದೇಶದಲ್ಲಿಯ ಒಂದು ವಿಶಿಷ್ಟ ಭಾಗದಲ್ಲಿ ವಸತಿ ಮಾಡುವುದೆಂದರೆ ವಸಾಹತು ಸ್ಥಾಪನೆ ಮಾಡುವುದು ಎಂದರ್ಥ. ಆರ್ಥಿಕ ಮತ್ತು ಸೈನಿಕ ದೃಷ್ಟಿಯಿಂದ ಬಲಶಾಲಿಯಾದ ದೇಶವು ತನ್ನ ಸಾಮರ್ಥ್ಯದ ಬಲದಿಂದ ಯಾವುದೊಂದು ಭೂಪ್ರದೇಶವನ್ನು ವ್ಯಾಪಿಸುವುದು ಹಾಗೂ ಆ ಸ್ಥಳದಲ್ಲಿ ತನ್ನ ರಾಜಕೀಯ ವರ್ಚಸ್ಸನ್ನು ಪ್ರಸ್ಥಾಪಿಸುವುದೆಂದರೆ ವಸಾಹತುವಾದ ಹೌದು. ಯುರೋಪಿಯನ್ ದೇಶಗಳ ಇದೇ ವಸಾಹತುವಾದಿ ಪ್ರವೃತ್ತಿಯಿಂದ ಸಾಮ್ರಾಜ್ಯವಾದವು ಉದಯಕ್ಕೆ ಬಂದಿತು.

**ಸಾಮ್ರಾಜ್ಯವಾದ :** ವಿಕಸಿತ ರಾಷ್ಟ್ರವು ಅವಿಕಸಿತ ರಾಷ್ಟ್ರದ ಮೇಲೆ ತನ್ನ ಸರ್ವಾಂಗೀಣ ವರ್ಚಸ್ಸನ್ನು ಸ್ಥಾಪಿಸುವುದು ಮತ್ತು ಅನೇಕ ಹೊಸ ವಸಾಹತುಗಳನ್ನು ಸ್ಥಾಪಿಸುವುದು ಎಂದರೆ ಸಾಮ್ರಾಜ್ಯವಾದ ಹೌದು. ಏಶಿಯಾ ಮತ್ತು ಆಫ್ರಿಕಾ ಖಂಡಗಳಲ್ಲಿಯ ಅನೇಕ ರಾಷ್ಟ್ರಗಳು ಯುರೋಪಿಯನ್ ರಾಷ್ಟ್ರಗಳ ಈ ಸಾಮ್ರಾಜ್ಯವಾದಿ ಮಹತ್ವಾಕಾಂಕ್ಷೆಗೆ ಬಲಿಯಾದವು.

**ಬ್ರಿಟಿಶ ಈಸ್ಟ ಇಂಡಿಯಾ ಕಂಪನಿಯ ಭಾರತದಲ್ಲಿಯ ಸಾಮ್ರಾಜ್ಯವಾದ :** ಭಾರತದಲ್ಲಿ ವ್ಯಾಪಾರದ ಏಕಸ್ವಾಮ್ಯವನ್ನು ಪಡೆಯುವುದಕ್ಕಾಗಿ ಯುರೋಪಿನ ಆಡಳಿತಗಾರರಲ್ಲಿ ತೀವ್ರವಾದ ಪೈಪೋಟಿಯಿತ್ತು. ಕ್ರಿ.ಶ. 1600ರಲ್ಲಿ ಇಂಗ್ಲೀಷರು ಭಾರತದಲ್ಲಿ ವ್ಯಾಪಾರ ಮಾಡುವ ಸಲುವಾಗಿ ಬ್ರಿಟಿಶ ಈಸ್ಟ ಇಂಡಿಯಾ ಕಂಪನಿಯ ಸ್ಥಾಪನೆ ಮಾಡಿದ್ದರು. ಈ ಕಂಪನಿಯು ಬಾದಶಹ ಜಹಾಂಗೀರನ ಕಡೆಯಿಂದ ಪರವಾನಿಗೆ ಪಡೆದು ಸುರತದಲ್ಲಿ ಮಳಿಗೆಯನ್ನು ಸ್ಥಾಪಿಸಿತು. ಈ ಕಂಪನಿಯ ವತಿಯಿಂದ ಇಂಗ್ಲಂಡದೊಡನೆ ಭಾರತದ ವ್ಯಾಪಾರ ನಡೆಯುತ್ತಿತ್ತು.

**ಇಂಗ್ಲೀಷರ ಮತ್ತು ಫ್ರೆಂಚರ ಸಂಘರ್ಷ :** ಭಾರತದಲ್ಲಿಯ ವ್ಯಾಪಾರಿ ಸ್ಪರ್ಧೆಯಲ್ಲಿ ಇಂಗ್ಲೀಷರು ಮತ್ತು ಫ್ರೆಂಚರು ಪರಸ್ಪರರ ಪ್ರತಿಸ್ಪರ್ಧಿಗಳಾಗಿದ್ದರು. ಈ ಸ್ಪರ್ಧೆಯಿಂದಾಗಿ ಇಂಗ್ಲೀಷ ಮತ್ತು ಫ್ರೆಂಚರ ನಡುವೆ ಮೂರು ಯುದ್ಧಗಳಾದವು. ಈ ಯುದ್ಧಗಳು 'ಕರ್ನಾಟಕ ಯುದ್ಧ'ಗಳೆಂದು ಗುರುತಿಸಲ್ಪಡುತ್ತವೆ. ಮೂರನೆಯ ಕರ್ನಾಟಕ ಯುದ್ಧದಲ್ಲಿ ಇಂಗ್ಲೀಷರು ಫ್ರೆಂಚರನ್ನು ಸೋಲಿಸಿದರು. ಅದರಿಂದಾಗಿ ಬ್ರಿಟಿಶ ಈಸ್ಟ ಇಂಡಿಯಾ ಕಂಪನಿಗೆ ಭಾರತದಲ್ಲಿ ಪ್ರಬಲವಾದ ಯುರೋಪಿಯನ್ ಪ್ರತಿಸ್ಪರ್ಧಿ ಉಳಿಯಲಿಲ್ಲ.

**ಬಂಗಾಲದಲ್ಲಿ ಬ್ರಿಟಿಶ ಈಸ್ಟ ಇಂಡಿಯಾ ಕಂಪನಿಯ ಆಡಳಿತದ ಅಡಿಪಾಯ :** ಬಂಗಾಲ ಪ್ರಾಂತವು ಭಾರತದಲ್ಲಿಯ ಅತ್ಯಂತ ಸಮೃದ್ಧವಾದ ಪ್ರಾಂತವಾಗಿತ್ತು. ಕ್ರಿ.ಶ. 1756ರಲ್ಲಿ ಸಿರಾಜ ಉದ್ದೌಲನು ಬಂಗಾಲದ ನವಾಬನಾದನು. ಈಸ್ಟ ಇಂಡಿಯಾ ಕಂಪನಿಯ ಅಧಿಕಾರಿಗಳು ಮುಘಲ ಬಾದಶಹನ ಕಡೆಯಿಂದ ಬಂಗಾಲ ಪ್ರಾಂತದಲ್ಲಿ ದೊರೆತ ವ್ಯಾಪಾರಿ ಸವಲತ್ತುಗಳ ದುರುಪಯೋಗ ಮಾಡುತ್ತಿದ್ದರು. ಇಂಗ್ಲೀಷರು ನವಾಬನ ಅನುಮತಿಯನ್ನು ಪಡೆಯದೆ ಕೋಲಕಾತಾದಲ್ಲಿಯ ತಮ್ಮ ಮಳಿಗೆಗಳ ಸುತ್ತಲೂ ರಕ್ಷಣಾ ಗೋಡೆಯನ್ನು ಕಟ್ಟಿದರು. ಇದರಿಂದಾಗಿ ಸಿರಾಜ ಉದ್ದೌಲನು ಇಂಗ್ಲೀಷರ ಮೇಲೆ ದಾಳಿಮಾಡಿ ಕೋಲಕಾತಾದ ಮಳಿಗೆಯನ್ನು ವಶಪಡಿಸಿಕೊಂಡನು. ಈ

ಘಟನೆಯಿಂದ ಇಂಗ್ಲೀಷರಲ್ಲಿ ಅಸಂತೋಷ ನಿರ್ಮಾಣವಾಯಿತು. ರಾಬರ್ಟ ಕ್ಲೈವನು ಮುತ್ಸದ್ದಿತನದಿಂದ ನವಾಬನ ಸೇನಾಪತಿ ಮೀರಜಾಫರನಿಗೆ ನವಾಬ ಪದವಿಯ ಆಮಿಷವನ್ನು ತೋರಿಸಿ ಅವನನ್ನು ತನ್ನಕಡೆಗೆ ಸೆಳೆದುಕೊಂಡನು. ಕ್ರಿ.ಶ. 1757ರಲ್ಲಿ ಪ್ಲಾಸಿ ಎಂಬಲ್ಲಿ ನವಾಬ ಸಿರಾಜ ಉದ್ದೌಲ ಮತ್ತು ಇಂಗ್ಲೀಷರ ಸೈನ್ಯಗಳು ಪರಸ್ಪರ ಎದುರಾದವು. ಆದರೆ ಮೀರಜಾಫರನ ನೇತೃತ್ವದಲ್ಲಿ ನವಾಬನ ಸೈನ್ಯವು ಯುದ್ಧಕ್ಕೆ ಇಳಿಯಲಿಲ್ಲ. ಇದರಿಂದಾಗಿ ಸಿರಾಜ ಉದ್ದೌಲನ ಪರಾಭವವಾಯಿತು.

ಇಂಗ್ಲೀಷರ ಬೆಂಬಲದಿಂದ ಮೀರಜಾಫರನು ಬಂಗಾಲದ ನವಾಬನಾದನು. ಮುಂದೆ ಅವನು ಇಂಗ್ಲೀಷರನ್ನು ವಿರೋಧಿಸಿದ ಕೂಡಲೇ ಅವರು ಅವನ ಅಳಿಯನಾದ ಮೀರಕಾಸೀಮನನ್ನು ನವಾಬನನ್ನಾಗಿ ಮಾಡಿದರು. ಇಂಗ್ಲೀಷರ ಕಾನೂನುಬಾಹಿರ ವ್ಯಾಪಾರವನ್ನು ನಿಯಂತ್ರಿಸುವ ಪ್ರಯತ್ನವನ್ನು ಮೀರಕಾಸೀಮನು ಮಾಡಿದ ತಕ್ಷಣ ಇಂಗ್ಲೀಷರು ಪುನಃ ಮೀರಜಾಫರನಿಗೆ ನವಾಬ ಪದವಿಯನ್ನು ನೀಡಿದರು.

ಬಂಗಾಲದಲ್ಲಿಯ ಇಂಗ್ಲೀಷರ ಚಟುವಟಿಕೆಗಳನ್ನು ನಿಯಂತ್ರಿಸುವ ಸಲುವಾಗಿ ಮೀರಕಾಸೀಮ, ಅಯೋಧ್ಯೆಯ ನವಾಬ ಶುಜಾ ಉದ್ದೌಲ ಮತ್ತು ಮುಘಲ ಬಾದಶಹ ಶಾಹ ಆಲಮ್ ಇವರು ಒಂದುಗೂಡಿ ಇಂಗ್ಲೀಷರ ಮೇಲೆ ದಂಡೆತ್ತಿ ಹೋದರು. ಕ್ರಿ.ಶ. 1764ರಲ್ಲಿ ಬಿಹಾರದಲ್ಲಿಯ ಬಕ್ಸಾರ ಎಂಬಲ್ಲಿ ಯುದ್ಧವಾಯಿತು. ಅದರಲ್ಲಿ ಇಂಗ್ಲೀಷರಿಗೆ ಜಯ ದೊರಕಿತು. ಈ ಯುದ್ಧದ ನಂತರ ಅಲಹಾಬಾದ ಒಪ್ಪಂದದ ಪ್ರಕಾರ ಬಂಗಾಲ ಪ್ರಾಂತದಲ್ಲಿ ದಿವಾಣಿ ಅಂದರೆ ಭೂಕಂದಾಯವನ್ನು ವಸೂಲು ಮಾಡುವ ಅಧಿಕಾರವು ಬ್ರಿಟಿಶ ಈಸ್ಟ ಇಂಡಿಯಾ ಕಂಪನಿಗೆ ದೊರಕಿತು. ಈ ರೀತಿ ಭಾರತದಲ್ಲಿಯ ಬ್ರಿಟಿಶ ಆಡಳಿತದ ಅಡಿಪಾಯವನ್ನು ಬಂಗಾಲದಲ್ಲಿ ಹಾಕಲಾಯಿತು.

**ಇಂಗ್ಲೀಷ-ಮೈಸೂರು ಯುದ್ಧ :** ಮೈಸೂರು ರಾಜ್ಯದಲ್ಲಿ ಹೈದರಅಲಿಯು ದಂಗೆಯೆದ್ದು ಮೈಸೂರು ರಾಜ್ಯವನ್ನು ವಶಪಡಿಸಿಕೊಂಡನು. ಹೈದರಅಲಿಯ ಮರಣದ ನಂತರ ಅವನ ಮಗನಾದ ಟೀಪೂ ಸುಲ್ತಾನನು ಮೈಸೂರಿನ ಪಟ್ಟವನ್ನೇರಿದನು. ಅವನು ಇಂಗ್ಲೀಷರ ವಿರುದ್ಧ ಶಕ್ತಿಮೀರಿ ಹೋರಾಡಿದನು. ಕೊನೆಗೆ 1799ರಲ್ಲಿ ಶ್ರೀರಂಗಪಟ್ಟಣದಲ್ಲಿ ನಡೆದ ಯುದ್ಧದಲ್ಲಿ ಟೀಪೂ ಸುಲ್ತಾನ ಮರಣವನ್ನಪ್ಪಿದನು. ಈ ರೀತಿ ಮೈಸೂರಿನ ಪ್ರದೇಶದ ಮೇಲೆ ಇಂಗ್ಲೀಷರ ವರ್ಚಸ್ಸು ನಿರ್ಮಾಣವಾಯಿತು.


ಟೀಪೂ ಸುಲ್ತಾನ

**ಸಿಂಧದ ಮೇಲೆ ಇಂಗ್ಲೀಷರ ಹತೋಟಿ :** ಭಾರತದಲ್ಲಿಯ ತಮ್ಮ ಪ್ರಭುತ್ವವನ್ನು ಸುರಕ್ಷಿತವಾಗಿಡುವುದಕ್ಕಾಗಿ ಇಂಗೀಷರು ವಾಯವ್ಯ ಸರಹದ್ದಿನ ಕಡೆಗೆ ತಿರುಗಿದರು. ಅಫಗಾನಿಸ್ತಾನ ಮೂಲಕವಾಗಿ ರಶಿಯಾ ಭಾರತದ ಮೇಲೆ ದಾಳಿ ಮಾಡಬಹುದೆಂಬ ಭೀತಿ ಅವರಿಗಿತ್ತು. ಆದ್ದರಿಂದ ಇಂಗ್ಲೀಷರು ಅಫಗಾನಿಸ್ತಾನದ ಮೇಲೆ ತಮ್ಮ ಪ್ರಭಾವವನ್ನು ಸ್ಥಾಪಿಸಲು ನಿರ್ಧರಿಸಿದರು. ಅಫಗಾನಿಸ್ತಾನದ ಕಡೆಗೆ ಹೋಗುವ ಮಾರ್ಗವು ಸಿಂಧ ಪ್ರಾಂತದ ಮೂಲಕವಾಗಿ ಹೋಗುತ್ತಿತ್ತು. ಇದರಿಂದಾಗಿ ಸಿಂಧದ ಮಹತ್ವವು ಇಂಗ್ಲೀಷರ ಗಮನಕ್ಕೆ ಬಂದಿತು. ಹಾಗೂ ಕ್ರಿ.ಶ. 1843ರಲ್ಲಿ ಅವರು ಸಿಂಧವನ್ನು ವಶಪಡಿಸಿಕೊಂಡರು.

**ಶೀಖ ಸಾಮ್ರಾಜ್ಯದ ಪತನ :** ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಪಂಜಾಬದಲ್ಲಿ ಶೀಖ ಸಾಮ್ರಾಜ್ಯದ ಆಡಳಿತವು ರಣಜಿತಸಿಂಹನ ಕೈಯಲ್ಲಿತ್ತು. ರಣಜಿತಸಿಂಹನ ಮರಣದ ನಂತರ ಅವನ ಚಿಕ್ಕವಯಸ್ಸಿನ ಮಗ ದಲೀಪಸಿಂಗನು ಪಟ್ಟಕ್ಕೆ ಬಂದನು. ಅವನ ಪರವಾಗಿ ಅವನ ತಾಯಿ ರಾಣಿ ಜಿಂದನಳು ರಾಜ್ಯಾಡಳಿತವನ್ನು ನೋಡತೊಡಗಿದಳು. ಆದರೆ ಸರದಾರರ ಮೇಲೆ ಅವಳ ನಿಯಂತ್ರಣ ಉಳಿಯಲಿಲ್ಲ. ಈ ಸಂಧಿಯನ್ನು ಸಾಧಿಸಿ ಇಂಗ್ಲೀಷರು ಕೆಲವು ಶೀಖ ಸರದಾರರೊಂದಿಗೆ ಒಳಸಂಚು ನಡೆಸಿದರು. ಇಂಗ್ಲೀಷರು ಪಂಜಾಬದ ಮೇಲೆ ಆಕ್ರಮಣ ಮಾಡಲಿದ್ದಾರೆಂಬ ತಿಳುವಳಿಕೆಯಾದುದರಿಂದ ಶೀಖರು ಇಂಗ್ಲೀಷರ ಮೇಲೆ ದಾಳಿಮಾಡಿದರು. ಈ ಮೊದಲನೆಯ ಶೀಖ-ಇಂಗ್ಲೀಷ ಯುದ್ಧದಲ್ಲಿ ಶೀಖರ ಪರಾಭವವಾಯಿತು. ದಲೀಪಸಿಂಗನನ್ನು ಇಂಗ್ಲೀಷರು ಸಿಂಹಾಸನದ ಮೇಲೆ ಕೂಡಿಸಿದರು. ಪಂಜಾಬದ ಮೇಲೆ ಇಂಗ್ಲೀಷರ ಹೆಚ್ಚುತ್ತಿರುವ ಪ್ರಭಾವವು ಕೆಲವು ಸ್ವಾತಂತ್ರ್ಯಪ್ರಿಯ ಶೀಖರಿಗೆ ಹಿಡಿಸಲಿಲ್ಲ ಮುಲ್ತಾನದ ಅಧಿಕಾರಿಯಾದ ಮೂಲರಾಜನು ಇಂಗ್ಲೀಷರ ವಿರುದ್ಧ ಬಂಡೆದ್ದನು. ಸಾವಿರಾರು ಶೀಖ ಸೈನಿಕರು ಇಂಗ್ಲೀಷರ ವಿರುದ್ಧ ಯುದ್ಧದ ಕಣಕ್ಕಿಳಿದರು. ಈ ಎರಡನೆಯ ಯುದ್ಧದಲ್ಲಿಯೂ ಶೀಖರು ಪರಾಭವಗೊಂಡರು. 1849ರಲ್ಲಿ ಇಂಗ್ಲೀಷರು ಪಂಜಾಬದ ಪ್ರದೇಶವನ್ನು ತಮ್ಮ ರಾಜ್ಯಕ್ಕೆ ಸೇರಿಸಿಕೊಂಡರು


ರಣಜಿಸಿಂಹ

ಮರಾಠರ ಆಡಳಿತವು ಭಾರತದಲ್ಲಿಯ ಮಹತ್ವದ ಹಾಗೂ ಪ್ರಬಲವಾದ ಆಡಳಿತವಾಗಿತ್ತು. ಮರಾಠರನ್ನು ಪರಾಭವಗೊಳಿಸಿ ಇಂಗ್ಲೀಷರು ಭಾರತದಲ್ಲಿಯ ತಮ್ಮ ಅಧಿಕಾರದ ಅಡಿಪಾಯವನ್ನು ಹೇಗೆ ಭದ್ರಪಡಿಸಿದರು ಎಂಬುದರ ಅಭ್ಯಾಸವನ್ನು ನಾವು ಮುಂದಿನ ಪಾಠದಲ್ಲಿ ಮಾಡುವವರಿದ್ದೇವೆ.

# ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ಕ್ರಿ.ಶ. 1453ರಲ್ಲಿ ಆಟೋಮನ ತುರ್ಕರು ............... ಪಟ್ಟಣವನ್ನು ಗೆದ್ದುಕೊಂಡರು.
(ಅ) ವ್ಹೆನಿಸ (ಬ) ಕಾನಸ್ಟಂಟಿನೋಪಲ್
(ಕ) ರೋಮ (ಡ) ಪ್ಯಾರಿಸ್

(2) ಔದ್ಯೋಗಿಕ ಕ್ರಾಂತಿಯು .........ನಲ್ಲಿ ಆರಂಭವಾಯಿತು.
(ಅ) ಇಂಗ್ಲಂಡ (ಬ) ಫ್ರಾನ್ಸ
(ಕ) ಇಟಲಿ (ಡ) ಪೋರ್ತುಗಾಲ

(3) ಇಂಗ್ಲೀಷರ ಕಾನೂನುಬಾಹಿರ ವ್ಯಾಪಾರವನ್ನು ನಿಯಂತ್ರಿಸುವ ಪ್ರಯತ್ನವನ್ನು ...........ನು ಮಾಡಿದನು.
(ಅ) ಸಿರಾಜ ಉದ್ದೌಲ (ಬ) ಮೀರ ಕಾಸೀಮ
(ಕ) ಮೀರ ಜಾಫರ (ಡ) ಶಾಹ ಆಲಮ

**2. ಕೆಳಗಿನ ಕಲ್ಪನೆಗಳನ್ನು ಸ್ಪಷ್ಟಪಡಿಸಿರಿ.**

(1) ವಸಾಹತುವಾದ (2) ಸಾಮ್ರಾಜ್ಯವಾದ
(3) ಪುನರುಜ್ಜೀವನ ಯುಗ (3) ಬಂಡವಾಳಶಾಹಿ

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಪ್ಲಾಸಿ ಯುದ್ಧದಲ್ಲಿ ಸಿರಾಜ ಉದ್ದೌಲನ ಪರಾಭವವಾಯಿತು.
(2) ಯುರೋಪಿಯನ್ ದೇಶಗಳಿಗೆ ಏಶಿಯಾದ ಕಡೆಗೆ ಹೋಗುವ ಹೊಸ ಮಾರ್ಗವನ್ನು ಶೋಧಿಸುವುದು ಅವಶ್ಯಕವೆನಿಸತೊಡಗಿತು.
(3) ಯುರೋಪಿಯನ್ ರಾಜರು ವ್ಯಾಪಾರಿ ಕಂಪನಿಗಳಿಗೆ ಸೈನಿಕ ಸಂರಕ್ಷಣೆ ಮತ್ತು ವ್ಯಾಪಾರಿ ಸವಲತ್ತುಗಳನ್ನು ನೀಡತೊಡಗಿದರು.

**4. ಪಾಠದ ಸಹಾಯದಿಂದ ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

| ನಾವಿಕ | ಕಾರ್ಯ |
|---|---|
| ................... | ಆಫ್ರಿಕಾದ ದಕ್ಷಿಣ ತುದಿಯವರೆಗೆ ತಲುಪಿದನು. |
| ಖ್ರಿಸ್ತೋಫರ ಕೋಲಂಬಸ್ | ...................... ...................... |
| ................... | ಭಾರತದ ಪಶ್ಚಿಮದ ದಂಡೆಯ ಕಾಲಿಕತ ಬಂದರವನ್ನು ತಲುಪಿದನು. |

**ಉಪಕ್ರಮ**

ಪುನರುಜ್ಜೀವನ ಕಾಲದಲ್ಲಿಯ ಪ್ರಸಿದ್ಧ ಚಿತ್ರಕಾರರು, ಸಾಹಿತಿಗಳು ಮತ್ತು ಶಾಸ್ತ್ರಜ್ಞರ ಕಾರ್ಯಗಳನ್ನು ಕುರಿತು ಸಂದರ್ಭ ಗ್ರಂಥ ಮತ್ತು ಇಂಟರ್ನೆಟ್ ಸಹಾಯದಿಂದ ಮಾಹಿತಿ ಮತ್ತು ಚಿತ್ರಗಳನ್ನು ಪಡೆದು ವರ್ಗದಲ್ಲಿ ಪ್ರೊಜೆಕ್ಟ್ ಸಾದರಪಡಿಸಿರಿ.

AKY2YU

# 3. ಬ್ರಿಟಿಶ ಆಡಳಿತದ ಪರಿಣಾಮ

ಈ ಪಾಠದಲ್ಲಿ ನಾವು ಬ್ರಿಟಿಶ ಆಡಳಿತದಿಂದ ಭಾರತದ ಮೇಲೆ ಉಂಟಾದ ಪರಿಣಾಮಗಳ ಅಭ್ಯಾಸ ಮಾಡುವವರಿದ್ದೇವೆ.


ಬ್ರಿಟಿಶ ಈಸ್ಟ ಇಂಡಿಯಾ ಕಂಪನಿಯ ಸ್ಥಾಪನೆ: ಭೌಗೋಲಿಕ ಶೋಧಗಳಿಂದಾಗಿ ಯುರೋಪಿಯನ್ ಅಧಿಪತ್ಯಗಳು ಭಾರತದ ಸಮುದ್ರದಂಡೆಯನ್ನು ಹೇಗೆ ತಲುಪಿದವು ಎಂಬುದನ್ನು ನಾವು ನೋಡಿದ್ದೇವೆ. ಪೋರ್ತುಗೀಜ, ಡಚ್, ಫ್ರೆಂಚ್, ಬ್ರಿಟಿಶ ಈ ಎಲ್ಲ ಯುರೋಪಿಯನ್ ದೇಶಗಳು ಭಾರತದ ಮಾರುಕಟ್ಟೆಯನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರದ ಪೈಪೋಟಿಗೆ ಇಳಿದವು. ಇಂಗ್ಲೀಷರು ಭಾರತದಲ್ಲಿ ವ್ಯಾಪಾರದ ನಿಮಿತ್ತವಾಗಿ ಬಂದ ಸಮಯದಲ್ಲಿ ಅವರನ್ನು ಭಾರತದಲ್ಲಿ ಆ ಮೊದಲೇ ಬಂದಿದ್ದ ಪೋರ್ತುಗೀಜರು ತೀವ್ರವಾಗಿ ವಿರೋಧಿಸಿದರು. ನಂತರದ ಕಾಲದಲ್ಲಿ ಇಂಗ್ಲೀಷ ಮತ್ತು ಪೋರ್ತುಗೀಜರ ನಡುವೆ ಮಿತ್ರತ್ವದ ಸಂಬಂಧ ನಿರ್ಮಾಣವಾಗಿ ವಿರೋಧವು ಕಡಿಮೆಯಾಯಿತು. ಆದರೆ ಭಾರತದ ಮೇಲೆ ವರ್ಚಸ್ಸನ್ನು ಸ್ಥಾಪಿಸುವ ಸ್ಪರ್ಧೆಯಲ್ಲಿ ಇಂಗ್ಲೀಷರಿಗೆ ಫ್ರೆಂಚ್, ಡಚ್ ಮತ್ತು ಸ್ಥಳೀಯ ರಾಜರ ವಿರೋಧವನ್ನು ಎದುರಿಸಬೇಕಾಯಿತು.

**ಇಂಗ್ಲೀಷರು ಮತ್ತು ಮರಾಠರು:** ಮುಂಬಯಿ ಇದು ಇಂಗ್ಲೀಷರ ಪಶ್ಚಿಮ ಭಾರತದಲ್ಲಿಯ ಪ್ರಮುಖ ಕೇಂದ್ರವಾಗಿತ್ತು. ಅದರ ಹತ್ತಿರದ ಪ್ರದೇಶಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನವನ್ನು ಅವರು ಮಾಡುತ್ತಿದ್ದರು; ಆದರೆ ಈ ಪ್ರದೇಶಗಳ ಮೇಲೆ ಮರಾಠರ ಬಿಗಿಯಾದ ಹಿಡಿತವಿತ್ತು. ಮಾಧವರಾವ ಪೇಶವೆಯವರ ಮರಣದ ನಂತರ ಅವರ ಕಕ್ಕನಾದ ರಘುನಾಥರಾವನು ಪೇಶವೆ ಪದವಿಯ ಆಸೆಯಿಂದ ಇಂಗ್ಲೀಷರ ಸಹಾಯವನ್ನು ಬೇಡಿದನು. ಇದರಿಂದಾಗಿ ಮರಾಠರ ರಾಜಕಾರಣದಲ್ಲಿ ಇಂಗ್ಲೀಷರ ಪ್ರವೇಶವಾಯಿತು.

1774ರಿಂದ 1818ರ ಕಾಲದಲ್ಲಿ ಮರಾಠರು ಮತ್ತು ಇಂಗ್ಲೀಷರ ನಡುವೆ ಮೂರು ಯುದ್ಧಗಳಾದವು. ಮೊದಲನೆಯ ಯುದ್ಧದಲ್ಲಿ ಮರಾಠಾ ಸರದಾರರು ಒಗ್ಗಟ್ಟಿನಿಂದ ಇಂಗ್ಲೀಷರನ್ನು ಎದುರಿಸಿದರು. ಇದರಿಂದಾಗಿ ಮರಾಠರಿಗೆ ಜಯ ದೊರಕಿತು. ಕ್ರಿ.ಶ. 1782ರಲ್ಲಿ ಸಾಲಬಾಯಿ ಒಪ್ಪಂದದೊಂದಿಗೆ ಮೊದಲನೆಯ ಇಂಗ್ಲೀಷ- ಮರಾಠಾ ಯುದ್ಧವು ಕೊನೆಗೊಂಡಿತು.

**ಸಹಾಯಕ ಸೈನ್ಯ ಪದ್ಧತಿ:** 1798ರಲ್ಲಿ ಲಾರ್ಡ್ ವೆಲ್ಲಸ್ಲಿಯು ಗವ್ವರ್ನರ ಜನರಲ್‌ನಾಗಿ ಭಾರತಕ್ಕೆ ಬಂದನು. ಸಂಪೂರ್ಣ ಭಾರತದ ಮೇಲೆ ಬ್ರಿಟಿಶ ವರ್ಚಸ್ಸನ್ನು ಸ್ಥಾಪಿಸಬೇಕೆಂಬುದು ಅವನ ಧೋರಣೆಯಾಗಿತ್ತು. ಅದಕ್ಕಾಗಿ ಅವನು ಅನೇಕ ಭಾರತೀಯ ರಾಜರ ಜೊತೆಗೆ ಸಹಾಯಕ ಸೈನ್ಯದ ಒಪ್ಪಂದವನ್ನು ಮಾಡಿಕೊಂಡನು. ಈ ಕರಾರಿನ ಪ್ರಕಾರ ಭಾರತೀಯ ಅರಸರಿಗೆ ಇಂಗ್ಲೀಷರ ಸೈನಿಕ ಸಹಾಯದ ಭರವಸೆ ನೀಡಲಾಯಿತು. ಆದರೆ ಅದಕ್ಕಾಗಿ ಕೆಲವು ಷರತ್ತುಗಳನ್ನು ಹಾಕಲಾಯಿತು. ಭಾರತೀಯ ಅರಸರು ತಮ್ಮ ರಾಜ್ಯದಲ್ಲಿ ಇಂಗ್ಲೀಷರ ಸೈನ್ಯವನ್ನು ಇಟ್ಟುಕೊಳ್ಳಬೇಕು. ಆ ಸೈನ್ಯದ ಖರ್ಚಿಗಾಗಿ ನಗದು ಹಣ ಇಲ್ಲವೆ ಅಷ್ಟೇ ಉತ್ಪನ್ನದ ಪ್ರದೇಶವನ್ನು ಕಂಪನಿಗೆ ಬಿಟ್ಟುಕೊಡಬೇಕು. ಅವರು ಇಂಗ್ಲೀಷರ ಮಧ್ಯಸ್ಥಿಕೆಯೊಂದಿಗೆ ಮಾತ್ರ ಇತರ ರಾಜರೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳಬೇಕು, ರಾಜರು ತಮ್ಮ ಆಸ್ಥಾನದಲ್ಲಿ ಇಂಗ್ಲೀಷರ ರೆಸಿಡೆಂಟ್ (ಪ್ರತಿನಿಧಿ)ನನ್ನು ಇಟ್ಟುಕೊಳ್ಳಬೇಕು. ಇಂಥ ಷರತ್ತುಗಳು ಅದರಲ್ಲಿದ್ದವು. ಭಾರತದಲ್ಲಿಯ ಕೆಲವು ಅರಸರು ಈ ಪದ್ಧತಿಯನ್ನು ಸ್ವೀಕರಿಸಿದರು ಹಾಗೂ ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು.

1802ರಲ್ಲಿ ಎರಡನೆಯ ಬಾಜೀರಾವ ಪೇಶವೆಯು ಇಂಗ್ಲೀಷರ ಜೊತೆ ಸಹಾಯಕ ಸೈನ್ಯದ ಒಪ್ಪಂದವನ್ನು ಮಾಡಿಕೊಂಡನು. ಈ ಒಪ್ಪಂದವು ವಸಯಿಯ ಒಪ್ಪಂದವೆಂದು ಪ್ರಸಿದ್ಧವಾಗಿದೆ; ಆದರೆ ಈ ಒಪ್ಪಂದವು ಕೆಲವು ಮರಾಠಾ ಸರದಾರರಿಗೆ ಒಪ್ಪಿಗೆಯಾಗಿರಲಿಲ್ಲ. ಇದರಿಂದಾಗಿ ಎರಡನೆಯ ಇಂಗ್ಲೀಷ-ಮರಾಠಾ ಯುದ್ಧ ನಡೆಯಿತು. ಅದರಲ್ಲಿಯ ಗೆಲುವಿನ ನಂತರ ಮರಾಠರ ರಾಜ್ಯದಲ್ಲಿಯ ಇಂಗ್ಲೀಷರ ಹಸ್ತಕ್ಷೇಪ ಹೆಚ್ಚುತ್ತಹೋಯಿತು. ಅದು ಅಸಹನೀಯವಾಗಿ ಎರಡನೆಯ ಬಾಜೀರಾವನು ಇಂಗ್ಲೀಷರ ವಿರುದ್ಧ ಯುದ್ಧ ಘೋಷಿಸಿದನು. ಈ ಯುದ್ಧದಲ್ಲಿ ಅವನಿಗೆ ಸೋಲುಂಟಾಯಿತು. ಕ್ರಿ.ಶ.1818ರಲ್ಲಿ ಅವನು ಶರಣಾಗತನಾದನು. ಈ ನಡುವೆ ಮುಘಲರ ರಾಜಧಾನಿ ದಿಲ್ಲಿಯ ಪ್ರತ್ಯಕ್ಷದಲ್ಲಿ ದೌಲತರಾವ ಶಿಂದೆಯವರ ನಿಯಂತ್ರಣದಲ್ಲಿತ್ತು. ಶಿಂದೆಯವರ ಸೈನ್ಯವನ್ನು ಪರಾಭವಗೊಳಿಸಿ ಜನರಲ್ ಲೇಕ ಇವನು ಮುಘಲ ಬಾದಶಹನನ್ನು ವಶಕ್ಕೆ ತೆಗೆದುಕೊಂಡು ಹಿಂದುಸ್ಥಾನವನ್ನು ಗೆದ್ದುಕೊಂಡನು.



ಛತ್ರಪತಿ ಪ್ರತಾಪಸಿಂಹ

**ಛತ್ರಪತಿ ಪ್ರತಾಪಸಿಂಹ:** ಪೇಶವಾಯಿಯ ಅಸ್ತವಾದರೂ ಸಹ ಸಾತಾರಾದ ಛತ್ರಪತಿ ಪ್ರತಾಪಸಿಂಹ ಇವರು ಗದ್ದಿಗೆಯ ಮೇಲಿದ್ದರು. ಇಂಗ್ಲೀಷರು ಛತ್ರಪತಿ ಪ್ರತಾಪಸಿಂಹರೊಂದಿಗೆ ಒಪ್ಪಂದವನ್ನು ಮಾಡಿಕೊಂಡು ಅವರಿಗೆ ರಾಜ್ಯಾಡಳಿತದಲ್ಲಿ ಸಹಾಯಮಾಡುವ ಸಲುವಾಗಿ ಗ್ರ್ಯಾಂಡ ಡಫ್ ಎಂಬ ಅಧಿಕಾರಿಯ ನೇಮಕ ಮಾಡಿದರು. ಆದರೆ ನಂತರ ಅವರನ್ನು ಗದ್ದುಗೆಯ ಮೇಲಿಂದ ಪದಚ್ಯುತಗೊಳಿಸಿ ಕಾಶಿ ಎಂಬಲ್ಲಿ ಇಡಲಾಯಿತು. ಅಲ್ಲಿಯೇ ಕ್ರಿ.ಶ. 1847ರಲ್ಲಿ ಅವರು ಮರಣಹೊಂದಿದರು.

ಛತ್ರಪತಿ ಪ್ರತಾಪಸಿಂಹರ ಕಾರಭಾರಿಯಾದ ರಂಗೋ ಬಾಪೂಜಿ ಗುಪ್ತೆಯವರು ಇಂಗ್ಲಂಡವರೆಗೆ ಹೋಗಿ ಈ ಅನ್ಯಾಯದ ವಿರುದ್ಧ ಅಪೀಲು ಮಾಡುವ ಪ್ರಯತ್ನ ಮಾಡಿದರು. ಆದರೆ

ನ್ಯಾಯವನ್ನು ದೊರಕಿಸಿ ಕೊಡುವ ಅವರ ಪ್ರಯತ್ನಗಳಿಗೆ ಯಶಸ್ಸು ದೊರೆಯಲಿಲ್ಲ. ನಂತರ ಡಾಲಹೌಸಿಯು ದತ್ತಕ ವಿಧಾನವನ್ನು ನಿರಾಕರಿಸಿ 1848ರಲ್ಲಿ ಸಾತಾರಾದ ರಾಜ್ಯವನ್ನು ವಿಲೀನಗೊಳಿಸಿದನು.

> **ಗೊತ್ತಿದೆಯೇ ನಿಮಗೆ ?**
>
> ಛತ್ರಪತಿ ಪ್ರತಾಪಸಿಂಹ ಇವರು ಸಾತಾರಾ ನಗರದಲ್ಲಿ ಯೇವತೇಶ್ವರ ದೇವಾಲಯದ ಹಿಂಬದಿಗೆ ಮತ್ತು ಮಹಾದರಾ ಎಂಬಲ್ಲಿ ಕೆರೆಗಳನ್ನು ಕಟ್ಟಿಸಿ ಅವುಗಳ ನೀರನ್ನು ನಗರದಲ್ಲಿ ಸರಬರಾಜು ಮಾಡಿದರು. ನಗರದಲ್ಲಿ ರಸ್ತೆಗಳನ್ನು ನಿರ್ಮಿಸಿದರು. ರಸ್ತೆಗಳ ಎರಡೂ ಬದಿಗಳಲ್ಲಿ ಗಿಡಗಳನ್ನು ನೆಡಿಸಿದರು. ಹುಡುಗ-ಹುಡುಗಿಯರಿಗಾಗಿ ಸಂಸ್ಕೃತ, ಮರಾಠಿ ಮತ್ತು ಇಂಗ್ಲೀಷ ಕಲಿಯುವ ಸಲುವಾಗಿ ಪಾಠಶಾಲೆಗಳನ್ನು ಕಟ್ಟಿಸಿದರು. ಅಲ್ಲಿಯೇ ಒಂದು ಮುದ್ರಣಾಲಯವನ್ನು ತೆಗೆದು ಅನೇಕ ಉಪಯುಕ್ತ ಗ್ರಂಥಗಳನ್ನು ಮುದ್ರಿಸಿ ಕೊಂಡರು. ಕ್ರಿ.ಶ. 1827ರಲ್ಲಿ ರಾಜನೀತಿಗೆ ಸಂಬಂಧಿಸಿದ 'ಸಭಾನೀತಿ' ಎಂಬ ಹೆಸರಿನ ಒಂದು ಗ್ರಂಥವನ್ನು ಬರೆದು ಮುದ್ರಿಸಿದರು. ಅವರು ಸಾತಾರಾದಿಂದ ಮಹಾಬಳೇಶ್ವರ ಮತ್ತು ಪ್ರತಾಪಗಡದವರೆಗೆ ರಸ್ತೆಯನ್ನು ನಿರ್ಮಿಸಿದರು. ಅದೇ ರಸ್ತೆಯನ್ನು ಮುಂದೆ ಮಹಾಡದವರೆಗೆ ವಿಸ್ತರಿಸ ಲಾಯಿತು. ಛತ್ರಪತಿ ಪ್ರತಾಪಸಿಂಹ ಇವರು ಪ್ರತಿದಿನ ದಿನಚರಿಯನ್ನು ಬರೆಯುತ್ತಿದ್ದರು.

## ಬ್ರಿಟಿಶ ಆಡಳಿತದಿಂದ ಭಾರತದ ಮೇಲೆ ಉಂಟಾದ ಪರಿಣಾಮ

**ದ್ವಿದಳ ಆಡಳಿತ ವ್ಯವಸ್ಥೆ:** ರಾಬರ್ಟ ಕ್ಲೈವನು ಕ್ರಿ. ಶ.1765ರಲ್ಲಿ ಬಂಗಾಲದಲ್ಲಿ ದ್ವಿದಳ ಆಡಳಿತ ವ್ಯವಸ್ಥೆಯನ್ನು ಜಾರಿಯಲ್ಲಿ ತಂದನು. ಭೂಕಂದಾಯವನ್ನು ಸಂಗ್ರಹಿಸುವ ಕಾರ್ಯವನ್ನು ಕಂಪನಿಯು ವಹಿಸಿಕೊಂಡಿತು. ಶಾಂತತೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಕಾರ್ಯವನ್ನು ಬಂಗಾಲದ ನವಾಬನಿಗೆ ಒಪ್ಪಿಸಲಾಯಿತು. ಇದಕ್ಕೆ ದ್ವಿದಳ ಆಡಳಿತ ವ್ಯವಸ್ಥೆ ಎನ್ನುತ್ತಾರೆ.

ಕಾಲಾಂತರದಲ್ಲಿ ದ್ವಿದಳ ಆಡಳಿತ ವ್ಯವಸ್ಥೆಯ ದುಷ್ಪರಿಣಾಮಗಳು ಕಾಣಿಸತೊಡಗಿದವು. ಸಾಮಾನ್ಯ ಜನರ ಕಡೆಯಿಂದ ತೆರಿಗೆಯ ರೂಪದಲ್ಲಿ ವಸೂಲು ಮಾಡಿದ ಹಣವನ್ನು ಕಂಪನಿಯ ಅಧಿಕಾರಿಗಳು ತಮ್ಮ ಜೇಬಿಗೆ ಹಾಕಿದರು. ಭಾರತದಲ್ಲಿಯ ವ್ಯಾಪಾರದ ಏಕಸ್ವಾಮ್ಯವನ್ನು ಕೇವಲ ಈಸ್ಟ ಇಂಡಿಯಾ ಕಂಪನಿಗೆ ಕೊಟ್ಟದ್ದರಿಂದ ಇಂಗ್ಲಂಡಿನ ಅನೇಕ ವ್ಯಾಪಾರಿಗಳಿಗೆ ಕಂಪನಿಯ ಬಗ್ಗೆ ಮತ್ಸರ ಉಂಟಾಯಿತು. ಭಾರತದಲ್ಲಿಯ ಕಂಪನಿಯ ಆಡಳಿತದ ಬಗ್ಗೆ ಇಂಗ್ಲಂಡಿನಲ್ಲಿ ಟೀಕೆ ಆರಂಭವಾಯಿತು. ಆಗ ಕಂಪನಿಯ ಆಡಳಿತದ ಮೇಲೆ ನಿಯಂತ್ರಣವನ್ನಿಡಲು ಇಂಗ್ಲಂಡಿನ ಪಾರ್ಲಿಮೆಂಟು ಕೆಲವು ಮಹತ್ವದ ಕಾಯ್ದೆಗಳನ್ನು ಮಾಡಿತು.

**ಪಾರ್ಲಿಮೆಂಟು ಮಾಡಿದ ಕಾಯ್ದೆಗಳು :** 1773ರ ರೆಗ್ಯುಲೇಟಿಂಗ ಆ್ಯಕ್ಟ ಪ್ರಕಾರ ಬಂಗಾಲದ ಗವ್ಹರ್ನರನಿಗೆ 'ಗವ್ಹರ್ನರ ಜನರಲ್' ಎಂಬ ಹುದ್ದೆಯನ್ನು ನೀಡಲಾಯಿತು. ಈ ಆ್ಯಕ್ಟ್ ಪ್ರಕಾರ ಲಾರ್ಡ ವಾರನ್ ಹೇಸ್ಟಿಂಗ್ಜ ಇವನು ವಗ್ಹರ್ನರ ಜನರಲ್‌ನಾದನು. ಮುಂಬಯಿ ಮತ್ತು ಮದ್ರಾಸ ಇಲಾಖೆಗಳ ನೀತಿಯ ಮೇಲೆ ನಿಯಂತ್ರಣವನ್ನಿಡುವ ಅಧಿಕಾರವು ಅವನಿಗೆ ದೊರೆಯಿತು. ಅವನಿಗೆ ಸಹಾಯ ಮಾಡಲು ನಾಲ್ಕು ಸದಸ್ಯರ ಸಮಿತಿಯನ್ನು ನೇಮಿಸಲಾಯಿತು.

1784ರಲ್ಲಿ ಪಿಟ್‌ನ ಭಾರತದ ಬಗೆಗಿನ ಕಾನೂನು ಪಾಸಾಯಿತು. ಭಾರತದಲ್ಲಿಯ ಕಂಪನಿಯ ರಾಜ್ಯಾಡಳಿತವನ್ನು ನಿಯಂತ್ರಿಸಲು ಒಂದು ಶಾಶ್ವತ ಸ್ವರೂಪದ ನಿಯಾಮಕ ಮಂಡಳಿಯನ್ನು ಸ್ಥಾಪಿಸಲಾಯಿತು. ಭಾರತದಲ್ಲಿಯ ರಾಜ್ಯಾಡಳಿತದ ಬಗ್ಗೆ ಕಂಪನಿಗೆ ಆದೇಶ ನೀಡುವ ಅಧಿಕಾರವನ್ನು ಈ ಮಂಡಳಿಗೆ ನೀಡಲಾಯಿತು. 1813, 1833 ಮತ್ತು 1853ರಲ್ಲಿ ಕಂಪನಿಯ ಆಡಳಿತದಲ್ಲಿ ಬದಲಾವಣೆ ಮಾಡುವ ಕಾನೂನುಗಳನ್ನು ಪಾರ್ಲಿಮೆಂಟು ಮಾಡಿತು. ಈ ರೀತಿಯಾಗಿ ಕಂಪನಿಯ ಭಾರತದಲ್ಲಿಯ ಆಡಳಿತದ ಮೇಲೆ ಬ್ರಿಟಿಶ ಸರಕಾರದ ಅಪ್ರತ್ಯಕ್ಷ ನಿಯಂತ್ರಣವು ಅಸ್ತಿತ್ವದಲ್ಲಿ ಬಂದಿತು.

ಇಂಗ್ಲೀಷ ಆಡಳಿತದ ಜೊತೆಗೆ ಹೊಸ ಆಡಳಿತ ಪದ್ಧತಿಯು ಭಾರತದಲ್ಲಿ ರೂಢವಾಯಿತು. ನಾಗರಿಕ ಆಡಳಿತ ವರ್ಗ, ಸೈನ್ಯ, ಪೋಲೀಸ ದಳ ಮತ್ತು ನ್ಯಾಯಾಂಗ ವ್ಯವಸ್ಥೆ ಇವು ಇಂಗ್ಲೀಷರ ಭಾರತದಲ್ಲಿಯ ಆಡಳಿತದ ಪ್ರಮುಖ ಆಧಾರಸ್ತಂಭಗಳಾಗಿದ್ದವು.

**ನಾಗರಿಕ ಆಡಳಿತ ವರ್ಗ :** ಭಾರತದಲ್ಲಿ ಇಂಗ್ಲೀಷರ ಆಡಳಿತವನ್ನು ದೃಢಪಡಿಸುವುದಕ್ಕಾಗಿ ಇಂಗ್ಲೀಷರಿಗೆ ನೌಕರವರ್ಗದ ಅವಶ್ಯಕತೆಯಿತ್ತು. ಲಾರ್ಡ್ ಕಾರ್ನವಾಲೀಸನು ನೌಕರಶಾಹಿಯನ್ನು ನಿರ್ಮಿಸಿದನು. ನಾಗರಿಕ ನೌಕರಶಾಹಿಯು ಇಂಗ್ಲೀಷ ಆಡಳಿತದ ಮಹತ್ವದ ಘಟಕವಾಯಿತು. ಕಂಪನಿಯ ಅಧಿಕಾರಿಗಳು ಖಾಸಗಿ ವ್ಯಾಪಾರ ಮಾಡಕೂಡದೆಂಬ ಕಟ್ಟಳೆಯನ್ನು ಅವನು ಮಾಡಿದನು. ಅದಕ್ಕಾಗಿ ಅವನು ಅಧಿಕಾರಿಗಳ ವೇತನವನ್ನು ಹೆಚ್ಚಿಸಿದನು.

ಆಡಳಿತದ ಅನುಕೂಲತೆಗಾಗಿ ಇಂಗ್ಲೀಷರ ಅಂಕಿತದಲ್ಲಿದ್ದ ಪ್ರದೇಶಗಳನ್ನು ಜಿಲ್ಲೆಗಳನ್ನಾಗಿ ವಿಭಾಗಿಸಲಾಯಿತು. ಜಿಲ್ಲಾಧಿಕಾರಿಯು ಜಿಲ್ಲೆಯ ಆಡಳಿತದ ಪ್ರಮುಖನಾಗಿರುತ್ತಿದ್ದನು. ಕಂದಾಯವನ್ನು ಸಂಗ್ರಹಿಸುವುದು, ನ್ಯಾಯದಾನ ಮಾಡುವುದು, ಶಾಂತತೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಅವನ ಜವಾಬ್ದಾರಿಯಾಗಿತ್ತು. ಇಂಡಿಯನ್ ಸಿವ್ಹಿಲ್ ಸರ್ವಿಸೆಸ್ (ಆಯ್ ಸಿ ಎಸ್) ಎಂಬ ಸ್ಪರ್ಧಾತ್ಮಕ ಪರೀಕ್ಷೆಯ ಮುಖಾಂತರ ಅಧಿಕಾರಿಗಳ ನೇಮಕ ಮಾಡಲಾಗುತ್ತಿತ್ತು.

**ಸೈನ್ಯ ಮತ್ತು ಪೋಲೀಸ ದಳ :** ಭಾರತದಲ್ಲಿಯ ಇಂಗ್ಲೀಷರ ಅಧಿಪತ್ಯದಲ್ಲಿಯ ಪ್ರದೇಶಗಳ ರಕ್ಷಣೆ ಮಾಡುವುದು, ಹೊಸ ಪ್ರದೇಶಗಳನ್ನು ವಶಪಡಿಸಿಕೊಳ್ಳುವುದು ಮತ್ತು ಭಾರತದಲ್ಲಿಯ ಇಂಗ್ಲೀಷ ವಿರೋಧಿ ದಂಗೆಯನ್ನು ಸದೆಬಡಿಯುವುದು ಇವು ಸೈನ್ಯದ ಕಾರ್ಯಗಳಾಗಿದ್ದವು. ದೇಶದಲ್ಲಿ ಕಾಯ್ದೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು ಪೋಲೀಸ ದಳದ ಕಾರ್ಯವಾಗಿತ್ತು.

**ನ್ಯಾಯ ವ್ಯವಸ್ಥೆ :** ಇಂಗ್ಲಂಡಿನಲ್ಲಿಯ ನ್ಯಾಯಾಂಗ ವ್ಯವಸ್ಥೆಯ ಮಾದರಿಯಲ್ಲಿ ಇಂಗ್ಲೀಷರು ಭಾರತದ ಹೊಸ ನ್ಯಾಯಾಂಗ ವ್ಯವಸ್ಥೆಯನ್ನು ರೂಪಿಸಿದರು. ಪ್ರತಿಯೊಂದು ಜಿಲ್ಲೆಯಲ್ಲಿ ಮುಲ್ಕಿ ಖಟ್ಲೆಗಳಿಗಾಗಿ ದಿವಾಣಿ ನ್ಯಾಯಾಲಯ ಹಾಗೂ ಫೌಜದಾರಿ ಖಟ್ಲೆಗಳಿಗಾಗಿ ಫೌಜದಾರಿ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು. ಅವುಗಳ ತೀರ್ಪುಗಳ ಪುನರ್ವಿಚಾರಕ್ಕಾಗಿ ಉಚ್ಚನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು.

**ಕಾನೂನಿನ ಎದುರಿನಲ್ಲಿ ಸಮಾನತೆ:** ಭಾರತದಲ್ಲಿ ಮೊದಲು ಬೇರೆ ಬೇರೆ ಕಾನೂನುಗಳಿದ್ದವು. ಜಾತಿಯ ಆಧಾರದ ಮೇಲಿಂದ ನ್ಯಾಯದಾನದಲ್ಲಿ ಭೇದಭಾವ ಮಾಡಲಾಗುತ್ತಿತ್ತು. ಲಾರ್ಡ್ ಮೆಕಾಲೆಯ ನೇತೃತ್ವದಲ್ಲಿ ಸ್ಥಾಪಿಸಲ್ಪಟ್ಟ ಕಾನೂನು ಸಮಿತಿಯು ಕಾನೂನು ಸಂಹಿತೆಯನ್ನು ತಯಾರಿಸಿತು. ಸಂಪೂರ್ಣ ಭಾರತದಲ್ಲಿ ಒಂದೇ ಕಾಯ್ದೆಯನ್ನು ಜಾರಿಗೊಳಿಸಲಾಯಿತು. ಕಾನೂನಿನ ಮುಂದೆ ಎಲ್ಲರೂ ಸಮಾನರಾಗಿದ್ದಾರೆ ಎಂಬ ತತ್ವವನ್ನು ಇಂಗ್ಲೀಷರು ರೂಢಿಯಲ್ಲಿ ತಂದರು.

ಈ ಪದ್ಧತಿಯಲ್ಲಿಯೂ ಕೆಲವು ದೋಷಗಳಿದ್ದವು. ಯುರೋಪಿಯನ್ನರ ಮೇಲಿನ ಖಟ್ಲೆಗಳನ್ನು ನಡೆಸುವ ಸಲುವಾಗಿ ಸ್ವತಂತ್ರ ನ್ಯಾಯಾಲಯಗಳು ಮತ್ತು ಬೇರೆ ಕಾನೂನುಗಳು ಅಸ್ತಿತ್ವದಲ್ಲಿದ್ದವು. ಹೊಸ ಕಾನೂನುಗಳು ಜನಸಾಮಾನ್ಯರಿಗೆ ತಿಳಿಯುತ್ತಿರಲಿಲ್ಲ. ನ್ಯಾಯವು ಜನಸಾಮಾನ್ಯರಿಗೆ ತುಂಬಾ ಖರ್ಚಿನದಾಗಿತ್ತು. ಖಟ್ಲೆಗಳು ವರ್ಷಾನುವರ್ಷ ನಡೆಯುತ್ತಿದ್ದವು.

**ಇಂಗ್ಲೀಷರ ಆರ್ಥಿಕ ನೀತಿ :** ಪ್ರಾಚೀನ ಕಾಲದಿಂದ ಭಾರತದ ಮೇಲೆ ಆಕ್ರಮಣಗಳು ಆಗುತ್ತಿದ್ದವು. ಅನೇಕ ಆಕ್ರಮಣಕಾರರು ಭಾರತದಲ್ಲಿ ನೆಲೆಸಿದರು ಅವರು ಭಾರತೀಯ ಸಂಸ್ಕೃತಿಯೊಂದಿಗೆ ಬೆರೆತರು. ಅವರು ಇಲ್ಲಿ ರಾಜ್ಯಾಡಳಿತವನ್ನು ಮಾಡಿದರೂ ಭಾರತದ ಅರ್ಥವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಗಳನ್ನು ಮಾಡಲಿಲ್ಲ. ಇಂಗ್ಲೀಷರದು ಮಾತ್ರ ಹಾಗಿರಲಿಲ್ಲ.

ಇಂಗ್ಲಂಡ ಆಧುನಿಕ ರಾಷ್ಟ್ರವಾಗಿತ್ತು. ಔದ್ಯೋಗಿಕ ಕ್ರಾಂತಿಯಿಂದಾಗಿ ಅಲ್ಲಿ ಬಂಡವಾಳಶಾಹಿ ಅರ್ಥವ್ಯವಸ್ಥೆಯು ಜಾರಿಯಲ್ಲಿತ್ತು. ಈ ಅರ್ಥವ್ಯವಸ್ಥೆಗೆ ಪೋಷಕವಾದ ಅರ್ಥವ್ಯವಸ್ಥೆಯನ್ನು ಅವರು ಭಾರತದಲ್ಲಿ ಜಾರಿಗೊಳಿಸಿದರು. ಇದರಿಂದಾಗಿ ಇಂಗ್ಲಂಡಿಗೆ ಲಾಭವಾಯಿತು; ಆದರೆ ಭಾರತೀಯರ ಆರ್ಥಿಕ ಶೋಷಣೆಯಾಗತೊಡಗಿತು.

**ಭೂಕಂದಾಯದ ಬಗೆಗಿನ ನೀತಿ :** ಬ್ರಿಟಿಶ ಆಡಳಿತವು ಆರಂಭವಾಗುವ ಮೊದಲು ಹಳ್ಳಿಗಳಲ್ಲಿಯ ಅರ್ಥವ್ಯವಸ್ಥೆಯು ಸ್ವಯಂಪೂರ್ಣವಾಗಿತ್ತು. ಕೃಷಿ ಮತ್ತು ಇತರ ಉದ್ಯೋಗಗಳ ಮುಖಾಂತರ ಊರಿನ ಅವಶ್ಯಕತೆಗಳು ಊರಲ್ಲಿಯೇ ಪೂರ್ಣವಾಗುತ್ತಿದ್ದವು. ಭೂಕಂದಾಯವು ರಾಜ್ಯದ ಆದಾಯದ ಪ್ರಮುಖ ಸಾಧನವಾಗಿತ್ತು. ಬ್ರಿಟಿಶಪೂರ್ವ ಕಾಲದಲ್ಲಿ ಬೆಳೆಗೆ ಅನುಸಾರವಾಗಿ ಭೂಕಂದಾಯವನ್ನು ಹೇರಲಾಗುತ್ತಿತ್ತು. ಬೆಳೆಗಳು ಚೆನ್ನಾಗಿ ಬರದಿದ್ದರೆ ಭೂಕಂದಾಯದಲ್ಲಿ ರಿಯಾಯಿತಿ ದೊರೆಯುತ್ತಿತ್ತು. ಕಂದಾಯವನ್ನು ಮುಖ್ಯವಾಗಿ ಧಾನ್ಯರೂಪದಲ್ಲಿ ಸ್ವೀಕರಿಸಲಾಗುತ್ತಿತ್ತು. ಭೂಕಂದಾಯವನ್ನು ತುಂಬಲು ವಿಳಂಬವಾದರೂ ರೈತರ ಕಡೆಯಿಂದ ಭೂಮಿಯನ್ನು ಕಸಿದುಕೊಳ್ಳಲಾಗುತ್ತಿರಲಿಲ್ಲ.

ಆದಾಯವನ್ನು ಹೆಚ್ಚಿಸುವ ಸಲುವಾಗಿ ಇಂಗ್ಲೀಷರು ಭೂಕಂದಾಯ ಪದ್ಧತಿಯಲ್ಲಿ ಮಹತ್ವದ ಬದಲಾವಣೆಗಳನ್ನು ಮಾಡಿದರು. ಇಂಗ್ಲೀಷರು ಭೂಮಿಯನ್ನು ಅಳೆದು ಅದರ ಕ್ಷೇತ್ರಫಲಕ್ಕನುಸಾರವಾಗಿ ಭೂಕಂದಾಯವನ್ನು ನಿಶ್ಚಿತಪಡಿಸಿದರು. ನಿರ್ದಿಷ್ಟವಾದ ಸಮಯದಲ್ಲಿ ಮತ್ತು ನಗದು ರೂಪದಲ್ಲಿ ಭೂಕಂದಾಯವನ್ನು ತುಂಬ ಬೇಕೆಂಬ ಕಡ್ಡಾಯವನ್ನು ಮಾಡಿದರು. ಭೂಕಂದಾಯವನ್ನು ಸಕಾಲದಲ್ಲಿ ತುಂಬದಿದ್ದರೆ ರೈತರ ಭೂಮಿಯನ್ನು ಕಸಿದುಕೊಳ್ಳಲಾಗುವುದೆಂಬ ನಿಯಮವನ್ನು ಮಾಡಿದರು. ಭೂಕಂದಾಯವನ್ನು ಸಂಗ್ರಹಿಸುವ ಬ್ರಿಟಿಶರ ಪದ್ಧತಿಯು ಭಾರತದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆಯಾಗಿತ್ತು. ಎಲ್ಲೆಡೆ ರೈತರ ಶೋಷಣೆಯಾಗುತ್ತಿತ್ತು.

**ಹೊಸ ಭೂಕಂದಾಯ ವ್ಯವಸ್ಥೆಯ ಪರಿಣಾಮಗಳು :** ಗ್ರಾಮೀಣ ಜೀವನದ ಮೇಲೆ ಹೊಸ ಭೂಕಂದಾಯ ವ್ಯವಸ್ಥೆಯ ದುಷ್ಪರಿಣಾಮಗಳಾದವು. ಭೂಕಂದಾಯ ತುಂಬುವ ಸಲುವಾಗಿ ಬಂದಷ್ಟು ಬೆಲೆಗೆ ರೈತರು ಬೆಳೆಗಳನ್ನು ಮಾರತೊಡಗಿದರು. ವ್ಯಾಪಾರಿ ಮತ್ತು ದಲ್ಲಾಳಿಗಳು ಯೋಗ್ಯ ಬೆಲೆಗಿಂತ ಕಡಿಮೆ ಬೆಲೆಗೆ ಅವರ ವಸ್ತುಗಳನ್ನು ಖರೀದಿಸತೊಡಗಿದರು. ಕೆಲವೊಮ್ಮೆ ಕಂದಾಯವನ್ನು ತುಂಬುವ ಸಲುವಾಗಿ ರೈತರು ತಮ್ಮ ಹೊಲಗಳನ್ನು ಸಾಹುಕಾರರ ಹತ್ತಿರ ಅಡವು ಇಟ್ಟು ಸಾಲ ಪಡೆಯಬೇಕಾಗುತ್ತಿತ್ತು. ಇದರಿಂದಾಗಿ ರೈತರು ಸಾಲಗಾರರಾದರು. ಸಾಲ ತೀರಿಸಲು ಅಸಾಧ್ಯವಾದಾಗ ಅವರು ತಮ್ಮ ಹೊಲಗಳನ್ನು ಮಾರಬೇಕಾಗುತ್ತಿತ್ತು. ಸರಕಾರ, ಜಮೀನುದಾರರು, ಸಾಹುಕಾರರು ಹಾಗೂ ವ್ಯಾಪಾರಿಗಳು ರೈತರ ಶೋಷಣೆ ಮಾಡುತ್ತಿದ್ದರು.

**ಕೃಷಿಯ ವ್ಯಾಪಾರೀಕರಣ :** ಮೊದಲು ರೈತರು ಮುಖ್ಯವಾಗಿ ಆಹಾರ ಧಾನ್ಯಗಳನ್ನು ಬೆಳೆಸುತ್ತಿದ್ದರು. ಈ ಆಹಾರ ಧಾನ್ಯಗಳು ಅವರಿಗೆ ಮನೆಯ ಬಳಕೆಗಾಗಿ ಮತ್ತು ಊರಿನ ಅವಶ್ಯಕತೆಗಳನ್ನು ಪೂರೈಸುವ ಸಲುವಾಗಿ ಉಪಯೋಗಕ್ಕೆ ಬರುತ್ತಿದ್ದವು. ಹತ್ತಿ, ನೀಲಿ, ತಂಬಾಕು, ಚಹಾ ಇತ್ಯಾದಿ ನಗದು

ಬೆಳೆಗಳಿಗೆ ಬ್ರಿಟಿಶ ಸರಕಾರವು ಉತ್ತೇಜನ ನೀಡಲಾರಂಭಿಸಿತು. ಆಹಾರ ಧಾನ್ಯಗಳ ಸಾಗುವಳಿ ಮಾಡುವುದಕ್ಕಿಂತ ಲಾಭವನ್ನು ತಂದುಕೊಡುವ ವಾಣಿಜ್ಯ ಬೆಳೆಗಳನ್ನು ಬೆಳೆಯುವುದಕ್ಕೆ ಬ್ರಿಟಿಶ ಸರಕಾರವು ಮಹತ್ವ ನೀಡತೊಡಗಿತು. ಈ ಪ್ರಕ್ರಿಯೆಗೆ 'ಕೃಷಿಯ ವ್ಯಾಪಾರೀಕರಣ' ಎಂದು ಕರೆಯುತ್ತಾರೆ.

**ಕ್ಷಾಮ :** 1860ರಿಂದ 1900ರ ವರೆಗಿನ ಕಾಲದಲ್ಲಿ ಭಾರತದಲ್ಲಿ ಭಯಂಕರ ಕ್ಷಾಮಗಳು ತಲೆದೋರಿದವು. ಆದರೆ ಬ್ರಿಟಿಶ ಆಡಳಿತಾಧಿಕಾರಿಗಳು ಬರಗಾಲ ನಿವಾರಣೆಗಾಗಿ ಸಾಕಷ್ಟು ಪ್ರಯತ್ನವನ್ನು ಮಾಡಲಿಲ್ಲ. ಅದರಂತೆ ನೀರಿನ ಪೂರೈಕೆಯ ಯೋಜನೆಗಳಿಗೆ ಸಾಕಷ್ಟು ಹಣವನ್ನೂ ಖರ್ಚು ಮಾಡಲಿಲ್ಲ.

**ಸಾರಿಗೆ ಮತ್ತು ಸಂಪರ್ಕ ವ್ಯವಸ್ಥೆಯಲ್ಲಿ ಸುಧಾರಣೆ :** ಬ್ರಿಟಿಶರು ವ್ಯಾಪಾರದ ಬೆಳವಣಿಗೆಗಾಗಿ ಮತ್ತು ಆಡಳಿತದ ಅನುಕೂಲತೆಗಾಗಿ ಭಾರತದಲ್ಲಿ ಸಾರಿಗೆ ಮತ್ತು ಸಂಪರ್ಕಗಳ ಆಧುನಿಕ ಸೌಕರ್ಯಗಳನ್ನು ನಿರ್ಮಿಸಿದರು. ಕೋಲಕಾತಾ ಮತ್ತು ದಿಲ್ಲಿಗಳನ್ನು ಜೋಡಿಸುವ ಹೆದ್ದಾರಿಯನ್ನು ಅವರು ನಿರ್ಮಿಸಿದರು. 1853ರಲ್ಲಿ ಮುಂಬಯಿ - ಠಾಣೆಗಳ ನಡುವೆ ಉಗಿಬಂಡಿಯು ಓಡಲಾರಂಭಿಸಿತು. ಅದೇ ವರ್ಷ ತಾರಾಯಂತ್ರದ ಮೂಲಕ ಸಂದೇಶಗಳನ್ನು ಕಳುಹಿಸುವ ವ್ಯವಸ್ಥೆಯನ್ನು ಬ್ರಿಟಿಶರು ಭಾರತದಲ್ಲಿ ಆರಂಭಿಸಿದರು. ಈ ವ್ಯವಸ್ಥೆಯಿಂದ ಭಾರತದಲ್ಲಿಯ ಮುಖ್ಯ ನಗರಗಳು ಮತ್ತು ಸೈನಿಕ ಠಾಣೆಗಳು ಒಂದಕ್ಕೊಂದು ಜೋಡಿಸಲ್ಪಟ್ಟವು. ಅದೇ ರೀತಿ ಬ್ರಿಟಿಶರು ಅಂಚೆಸೇವೆಯ ವ್ಯವಸ್ಥೆಯನ್ನೂ ಆರಂಭಿಸಿದರು.




ಮುಂಬಯಿ - ಠಾಣೆ ಉಗಿಬಂಡಿ (1853)

ಈ ಎಲ್ಲ ಸುಧಾರಣೆಗಳಿಂದಾಗಿ ಭಾರತೀಯ ಸಮಾಜ ಜೀವನದ ಮೇಲೆ ದೂರಗಾಮಿ ಪರಿಣಾಮಗಳಾದವು. ದೇಶದ ವಿವಿಧ ಭಾಗಗಳಲ್ಲಿರುವ ಜನರ ಪರಸ್ಪರ ಸಂಪರ್ಕ ಹೆಚ್ಚಿತು. ಇದರಿಂದಾಗಿ ಅವರಲ್ಲಿ ಐಕ್ಯತೆಯ ಭಾವನೆಯು ವೃದ್ಧಿಯಾಗಲು ನೆರವಾಯಿತು.

**ಭಾರತದಲ್ಲಿಯ ಹಳೆಯ ಉದ್ಯೋಗಧಂದೆಗಳ ಅವನತಿ:** ಭಾರತದಿಂದ ಇಂಗ್ಲಂಡಿಗೆ ನಿರ್ಯಾತವಾಗುತ್ತಿದ್ದ ವಸ್ತುಗಳ ಮೇಲೆ ಬ್ರಿಟಿಶ ಸರಕಾರವು ಭಯಂಕರ ಕರವನ್ನು ಹೇರುತ್ತಿತ್ತು. ಇದಕ್ಕೆ ಪ್ರತಿಯಾಗಿ ಇಂಗ್ಲಂಡಿನಿಂದ ಭಾರತಕ್ಕೆ ಆಯಾತವಾಗುವ ವಸ್ತುಗಳ ಮೇಲೆ ಅತ್ಯಂತ ಕಡಿಮೆ ಕರವನ್ನು ಹೇರಲಾಗುತ್ತಿತ್ತು. ಅದರಂತೆ ಇಂಗ್ಲಂಡಿನಿಂದ ಬರುವ ವಸ್ತುಗಳು ಯಂತ್ರಗಳ ಮೂಲಕ ತಯಾರಾಗುತ್ತಿದ್ದವು. ಹೀಗಾಗಿ ಅವುಗಳ ಉತ್ಪಾದನೆಯು ದೊಡ್ಡ ಪ್ರಮಾಣದಲ್ಲಿ ಹಾಗೂ ಕಡಿಮೆ ಖರ್ಚಿನಲ್ಲಿ ಆಗುತ್ತಿತ್ತು. ಇಂಥ ಅಗ್ಗದ ವಸ್ತುಗಳೊಂದಿಗೆ ಪೈಪೋಟಿ ನಡೆಸುವುದು. ಭಾರತೀಯ ಕರಕುಶಲ ಕೆಲಸಗಾರರಿಗೆ ಅಸಾಧ್ಯವಾಯಿತು. ಇದರ ಪರಿಣಾಮವಾಗಿ ಭಾರತದಲ್ಲಿಯ ಪರಂಪರಾಗತ ಉದ್ಯೋಗಧಂದೆಗಳು ನಿಂತು ಹೋದವು. ಹಾಗೂ ಅನೇಕ ಕರಕುಶಲ ಕೆಲಸಗಾರರು ನಿರುದ್ಯೋಗಿಗಳಾದರು.

**ಭಾರತದಲ್ಲಿ ಹೊಸ ಉದ್ಯೋಗಧಂದೆಗಳ ವಿಕಾಸ :** ಬ್ರಿಟಿಶ ಸರಕಾರದ ಬೆಂಬಲ, ವ್ಯವಸ್ಥಾಪನೆಯ ಅನುಭವ, ಬಂಡವಾಳ ಮುಂತಾದ ಸಂಗತಿಗಳ ಅಭಾವದಿಂದಾಗಿ ಭಾರತೀಯ ಉದ್ಯಮಿಗಳಿಗೆ ಸಾಕಷ್ಟು ಸಂಖ್ಯೆಯಲ್ಲಿ ಮುಂದೆ ಬರಲು ಸಾಧ್ಯವಾಗಲಿಲ್ಲ. ಆದರೆ ಇಂಥ ಅಡಚಣೆಗಳನ್ನು ಮೀರಿ ಕೆಲವು ಭಾರತೀಯರು ಕೈಗಾರಿಕೆಗಳನ್ನು ಆರಂಭಿಸಿದರು.

1854ರಲ್ಲಿ ಕಾವಸಜೀ ನಾನಾಭಾಯ ದಾವರ ಇವರು ಮುಂಬಯಿಯಲ್ಲಿ ಮೊದಲನೆಯ ಬಟ್ಟೆಯ ಗಿರಣಿಯನ್ನು ಆರಂಭಿಸಿದರು. 1855ರಲ್ಲಿ ಬಂಗಾಲದ ರಿಶ್ರಾ ಎಂಬಲ್ಲಿ ಸಣಬಿನ ಮೊದಲನೆಯ ಗಿರಣಿಯು ಆರಂಭವಾಯಿತು. 1907ರಲ್ಲಿ ಜಮಶೇದಜಿ ಟಾಟಾ ಇವರು ಜಮಶೇದಪೂರ ಎಂಬಲ್ಲಿ ಟಾಟಾ ಆಯರ್ನ ಆ್ಯಂಡ್ ಸ್ಟೀಲ ಕಂಪನಿಯ ಉಕ್ಕು ನಿರ್ಮಿತಿಯ ಕಾರ್ಖಾನೆಯನ್ನು ಸ್ಥಾಪಿಸಿದರು.



ಜಮಶೇದಜಿ ಟಾಟಾ

ಭಾರತದಲ್ಲಿ ಇದ್ದಲಿ, ಲೋಹ, ಸಕ್ಕರೆ, ಸಿಮೆಂಟ ಮತ್ತು ರಾಸಾಯನಿಕ ದ್ರವ್ಯ ಈ ಉದ್ಯೋಗಗಳೂ ಆರಂಭವಾದವು.

**ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಣಾಮಗಳು :** ಹತ್ತೊಂಬತ್ತನೆಯ ಶತಮಾನದಲ್ಲಿ ಯುರೋಪಿನಲ್ಲಿ ಮಾನವತಾವಾದ, ಬುದ್ಧಿವಾದ, ಪ್ರಜಾಪ್ರಭುತ್ವ, ರಾಷ್ಟ್ರವಾದ, ಉದಾರಮತವಾದ ಈ ಮೌಲ್ಯಗಳ ಮೇಲೆ ಆಧಾರಿತವಾದ ಹೊಸ ಯುಗವು ಸಾಕಾರಗೊಂಡಿತ್ತು. ಪಾಶ್ಚಿಮಾತ್ಯ ಜಗತ್ತಿನಲ್ಲಿಯ ಈ ಪರಿವರ್ತನೆಯ ಪ್ರತಿಬಿಂಬವು ಭಾರತದ ಮೇಲೆ ಮೂಡುವುದು ಸ್ವಾಭಾವಿಕವಾಗಿತ್ತು. ಬ್ರಿಟಿಶರಿಗೆ ಆಡಳಿತವನ್ನು ನಡೆಸುವ ಸಲುವಾಗಿ ಭಾರತೀಯ ಸಮಾಜದ ಪರಿಚಯ ಮಾಡಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಅವರು ಇಲ್ಲಿಯ ಪರಂಪರೆ, ಇತಿಹಾಸ, ಸಾಹಿತ್ಯ, ಕಲೆ ಅದರಂತೆ ಇಲ್ಲಿಯ ಸಂಗೀತ, ಪ್ರಾಣಿ-ಪಕ್ಷಿ ಇವುಗಳ ಅಭ್ಯಾಸವನ್ನೂ

ಮಾಡಲು ಆರಂಭಿಸಿದರು. ಕ್ರಿ.ಶ. 1784ರಲ್ಲಿ ವಿಲ್ಯಮ್ ಜೋನ್ಸ ಎಂಬ ಬ್ರಿಟಿಶ ಅಧಿಕಾರಿಯು ಕೋಲಕಾತಾದಲ್ಲಿ ಏಶಿಯಾಟಿಕ್ ಸೊಸೈಟಿ ಆಫ ಬಂಗಾಲ ಎಂಬ ಸಂಸ್ಥೆಯನ್ನು ಸ್ಥಾಪಿಸಿದನು. ಮ್ಯಾಕ್ಸಮ್ಯುಲರ ಎಂಬ ಜರ್ಮನ್ ವಿಚಾರವಂತನು ಭಾರತೀಯ ಧರ್ಮ, ಭಾಷೆ, ಇತಿಹಾಸ ಇವುಗಳ ಆಳವಾದ ಅಭ್ಯಾಸಕನಾಗಿದ್ದನು. ಈ ಉದಾಹರಣೆಯಿಂದ ನಾವು ಕೂಡ ನಮ್ಮ ಧರ್ಮ, ಇತಿಹಾಸ, ಪರಂಪರೆ ಇವುಗಳ ಅಭ್ಯಾಸ ಮಾಡಬೇಕೆಂಬುದರ ಅರಿವು ಹೊಸದಾಗಿ ಶಿಕ್ಷಣ ಪಡೆದ ಭಾರತೀಯರಲ್ಲಿ ಆಗತೊಡಗಿತು.

ಇಂಗ್ಲೀಷರು ಭಾರತದಲ್ಲಿ ಅನೇಕ ಕಾನೂನುಗಳನ್ನು ಮಾಡಿದರು. 1829ರಲ್ಲಿ ಲಾರ್ಡ್ ಬೆಂಟಿಂಕನು ಸತಿ ಸಹಗಮನ ಪದ್ಧತಿ ನಿಷೇಧ ಕಾನೂನು ಮಾಡಿದನು. 1856ರಲ್ಲಿ ಲಾರ್ಡ್ ಡಾಲಹೌಸಿಯು ವಿಧವಾ ಪುನರ್ವಿವಾಹಕ್ಕೆ ಮಾನ್ಯತೆ ನೀಡುವ ಕಾನೂನು ಮಾಡಿದನು. ಈ ಕಾನೂನುಗಳು ಸಮಾಜ ಸುಧಾರಣೆಗೆ ಪೂರಕವಾದವು.

ಆಡಳಿತವನ್ನು ನಡೆಸಲು ಬ್ರಿಟಿಶರಿಗೆ ಇಂಗ್ಲೀಷ ಶಿಕ್ಷಣವನ್ನು ಪಡೆದ ಭಾರತೀಯರ ಅವಶ್ಯಕತೆಯಿತ್ತು. ಲಾರ್ಡ್ ಮೆಕಾಲೆಯ ಶಿಫಾರಸಿನ ಪ್ರಕಾರ 1835ರಲ್ಲಿ ಭಾರತದಲ್ಲಿ ಇಂಗ್ಲೀಷ ಶಿಕ್ಷಣವನ್ನು ಆರಂಭಿಸಲಾಯಿತು. ಹೊಸ ಶಿಕ್ಷಣದ ಮೂಲಕ ಹೊಸ ಪಾಶ್ಚಾತ್ಯ ವಿಚಾರಗಳು, ಆಧುನಿಕ ಸುಧಾರಣೆ, ವಿಜ್ಞಾನ ಮತ್ತು ತಂತ್ರಜ್ಞಾನ ಇವುಗಳ ಬಗ್ಗೆ ಭಾರತೀಯರಿಗೆ ಪರಿಚಯ ಮಾಡಿಕೊಡಲಾಯಿತು. 1857ರಲ್ಲಿ ಮುಂಬಯಿ, ಮದ್ರಾಸ (ಚೆನ್ನೈ) ಮತ್ತು ಕೋಲಕಾತಾಗಳಲ್ಲಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತು. ಪಾಶ್ಚಾತ್ಯ ಶಿಕ್ಷಣವನ್ನು ಪಡೆದ ಮಧ್ಯಮ ವರ್ಗವು ಭಾರತದಲ್ಲಿಯ ಸಾಮಾಜಿಕ ಪುನರುಜ್ಜೀವನದ ಚಳುವಳಿಯ ನೇತೃತ್ವವನ್ನು ವಹಿಸಿತು.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಮತ್ತೆ ಬರೆಯಿರಿ.**

(1) ಪೋರ್ತುಗೀಜ, ........... ಫ್ರೆಂಚ, ಬ್ರಿಟಿಶ ಇವರು ಭಾರತದ ಮಾರುಕಟ್ಟೆಯನ್ನು ಸ್ವಾಧೀನಪಡಿಸಿಕೊಳ್ಳುವ ಅಧಿಕಾರದ ಪೈಕೋಟಿಗೆ ಇಳಿದರು.
(ಅ) ಆಸ್ಟ್ರಿಯನ್ (ಬ) ಡಚ್
(ಕ) ಜರ್ಮನ್ (ಡ) ಸ್ವೀಡಿಶ್

(2) 1802ರಲ್ಲಿ ......... ಪೇಶವೆಯು ಇಂಗ್ಲೀಷರ ಜೊತೆ ಸಹಾಯಕ ಸೈನ್ಯದ ಒಪ್ಪಂದವನ್ನು ಮಾಡಿಕೊಂಡನು.
(ಅ) ಹಿರಿಯ ಬಾಜೀರಾವ (ಬ) ಸವಾಯಿ ಮಾಧವರಾವ
(ಕ) ನಾನಾಸಾಹೇಬ (ಡ) ಎರಡನೆಯ ಬಾಜೀರಾವ

(3) ಜಮಶೇದಜಿ ಟಾಟಾ ಇವರು ........... ಎಂಬಲ್ಲಿ ಟಾಟಾ ಆಯರ್ನ್ ಆ್ಯಂಡ್ ಸ್ಟೀಲ ಕಂಪನಿಯ ಉಕ್ಕು ನಿರ್ಮಿತಿಯ ಕಾರ್ಖಾನೆಯನ್ನು ಸ್ಥಾಪಿಸಿದರು.
(ಅ) ಮುಂಬಯಿ (ಬ) ಕೋಲಕಾತಾ
(ಕ) ಜಮಶೇದಪೂರ (ಡ) ದಿಲ್ಲಿ

**2. ಕೆಳಗಿನ ಕಲ್ಪನೆಗಳನ್ನು ಸ್ಪಷ್ಟಪಡಿಸಿರಿ.**

(1) ನಾಗರಿಕ ಆಡಳಿತ ವರ್ಗ
(2) ಕೃಷಿಯ ವ್ಯಾಪಾರೀಕರಣ
(3) ಇಂಗ್ಲೀಷರ ಆರ್ಥಿಕ ನೀತಿ

**3. ಕೆಳಗಿನ ವಿಧಾನಗಳನ್ನು ಕಾರಣ ಸಹಿತ ವಿವರಿಸಿರಿ.**

(1) ಭಾರತದಲ್ಲಿಯ ರೈತರು ಸಾಲಗಾರರಾದರು.
(2) ಭಾರತದಲ್ಲಿಯ ಹಳೆಯ ಉದ್ಯೋಗ ಧಂದೆಗಳ ಅವನತಿಯಾಯಿತು.

**4. ಪಾಠದ ಸಹಾಯದಿಂದ ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.**

| ವ್ಯಕ್ತಿ | ಕಾರ್ಯಗಳು |
|---|---|
| ಲಾರ್ಡ್ ಕಾರ್ನವಾಲೀಸ | ......................... |
| ......................... | ಸತಿಸಹಗಮನ ಪದ್ಧತಿ ನಿಷೇಧ ಕಾನೂನು ಮಾಡಿದನು. |
| ಲಾರ್ಡ್ ಡಾಲಹೌಸಿ | ......................... |
| ......................... | 'ಏಶಿಯಾಟಿಕ್ ಸೊಸೈಟಿ ಆಫ ಬಂಗಾಲ'ದ ಸ್ಥಾಪನೆ |

**ಉಪಕ್ರಮ**

ಬ್ರಿಟಿಶರು ಮಾಡಿದ ಆಡಳಿತ, ಶಿಕ್ಷಣ, ಸಾರಿಗೆ ಮತ್ತು ಸಂಪರ್ಕ ಇವುಗಳಲ್ಲಿ ಸುಧಾರಣೆಗಳ ಸಚಿತ್ರ ಮಾಹಿತಿ ತಯಾರಿಸಿರಿ.

AL7Y1H

# 4. 1857ರ ಸ್ವಾತಂತ್ರ್ಯ ಹೋರಾಟ

1857ರಲ್ಲಿ ಇಂಗ್ಲೀಷ ಅಧಿಪತ್ಯವನ್ನು ನಡುಗಿಸುವ ದೊಡ್ಡ ಪ್ರಮಾಣದ ಹೋರಾಟವು ಭಾರತದಲ್ಲಾಯಿತು. ಈ ಹೋರಾಟವು ಆಕಸ್ಮಾತ್ತಾಗಿ ಸಂಭವಿಸಲಿಲ್ಲ. ಅದಕ್ಕೂ ಮೊದಲು ಭಾರತದಲ್ಲಿ ಬ್ರಿಟಿಶರ ವಿರುದ್ಧ ಅನೇಕ ಹೋರಾಟಗಳಾಗಿದ್ದವು. 1857ರ ಹೋರಾಟದ ವ್ಯಾಪ್ತಿ ಮತ್ತು ಅದರ ಹಿನ್ನೆಲೆಗಳನ್ನು ಗಮನದಲ್ಲಿರಿಸಿ ಸ್ವಾತಂತ್ರ್ಯವೀರ ಸಾವರಕರ ಇವರು ಯಾವ ಪುಸ್ತಕದಲ್ಲಿ ಇದರ ವರ್ಣನೆಯನ್ನು ಮಾಡಿದ್ದಾರೋ ಆ '1857ರ ಸ್ವಾತಂತ್ರ್ಯಸಮರ' ಎಂಬ ಪುಸ್ತಕವು ಮುಂದೆ ಅನೇಕ ಕ್ರಾಂತಿಕಾರರಿಗೆ ಬ್ರಿಟಿಶರ ವಿರುದ್ಧ ಹೋರಾಡುವ ಪ್ರೇರಣೆಯನ್ನು ನೀಡಿತು.

**1857ಕ್ಕಿಂತ ಮೊದಲಿನ ಹೋರಾಟಗಳು :** ಭಾರತದ ಯಾವ ಯಾವ ಭಾಗಗಳಲ್ಲಿ ಬ್ರಿಟಿಶ ಆಧಿಪತ್ಯವು ಸ್ಥಾಪಿಸಲ್ಪಟ್ಟಿತ್ತೋ ಅಲ್ಲಲ್ಲಿಯ ಜನರು ಬ್ರಿಟಿಶ ಆಡಳಿತದ ದುಷ್ಪರಿಣಾಮಗಳನ್ನು ಅನುಭವಿಸಬೇಕಾಯಿತು. ಕಂಪನಿಯ ಆಡಳಿತದಿಂದಾಗಿ ಎಲ್ಲ ಸ್ತರಗಳಲ್ಲಿ ತಮ್ಮ ಶೋಷಣೆಯಾಗುತ್ತಿದೆಯೆಂಬುದರ ಅರಿವು ಭಾರತೀಯರ ಮನದಲ್ಲಿ ನಿರ್ಮಾಣವಾಗತೊಡಗಿತು ಹಾಗೂ ಈ ಅಧಿಪತ್ಯದ ವಿರುದ್ಧ ಅಸಂತೋಷವೂ ಹೆಚ್ಚುತ್ತ ಹೋಯಿತು.

**ಗೊತ್ತಿದೆಯೇ ನಿಮಗೆ ?**

**ಪಾಯಿಕರ ದಂಗೆ :** ಓಡಿಶಾದಲ್ಲಿ ಮಧ್ಯಯುಗದ ಕಾಲದಿಂದ ಪಾಯಿಕ ಪದ್ಧತಿ ಅಸ್ತಿತ್ವದಲ್ಲಿತ್ತು. ಅಲ್ಲಿಯ ಬೇರೆ ಬೇರೆ ಸ್ವತಂತ್ರ ರಾಜರ ನಿಂತ ಸೈನಿಕರಿಗೆ 'ಪಾಯಿಕ' ಎನ್ನಲಾಗುತ್ತಿತ್ತು. ರಾಜರುಗಳು ಈ ಪಾಯಿಕರಿಗೆ ಸಾಗುವಳಿ ಮಾಡಲು ಉಚಿತ ಭೂಮಿಗಳನ್ನು ಕೊಟ್ಟಿದ್ದರು. ಅವುಗಳನ್ನು ಸಾಗುವಳಿ ಮಾಡಿ ಅವರು ತಮ್ಮ ಹೊಟ್ಟೆ ಹೊರೆಯುತ್ತಿದ್ದರು. ಅದಕ್ಕೆ ಬದಲಾಗಿ ಯುದ್ಧದ ಪ್ರಸಂಗ ಉದ್ಭವಿಸಿದರೆ ಅವರು ತಮ್ಮ ರಾಜನ ಪರವಾಗಿ ಯುದ್ಧಕ್ಕೆ ಸನ್ನದ್ಧರಾಗಬೇಕು ಎಂಬ ಷರತ್ತು ಇತ್ತು.

ಕ್ರಿ.ಶ. 1803ರಲ್ಲಿ ಇಂಗ್ಲೀಷರು ಓಡಿಶಾ ಗೆದ್ದುಕೊಂಡರು. ಇಂಗ್ಲೀಷರು ಪಾಯಿಕರ ವಂಶಪರಂಪರಾಗತ ಭೂಮಿಗಳನ್ನು ಕಸಿದುಕೊಂಡರು. ಅದರಿಂದಾಗಿ ಪಾಯಿಕರು ರೊಚ್ಚಿಗೆದ್ದರು. ಅದಲ್ಲದೆ ಇಂಗ್ಲೀಷರು ಹೇರಿದ ಕರಗಳಿಂದಾಗಿ ಉಪ್ಪಿನ ಬೆಲೆಯಲ್ಲಿ ವೃದ್ಧಿಯಾಗಿ ಸಾಮಾನ್ಯ ಜನರ ಜೀವನವು ಅಸಹನೀಯವಾಯಿತು. ಇದರ ಪರಿಣಾಮವಾಗಿ ಕ್ರಿ.ಶ. 1817ರಲ್ಲಿ ಪಾಯಿಕರು ಇಂಗ್ಲೀಷರ ವಿರುದ್ಧ ಸಶಸ್ತ್ರ ದಂಗೆಯೆದ್ದರು. ಬಕ್ಷಿ ಜಗನಬಂಧು ವಿದ್ಯಾಧರ ಇವರು ಈ ದಂಗೆಯ ನೇತೃತ್ವವಹಿಸಿದರು.

ಕಂಪನಿ ಸರಕಾರದ ಕಾಲದಲ್ಲಿ ರೈತರು ಮತ್ತು ಸಾಮಾನ್ಯ ಜನರು ನಿರ್ಗತಿಕರಾದರು. ಅಂಥದರಲ್ಲಿಯೇ 1770ರಲ್ಲಿ ಬಂಗಾಲ ಪ್ರಾಂತದಲ್ಲಿ ದೊಡ್ಡ ಪ್ರಮಾಣದಲ್ಲಿ ಕ್ಷಾಮ ತಲೆದೋರಿತು. ಜನರೊಂದಿಗೆ ಇಂಗ್ಲೀಷ ಆಡಳಿತಗಾರರ ವರ್ತನೆಯು ಮಾತ್ರ ಉದಾಸೀನ ಮತ್ತು ಅಸಂವೇದನಶೀಲವಾಗಿ ಉಳಿಯಿತು. ಕ್ರಿ.ಶ. 1763ರಿಂದ 1857ರ ಕಾಲದಲ್ಲಿ ಬಂಗಾಲದಲ್ಲಿ ಮೊದಲು ಸಾಧುಗಳ ಹಾಗೂ ನಂತರ ಫಕೀರರ ನೇತೃತ್ವದಲ್ಲಿ ರೈತರು ಹೋರಾಟ ಮಾಡಿದರು. ಇದೇ ರೀತಿಯ ಹೋರಾಟಗಳು ಗುಜರಾತ, ರಾಜಸ್ಥಾನ, ಮಹಾರಾಷ್ಟ್ರ ಮತ್ತು ದಕ್ಷಿಣ ಭಾರತದಲ್ಲಿಯೂ ನಡೆದವು.



ಉಮಾಜಿ ನಾಯಿಕ

ಉಮಾಜಿ ನಾಯಿಕ ಇವರು ಮಾಡಿದ ಹೋರಾಟವು ಕೂಡ ಇದೇ ರೀತಿ ಉಗ್ರವಾಗಿತ್ತು. ಉಮಾಜಿಯವರು ತಮ್ಮ ರಾಮೋಶಿ ಬಾಂಧವರನ್ನು ಮತ್ತು ಸ್ಥಳೀಯ ಯುವಕರನ್ನು ಸಂಘಟಿತಗೊಳಿಸಿ ಇಂಗ್ಲೀಷರ ವಿರುದ್ಧ ಬಂಡೆದ್ದರು. ಅವರು ಒಂದು ಜಾಹೀರುನಾಮೆಯನ್ನು ಹೊರಡಿಸಿ ಬ್ರಿಟಿಶರ ವಿರುದ್ಧ ಹೋರಾಡುವಂತೆ ಮತ್ತು ಬ್ರಿಟಿಶ ಆಡಳಿತವನ್ನು ನಿಷೇಧಿಸುವಂತೆ ಜನರಿಗೆ ಆಹ್ವಾನ ನೀಡಿದರು. ಪುಣೆ, ಸಾತಾರಾ, ಅಹಮದನಗರ, ಸೋಲಾಪೂರ, ನಾಶಿಕ, ಭೋರ ಮುಂತಾದ ಭಾಗಗಳಲ್ಲಿ ಅವರು ವರ್ಚಸ್ಸನ್ನುಂಟು ಮಾಡಿದರು. 1832ರಲ್ಲಿ ಕಂಪನಿ ಸರಕಾರವು ಉಮಾಜಿ ನಾಯಿಕರನ್ನು ಸೆರೆಹಿಡಿಯಿತು. ಅವರನ್ನು ಪುಣೆಯಲ್ಲಿ ಗಲ್ಲಿಗೇರಿಸಲಾಯಿತು.

ಭಾರತದಲ್ಲಿಯ ಆದಿವಾಸಿ ಮತ್ತು ಕಾಡು ಜನಾಂಗವು ಕೂಡ ಇಂಗ್ಲೀಷ ಅಧಿಪತ್ಯಕ್ಕೆ ಆಹ್ವಾನ ನೀಡಿತು. ಅರಣ್ಯ ಸಂಪತ್ತಿನ ಮೇಲೆ ಈ ಜನಾಂಗದ ಉದರ ನಿರ್ವಾಹವಾಗುತ್ತಿತ್ತು. ಬ್ರಿಟಿಶರು ಕಾನೂನಿನ ಮೂಲಕ ಅವರ ಹಕ್ಕುಗಳನ್ನು ಕಸಿದುಕೊಂಡರು. ಇದರ ಪರಿಣಾಮವಾಗಿ ಬಿಹಾರ, ಛೋಟಾನಾಗಪೂರ ಪರಿಸರದಲ್ಲಿಯ ಕೋಲಾಮರು, ಓಡಿಶಾದಲ್ಲಿಯ ಗೊಂಡರು ಮತ್ತು ಬಿಹಾರದಲ್ಲಿಯ ಸಂಥಾಳರು ಇಂಗ್ಲೀಷರ ವಿರುದ್ಧ ಹೋರಾಡಿದರು. ಮಹಾರಾಷ್ಟ್ರದಲ್ಲಿಯ ಭಿಲ್ಲ, ಕೋಳಿ, ರಾಮೋಶಿ ಇವರು ಇಂಗ್ಲೀಷರ ವಿರುದ್ಧ ಹೋರಾಟ ಮಾಡಿದರು. ಕೊಲ್ಹಾಪೂರ ಪರಿಸರದಲ್ಲಿಯ ಗಡಕರಿಗಳು ಮತ್ತು ಕೊಂಕಣದಲ್ಲಿಯ

ಪೊಂಡ-ಸಾವಂತರು ಇಂಗ್ಲೀಷರ ಅಧಿಪತ್ಯಕ್ಕೆ ಆಹ್ವಾನ ನೀಡಿದರು. 1857ರ ಮೊದಲು ದೇಶದ ವಿವಿಧ ಭಾಗಗಳಲ್ಲಿ ಕೆಲವು ಜಮೀನುದಾರರು ಹಾಗೂ ರಾಜಮಹಾರಾಜರು ಕೂಡ ಹೋರಾಟಗಳನ್ನು ಮಾಡಿದರು.

ಈಸ್ಟ ಇಂಡಿಯಾ ಕಂಪನಿಯ ಸೈನ್ಯದಲ್ಲಿ ಅನೇಕ ಭಾರತೀಯ ಸೈನಿಕರಿದ್ದರು. ಕಂಪನಿಯ ಕಡೆಯಿಂದ ಅವರನ್ನು ಪಕ್ಷಪಾತದಿಂದ ನಡೆಸಿಕೊಳ್ಳಲಾಗುತ್ತಿತ್ತು. ಇಂಗ್ಲೀಷ ಸೈನಿಕರ ತುಲನೆಯಲ್ಲಿ ಅವರಿಗೆ ಅತ್ಯಂತ ಕಡಿಮೆ ವೇತನ ಮತ್ತು ಭತ್ತೆಗಳನ್ನು ನೀಡಲಾಗುತ್ತಿತ್ತು. 1806ರಲ್ಲಿ ವೆಲ್ಲೋರದಲ್ಲಿಯ ಮತ್ತು 1824ರಲ್ಲಿ ಬರಾಕಪೂರದಲ್ಲಿಯ ದಂಗೆಗಳು ಉಗ್ರ ರೂಪವನ್ನು ಧರಿಸಿದ್ದವು.

ಈ ಎಲ್ಲ ಬಂಡಾಯಗಳು ಆಯಾ ಪರಿಸರದಲ್ಲಾದವು. ಅವು ಸ್ಥಾನಿಕ ಸ್ವರೂಪದ್ದಾಗಿದ್ದು ಏಕಾಕಿಯಾಗಿದ್ದವು. ಇಂಗ್ಲೀಷರು ತಮ್ಮ ಸಾಮರ್ಥ್ಯದ ಬಲದಿಂದ ಅವುಗಳನ್ನು ಹತ್ತಿಕ್ಕಿದರು. ಜನರಲ್ಲಿಯ ಅಸಂತೋಷವನ್ನು ಅಡಗಿಸಲಾಯಿತು. ಆದರೆ ಅದು ಸಂಪೂರ್ಣವಾಗಿ ನಷ್ಟವಾಗಲಿಲ್ಲ. ಅಸಂತೋಷದ ಈ ದಳ್ಳುರಿಯು 1857ರ ಸ್ವಾತಂತ್ರ್ಯ ಯುದ್ಧದಲ್ಲಿ ಹೊತ್ತಿಕೊಂಡಿತು. ಬ್ರಿಟಿಶ ಕಂಪನಿಯ ಅಧಿಪತ್ಯದ ವಿರುದ್ಧ ಅನೇಕ ಸ್ಥಳಗಳಲ್ಲಿ ದಂಗೆಗಳಾದವು. ಮದ್ದಿನ ಉಗ್ರಾಣದಲ್ಲಿ ಕಿಡಿಬಿದ್ದು ಅದರ ಭಯಂಕರ ಸ್ಫೋಟವಾದಂತಹ ಅವಸ್ಥೆಯಾಯಿತು ಭಾರತದಲ್ಲಿಯ ವಿವಿಧ ವರ್ಗಗಳಲ್ಲಿ ಹುದುಗಿಕೊಂಡಿದ್ದ ಅಸಂತೋಷವು ಈ ಹೋರಾಟದ ರೂಪದಲ್ಲಿ ಹೊರಹೊಮ್ಮಿತು ಹಾಗೂ ಅಭೂತಪೂರ್ವ ಸಶಸ್ತ್ರ ಬಂಡಾಯದ ರೂಪದಲ್ಲಿ ಅದು ಉದ್ರೇಗೊಂಡಿತು.

**1857 ಬಂಡಾಯದ ಕಾರಣಗಳು :** ಬ್ರಿಟಿಶಪೂರ್ವ ಕಾಲದಲ್ಲಿ ಭಾರತದಲ್ಲಿ ಅನೇಕ ಅರಸೊತ್ತಿಗೆಗಳು ಇದ್ದವು. ಅದರಲ್ಲಿ ಬದಲಾವಣೆಯಾದರೂ ಹಳ್ಳಿಯ ಜೀವನವು ಮೊದಲಿನಂತೆ ಮುಂದುವರಿಯಿತು. ಇಂಗ್ಲೀಷರು ಮಾತ್ರ ಪ್ರಚಲಿತ ವ್ಯವಸ್ಥೆಯನ್ನು ಬದಲಿಸಿ ಹೊಸ ವ್ಯವಸ್ಥೆಯನ್ನು ನಿರ್ಮಾಣ ಮಾಡುವ ಪ್ರಯತ್ನ ಮಾಡಿದರು. ಹಳ್ಳಿಯ ಜೀವನದ ಬದಲಾಗುತ್ತಿರುವ ರೂಪವನ್ನು ನೋಡಿ ಜನರ ಮನಸ್ಸಿನಲ್ಲಿ ಅಸ್ಥಿರತೆ ಮತ್ತು ಅಸುರಕ್ಷತೆಯ ಭಾವನೆ ನಿರ್ಮಾಣವಾಗಿತ್ತು.

**ಆರ್ಥಿಕ ಕಾರಣಗಳು :** ಇಂಗ್ಲೀಷರು ಆರ್ಥಿಕ ಆದಾಯವನ್ನು ಹೆಚ್ಚಿಸುವ ಸಲುವಾಗಿ ಹೊಸ ಕಂದಾಯ ಪದ್ಧತಿಯನ್ನು ಜಾರಿಗೆ ತಂದರು. ರೈತರ ಕಡೆಯಿಂದ ಒತ್ತಾಯದಿಂದ ಕರ ವಸೂಲಿ ಮಾಡಲಾಗುತ್ತಿತ್ತು. ಇದರಿಂದ ಕೃಷಿವ್ಯವಸ್ಥೆ ಕುಸಿದುಬಿದ್ದಿತು. ಇಂಗ್ಲಂಡಿನ ಮಾರುಕಟ್ಟೆಯಲ್ಲಿಯ ವಸ್ತುಗಳನ್ನು ಭಾರತದಲ್ಲಿ ಮಾರಾಟಮಾಡಿ ಆರ್ಥಿಕ ಲಾಭವನ್ನು ಪಡೆಯುವುದು ಬ್ರಿಟಿಶರ ನೀತಿಯಾಗಿತ್ತು. ಅವರು ಇಲ್ಲಿಯ ಉದ್ಯೋಗ ಧಂದೆಗಳ ಮೇಲೆ ಭಾರವಾದ ಕರಗಳನ್ನು ಹೇರಿದರು. ಭಾರತದಲ್ಲಿ ವಿಕಸಿತವಾದ ಹಸ್ತಕೌಶಲ್ಯ ಮತ್ತು ಬಟ್ಟೆಯ ಕೈಗಾರಿಕೆಯು ನಷ್ಟವಾಯಿತು. ಅನೇಕ ಭಾರತೀಯ ಕರಕುಶಲ ಕೆಲಸಗಾರರು ನಿರುದ್ಯೋಗಿಗಳಾದರು. ಇವರೆಲ್ಲರ ಮನಸ್ಸಿನಲ್ಲಿ ಇಂಗ್ಲೀಷರ ವಿರುದ್ಧ ಅಸಂತೋಷವು ಹೆಚ್ಚುತ್ತ ಹೋಯಿತು.

**ಸಾಮಾಜಿಕ ಕಾರಣಗಳು :** ಇಂಗ್ಲೀಷರು ತಮ್ಮ ರೀತಿ-ರೀತಿ, ರೂಢಿ-ಪರಂಪರೆಗಳಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆಂದು ಭಾರತೀಯರಿಗೆ ಅನಿಸತೊಡಗಿತು. ಸತಿಸಹಗಮನ ಪದ್ಧತಿ ನಿಷೇಧ ಕಾನೂನು ಮತ್ತು ವಿಧವಾ ವಿವಾಹ ಕಾನೂನುಗಳು ಸಾಮಾಜಿಕ ದೃಷ್ಟಿಯಿಂದ ಯೋಗ್ಯವಾಗಿದ್ದರೂ ಅವರು ತಮ್ಮ ಜೀವನ ಪದ್ಧತಿಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ತಿಳುವಳಿಕೆ ಭಾರತೀಯರಿಗಾಯಿತು. ಆದರಿಂದಾಗಿ ಅವರು ಅಸಂತುಷ್ಟರಾದರು.

**ರಾಜಕೀಯ ಕಾರಣಗಳು :** 1757ರಿಂದ ಇಂಗ್ಲೀಷರು ಅನೇಕ ಭಾರತೀಯ ರಾಜ್ಯಗಳನ್ನು ವಶಪಡಿಸಿಕೊಂಡಿದ್ದರು. ಮುಂದೆ ಡಾಲಹೌಸಿಯು ವಿವಿಧ ಕಾರಣಗಳಿಂದ ಅನೇಕ ಸಂಸ್ಥಾನಗಳನ್ನು ವಿಲೀನಗೊಳಿಸಿದನು. ದುರಾಡಳಿತದ ನೆಪವನ್ನು ಮುಂದೆ ಮಾಡಿ ಅಯೋಧ್ಯೆಯ ನವಾಬನನ್ನು ಪದಚ್ಯುತ ಗೊಳಿಸಿದನು. ಅಲ್ಲದೆ ಸಾತಾರಾ, ನಾಗಪೂರ, ಝಾಶಿ ಈ ಸಂಸ್ಥಾನಗಳಲ್ಲಿಯ ರಾಜರ ದತ್ತಕ ಪುತ್ರರ ಉತ್ತರಾಧಿಕಾರದ ಹಕ್ಕನ್ನು ಮನ್ನಿಸದೆ ಅವುಗಳನ್ನು ವಿಲೀನಗೊಳಿಸಿದನು. ಡಾಲಹೌಸಿಯ ಈ ನೀತಿಯಿಂದ ಭಾರತೀಯರಲ್ಲಿ ಅವಿಶ್ವಾಸದ ವಾತಾವರಣವು ಬೆಳೆಯುತ್ತ ಹೋಯಿತು.

**ಹಿಂದೀ ಸೈನಿಕರಲ್ಲಿಯ ಅಸಂತೋಷ :** ಹಿಂದೀ ಸೈನಿಕರನ್ನು ಬ್ರಿಟಿಶ ಅಧಿಕಾರಿಗಳು ತುಚ್ಛವಾಗಿ ನಡೆಸಿಕೊಳ್ಳುತ್ತಿದ್ದರು. ಸೈನ್ಯದಲ್ಲಿ ಸುಭೇದಾರ ಹುದ್ದೆಗಿಂತ ಮೇಲಿನ ಹುದ್ದೆಗಳನ್ನು ಅವರಿಗೆ ನೀಡಲಾಗುತ್ತಿರಲಿಲ್ಲ. ಬಿಳಿಯ ಸೈನಿಕರಿಗಿಂತ ಅವರ ಸಂಬಳವು ಕಡಿಮೆಯಾಗಿರುತ್ತಿತ್ತು. ಅವರಿಗೆ ಆರಂಭದಲ್ಲಿ ನೀಡಲಾಗುವ ಭತ್ತೆಗಳನ್ನು ಬ್ರಿಟಿಶರು ಬರಬರುತ್ತ ಕಡಿಮೆ ಮಾಡಿದರು. ಇಂಥ ಅನೇಕ ಕಾರಣಗಳಿಂದಾಗಿ ಹಿಂದೀ ಸೈನಿಕರಲ್ಲಿ ಅಸಂತೋಷ ಹೆಚ್ಚುತ್ತ ಹೋಯಿತು.

**ತಾತ್ಕಾಲಿಕ ಕಾರಣಗಳು :** ಬ್ರಿಟಿಶರು 1856ರಲ್ಲಿ ಹಿಂದೀ ಸೈನಿಕರಿಗೆ ದೂರದ ವರೆಗೆ ಹಾರುವ ಎನ್‌ಫೀಲ್ಡ್ ಬಂದೂಕುಗಳನ್ನು ಕೊಟ್ಟರು. ಅದರಲ್ಲಿಯ ಕಾಡತೂಸುಗಳ ಮೇಲಿನ ಆವರಣವನ್ನು ಹಲ್ಲುಗಳಿಂದ ಕಚ್ಚಿ ತೆಗೆಯಬೇಕಾಗುತ್ತಿತ್ತು. ಈ ಆವರಣಕ್ಕೆ ಆಕಳು ಮತ್ತು ಹಂದಿಯ ಕೊಬ್ಬನ್ನು ಸವರಲಾಗಿದೆ ಎನ್ನುವ ಸುದ್ದಿ ಎಲ್ಲ ಕಡೆಗೆ ಹರಡಿತು. ಅದರಿಂದಾಗಿ ಹಿಂದೂ-ಮುಸಲ್ಮಾನರ ಧಾರ್ಮಿಕ ಭಾವನೆಗಳಿಗೆ ನೋವುಂಟಾಗಿ ಸೈನಿಕರಲ್ಲಿ ಅಸಂತೋಷ ಹರಡಿತು.

**ಕಾಡ್ಗಿಚ್ಚು ಹೊತ್ತಿಕೊಂಡಿತು :** ಕೊಬ್ಬನ್ನು ಸವರಿದ ಕಾಡತೂಸುಗಳನ್ನು ಬಳಸಲು ಯಾವ ಸೈನಿಕರು ವಿರೋಧ ಮಾಡಿದರೋ ಅವರ ಮೇಲೆ ಶಿಸ್ತುಭಂಗದ ಕ್ರಮವನ್ನು ಕೈಕೊಳ್ಳಲಾಯಿತು. ಹಾಗೂ ಆ ಸೈನಿಕರಿಗೆ ಕಠೋರ ಶಿಕ್ಷೆಯನ್ನು



ಮಂಗಲ ಪಾಂಡೆ

ವಿಧಿಸಲಾಯಿತು. ಬರಾಕಪೂರ ಸೈನಿಕ ಠಾಣೆಯಲ್ಲಿಯ ಮಂಗಲ ಪಾಂಡೆಯವರು ಇಂಗ್ಲೀಷ ಅಧಿಕಾರಿಯ ಅನ್ಯಾಯದ ಕೃತ್ಯವನ್ನು ವಿರೋಧಿಸುವ ಭಾವನೆಯಿಂದ ಬ್ರಿಟಿಶ ಅಧಿಕಾರಿಯ ಮೇಲೆ ಗುಂಡು ಹಾರಿಸಿದರು. ಮಂಗಲ ಪಾಂಡೆಯವರನ್ನು ಬಂಧಿಸಿ ಗಲ್ಲಿಗೇರಿಸಲಾಯಿತು. ಈ ಸುದ್ದಿಯು ಕಾಡ್ಗಿಚ್ಚಿನಂತೆ ಎಲ್ಲ ಕಡೆಗೆ ಹರಡಿತು. ಮೇರಠ ದಂಡಿನಲ್ಲಿಯ ಸಂಪೂರ್ಣ ಹಿಂದೀ ಸೈನ್ಯಪಡೆಯೇ ದಂಗೆಯೆದ್ದಿತು.ಸೈನಿಕರು ದಿಲ್ಲಿಯ ಕಡೆಗೆ ಮುನ್ನುಗ್ಗಿದರು. ದಾರಿಯಲ್ಲಿ ಸಾವಿರಾರು ನಾಗರಿಕರು ಸ್ವಯಂ ಪ್ರೇರಿತರಾಗಿ ಅವರನ್ನು ಕೂಡಿಕೊಂಡರು. 12 ಮೇ 1857ರಂದು ಸೈನಿಕರು ದಿಲ್ಲಿಯನ್ನು ವಶಪಡಿಸಿಕೊಂಡರು. ಅವರು ಮುಘಲ ಬಾದಶಹ ಬಹಾದೂರಶಾಹ ಜಫರ ಇವರ ಕಡೆಗೆ ಬಂಡಾಯದ ನೇತೃತ್ವವನ್ನು ಒಪ್ಪಿಸಿದರು. ಅವರನ್ನು ಭಾರತದ ಸಮ್ರಾಟನೆಂದು ಡಂಗುರ ಸಾರಲಾಯಿತು.

**ಬಂಡಾಯದ ವ್ಯಾಪ್ತಿ :** ದಿಲ್ಲಿಯ ವಶಕ್ಕೆ ಬಂದ ತಕ್ಷಣ ಸೈನಿಕರ ಆತ್ಮವಿಶ್ವಾಸ ಹೆಚ್ಚಿತು. ಭಾರತದಲ್ಲಿ ಇತರ ಸ್ಥಳಗಳಲ್ಲಿರುವ ಸೈನಿಕರಿಗೂ ಇದರಿಂದಾಗಿ ಪ್ರೇರಣೆ ದೊರೆಯಿತು. ಶೀಘ್ರದಲ್ಲಿಯೇ ಬಂಡಾಯದ ಜ್ವಾಲೆ ಉತ್ತರ ಭಾರತದ ತುಂಬೆಲ್ಲ ಹರಡಿತು. ಬಿಹಾರದಿಂದ ರಾಜಪುತಾನಾದ ವರೆಗಿನ ಬ್ರಿಟಿಶ ಠಾಣೆಗಳಲ್ಲಿಯ ಹಿಂದೀ ಸೈನಿಕರು ಬಂಡಾಯದ ಪತಾಕೆಯನ್ನು ಹಾರಿಸಿದರು. ಲಖನೌ, ಅಲಹಾಬಾದ, ಕಾನಪೂರ, ಬನಾರಸ, ಬರೇಲಿ ಮತ್ತು ಝಾಶಿಗಳಲ್ಲಿ ದಂಗೆ ಆರಂಭವಾಯಿತು. ಮುಂದೆ ಈ ಜ್ವಾಲೆಯು ದಕ್ಷಿಣ ಭಾರತದಲ್ಲಿಯೂ ಪಸರಿಸಿತು. ನಾಗಪೂರ, ಸಾತಾರಾ, ಕೊಲ್ಹಾಪೂರ, ನರಗುಂದ ಇತ್ಯಾದಿ ಸ್ಥಳಗಳಲ್ಲಿ ಬಂಡಾಯಗಳಾದವು. ಸಾತಾರಾ ಛತ್ರಪತಿಗಳ ಉತ್ತರಾಧಿಕಾರಿಗಳಾದ ಶಹಾಜಿ ಪ್ರತಾಪಸಿಂಹ ಹಾಗೂ ಕಾರಭಾರಿ ರಂಗೋ ಬಾಪೂಜಿ, ಕೊಲ್ಹಾಪೂರದ ಚಿಮಾಸಾಹೇಬ ನರಗುಂದದ ಬಾಬಾಸಾಹೇಬ ಭಾವೆ, ಅಹಮದನಗರ ಜಿಲ್ಲೆಯ ಸಂಗಮನೇರ ಹತ್ತಿರದ ಭಾಗೋಜಿ ನಾಯಿಕ ಮುಂತಾದವರು ಈ ಹೋಟಾಟದಲ್ಲಿ ಅಗ್ರಭಾಗದಲ್ಲಿದ್ದರು. ನಾಶಿಕ ಜಿಲ್ಲೆಯಲ್ಲಿಯ ಪೇಠ, ಸುರಗಣಾದ ರಾಣಿಯವರಂತಹ ಸ್ತ್ರೀಯರೂ ಕೂಡ ಅದರಲ್ಲಿ ಭಾಗವಹಿಸಿದರು. 1857ರಲ್ಲಿ ಖಾನದೇಶದಲ್ಲಿ ಕಜಾರಸಿಂಗನ ನೇತೃತ್ವದಲ್ಲಿ ಭಿಲ್ಲರು ಬಂಡೆದ್ದರು, ಸಾತಪುಡಾ ಪರಿಸರದಲ್ಲಿ ಶಂಕರಶಾಹಾ ಇವರು ಬಂಡಾಯದ ನೇತೃತ್ವವಹಿಸಿದರು. ಖಾನದೇಶದಲ್ಲಿಯ ಬಂಡಾಯದಲ್ಲಿ ನಾಲ್ಕುನೂರು ಭಿಲ್ಲ ಸ್ತ್ರೀಯರು ಭಾಗವಹಿಸಿದ್ದರು.

**ಬಂಡಾಯದ ನೇತೃತ್ವ :** 18ನೆಯ ಶತಮಾನದಲ್ಲಿ ಮುಘಲ ಸಾಮ್ರಾಜ್ಯವು ದುರ್ಬಲವಾದ ನಂತರ ನಾದಿರಶಾಹ, ಅಬ್ದಾಲಿಗಳಂತಹ ಪರಕೀಯರು ಹಿಂದುಸ್ಥಾನದ ಮೇಲೆ ಆಕ್ರಮಣ ಮಾಡಲು ಆರಂಭಿಸಿದರು. ಮುಘಲ ಸಾಮ್ರಾಜ್ಯವು ವಿರೋಧ ಮಾಡಲಾರದು ಎಂಬುದು ಗಮನಕ್ಕೆ ಬಂದ ಮೇಲೆ ಮರಾಠರು ಪರಕೀಯ ಆಕ್ರಮಣದಿಂದ ಹಿಂದುಸ್ಥಾನದ ರಕ್ಷಣೆಯ ಜವಾಬ್ದಾರಿಯನ್ನು ಸ್ವತಃ ವಹಿಸಿದರು. ಅದೇ ಹೊಣೆಗಾರಿಕೆಯಿಂದ ಮರಾಠರು ಪಾನೀಪತದಲ್ಲಿ ಅಬ್ದಾಲಿಯ ವಿರುದ್ಧ ಹೋರಾಡಿದರು. 1857ರ ಸ್ವಾತಂತ್ರ್ಯ ಯುದ್ಧದಲ್ಲಿ ಮುಘಲ ಸಾಮ್ರಾಜ್ಯದ ಉತ್ತರಾಧಿಕಾರಿಯಾದ ಬಹಾದೂರಶಾಹ ಇಂಗ್ಲೀಷರ ವಿರುದ್ಧ ಹೋರಾಡಲು ಅಸಮರ್ಥನಾಗಿದ್ದಾನೆಂಬುದು ಲಕ್ಷ್ಯಕ್ಕೆ ಬಂದ ನಂತರ ಬಹಾದೂರ ಶಾಹನ ನೇತೃತ್ವವನ್ನು ಮನ್ನಿಸಿ ನಾನಾಸಾಹೇಬ ಪೇಶವೆ, ಝಾಶಿಯ ರಾಣಿ ಲಕ್ಷ್ಮೀಬಾಯಿ ಮತ್ತು ತಾತ್ಯಾಟೋಪೆ ಇವರು 1857ರ ಸ್ವಾತಂತ್ರ್ಯ ಯುದ್ಧದ ಸೂತ್ರಗಳನ್ನು ತಮ್ಮ ಕೈಗೆ ತೆಗೆದುಕೊಂಡರು. ಇದರ ಪರಿಣಾಮವಾಗಿ ಈ ಸ್ವಾತಂತ್ರ್ಯ ಹೋರಾಟದಲ್ಲಿ ಹಿಂದೂ-ಮುಸ್ಲಿಮ ಬಾಂಧವರಲ್ಲಿ ಐಕ್ಯತೆ ಉಂಟಾದದ್ದು ಕಂಡು ಬರುತ್ತದೆ. ಮೌಲವಿ ಅಹಮದ ಉಲ್ಲಾ, ಕುಂವರಸಿಂಹ, ಮುಘಲ ಸೇನಾಪತಿ ಬಖ್ತಖಾನ, ಬೇಗಮ ಹಜರತ ಮಹಲ ಇವರು ವಿವಿಧ ಸ್ಥಳಗಳಲ್ಲಿ ಬಂಡಾಯದ ನೇತೃತ್ವ ವಹಿಸಿದರು. ದಿಲ್ಲಿ, ಕಾನಪೂರ, ಲಖನೌ, ಝಾಶಿ ಹಾಗೂ ಪಶ್ಚಿಮ ಬಿಹಾರಗಳಲ್ಲಿಯ ಬಂಡಾಯದ ಸ್ವರೂಪವು ವಿಶೇಷ ಉಗ್ರವಾಗಿತ್ತು.



ನಾನಾಸಾಹೇಬ ಪೇಶವೆ



ತಾತ್ಯಾಸಾಹೇಬ ಟೋಪೆ




ರಾಣಿ ಲಕ್ಷ್ಮೀಬಾಯಿ



ಬೇಗಮ ಹಜರತ ಮಹಲ



ಕುಂವರಸಿಂಹ




**ದಮನ :** ಭಾರತೀಯರು ಇಂಗ್ಲೀಷರೊಡನೆ ಜೀವದ ಹಂಗು ತೊರೆದು ಹೋರಾಡಿದರು. ಇದರಲ್ಲಿ ಸೈನಿಕರು, ಜಮೀನುದಾರರು, ಅರಸರು, ಸೇನಾಪತಿಗಳು ಮತ್ತು ಸಾಮಾನ್ಯ ಜನರು ಕೂಡ ಇದ್ದರು. ಹಿಂದೀ ಸೈನಿಕರ ನಿಯೋಜಿತ ವೇಳೆಯ ಮೊದಲೇ ಬಂಡಾಯ ಆರಂಭವಾಯಿತು. ಆರಂಭದಲ್ಲಿ ಹಿಂದೀ ಸೈನಿಕರಿಗೆ ಯಶಸ್ಸು ದೊರೆಯುತ್ತ ಹೋಯಿತು. ಆದರೆ ಇಂಗ್ಲೀಷರ ಅಧಿಪತ್ಯದ ಸೈನಿಕರ ಸಂಖ್ಯೆ ಮತ್ತು ಆಡಳಿತದ ಶಕ್ತಿ ತುಂಬಾ ದೊಡ್ಡದಾಗಿತ್ತು. ಇಂಗ್ಲೀಷರು ಕೂಡ ಸಾಮ, ದಾಮ, ದಂಡ, ಭೇದ ಈ ನೀತಿಯನ್ನು ಅನುಸರಿಸಿ ಬಂಡಾಯವನ್ನು ದಮನಗೊಳಿಸಿದರು. ಈ ಆಘಾತದಿಂದ ಇಂಗ್ಲೀಷರು ಬೇಗನೆ ಸುಧಾರಿಸಿಕೊಂಡರು. ಹಾಗೂ ಮುಂದಿನ ಆರು ತಿಂಗಳಲ್ಲಿಯೇ ಕಳೆದುಕೊಂಡ ಸ್ಥಳಗಳನ್ನು ಮರಳಿ ವಶಪಡಿಸಿಕೊಂಡರು. ರಾಣಿ ಲಕ್ಷ್ಮೀಬಾಯಿ, ಕುಂವರಸಿಂಹ, ಅಹಮದಉಲ್ಲಾ ಇವರು ವೀರಮರಣವನ್ನಪ್ಪಿದರು. ಬಹಾದೂರ ಶಾಹನನ್ನು ರಂಗೂನ ಸೆರೆಮನೆಯಲ್ಲಿಡಲಾಯಿತು. ನಾನಾಸಾಹೇಬ ಮತ್ತು ಬೇಗಮ ಹಜರತ ಮಹಲ ಇವರು ನೇಪಾಳದಲ್ಲಿ ಆಶ್ರಯ ಪಡೆದರು. ತಾತ್ಯಾ ಟೋಪೆಯವರು ಹತ್ತು ತಿಂಗಳ ವರೆಗೆ ಇಂಗ್ಲೀಷರ ವಿರುದ್ಧ ಹೋರಾಟವನ್ನು ಮುಂದುವರಿಸಿದರು. ಆದರೆ ಕಪಟ ಕಾರಸ್ಥಾನದಿಂದ ಅವರನ್ನು ಸೆರೆಹಿಡಿಯಲಾಯಿತು. ಅವರು ಗಲ್ಲಿಗೇರಬೇಕಾಯಿತು. ಈ ರೀತಿ 1858ರ ಕೊನೆಯಲ್ಲಿ ಬ್ರಿಟಿಶರು ಈ ಹೋರಾಟವನ್ನು ಕಠೋರವಾಗಿ ಹತ್ತಿಕ್ಕಿದರು.

ಹಿಂದೀ ಸೈನಿಕರಲ್ಲಿಯ ಅಸಂತೋಷದಿಂದಾಗಿ ಬಂಡಾಯದ ಆರಂಭವಾದರೂ ಮುಂದೆ ಅದರಲ್ಲಿ ರೈತರು



ಬಹಾದ್ದೂರಶಾಹಾ ಜಫರ

ಕರಕುಶಲ ಕೆಲಸಗಾರರು, ಜನಸಾಮಾನ್ಯರು, ಆದಿವಾಸಿಗಳು ಕೂಡ ಇಂಗ್ಲೀಷರ ವಿರುದ್ಧ ಒಂದಾದರು. ಈ ಅನ್ಯಾಯಕಾರಕ ಅಧಿಪತ್ಯವನ್ನು ಸೋಲಿಸುವ ಸಲುವಾಗಿ ಸರ್ವ ಭಾರತೀಯರು ಈ ಯುದ್ಧವನ್ನು ಮಾಡಿದರು. ಈ ಯುದ್ಧದಲ್ಲಿ ಹಿಂದೂ, ಮುಸಲ್ಮಾನ ಹಾಗೂ ವಿವಿಧ ಜಾತಿ-ಪಂಗಡಗಳ ಜನರು ಸಾಮರ್ಥ್ಯದಿಂದ ಹೋರಾಡಿದರು. ಇಂಗ್ಲೀಷರನ್ನು ಭಾರತದಿಂದ ಉಚ್ಚಾಟನೆ ಮಾಡುವುದು ಅವರ ಸಮಾನ ಧ್ಯೇಯವಾಗಿತ್ತು. ಇದರ ಹಿಂದೆ ಸ್ವಾತಂತ್ರ್ಯದ ಪ್ರೇರಣೆಯಿತ್ತು. ಆದ್ದರಿಂದಲೇ ಈ ಹೋರಾಟಕ್ಕೆ ವ್ಯಾಪಕ ರಾಷ್ಟ್ರೀಯ ಸ್ವರೂಪ ಪ್ರಾಪ್ತವಾಯಿತು.

**ಬಂಡಾಯವು ಅಯಶಸ್ವಿಯಾಗುವ ಕಾರಣಗಳು :** 1857ರ ಹೋರಾಟವು ಕೆಳಗಿನ ಕಾರಣಗಳಿಂದ ಅಯಶಸ್ವಿಯಾಯಿತು.

- **ಬಂಡಾಯದ ಪ್ರಸಾರವು ಭಾರತದ ತುಂಬೆಲ್ಲ ಆಗಲಿಲ್ಲ :** ಈ ಬಂಡಾಯವು ಸಂಪೂರ್ಣ ಭಾರತದಲ್ಲಿ ಏಕಕಾಲಕ್ಕೆ ಆಗಲಿಲ್ಲ. ಉತ್ತರ ಭಾರತದಲ್ಲಿ ಹೋರಾಟದ ತೀವ್ರತೆ ಅಧಿಕವಾಗಿತ್ತು. ಉತ್ತರದ ಕಡೆಯ ರಾಜಪುತಾನಾ, ಪಂಜಾಬ, ಬಂಗಾಲದ ಕೆಲವು ಭಾಗ, ಈಶಾನ್ಯ ಭಾರತ ಈ ಪ್ರದೇಶಗಳು ಹೋರಾಟದಿಂದ ಅಲಿಪ್ತವಾಗಿ ಉಳಿದವು.

- **ಸರ್ವಸಮ್ಮತ ನೇತಾರನ ಅಭಾವ :** ಬಂಡಾಯದಲ್ಲಿ ಭಾರತೀಯ ಮಟ್ಟದಲ್ಲಿ ಇಂಗ್ಲಿಷರ ವಿರೋಧದಲ್ಲಿ ಸರ್ವಸಮ್ಮತ ನೇತೃತ್ವ ನಿರ್ಮಾಣವಾಗಲಿಲ್ಲ. ಆದರಿಂದಾಗಿ ಇಂಗ್ಲೀಷರ ವಿರೋಧದಲ್ಲಿ ಏಕರೂಪತೆ ಉಳಿಯಲಿಲ್ಲ.

- **ರಾಜ-ಮಹಾರಾಜರ ಬೆಂಬಲದ ಅಭಾವ :** ಬ್ರಿಟಿಶ ಅಧಿಪತ್ಯದಿಂದ ಸಾಮಾನ್ಯ ಜನರ ಜೊತೆಗೆ ಸಂಸ್ಥಾನಿಕರಿಗೂ ತೊಂದರೆಯಾಗುತ್ತಿತ್ತು. ಸಂಸ್ಥಾನಿಕರಲ್ಲಿ ಕೆಲವರನ್ನು ಬಿಟ್ಟರೆ ಉಳಿದವರು ಇಂಗ್ಲೀಷರೊಡನೆ ಏಕನಿಷ್ಠರಾಗಿ ಉಳಿದರು.

- **ಸೈನಿಕರಲ್ಲಿ ಯುದ್ಧಕೌಶಲ್ಯದ ಅಭಾವ :** ಭಾರತೀಯ ಸೈನಿಕರಲ್ಲಿ ಶೌರ್ಯವಿತ್ತು, ಆದರೆ ಯೋಗ್ಯ ಸಮಯದಲ್ಲಿ ಯೋಗ್ಯ ವ್ಯೂಹ ರಚನೆಯನ್ನು ಮಾಡಲು ಅವರಿಗೆ ಸಾಧ್ಯವಾಗಲಿಲ್ಲ. ದಿಲ್ಲಿಯನ್ನು ಗೆದ್ದ ನಂತರ ಅದನ್ನು ಉಳಿಸಿಕೊಳ್ಳಲಾಗಲಿಲ್ಲ. ಅದರಂತೆ ಬಂಡಾಯಗಾರರ ಹತ್ತಿರ ಸಾಕಷ್ಟು ಶಸ್ತ್ರಾಸ್ತ್ರಗಳಿರಲಿಲ್ಲ. ಇಂಗ್ಲೀಷರ ಕಡೆಗೆ ಪ್ರಚಂಡ ಆರ್ಥಿಕ ಬಲ, ಶಿಸ್ತುಬದ್ಧ ಸೈನ್ಯ, ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಮತ್ತು ಅನುಭವಿ ಸೇನಾನಿಗಳು ಇದ್ದರು. ಸಂಪರ್ಕದ ಸಾಧನಗಳು ಅವರ ಸ್ವಾಧೀನದಲ್ಲಿದ್ದುದರಿಂದ ತ್ವರಿತ ಸಂಪರ್ಕ ಸಾಧಿಸಲಾಗುತ್ತಿತ್ತು ಹಾಗೂ ಸೈನ್ಯವನ್ನು ಶೀಘ್ರ ಸ್ಥಳಾಂತರಿಸಲಾಗುತ್ತಿತ್ತು. ಇದರಿಂದಾಗಿ ಅವರ ಮುಂದೆ ಭಾರತೀಯ ಸೈನಿಕರು ಹತಬಲರಾದರು. ಯುದ್ಧಗಳನ್ನು ಕೇವಲ ಶೌರ್ಯದಿಂದಲ್ಲ, ಯುದ್ಧಕೌಶಲ್ಯದಿಂದಲೂ ಗೆಲ್ಲಬೇಕಾಗುತ್ತದೆ.

- **ಆಂತರರಾಷ್ಟ್ರೀಯ ಪರಿಸ್ಥಿತಿ ಇಂಗ್ಲೀಷರಿಗೆ ಅನುಕೂಲ:** ಇಂಗ್ಲಂಡ-ರಶಿಯಾಗಳ ನಡುವೆ ನಡೆದ ಕ್ರಿಮಿಯನ್ ಯುದ್ಧವು ಈಗತಾನೆ ಮುಗಿದಿತ್ತು. ಅದರಲ್ಲಿ ಇಂಗ್ಲೀಷರಿಗೆ ಜಯ ದೊರಕಿತ್ತು. ಜಗತ್ತಿನ ಅನೇಕ ದೇಶಗಳೊಡನೆ ಅವರ ವ್ಯಾಪಾರವಿತ್ತು. ಇಂಗ್ಲೀಷರ ನೌಕಾದಳದ ಸಾಮರ್ಥ್ಯವು ಪ್ರಚಂಡವಾಗಿತ್ತು. ಇದಕ್ಕೆ ವಿರುದ್ಧವಾದ ಪರಿಸ್ಥಿತಿ ಬಂಡಾಯಗಾರರದಾಗಿತ್ತು.

## ಸ್ವಾತಂತ್ರ್ಯ ಹೋರಾಟದ ಪರಿಣಾಮಗಳು

**ಈಸ್ಟ ಇಂಡಿಯಾ ಕಂಪನಿಯ ಆಡಳಿತವು ಕೊನೆಗೊಂಡಿತು:** ಕಂಪನಿಯ ಆಡಳಿತದಿಂದಾಗಿ ಭಾರತೀಯರ ಅಸಂತೋಷದಲ್ಲಿ ಹೆಚ್ಚಳವಾಗುತ್ತ ಹೋಯಿತು. ಆದರಿಂದಾಗಿಯೇ ಬ್ರಿಟಿಶ ಅಧಿಪತ್ಯವು 1857ರ ಬಂಡಾಯದ ಆಹ್ವಾನವನ್ನು ಎದುರಿಸಬೇಕಾಯಿತು. ಇದರ ಅರಿವು ಇಂಗ್ಲಂಡಿನ ರಾಣಿಗಾಯಿತು. ಭಾರತದಲ್ಲಿಯ ಬ್ರಿಟಿಶ ಆಡಳಿತವು ಕಂಪನಿಯ ಕೈಯಲ್ಲಿ ಸುರಕ್ಷಿತವಾಗಿಲ್ಲವೆಂದು ಅನಿಸಿದ್ದರಿಂದ 1858ರಲ್ಲಿ ಬ್ರಿಟಿಶ ಪಾರ್ಲಿಮೆಂಟು ಕಾನೂನು ಪಾಸು ಮಾಡಿ ಈಸ್ಟ ಇಂಡಿಯಾ ಕಂಪನಿಯ ಆಡಳಿತವನ್ನು ವಿಸರ್ಜಿತಗೊಳಿಸಲಾಯಿತು. ಗವ್ವರ್ನರ ಜನರಲ್ ಈ ಪದವನ್ನು ರದ್ದುಪಡಿಸಿ ವೈಸರಾಯ ಎಂಬ ಪದವನ್ನು ನಿರ್ಮಾಣ ಮಾಡಲಾಯಿತು. ಲಾರ್ಡ ಕ್ಯಾನಿಂಗ ಇವನು ಕೊನೆಯ ಗವ್ವರ್ನರ ಜನರಲ್ ಮತ್ತು ಪ್ರಥಮ ವೈಸರಾಯನಾದನು. ಭಾರತದ ಬಗೆಗಿನ ಆಡಳಿತವನ್ನು ನೋಡಿಕೊಳ್ಳುವ ಸಲುವಾಗಿ ಭಾರತ ಮಂತ್ರಿ ಎಂಬ ಪದವನ್ನು ಇಂಗ್ಲಂಡ ಸರಕಾರದಲ್ಲಿ ನಿರ್ಮಾಣ ಮಾಡಲಾಯಿತು.

**ರಾಣಿಯ ಜಾಹೀರುನಾಮೆ :** ಇಂಗ್ಲಂಡಿನ ರಾಣಿ ವ್ಹಿಕ್ಟೋರಿಯಾ ಇವಳು ಭಾರತೀಯರನ್ನುದ್ದೇಶಿಸಿ ಒಂದು ಜಾಹಿರುನಾಮೆಯನ್ನು ಹೊರಡಿಸಿದಳು. ಎಲ್ಲ ಭಾರತೀಯರು ನಮ್ಮ ಪ್ರಜೆಗಳಾಗಿದ್ದಾರೆ. ವಂಶ, ಧರ್ಮ, ಜಾತಿ ಇಲ್ಲವೆ ಜನ್ಮಸ್ಥಳಗಳ ಮೇಲಿಂದ ಪ್ರಜೆಗಳಲ್ಲಿ ಭೇದಭಾವ ಮಾಡಲಾಗುವುದಿಲ್ಲ. ಪ್ರತಿಭೆಯ ಆಧಾರದ ಮೇಲೆ ಸರಕಾರಿ ನೌಕರಿಗಳನ್ನು ನೀಡಲಾಗುವುದು. ಧಾರ್ಮಿಕ ವಿಷಯಗಳಲ್ಲಿ ಯಾವುದೇ ರೀತಿಯ ಹಸ್ತಕ್ಷೇಪ ಮಾಡುವುದಿಲ್ಲ. ಸಂಸ್ಥಾನಿಕರ ಜೊತೆ ಮಾಡಿಕೊಂಡ ಕರಾರುಗಳನ್ನು ಪಾಲಿಸಲಾಗುವುದು. ಅದರಂತೆ ಸಂಸ್ಥಾನಗಳನ್ನು ಯಾವುದೇ ಕಾರಣಕ್ಕಾಗಿ ವಿಲೀನಗೊಳಿಸಲಾಗುವುದಿಲ್ಲ. ಎಂಬ ಭರವಸೆಯನ್ನು ಈ ಜಾಹಿರುನಾಮೆಯಲ್ಲಿ ನೀಡಲಾಯಿತು.

**ಭಾರತೀಯ ಸೈನ್ಯದ ಪುನರ್‌ರಚನೆ :** ಸೈನ್ಯದಲ್ಲಿಯ ಇಂಗ್ಲೀಷ ಸೈನ್ಯದ ಪ್ರಮಾಣವನ್ನು ಹೆಚ್ಚಿಸಲಾಯಿತು. ಮಹತ್ವದ ಸ್ಥಳಗಳಲ್ಲಿ ಇಂಗ್ಲೀಷ ಅಧಿಕಾರಿಗಳ ನೇಮಕ ಮಾಡಲಾಯಿತು. ಫಿರಂಗಿ ಪಡೆಯನ್ನು ಸಂಪೂರ್ಣವಾಗಿ ಇಂಗ್ಲೀಷ ಅಧಿಕಾರಿಗಳ ಆಧೀನದಲ್ಲಿಡಲಾಯಿತು. ಸೈನಿಕರ ಪಡೆಗಳನ್ನು ಜಾತಿಯ ಆಧಾರ ಮೇಲೆ ವಿಭಾಗಿಸಲಾಯಿತು. ಭಾರತೀಯ ಸೈನಿಕರು ಒಂದೆಡೆ ಬಂದು ಇಂಗ್ಲೀಷ ಅಧಿಪತ್ಯದ ವಿರುದ್ಧ ದಂಗೆಯೇಳದಂತೆ ಕಾಳಜಿ ವಹಿಸಲಾಯಿತು.

**ಧೋರಣಾತ್ಮಕ ಬದಲಾವಣೆಗಳು :** ಭಾರತೀಯರ ಸಾಮಾಜಿಕ ಮತ್ತು ಧಾರ್ಮಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲವೆಂಬ ಧೋರಣೆಯನ್ನು ಇಂಗ್ಲೀಷರು ಸ್ವೀಕರಿಸಿದರು. ಅದರ ಜೊತೆಗೆ ಭಾರತೀಯ ಸಮಾಜವು ಸಾಮಾಜಿಕ ದೃಷ್ಟಿಯಿಂದ ಸಂಘಟಿತವಾಗಬಾರದೆಂಬ ದೃಷ್ಟಿಯಿಂದ ಕಾಳಜಿ ವಹಿಸಲು ಆರಂಭಿಸಿದರು. ಭಾರತೀಯರಲ್ಲಿ ಜಾತಿ, ಧರ್ಮ, ವಂಶ, ಪ್ರದೇಶಗಳ ಕಾರಣದ ಮೇಲಿಂದ ಯಾವಾಗಲೂ ಸಂಘರ್ಷ ನಿರ್ಮಾಣವಾಗಬೇಕು, ಪರಸ್ಪರರ ವಿಷಯದಲ್ಲಿ ಭಾರತೀಯರ ಮನಸ್ಸು ಕಲುಷಿತವಾಗಬೇಕು. ಎಂಬ ಧೋರಣೆಯನ್ನು ಅವರು ಅನುಸರಿಸತೊಡಗಿದರು. 'ವಿಭಜಿಸಿ ಆಳು' ಎಂಬುದು ಬ್ರಿಟಿಶ ರಾಜ್ಯದ ಸೂತ್ರವಾಗಿತ್ತು.

1857ರ ಸ್ವಾತಂತ್ರ್ಯ ಹೋರಾಟದಿಂದಾಗಿ ಇಂಗ್ಲೀಷ ರಾಜಪ್ರಭುತ್ವವನ್ನು ಸಂಘಟಿತರಾಗಿ ವಿರೋಧಿಸಬೇಕು ಎಂದು ಭಾರತೀಯರಿಗೆ ಅನಿಸತೊಡಗಿತು. 1857ರ ಸ್ವಾತಂತ್ರ್ಯ ಸಂಗ್ರಾಮವು ಭಾರತೀಯ ಸ್ವಾತಂತ್ರ್ಯ ಚಳುವಳಿಗೆ ಪ್ರೇರಣೆ ನೀಡಿತು.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(ಉಮಾಜಿ ನಾಯಿಕ, ಸ್ವಾತಂತ್ರ್ಯಸಮರ, ಲಾರ್ಡ್ ಡಾಲಹೌಸಿ, ಭಾರತ ಮಂತ್ರಿ, ತಾತ್ಯಾ ಟೋಪೆ)

(1) ಸ್ವಾತಂತ್ರ್ಯವೀರ ಸಾವರಕರ ಇವರು 1857ರ ಹೋರಾಟಕ್ಕೆ .......... ಎಂಬ ಹೆಸರು ನೀಡಿದರು.

(2) ರಾಮೋಶಿ ಬಾಂಧವರನ್ನು ಸಂಘಟಿತಗೊಳಿಸಿ .......... ಇವರು ಇಂಗ್ಲೀಷರ ವಿರುದ್ಧ ಬಂಡೆದ್ದರು.

(3) 1857ರ ಬಂಡಾಯದ ನಂತರ ಭಾರತದ ಬಗೆಗಿನ ಆಡಳಿತವನ್ನು ನೋಡಿಕೊಳ್ಳುವ ಸಲುವಾಗಿ .......... ಎಂಬ ಪದವನ್ನು ಇಂಗ್ಲಂಡ ಸರಕಾರದಲ್ಲಿ ನಿರ್ಮಾಣ ಮಾಡಲಾಯಿತು.

(4) ........... ಈ ಗವ್ಹರ್ನರ ಜನರಲ್‌ನು ಭಾರತದಲ್ಲಿಯ ಸಂಸ್ಥಾನಗಳನ್ನು ವಿಲೀನಗೊಳಿಸಿದನು.

(5) ಇಂಗ್ಲೀಷರು ಭಾರತೀಯ ಉದ್ಯೋಗ ಧಂದೆಗಳ ಮೇಲೆ ಭಾರವಾದ ಕರಗಳನ್ನು ಹೇರಿದರು.

**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ವಿವರಿಸಿರಿ.**

(1) ಪಾಯಿಕರು ಇಂಗ್ಲೀಷರ ವಿರುದ್ಧ ಸಶಸ್ತ್ರ ದಂಗೆಯೆದ್ದರು.

(2) ಹಿಂದೂ ಮತ್ತು ಮುಸಲ್ಮಾನ ಸೈನಿಕರಲ್ಲಿ ಅಸಂತೋಷ ಹರಡಿತು.

(3) ಇಂಗ್ಲೀಷ ಸೈನ್ಯದ ಮುಂದೆ ಭಾರತೀಯ ಸೈನಿಕರು ಹತಬಲರಾದರು

(4) ಸ್ವಾತಂತ್ರ್ಯ ಹೋರಾಟದ ನಂತರ ಭಾರತೀಯ ಸೈನಿಕರ ಪಡೆಗಳನ್ನು ಜಾತಿಯ ಆಧಾರದ ಮೇಲೆ ವಿಭಾಗಿಸಲಾಯಿತು.

**3. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) 1857ರ ಸ್ವಾತಂತ್ರ್ಯ ಹೋರಾಟದ ಹಿಂದೆ ಯಾವ ಸಾಮಾಜಿಕ ಕಾರಣಗಳಿದ್ದವು ?

(2) 1857ರ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರು ಏಕೆ ಅಯಶಸ್ವಿಯಾದರು ?

(3) 1857ರ ಸ್ವಾತಂತ್ರ್ಯ ಹೋರಾಟದ ಪರಿಣಾಮಗಳನ್ನು ಬರೆಯಿರಿ.

(4) 1857ರ ಸ್ವಾತಂತ್ರ್ಯ ಹೋರಾಟದ ನಂತರ ಇಂಗ್ಲೀಷರು ಯಾವ ಧೋರಣಾತ್ಮಕ ಬದಲಾವಣೆಗಳನ್ನು ಮಾಡಿದರು?

**ಉಪಕ್ರಮ**

(1) ಸ್ವಾತಂತ್ರ್ಯವೀರ ಸಾವರಕರ ಇವರು ಬರೆದ '1857 ಚೆ ಸ್ವಾತಂತ್ರ್ಯ ಸಮರ ಈ ಪುಸ್ತಕವನ್ನು ಪಡೆದು ಓದಿರಿ.

(2) ಭಾರತದ ಬಾಹ್ಯರೇಷಾ ನಕಾಶದಲ್ಲಿ 1857ರ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ತೋರಿಸಿರಿ.

ALGU35

# 5. ಸಾಮಾಜಿಕ ಮತ್ತು ಧಾರ್ಮಿಕ ಪುನರುಜ್ಜೀವನ


ಇಂಗ್ಲೀಷ ಶಿಕ್ಷಣದ ಪ್ರಸಾರದ ಜೊತೆಗೆ ಹೊಸ ವಿಚಾರ, ಹೊಸ ಕಲ್ಪನೆ, ಹೊಸ ತತ್ವಜ್ಞಾನ ಇವುಗಳ ಪ್ರಸಾರವಾಯಿತು. ಅದರಂತೆ ಪಾಶ್ಚಿಮಾತ್ಯ ವಿಚಾರ, ಸಂಸ್ಕೃತಿ ಇವುಗಳ ಪರಿಚಯವು ಭಾರತೀಯರಿಗಾಯಿತು. ಇದರಿಂದಾಗಿ ಭಾರತೀಯ ಸಮಾಜದ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಂಸ್ಕೃತಿಕ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿ ಬದಲಾವಣೆಗಳುಂಟಾದವು.

ಭಾರತೀಯ ಸಮಾಜದಲ್ಲಿಯ ಅಂಧಶ್ರದ್ಧೆ, ರೂಢಿಪ್ರಿಯತೆ, ಜಾತಿಭೇದ, ಉಚ್ಚ-ನೀಚ ಭೇದಭಾವದ ಭ್ರಾಮಕ ಕಲ್ಪನೆಗಳು, ವಿಮರ್ಶಾತ್ಮಕ ಪ್ರವೃತ್ತಿಯ ಅಭಾವಗಳಿಂದಾಗಿ ಅದು ಹಿಂದುಳಿದಿದೆಯೆಂಬುದರ ಅರಿವು ಸುಶಿಕ್ಷಿತ ಸಮಾಜದಲ್ಲಿ ಉಂಟಾಗತೊಡಗಿತು. ದೇಶವನ್ನು ಪ್ರಗತಿಪಥದಲ್ಲಿ ಸಾಗಿಸುವ ಸಲುವಾಗಿ ಭಾರತೀಯ ಸಮಾಜದಲ್ಲಿಯ ದೋಷಗಳನ್ನು ಮತ್ತು ಅನಿಷ್ಟ ಪ್ರವೃತ್ತಿಗಳನ್ನು ನಿರ್ಮೂಲನಗೊಳಿಸಿ ಮಾನವತೆ, ಸಮಾನತೆ, ಬಂಧುತ್ವ ಈ ತತ್ವಗಳ ಮೇಲೆ ಆಧಾರಿತವಾದ ಹೊಸ ಸಮಾಜವನ್ನು ನಿರ್ಮಾಣ ಮಾಡುವ ಅವಶ್ಯಕತೆ ಇತ್ತು. ಭಾರತೀಯ ಸಮಾಜದಲ್ಲಿಯ ವಿವಿಧ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಸುಶಿಕ್ಷಿತ ವಿಚಾರವಂತರು ತಮ್ಮ ಬರವಣಿಗೆಯ ಮೂಲಕ ಜನಜಾಗೃತಿಯನ್ನುಂಟುಮಾಡತೊಡಗಿದರು. ತತ್ಕಾಲೀನ ಭಾರತದಲ್ಲಿ ಆರಂಭವಾದ ಈ ವೈಚಾರಿಕ ಜಾಗೃತಿಗೆ 'ಭಾರತೀಯ ಪುನರುಜ್ಜೀವನ' ಎಂದು ಕರೆಯುತ್ತಾರೆ.

## ಧರ್ಮ ಸುಧಾರಣೆ ಮತ್ತು ಸಮಾಜ ಸುಧಾರಣೆಯ ಪರ್ವ

**ಬ್ರಾಹ್ಮೋ ಸಮಾಜ:** ರಾಜಾ ರಾಮಮೋಹನ ರಾಯ ಇವರು ಕ್ರಿ.ಶ 1828ರಲ್ಲಿ ಬಂಗಾಲ ಪ್ರಾಂತದಲ್ಲಿ ಬ್ರಾಹ್ಮೋ ಸಮಾಜದ ಸ್ಥಾಪನೆ ಮಾಡಿದರು. ಅವರು ಅನೇಕ ಭಾಷೆ ಮತ್ತು ಧರ್ಮಗಳ ಅಭ್ಯಾಸ ಮಾಡಿದ್ದರು. ಇದರಿಂದಲೇ ಅವರಲ್ಲಿ ಅದ್ವೈತವಾದಿ ವಿಚಾರಸರಣಿಯು ವಿಕಸಿತ ವಾಯಿತು. ಏಕೇಶ್ವರವಾದ ಉಚ್ಚ-ನೀಚ ಭೇದಭಾವ ವನ್ನು ಪಾಲಿಸದಿರುವುದು, ಕರ್ಮಕಾಂಡಕ್ಕೆ ವಿರೋಧ, ಪ್ರಾರ್ಥನೆಯ ಮಾರ್ಗವನ್ನು ಅನುಸರಿಸುವುದು-ಇವು ಬ್ರಾಹ್ಮೋ ಸಮಾಜದ ತತ್ವಗಳಾಗಿದ್ದವು. ರಾಜಾ ರಾಮಮೋಹನ ರಾಯ ಇವರು ಸತಿ ಸಹಗಮನ ಪದ್ಧತಿ, ಬಾಲವಿವಾಹ, ಪರದಾ ಪದ್ಧತಿ ಇವುಗಳನ್ನು ವಿರೋಧಿಸಿದರು. ವಿಧವಾ ವಿವಾಹ ಮತ್ತು ಸ್ತ್ರೀ ಶಿಕ್ಷಣಗಳನ್ನು ಸಮರ್ಥಿಸಿದರು. ಅವರು ಕೋಲಕಾತಾದಲ್ಲಿ ಹಿಂದೂ ಕಾಲೇಜಿನ ಸ್ಥಾಪನೆ ಮಾಡಿದರು. ಅದೇ ರೀತಿ 'ಸಂವಾದ ಕೌಮುದಿ' ಎಂಬ ವರ್ತಮಾನಪತ್ರದ ಮುಖಾಂತರ ಜನಜಾಗೃತಿ ಮಾಡಿದರು.


ರಾಜಾ ರಾಮಮೋಹನ ರಾಯ


ದಾದೋಬಾ ಪಾಂಡುರಂಗ ತರ್ಖಡಕರ

**ಪ್ರಾರ್ಥನಾ ಸಮಾಜ:** ದಾದೋಬಾ ಪಾಂಡುರಂಗ ತರ್ಖಡಕರ ಇವರು ಕ್ರಿ.ಶ. 1848ರಲ್ಲಿ ಮುಂಬಯಿಯಲ್ಲಿ ಪರಮಹಂಸ ಸಭೆಯ ಸ್ಥಾಪನೆ ಮಾಡಿದರು. ದಾದೋಬಾರ ಸಹೋದರರಾದ ಡಾ. ಆತ್ಮಾರಾಮ ಪಾಂಡುರಂಗ ಇವರು ಪ್ರಾರ್ಥನಾ ಸಮಾಜದ ಪ್ರಥಮ ಅಧ್ಯಕ್ಷರಾಗಿದ್ದರು. ಈ ಸಂಸ್ಥೆಗೆ ಮುಂಬಯಿ ವಿಶ್ವವಿದ್ಯಾಲಯದಲ್ಲಿಯ ತರುಣ ಪದವೀಧರರು ದೊರೆತುದರಿಂದ ಅದರ ಪ್ರತಿಷ್ಠೆ ಹೆಚ್ಚಿತು.


ನ್ಯಾಯಮೂರ್ತಿ ಮಹಾದೇವ ಗೋವಿಂದ ರಾನಡೆ, ಡಾ. ರಾ.ಗೋ. ಭಾಂಡಾರಕರ ಇವರು ಪ್ರಾರ್ಥನಾ ಸಮಾಜದ ಕಾರ್ಯವನ್ನು ಮುಂದುವರಿಸಿದರು. ಮೂರ್ತಿಪೂಜೆಗೆ ವಿರೋಧ, ಏಕೇಶ್ವರವಾದ, ಕರ್ಮಕಾಂಡಕ್ಕೆ ವಿರೋಧ ಇವು ಪ್ರಾರ್ಥನಾ ಸಮಾಜದ ತತ್ವಗಳಾಗಿದ್ದವು. ಉಪಾಸನೆ ಮತ್ತು ಪ್ರಾರ್ಥನೆಗಳಿಗೆ ಅವರು ಮಹತ್ವ ನೀಡಿದರು. ಪ್ರಾರ್ಥನಾ ಸಮಾಜವು ಸಾಮಾಜಿಕ ಸುಧಾರಣೆಗಾಗಿ ಅನಾಥಾಶ್ರಮಗಳನ್ನು, ಸ್ತ್ರೀ ಶಿಕ್ಷಣ ಸಂಸ್ಥೆಗಳನ್ನು, ಕಾರ್ಮಿಕರಿಗಾಗಿ ರಾತ್ರಿಶಾಲೆಗಳನ್ನು ಹಾಗೂ ದಲಿತರಿಗಾಗಿ ಸಂಸ್ಥೆಗಳನ್ನು ಆರಂಭಿಸಿತು. ಪ್ರಾರ್ಥನಾ ಸಮಾಜದ ಸದಸ್ಯರಾದ ಮಹರ್ಷಿ ವಿಠ್ಠಲ ರಾಮಜಿ ಶಿಂದೆಯವರು 'ಡಿಪ್ರೆಸ್ಡ ಕ್ಲಾಸೆಸ್ ಮಿಶನ್' ಸ್ಥಾಪನೆ ಮಾಡಿ ಅದರ ಮೂಲಕ ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನ ಮಾಡಿದರು.

**ಸತ್ಯಶೋಧಕ ಸಮಾಜ:** ಮಹಾತ್ಮಾ ಜ್ಯೋತಿರಾವ ಫುಲೆ ಇವರು ಕ್ರಿ.ಶ. 1873ರಲ್ಲಿ ಸತ್ಯಶೋಧಕ ಸಮಾಜದ ಸ್ಥಾಪನೆ ಮಾಡಿದರು. ಸಮತೆಯ ತತ್ವದ ಮೇಲೆ ಆಧಾರಿತ ಸಮಾಜ ನಿರ್ಮಿತಿಗಾಗಿ ಸತ್ಯಶೋಧಕ ಸಮಾಜವು ಕಾರ್ಯಮಾಡಿತು. ಅವರು ಸ್ಪೃಶ್ಯ-ಅಸ್ಪೃಶ್ಯತೆಯನ್ನು ವಿರೋಧಿಸಿದರು. ಅದರ ಜೊತೆಗೆ ಬಹುಜನ ಸಮಾಜದ ಶಿಕ್ಷಣದ ಮತ್ತು ಸ್ತ್ರೀಶಿಕ್ಷಣದ ಸಮರ್ಥನೆ ಮಾಡಿದರು. ಮಹಾತ್ಮಾ ಜ್ಯೋತಿರಾವ ಫುಲೆಯವರು 'ಬ್ರಾಹ್ಮಣಾಂಚೆ ಕಸಬ', 'ಗುಲಾಮಗಿರಿ',

'ಶೇತಕರ್‍ಯಾಂಚಾ ಆಸೂಡ', 'ಸಾರ್ವಜನಿಕ ಸತ್ಯಧರ್ಮ' ಇಂಥ ಪುಸ್ತಕಗಳ ಮುಖಾಂತರ ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡಿದರು. ಸ್ತ್ರೀ-ಪುರುಷರಲ್ಲಿ ಅಥವಾ ಮನುಷ್ಯ-ಮನುಷ್ಯರಲ್ಲಿ ಭೇದವನ್ನು ನಿರ್ಮಾಣ ಮಾಡುವ ರೂಢಿ-ಪರಂಪರೆಗಳನ್ನು ಅವರು ಕಟುವಾಗಿ ಟೀಕಿಸಿದರು.


ಮಹಾತ್ಮಾ ಜ್ಯೋತಿರಾವ ಫುಲೆ

**ಆರ್ಯ ಸಮಾಜ:** ಸ್ವಾಮಿ ದಯಾನಂದ ಸರಸ್ವತಿ ಇವರು ಕ್ರಿ.ಶ.1875ರಲ್ಲಿ ಆರ್ಯ ಸಮಾಜದ ಸ್ಥಾಪನೆ ಮಾಡಿದರು. ಅವರು ವೇದಗಳ ಮೇಲೆ ಭಾಷ್ಯ ಮಾಡುವ 'ಸತ್ಯಾರ್ಥ ಪ್ರಕಾಶ' ಎಂಬ ಗ್ರಂಥವನ್ನು ಬರೆದರು. ಪ್ರಾಚೀನ ವೈದಿಕ ಧರ್ಮವೇ ನಿಜವಾದ ಧರ್ಮವಾಗಿದ್ದು ಅದರಲ್ಲಿ ಜಾತಿ - ವಿಜಾತಿಗಳಿಗೆ ಸ್ಥಾನವಿರಲಿಲ್ಲ. ಸ್ತ್ರೀ-ಪುರುಷ ಸಮಾನತೆಯಿತ್ತು ಎಂದು ಅವರು ಪ್ರತಿಪಾದಿಸಿದರು. 'ವೇದಗಳ ಕಡೆಗೆ ಮರಳಿರಿ' ಎಂಬುದು ಆರ್ಯ ಸಮಾಜದ ಮೂಲ ಮಂತ್ರವಾಗಿತ್ತು. ಭಾರತದ ತುಂಬೆಲ್ಲ ಆರ್ಯ ಸಮಾಜದ ಶಾಖೆಗಳಿದ್ದವು. ಆರ್ಯ ಸಮಾಜದ ವತಿಯಿಂದ ಅನೇಕ ಸ್ಥಳಗಳಲ್ಲಿ ಶಿಕ್ಷಣ ಸಂಸ್ಥೆಗಳು ಸ್ಥಾಪಿಸಲ್ಪಟ್ಟವು.


ಸ್ವಾಮಿ ದಯಾನಂದ ಸರಸ್ವತಿ

**ರಾಮಕೃಷ್ಣ ಮಿಶನ್:** ರಾಮಕೃಷ್ಣ ಪರಮಹಂಸರ ಶಿಷ್ಯರಾದ ಸ್ವಾಮಿ ವಿವೇಕಾನಂದ ಇವರು ಕ್ರಿ. ಶ. 1897 ರಲ್ಲಿ ರಾಮಕೃಷ್ಣ ಮಿಶನ್‌ನ ಸ್ಥಾಪನೆ ಮಾಡಿದರು. ರಾಮಕೃಷ್ಣ ಮಿಷನ್ ಇದು ಜನಸೇವೆಯ ಕಾರ್ಯಗಳನ್ನು ಮಾಡಿತು. ಬರಗಾಲ ಪೀಡಿತರಿಗೆ ನೆರವು, ರೋಗಿ, ದೀನ- ದುರ್ಬಲರಿಗೆ ಔಷಧೋಪಚಾರ, ಸ್ತ್ರೀ- ಶಿಕ್ಷಣ, ಆಧ್ಯಾತ್ಮಿಕ ಉನ್ನತಿ ಇತ್ಯಾದಿ ಕ್ಷೇತ್ರಗಳಲ್ಲಿ ಈ ಮಿಶನ್ ಕಾರ್ಯ ಮಾಡಿತು. ಹಾಗೂ ಇಂದು ಕೂಡ ಮಾಡುತ್ತಿದೆ. ಸ್ವಾಮಿ ವಿವೇಕಾನಂದರು ಉತ್ತಮ ವಾಕ್ಪಟುಗಳಾಗಿದ್ದರು. ಅವರು ಕ್ರಿ.ಶ. 1893ರಲ್ಲಿ ಅಮೇರಿಕೆಯಲ್ಲಿ ಶಿಕಾಗೊದಲ್ಲಿಯ ವಿಶ್ವಧರ್ಮ ಪರಿಷತ್ತಿನಲ್ಲಿ ಹಿಂದೂ ಧರ್ಮದ ಪ್ರತಿನಿಧಿತ್ವ ಮಾಡಿದರು. ಅವರು ಭಾರತದಲ್ಲಿಯ ತರುಣರಿಗೆ 'ಏಳಿ, ಎಚ್ಚರಾಗಿ, ಮತ್ತು ಧ್ಯೇಯ ಪ್ರಾಪ್ತವಾಗುವವರೆಗೆ ನಿಲ್ಲಬೇಡಿ' ಎಂಬ ಸಂದೇಶವನ್ನು ನೀಡಿದರು.


ಸ್ವಾಮಿ ವಿವೇಕಾನಂದ

**ಶೀಖ ಸಮಾಜದಲ್ಲಿಯ ಸುಧಾರಣೆಗಳು:** ಶೀಖ ಧರ್ಮದ ಸುಧಾರಣೆಗಾಗಿ ಅಮೃತಸರ ಎಂಬಲ್ಲಿ 'ಸಿಂಗಸಭೆ'ಯ ಸ್ಥಾಪನೆ ಮಾಡಲಾಯಿತು. ಈ ಸಂಸ್ಥೆಯು ಶೀಖ ಸಮಾಜದಲ್ಲಿ ಶಿಕ್ಷಣ ಪ್ರಸಾರ ಮತ್ತು ಆಧುನಿಕೀಕರಣವನ್ನುಂಟು ಮಾಡಿತು. ಮುಂದೆ 'ಅಕಾಲಿ ಚಳುವಳಿ'ಯು ಶೀಖ ಸಮಾಜದಲ್ಲಿಯ ಸುಧಾರಣಾವಾದದ ಪರಂಪರೆಯನ್ನು ಮುಂದುವರಿಸಿತು.

**ಸ್ತ್ರೀಯರ ಬಗೆಗಿನ ಸುಧಾರಣೆಗಳು:** ಭಾರತದಲ್ಲಿ ಬ್ರಿಟಿಶ ಆಡಳಿತದ ವಿಸ್ತಾರವಾಯಿತು. ಆ ಕಾಲದಲ್ಲಿ ಭಾರತದಲ್ಲಿಯ ಸ್ತ್ರೀಯರ ಸ್ಥಿತಿ ದಯನೀಯವಾಗಿತ್ತು. ಅವರಿಗೆ ಶಿಕ್ಷಣವನ್ನು ಪಡೆಯುವ ಅಧಿಕಾರವಿರಲಿಲ್ಲ. ಅವರನ್ನು ಸಮಾನತೆಯಿಂದ ನಡೆಸಿಕೊಳ್ಳಲಾಗುತ್ತಿರಲಿಲ್ಲ. ಬಾಲ ವಿವಾಹ, ವೃದ್ಧ-ಕುಮಾರಿ ವಿವಾಹ, ವರದಕ್ಷಿಣೆಯ ಪದ್ಧತಿ, ಸತಿ ಸಹಗಮನ ಪದ್ಧತಿ, ಕೇಶಮುಂಡನ, ವಿಧವಾ ವಿವಾಹ ನಿಷೇಧ ಮುಂತಾದ ರೂಢಿಗಳು ಸಮಾಜದಲ್ಲಿದ್ದವು. ತತ್ಕಾಲೀನ ಗವ್ಹರ್ನರ ಲಾರ್ಡ್ ಬೆಂಟಿಂಕನಿಗೆ ಸತಿ ಸಹಗಮನ ಪದ್ಧತಿಯನ್ನು ಪ್ರತಿಬಂಧಿಸುವ ಕಾನೂನು ಮಾಡುವ ಸಲುವಾಗಿ ರಾಜಾ ರಾಮಮೋಹನ ರಾಯ ರಂತಹ ಸಮಾಜ ಸುಧಾರಕರು ಸಹಾಯ ಮಾಡಿದರು. ಗೋಪಾಳ ಹರಿ ದೇಶಮುಖ ಉರ್ಫ್ ಲೋಕಹಿತವಾದಿ ಇವರು ಶತಪತ್ರಗಳಲ್ಲಿ ಸ್ತ್ರಿ-ಪುರುಷ ಸಮಾನತೆಯ ಪುರಸ್ಕಾರ ಮಾಡಿದರು.



ಗೋಪಾಳ ಹರಿ ದೇಶಮುಖ

ಮಹಾತ್ಮಾ ಫುಲೆಯವರು 1848ರಲ್ಲಿ ಪುಣೆಯಲ್ಲಿಯ ಭಿಡೆವಾಡಾದಲ್ಲಿ ಹುಡುಗಿಯರಿಗಾಗಿ ಪ್ರಥಮ ಶಾಲೆಯನ್ನು ಆರಂಭಿಸಿದರು. ಅದರಲ್ಲಿ ಅವರಿಗೆ ಪತ್ನಿ ಸಾವಿತ್ರಿಬಾಯಿಯವರ ಸಹಕಾರ ಲಭಿಸಿತು. ಸಮಾಜದಲ್ಲಿಯ ಕರ್ಮಠ ಜನರು ಮಾಡಿದ ಟೀಕೆ, ನಿಂದೆಗಳನ್ನು ಸಹಿಸಿಯೂ ಸಾವಿತ್ರಿಬಾಯಿಯವರು ಶಿಕ್ಷಣದ ಕಾರ್ಯವನ್ನು ಮುಂದುವರಿಸಿದರು. ಮಹಾತ್ಮಾ ಫುಲೆಯವರು ತಮ್ಮ ಮನೆಯಲ್ಲಿ ಬಾಲಹತ್ಯಾ ಪ್ರತಿಬಂಧಕ ಗೃಹವನ್ನು ಸ್ಥಾಪಿಸಿದರು. ಕೇಶ ಮುಂಡನ ಪದ್ಧತಿಯು ನಿಲ್ಲ



ಸಾವಿತ್ರಿಬಾಯಿ ಫುಲೆ

ಬೇಕೆಂದು ಅವರು ಕ್ಷೌರಿಕರ ಮುಷ್ಕರವನ್ನು ಮಾಡಿಸಿದರು.

ವಿಧವೆಯರ ಪುನರ್ವಿವಾಹಕ್ಕೆ ಮಾನ್ಯತೆಯನ್ನು ದೊರಕಿಸಿ ಕೊಡಲು ಪಂ ಈಶ್ವರಚಂದ್ರ ವಿದ್ಯಾಸಾಗರ, ವಿಷ್ಣುಶಾಸ್ತ್ರಿ ಪಂಡಿತ ಮತ್ತು ವೀರೇಶಲಿಂಗಂ ಪಂತಲು ಇವರು ವಿಶೇಷ ಪ್ರಯತ್ನ ಮಾಡಿದರು. ಗೋಪಾಳ ಗಣೇಶ ಆಗರಕರ ಇವರು ತಮ್ಮ ಸುಧಾರಕ ಎಂಬ ವರ್ತಮಾನಪತ್ರದಲ್ಲಿ ಬಾಲ ವಿವಾಹ, ಸಮ್ಮತಿ ವಯಸ್ಸಿನ ಕಾನೂನುಗಳ ಮೇಲೆ ಸ್ಪಷ್ಟ ವಿಚಾರಗಳನ್ನು ಮಂಡಿಸಿದರು. ಮಹರ್ಷಿ ವಿಠ್ಠಲ ರಾಮಜಿ ಶಿಂದೆಯವರು ಮುಂಬಯಿಯಲ್ಲಿ ದೇವದಾಸಿ ರೂಢಿಯ ವಿರುದ್ಧ ಪರಿಷತ್ತನ್ನು ಕರೆದರು. ತಾರಾಬಾಯಿ ಶಿಂದೆಯವರು 'ಸ್ತ್ರೀ-ಪುರುಷ ತುಲನಾ' ಎಂಬ ಗ್ರಂಥದಲ್ಲಿ ಅತ್ಯಂತ ಕಠೋರ ಭಾಷೆಯಲ್ಲಿ (ಶಬ್ದಗಳಲ್ಲಿ) ಸ್ತ್ರೀಯರ ಹಕ್ಕುಗಳ ಸಮರ್ಥನೆ ಮಾಡಿದರು. ಮಹರ್ಷಿ ಧೋಂಡೊ ಕೇಶವ ಕರ್ವೆಯವರು ಪುಣೆಯಲ್ಲಿ 'ಅನಾಥ ಬಾಲಿಕಾಶ್ರಮ'ವನ್ನು ಆರಂಭಿಸಿದರು. ವಿಧವೆಯರು ಮತ್ತು ಪರಿತ್ಯಕ್ತರೊಂದಿಗೆ ಎಲ್ಲಾ ಮಹಿಳೆಯರು ಶಿಕ್ಷಣವನ್ನು ಪಡೆದು ತಮ್ಮ ಕಾಲಮೇಲೆ ನಿಲ್ಲುವಂತಾಗಬೇಕು (ಸ್ವಾವಲಂಬಿಯಾಗಬೇಕು) ಎಂಬುದು ಅವರ ಉದ್ದೇಶವಾಗಿತ್ತು. ಅವರ ಪ್ರಯತ್ನದಿಂದಾಗಿಯೇ ಇಪ್ಪತ್ತನೆಯ ಶತಮಾನದಲ್ಲಿ ಭಾರತದಲ್ಲಿ ಪ್ರಥಮ ಮಹಿಳಾ ವಿಶ್ವವಿದ್ಯಾಲಯವು ಸ್ಥಾಪಿಸಲ್ಪಟ್ಟಿತು. ಪಂಡಿತಾ ರಮಾಬಾಯಿಯವರು 'ಶಾರದಾಸದನ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ವಿಕಲಚೇತನ ಬಾಲಕರು, ಬಾಲಕಿಯರು ಮತ್ತು ಸ್ತ್ರೀಯರ ಪಾಲನೆ-ಪೋಷಣೆಯ ಜವಾಬ್ದಾರಿಯನ್ನು ಸ್ವೀಕರಿಸಿದರು. ರಮಾಬಾಯಿ ರಾನಡೆಯವರು 'ಸೇವಾಸದನ' ಸಂಸ್ಥೆಯ ಮುಖಾಂತರ ಸ್ತ್ರೀಯರಿಗಾಗಿ ಪರಿಚಾರಿಕಾ ಅಭ್ಯಾಸಕ್ರಮವನ್ನು ಆರಂಭಿಸಿದರು. ಅವರು ಸ್ತ್ರೀಯರಿಗೆ ಮತದಾನದ ಹಕ್ಕು ದೊರೆಯಬೇಕೆಂದು ಸರಕಾರದ ಕಡೆಗೆ ಬೇಡಿಕೆ ಮಾಡಿದರು. ಡಾ. ಬಾಬಾಸಾಹೇಬ ಅಂಬೇಡಕರ ಇವರು ತಮ್ಮ ಲೇಖನದ ಮೂಲಕ ಸ್ತ್ರೀಯರ ಮೇಲಾಗುವ ಅನ್ಯಾಯವನ್ನು ಬಯಲಿಗೆಳೆದರು. ಮಹಾತ್ಮಾಗಾಂಧಿಯವರು ಸ್ತ್ರೀಶಿಕ್ಷಣದ ಪುರಸ್ಕಾರ ಮಾಡಿದರು. ಸ್ತ್ರೀಯರು ಸ್ವಾತಂತ್ರ್ಯ ಚಳುವಳಿಯ ಸಮಯದಲ್ಲಿ ಅಮೂಲ್ಯವಾದ ಕೊಡುಗೆಯನ್ನು ನೀಡಿದ್ದಾರೆ.



ವೀರೇಶಲಿಂಗಂ ಪಂತಲು



ಮಹರ್ಷಿ ಧೋಂಡೊ ಕೇಶವ ಕರ್ವೆ


ಸ್ತ್ರೀ ಸುಧಾರಣಾ ಚಳುವಳಿಯಿಂದಾಗಿ ಸಮಾಜದಲ್ಲಿಯ ಅನೇಕ ಅನ್ಯಾಯಕಾರಕ ರೂಢಿಗಳು ನಷ್ಟವಾದವು. ಸ್ತ್ರೀಯರ ಸಮಸ್ಯೆಗಳು ಬಯಲಿಗೆ ಬಂದವು. ಸ್ತ್ರೀಯರು ತಮ್ಮ ವಿಚಾರಗಳನ್ನು ಲೇಖನಗಳಲ್ಲಿ ವ್ಯಕ್ತಪಡಿಸತೊಡಗಿದರು. ಶಿಕ್ಷಣದಿಂದಾಗಿ ಜೀವನದ ಎಲ್ಲಾ ಕ್ಷೇತ್ರಗಳಲ್ಲಿ ಅವರ ಕರ್ತೃತ್ವವು ಹೊರಹೊಮ್ಮತೊಡಗಿತು.

**ಸ್ವಲ್ಪ ಯೋಚಿಸಿರಿ -**

* ಸಮಾಜ ಸುಧಾರಕರು ಸ್ತ್ರೀ ಶಿಕ್ಷಣವನ್ನು ಆರಂಭಿಸಿರದಿದ್ದರೆ?
* ವರ್ತಮಾನ ಕಾಲದಲ್ಲಿ ಶಿಕ್ಷಣದಿಂದಾಗಿ ಸ್ತ್ರೀಯರ ಜೀವನದಲ್ಲಿ ಯಾವ ಪರಿವರ್ತನೆಯುಂಟಾಗಿದೆ?
* ಇಂದು ಕೂಡ ಸ್ತ್ರೀ ಶಿಕ್ಷಣಕ್ಕಾಗಿ ಪ್ರಯತ್ನಮಾಡುವ ಅವಶ್ಯಕತೆಯಿದೆ ಎಂದು ನಿಮಗೆ ಅನಿಸುತ್ತದೆಯೇ? ಒಂದು ವೇಳೆ ಹಾಗೆ ಅನಿಸುತ್ತಿದ್ದರೆ ಯಾವ ಪ್ರಯತ್ನಗಳನ್ನು ಮಾಡಬೇಕು?

**ಮುಸ್ಲಿಮ ಸಮಾಜದಲ್ಲಿಯ ಸುಧಾರಣಾ ಚಳುವಳಿ:** ಅಬ್ದುಲ್ ಲತೀಫ್ ಇವರು ಮುಸ್ಲಿಮ ಸಮಾಜದಲ್ಲಿಯ ಧರ್ಮಸುಧಾರಣೆಯ ಕಾರ್ಯವನ್ನು ಆರಂಭಿಸಿದರು. ಅವರು ಬಂಗಾಲ ಪ್ರಾಂತದಲ್ಲಿ 'ದ ಮೊಹಮ್ಮದನ್ ಲಿಟರರಿ ಸೊಸೈಟಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿದರು.

ಸರ ಸಯ್ಯದ ಅಹಮದ ಖಾನ ಇವರು 'ಮೊಹಮ್ಮದನ್ ಆ್ಯಂಗ್ಲೊ ಓರಿಯಂಟಲ್ ಕಾಲೇಜ' ಸ್ಥಾಪಿಸಿದರು. ಮುಂದೆ ಇದೇ ಕಾಲೇಜು ಅಲಿಗಢ ಮುಸ್ಲಿಮ ವಿಶ್ವವಿದ್ಯಾಲಯದಲ್ಲಿ ರೂಪಾಂತರವಾಯಿತು. ಅವರು ಪಾಶ್ಚಿಮಾತ್ಯ ವಿಜ್ಞಾನ ಮತ್ತು ತಂತ್ರಜ್ಞಾನದ ಪುರಸ್ಕಾರ ಮಾಡಿದರು. ಪಾಶ್ಚಿಮಾತ್ಯ ಶಿಕ್ಷಣ ಮತ್ತು ವಿಜ್ಞಾನ ಇವುಗಳನ್ನು ಅಂಗೀಕರಿಸದ ಹೊರತು ಮುಸ್ಲಿಮ ಸಮಾಜದ ಪ್ರಗತಿಯಾಗಲಾರದು-ಎಂಬುದು ಅವರ ಸ್ಪಷ್ಟ ವಿಚಾರವಾಗಿತ್ತು.



ಸರ್ ಸಯ್ಯದ ಅಹಮದ ಖಾನ

**ಹಿಂದೂ ಸಮಾಜದಲ್ಲಿಯ ಚಳುವಳಿ:** ಹಿಂದೂ ಸಮಾಜಕ್ಕೆ ಗೌರವದ ಸ್ಥಾನ ದೊರೆಯಬೇಕೆಂಬ ಉದ್ದೇಶದಿಂದ 1915ರಲ್ಲಿ 'ಹಿಂದೂ ಮಹಾಸಭಾ' ಎಂಬ ಸಂಘಟನೆಯ ಸ್ಥಾಪನೆಯಾಯಿತು. ಪಂ.ಮದನ ಮೋಹನ ಮಾಲವೀಯ ಇವರು 'ಬನಾರಸ ಹಿಂದೂ ವಿಶ್ವವಿದ್ಯಾಲಯದ ಅಡಿಗಲ್ಲನ್ನಿಟ್ಟರು. ಡಾ. ಕೇಶವ ಬಳೀರಾಮ ಹೆಡಗೆವಾರ ಇವರು 1925ರಲ್ಲಿ ನಾಗಪೂರದಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸ್ಥಾಪನೆ ಮಾಡಿದರು. ಹಿಂದುತ್ವವಾದಿ ತರುಣರ ಶಿಸ್ತುಬದ್ಧ ಮತ್ತು ಚಾರಿತ್ರ್ಯಸಂಪನ್ನ

ಸಂಘಟನೆಯನ್ನು ಸ್ಥಾಪಿಸುವುದು ಅವರ ಉದ್ದೇಶವಾಗಿತ್ತು.



ಡಾ. ಕೇಶವ ಬಳೀರಾಮ ಹೇಡಗೇವಾರ

ಸ್ವಾತಂತ್ರ್ಯವೀರ ವಿ.ದಾ. ಸಾವರಕರ ಇವರು ರತ್ನಾಗಿರಿಯಲ್ಲಿ ಹಿಂದೂಧರ್ಮದಲ್ಲಿಯ ಸರ್ವಜಾತಿಗಳಿಗೆ ಮುಕ್ತ ಪ್ರವೇಶವಿರುವ ಪತಿತ ಪಾವನ ಮಂದಿರವನ್ನು ನಿರ್ಮಿಸಿದರು. ಸಹಭೋಜನಗಳಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು.

### ಗೊತ್ತಿದೆಯೇ ನಿಮಗೆ?

**ಇತರ ಕ್ಷೇತ್ರದಲ್ಲಿಯ ಪುನರುಜ್ಜೀವನದ ಆವಿಷ್ಕರಣ:** ಸುಧಾರಣಾ ಚಳುವಳಿಗಳಂತೆ ಪುನರುಜ್ಜೀವನ ಕಾಲದಲ್ಲಿ ಸಾಹಿತ್ಯ, ಕಲೆ, ವಿಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಉಂಟಾದ ಪ್ರಗತಿಯು ಮಹತ್ವದ್ದಾಗಿತ್ತು. ಸಾಹಿತ್ಯದ ಕ್ಷೇತ್ರದಲ್ಲಿ ಗುರುದೇವ ರವೀಂದ್ರನಾಥ ಟಾಗೋರರಿಗೆ ಹಾಗೂ ವಿಜ್ಞಾನ ಕ್ಷೇತ್ರದಲ್ಲಿ ಸಿ.ವ್ಹಿ. ರಾಮನ್ ಇವರಿಗೆ ನೊಬೆಲ ಬಹುಮಾನ ದೊರಕಿತು. ಇದರ ಮೇಲಿಂದ ಭಾರತದ ಪ್ರಗತಿಯ ಕಲ್ಪನೆ ಬರುತ್ತದೆ. ಇಂಥ ಪ್ರಗತಿಯಿಂದಾಗಿ ಆಧುನಿಕ ಭಾರತದ ರಚನೆಯಾಯಿತು. ಕಥೆ-ಕಾದಂಬರಿಗಳ ಮುಖಾಂತರ ಸ್ವಾತಂತ್ರ್ಯದ ಪ್ರೇರಣೆ ದೊರೆಯತೊಡಗಿತು. ಸಮಾಜ ಸುಧಾರಣೆಯ ವಿಚಾರವು ವ್ಯಕ್ತವಾಗತೊಡಗಿತು.

ಈ ಕಾಲದಲ್ಲಿ ಸ್ತ್ರೀಯರು ಲೇಖನ ಮಾಡತೊಡಗಿದರು. ಹೊಸ ವರ್ತಮಾನಪತ್ರಗಳು, ಮಾಸಪತ್ರಿಕೆಗಳು ಸಮಾಜ ಸುಧಾರಣೆ ಮತ್ತು ರಾಜಕೀಯ ಜಾಗೃತಿಯನ್ನು ಕುರಿತು ಪ್ರಸಾರ ಮಾಡತೊಡಗಿದವು.

ಈ ಕಾಲದಲ್ಲಿ ಕಲಾಕ್ಷೇತ್ರದಲ್ಲಿಯೂ ಪ್ರಗತಿಯಾಯಿತು. ಸಂಗೀತವು ಅಧಿಕ ಲೋಕಾಭಿಮುಖವಾಗತೊಡಗಿತು. ಭಾರತೀಯ ಶೈಲಿ ಮತ್ತು ಪಾಶ್ಚಾತ್ಯ ತಂತ್ರಗಳ ಮಿಶ್ರಣದಿಂದ ಹೊಸ ಚಿತ್ರಕಲೆ ಮುಂದೆ ಬಂದಿತು.

ವಿಜ್ಞಾನವನ್ನು ಕುರಿತು ಅನೇಕ ಗ್ರಂಥಗಳ ಬರವಣಿಗೆಯಾಗತೊಡಗಿತು. ಭಾರತದ ಪ್ರಗತಿಗಾಗಿ ಪ್ರಯೋಗಶೀಲತೆ ಮತ್ತು ವೈಜ್ಞಾನಿಕ ದೃಷ್ಟಿ ಇವುಗಳ ಮಹತ್ವವು ಜನರಿಗೆ ಹೊಳೆಯತೊಡಗಿತು.

ಆಧುನಿಕ ಭಾರತದ ಇತಿಹಾಸದಲ್ಲಿ ಪುನರುಜ್ಜೀವನದ ಈ ಆವಿಷ್ಕರಣವು ಮಹತ್ವದ್ದಾಗಿದೆ. ಸ್ವಾತಂತ್ರ್ಯ, ಸಮತೆ ರಾಷ್ಟ್ರವಾದ ಈ ವಿಚಾರಗಳಿಂದ ಪ್ರೇರಿತರಾದ ಸುಧಾರಕರು ರಾಜಕೀಯ ಕ್ಷೇತ್ರದಲ್ಲಿ ರಾಷ್ಟ್ರವ್ಯಾಪಿ ಚಳುವಳಿಯನ್ನು ಆರಂಭಿಸಿದರು. ಅದರ ಅಭ್ಯಾಸವನ್ನು ನಾವು ಮುಂದಿನ ಪಾಠದಲ್ಲಿ ಮಾಡುವವರಿದ್ದೇವೆ.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿ ವಾಕ್ಯಗಳನ್ನು ಪುನ: ಬರೆಯಿರಿ.**

(ಸರ ಸಯ್ಯದ ಅಹಮದ ಖಾನ, ಸ್ವಾಮಿ ವಿವೇಕಾನಂದ, ಮಹರ್ಷಿ ವಿಠ್ಠಲ ರಾಮಜಿ ಶಿಂದೆ)

(1) ರಾಮಕೃಷ್ಣ ಮಿಶನ್‌ನ ಸ್ಥಾಪನೆಯನ್ನು .......... ಇವರು ಮಾಡಿದರು.

(2) .......... ಇವರು ಮೊಹಮ್ಮದನ್ ಆ್ಯಂಗ್ಲೊ ಓರಿಯಂಟಲ್ ಕಾಲೇಜ ಸ್ಥಾಪಿಸಿದರು.

(3) ಡಿಪ್ರೆಸ್ಡ್ ಕ್ಲಾಸೆಸ್ ಮಿಶನ್‌ನ ಸ್ಥಾಪನೆಯನ್ನು .......... ಇವರು ಮಾಡಿದರು.

**2. ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.**

| ಸಮಾಜ ಸುಧಾರಕರ ಹೆಸರು | ಸಂಸ್ಥೆ | ವರ್ತಮಾನ ಪತ್ರ/ಪುಸ್ತಕ | ಸಂಸ್ಥೆಯ ಕಾರ್ಯಗಳು |
|---|---|---|---|
| ರಾಜಾ ರಾಮಮೋಹನ ರಾಯ | .......... | ಸಂವಾದ ಕೌಮುದಿ | ........ |
| .............. | ಆರ್ಯಸಮಾಜ | ........... | ........ |
| ಮಹಾತ್ಮಾ ಫುಲೆ | .......... | ಗುಲಾಮಗಿರಿ | ........ |

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಭಾರತದಲ್ಲಿ ಸಾಮಾಜಿಕ, ಧಾರ್ಮಿಕ ಪರಿವರ್ತನೆಯ ಚಳುವಳಿ ಆರಂಭವಾದವು.

(2) ಮಹಾತ್ಮಾ ಫುಲೆಯವರು ಕ್ಷೌರಿಕರ ಮುಷ್ಕರವನ್ನು ಮಾಡಿಸಿದರು.

**4. ಟಿಪ್ಪಣಿ ಬರೆಯಿರಿ.**

(1) ರಾಮಕೃಷ್ಣ ಮಿಶನ್

(2) ಸಾವಿತ್ರಿಬಾಯಿ ಫುಲೆಯವರ ಸ್ತ್ರೀಯರ ಬಗೆಗಿನ ಸುಧಾರಣೆಗಳು

**ಉಪಕ್ರಮ**

(1) 'ಸ್ತ್ರೀಶಿಕ್ಷಣ' ಈ ವಿಷಯದ ಮೇಲೆ ಶಾಲೆಯಲ್ಲಿ ನಿಬಂಧ ಸ್ಪರ್ಧೆಯನ್ನು ಏರ್ಪಡಿಸಿರಿ.

(2) ಸಮಾಜ ಸುಧಾರಕರ ಭಾವಚಿತ್ರಗಳನ್ನು ಸಂಗ್ರಹಿಸಿರಿ.

ALQQ4S

# 6. ಸ್ವಾತಂತ್ರ್ಯ ಚಳುವಳಿ ಯುಗದ ಆರಂಭ

ಭಾರತೀಯ ಸಮಾಜಜೀವನದ ಮೇಲೆ ಇಂಗ್ಲೀಷ ಶಿಕ್ಷಣದ ಸಮ್ಮಿಶ್ರ ಪರಿಣಾಮಗಳಾದವು. ಹೊಸ ಸುಶಿಕ್ಷಿತ ಸಮಾಜವು ಉಂಟುಮಾಡಿದ ಪುನರುಜ್ಜೀವನದಿಂದಾಗಿ ರಾಷ್ಟ್ರೀಯತ್ವದ ಭಾವನೆಯ ಬೀಜಗಳು ಬಿತ್ತಲ್ಪಟ್ಟವು. ಭಾರತದ ವಿವಿಧ ಭಾಗಗಳಲ್ಲಿಯ ಚಳುವಳಿಗಳಿಂದಾಗಿ ಬೇರೆ ಬೇರೆ ಪ್ರಾಂತಗಳಲ್ಲಿಯ ರಾಜಕೀಯ ಸಂಸ್ಥೆಗಳನ್ನು ಒಂದುಗೂಡಿಸುವುದು, ರಾಜಕೀಯ ದೃಷ್ಟಿಯಲ್ಲಿ ಜಾಗೃತವಾಗಿರುವ ವಿವಿಧ ಗುಂಪುಗಳನ್ನು ಮತ್ತು ವ್ಯಕ್ತಿಗಳನ್ನು ಒಂದೆಡೆ ತರುವುದು ಹಾಗೂ ರಾಷ್ಟ್ರಹಿತದ ಪ್ರಶ್ನೆಗಳ ಕಡೆಗೆ ಜನರನ್ನು ಆಕರ್ಷಿಸಿ ರಾಷ್ಟ್ರದ ಆಕಾಂಕ್ಷೆಗಳನ್ನು ಪ್ರಕಟಪಡಿಸುವುದು ಈ ಕಾರಣಗಳಿಗಾಗಿ ಅಖಿಲ ಭಾರತೀಯ ಮಟ್ಟದಲ್ಲಿ ಒಂದು ರಾಜಕೀಯ ಸಂಘಟನೆಯನ್ನು ಸ್ಥಾಪಿಸಲು ಅನುಕೂಲ ಪರಿಸ್ಥಿತಿ ನಿರ್ಮಾಣವಾಯಿತು.

**ಬ್ರಿಟಿಶ ಅಧಿಪತ್ಯದಲ್ಲಿಯ ಆಡಳಿತದ ಕೇಂದ್ರೀಕರಣ:** ಬ್ರಿಟಿಶ ಆಡಳಿತದಿಂದಾಗಿ ಭಾರತದಲ್ಲಿ ನಿಜವಾದ ಅರ್ಥದಲ್ಲಿ ಕೇಂದ್ರೀಕೃತ ಆಡಳಿತ ಆರಂಭವಾಯಿತು. ದೇಶದ ತುಂಬೆಲ್ಲ ಸಮಾನ ನೀತಿ, ಸರ್ವರಿಗೂ ಕಾನೂನಿನ ಎದುರಿಗೆ ಸಮಾನ ದರ್ಜೆ ಇವುಗಳಿಂದಾಗಿ ಜನರಲ್ಲಿ ರಾಷ್ಟ್ರೀಯತ್ವದ ಭಾವನೆ ವಿಕಸಿತವಾಯಿತು. ಬ್ರಿಟಿಶರು ಭಾರತದಲ್ಲಿ ತಮ್ಮ ಆಡಳಿತದ ಅನುಕೂಲತೆಗಾಗಿ ಮತ್ತು ಸೈನ್ಯದ ತ್ವರಿತ ಸ್ಥಳಾಂತರಕ್ಕಾಗಿ ರೇಲ್ವೆ ಮತ್ತು ರಸ್ತೆಗಳ ಜಾಲವನ್ನು ಹರಡಿದರು. ಆದರೆ ಈ ಭೌತಿಕ ಸೌಕರ್ಯಗಳ ಲಾಭವು ಭಾರತೀಯರಿಗೂ ಆಯಿತು. ಭಾರತದಲ್ಲಿಯ ವಿವಿಧ ಪ್ರಾಂತಗಳಲ್ಲಿಯ ಜನರಲ್ಲಿ ಪರಸ್ಪರ ಅಧಿಕ ಸಂಬಂಧ ನಿರ್ಮಾಣವಾಗಿ ಅವರಲ್ಲಿಯ ಸಂವಾದ ಬೆಳೆಯಿತು ಹಾಗೂ ರಾಷ್ಟ್ರಭಾವನೆಯ ವಿಕಸಿತವಾಯಿತು.

**ಆರ್ಥಿಕ ಶೋಷಣೆ:** ಅನೇಕ ಮಾರ್ಗಗಳಿಂದ ಭಾರತದ ಸಂಪತ್ತು ಇಂಗ್ಲಂಡಿಗೆ ಹರಿದುಹೋಗತೊಡಗಿತು. ಇಂಗ್ಲಂಡಿನ ಸಾಮ್ರಾಜ್ಯಶಾಹಿ ಧೋರಣೆಯಿಂದ ಭಾರತದ ಆರ್ಥಿಕ ಶೋಷಣೆಯಾಗತೊಡಗಿತು. ರೈತರಿಗೆ ಕಡ್ಡಾಯವಾಗಿ ನಗದು ಬೆಳೆಗಳನ್ನು ಬೆಳೆಸಲು ಹಚ್ಚುವುದು, ಭೂಕಂದಾಯದ ಹೊರೆ, ಸತತವಾಗಿ ತಲೆದೋರುವ ಕ್ಷಾಮ ಇವುಗಳಿಂದಾಗಿ ಭಾರತೀಯ ಕೃಷಿಯ ಬೆನ್ನೆಲುಬೇ ಮುರಿದುಹೋಯಿತು. ಪರಂಪರಾಗತ ಉದ್ಯೋಗಧಂದೆಗಳ ಅವನತಿಯಾದುದರಿಂದ ನಿರುದ್ಯೋಗ ಹೆಚ್ಚಿತು. ಬಂಡವಾಳದಾರರಿಂದ ಕೂಲಿಕಾರರ ಶೋಷಣೆಯಾಗುತ್ತಿತ್ತು. ಮಧ್ಯಮ ವರ್ಗದ ಜನರ ಮೇಲೆ ಹೊಸ ಹೊಸ ಕರಗಳನ್ನು ಹೇರಲಾಯಿತು. ಇದರಿಂದಾಗಿ ಜನರ ಮನಸ್ಸಿನಲ್ಲಿ ಅಸಂತೋಷವು ಉಕ್ಕುತ್ತಿತ್ತು.

**ಪಾಶ್ಚಾತ್ಯ ಶಿಕ್ಷಣ:** ಪಾಶ್ಚಾತ್ಯ ಶಿಕ್ಷಣದ ಪ್ರಸಾರದಿಂದಾಗಿ ಭಾರತೀಯರಿಗೆ ನ್ಯಾಯ, ಸ್ವಾತಂತ್ರ್ಯ, ಸಮತೆ, ಪ್ರಜಾಪ್ರಭುತ್ವ ಮುಂತಾದ ಹೊಸ ಕಲ್ಪನೆಗಳ ಪರಿಚಯವಾಯಿತು. ಬುದ್ಧಿನಿಷ್ಠೆ, ವಿಜ್ಞಾನ ನಿಷ್ಠೆ ಮಾನವತೆ, ರಾಷ್ಟ್ರವಾದ ಇತ್ಯಾದಿ ಮೌಲ್ಯಗಳನ್ನು ಭಾರತೀಯರು ಕರಗತ ಮಾಡಿಕೊಂಡರು. ಆದರಿಂದಾಗಿ ನಮ್ಮ ದೇಶದ ಆಡಳಿತವನ್ನು ನಡೆಸುವುದಕ್ಕೆ ನಾವು ಸಮರ್ಥರಾಗಿದ್ದು ಈ ಮೌಲ್ಯಗಳ ಆಧಾರದಿಂದ ನಮ್ಮ ದೇಶದ ಉನ್ನತಿಯನ್ನು ಸಾಧಿಸಬೇಕು ಎಂಬ ಭಾವನೆ ಜನರ ಮನಸ್ಸಿನಲ್ಲಿ ಮೂಡತೊಡಗಿತು. ಭಾಷೆಗಳ ವಿವಿಧತೆಯಿಂದ ಸಂಪನ್ನವಾದ ಭಾರತಕ್ಕೆ ಇಂಗ್ಲೀಷ ಭಾಷೆಯಿಂದಾಗಿ ಸಂಪರ್ಕದ ಒಂದು ಹೊಸ ಮಾಧ್ಯಮ ದೊರಕಿತು.


ಡಾ. ಭಾವೂ ದಾಜಿ ಲಾಡ

**ಭಾರತದ ಪ್ರಾಚೀನ ಇತಿಹಾಸದ ಅಭ್ಯಾಸ:** ಕೋಲಕಾತಾದಲ್ಲಿ ಬ್ರಿಟಿಶರು 'ಏಶಿಯಾಟಿಕ್ ಸೊಸೈಟ್' ಯನ್ನು ಸ್ಥಾಪಿಸಿದರು. ಅನೇಕ ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರು ಭಾರತೀಯ ಸಂಸ್ಕೃತಿಯ ಅಭ್ಯಾಸವನ್ನು ಆರಂಭಿಸಿದರು. ಸಂಸ್ಕೃತ, ಫಾರಸಿ ಮತ್ತು ಅನ್ಯ ಭಾರತೀಯ ಭಾಷೆಗಳಲ್ಲಿಯ ಹಸ್ತಲಿಖಿತಗಳನ್ನು ಪರೀಕ್ಷಿಸಿ ಅವುಗಳ ಮೇಲಿನ ಸಂಶೋಧನೆಗಳನ್ನು ಪ್ರಸಿದ್ಧಗೊಳಿಸಿದರು. ಡಾ. ಭಾವೂ ದಾಜಿ ಲಾಡ, ಡಾ.ರಾ.ಗೋ. ಭಾಂಡಾರಕರ ಮುಂತಾದ ಭಾರತೀಯ ವಿದ್ವಾಂಸರು ಪ್ರಾಚೀನ ಭಾರತೀಯ ಸಂಸ್ಕೃತಿಯ ಆಳವಾದ ಅಭ್ಯಾಸ ಮಾಡಿದರು. ತಮಗೆ ಪ್ರಾಚೀನ ಸಮೃದ್ಧ ಪರಂಪರೆ ಲಭಿಸಿದೆ ಎಂಬುದು ತಿಳಿದುದರಿಂದ ಭಾರತೀಯರಲ್ಲಿ ಸ್ವಾಭಿಮಾನ ಜಾಗೃತವಾಯಿತು. ಪುಣೆಯಲ್ಲಿ 'ಭಾಂಡಾರಕರ ಪ್ರಾಚ್ಯವಿದ್ಯಾ ಸಂಶೋಧನ ಮಂದಿರ' ಎಂಬ ಸಂಸ್ಥೆಯು ಕಳೆದ ನೂರು ವರ್ಷಗಳಿಂದ ಕಾರ್ಯಮಾಡುತ್ತಿದೆ.


ಡಾ. ರಾ.ಗೋ. ಭಾಂಡಾರಕರ

**ವರ್ತಮಾನಪತ್ರಗಳ ಕಾರ್ಯ:** ಇದೇ ಕಾಲದಲ್ಲಿ ಇಂಗ್ಲೀಷ ಮತ್ತು ಪ್ರಾದೇಶಿಕ ಭಾಷೆಗಳಲ್ಲಿ ವರ್ತಮಾನ ಪತ್ರಗಳು ಮತ್ತು ನಿಯತಕಾಲಿಕಗಳು ಪ್ರಸಿದ್ಧವಾಗತೊಡಗಿದವು.

ಈ ವರ್ತಮಾನಪತ್ರಗಳ ಮೂಲಕ ರಾಜಕೀಯ ಮತ್ತು ಸಾಮಾಜಿಕ ಜಾಗೃತಿಯಾಗತೊಡಗಿತು. ದರ್ಪಣ, ಪ್ರಭಾಕರ, ಹಿಂದೂ, ಅಮೃತ ಬಝಾರ ಪತ್ರಿಕಾ, ಕೇಸರಿ, ಮರಾಠಾ ಇತ್ಯಾದಿ ವರ್ತಮಾನಪತ್ರಗಳಲ್ಲಿ ಸರಕಾರದ ನೀತಿಯ ಬಗ್ಗೆ ಟೀಕೆಯಾಗತೊಡಗಿತು.



ವ್ಯೋಮೇಶಚಂದ್ರ ಬ್ಯಾನರ್ಜಿ

**ಭಾರತೀಯ ರಾಷ್ಟ್ರೀಯ ಸಭೆಯ ಸ್ಥಾಪನೆ:** 28 ಡಿಸೆಂಬರ 1885ರಂದು ಮುಂಬಯಿಯ ಗೋಕುಳದಾಸ ತೇಜಪಾಲ ಸಂಸ್ಕೃತ ಪಾಠಶಾಲೆಯಲ್ಲಿ ರಾಷ್ಟ್ರೀಯ ಸಭೆಯ ಪ್ರಥಮ ಅಧಿವೇಶನವು ಜರುಗಿತು. ಭಾರತದ ವಿವಿಧ ಪ್ರಾಂತಗಳಿಂದ 72 ಪ್ರತಿನಿಧಿಗಳು ಈ ಅಧಿವೇಶನಕ್ಕೆ ಬಂದಿದ್ದರು. ಕೋಲಕಾತಾದಲ್ಲಿಯ ಪ್ರಸಿದ್ಧ ವಕೀಲರಾದ ವ್ಯೋಮೇಶಚಂದ್ರ ಬ್ಯಾನರ್ಜಿಯವರು ಈ ಅಧಿವೇಶನದ ಅಧ್ಯಕ್ಷರಾಗಿದ್ದರು. ಇವರೆಲ್ಲರೂ ಕೂಡಿ ಇದೇ ಅಧಿವೇಶನದಲ್ಲಿ ಭಾರತೀಯ ರಾಷ್ಟ್ರೀಯ ಸಭೆಯ (ಇಂಡಿಯನ್ ನ್ಯಾಷನಲ್ ಕಾಂಗ್ರೆಸ) ಸ್ಥಾಪನೆ ಮಾಡಿದರು. ಆ್ಯಲನ್ ಆಕ್ಟೋವ್ಹಿಯನ್ ಹ್ಯೂಮ ಎಂಬ ಬ್ರಿಟಿಶ ಅಧಿಕಾರಿಯು ಕೂಡ ರಾಷ್ಟ್ರೀಯ ಸಭೆಯ ಸ್ಥಾಪನೆಯಲ್ಲಿ ಮುಂದಾಳುತನವನ್ನು ವಹಿಸಿದರು. ಭಾರತೀಯರಿಗೆ ಆಡಳಿತದಲ್ಲಿ ಹೆಚ್ಚು ಪ್ರತಿನಿಧಿತ್ವ ದೊರೆಯಬೇಕು, ಬ್ರಿಟಿಶ ಸರಕಾರವು ಸೈನ್ಯದ ಖರ್ಚನ್ನು ಕಡಿಮೆ ಮಾಡಬೇಕು ಇಂಥ ಬೇಡಿಕೆಗಳ ನಿವೇದನೆಯನ್ನು ಬ್ರಿಟಿಶ ಸರಕಾರದ ಕಡೆಗೆ ಕಳುಹಿಸಲಾಯಿತು.

**ರಾಷ್ಟ್ರೀಯ ಸಭೆಯ ಉದ್ದೇಶಗಳು:** ಧರ್ಮ, ವಂಶ, ಜಾತಿ, ಭಾಷೆ, ಭೌಗೋಲಿಕ ಪ್ರದೇಶ ಮುಂತಾದ ಭೇದಗಳನ್ನು ಮರೆತು ಭಾರತದ ಬೇರೆ ಬೇರೆ ಭಾಗಗಳಲ್ಲಿಯ ಜನರನ್ನು ಒಂದುಗೂಡಿಸುವುದು, ಪರಸ್ಪರರ ಸಮಸ್ಯೆಗಳನ್ನು ಅರಿತುಕೊಂಡು ವಿಚಾರ ವಿನಿಮಯ ಮಾಡುವುದು, ಜನರಲ್ಲಿ ಐಕ್ಯತೆಯ ಭಾವನೆಯನ್ನು ಬೆಳೆಸುವುದು, ರಾಷ್ಟ್ರದ ಉನ್ನತಿಗಾಗಿ ಪ್ರಯತ್ನ ಮಾಡುವುದು ಇವು ರಾಷ್ಟ್ರೀಯ ಸಭೆಯ ಉದ್ದೇಶಗಳಾಗಿದ್ದವು.

**ಸೌಮ್ಯವಾದಿ ಯುಗ (1885ರಿಂದ 1905):** ರಾಷ್ಟ್ರೀಯ ಸಭೆಯ ಸ್ಥಾಪನೆಯ ನಂತರದ ಆರಂಭದ ದಶಕದಲ್ಲಿ ಅವರ ಕಾರ್ಯವು ನಿಧಾನವಾಗಿ ಮತ್ತು ಸತತವಾಗಿ ನಡೆದಿತ್ತು. ರಾಷ್ಟ್ರೀಯ ಸಭೆಯ ನೇತಾರರು ವಾಸ್ತವವಾದಿ ಮತ್ತು ಉನ್ನತ ಶಿಕ್ಷಣವನ್ನು ಪಡೆದವರಾಗಿದ್ದರು. ಸಂಘಟನೆಯ ಕಾರ್ಯದಿಂದ ಭದ್ರವಾದ ಅಡಿಪಾಯ ನಿರ್ಮಾಣವಾಗಬೇಕು ಎಂಬುದರ ಅರಿವು ಅವರಿಗಿತ್ತು. ಅವರ ಮೇಲೆ ಪಾಶ್ಚಾತ್ಯ ವಿಚಾರವಂತರ ಉದಾರಮತವಾದಿ ತತ್ವಜ್ಞಾನದ, ಸ್ವಾತಂತ್ರ್ಯ, ಸಮತೆ, ಬಂಧುತ್ವ ಈ ಮೌಲ್ಯಗಳ ಪ್ರಭಾವವಿತ್ತು. ಘಟನಾತ್ಮಕ ಮಾರ್ಗದ ಮೇಲೆ ಅವರ ವಿಶ್ವಾಸವಿತ್ತು. ಘಟನಾತ್ಮಕ ಮಾರ್ಗದಿಂದ ಬೇಡಿಕೆ ಮಾಡಿದರೆ ಇಂಗ್ಲೀಷರು ತಮ್ಮ ಬೇಡಿಕೆಗಳನ್ನು ಪೂರ್ಣ ಮಾಡಬಹುದೆನ್ನುವ ಆಸೆ ಅವರಿಗಿತ್ತು ಗೋಪಾಳ ಕೃಷ್ಣ ಗೋಖಲೆ, ಫಿರೋಜಶಹಾ ಮೆಹತಾ, ಸುರೇಂದ್ರನಾಥ ಬ್ಯಾನರ್ಜಿ ಇವರು ಸೌಮ್ಯವಾದಿ ಮುಖಂಡರಾಗಿದ್ದರು.

ಪ್ರಾಂತಿಕ ಶಾಸಕಾಂಗದಲ್ಲಿ ಜನರ ಪ್ರತಿನಿಧಿಗಳು ಇರಬೇಕು, ಸುಶಿಕ್ಷಿತ ಭಾರತೀಯರಿಗೆ ನೌಕರಿಗಳು ದೊರೆಯಬೇಕು, ಹೆಚ್ಚುತ್ತಿರುವ ಸೈನ್ಯದ ಖರ್ಚನ್ನು ಕಡಿಮೆ ಮಾಡಬೇಕು, ಜನರ ಕಾಯ್ದೆಬದ್ಧ ಹಕ್ಕುಗಳ ರಕ್ಷಣೆಯಾಗಬೇಕೆಂದು ಕಾರ್ಯಾಂಗ ಮತ್ತು ನ್ಯಾಯಾಂಗಗಳನ್ನು ಸ್ವತಂತ್ರವಾಗಿರಿಸಬೇಕು ಎಂಬ ವಿವಿಧ ಠರಾವುಗಳನ್ನು ರಾಷ್ಟ್ರೀಯ ಸಭೆಯ ಅಧಿವೇಶನದಲ್ಲಿ ಮಂಡಿಸಲಾಯಿತು.

ರಾಷ್ಟ್ರೀಯ ಚಳುವಳಿಯಲ್ಲಿ ಒಡಕನ್ನು ಹುಟ್ಟಿಸುವ ಸಲುವಾಗಿ ಈ ನಂತರದ ಕಾಲದಲ್ಲಿ ಬ್ರಿಟಿಶರು 'ವಿಭಜಿಸಿ ಆಳು' ಎಂಬ ನೀತಿಯನ್ನು ಅನುಸರಿದರು.

**ಉಗ್ರವಾದಿ ಯುಗ (1905-1920):** ರಾಜಕೀಯ ದೃಷ್ಟಿಯಿಂದ ಜಾಗೃತರಾದ ಭಾರತದಲ್ಲಿಯ ಸರ್ವ ಮುಖಂಡರು ಜಾತಿ, ಧರ್ಮ, ಭಾಷೆ, ಪ್ರಾಂತ ಈ ಎಲ್ಲ ಭೇದಗಳನ್ನು ಬದಿಗೆ ಸರಿಸಿ ರಾಷ್ಟ್ರೀಯ ಸಭೆಯ ವೇದಿಕೆಯ ಮೇಲೆ ಒಟ್ಟಿಗೆ ಬರುತ್ತಿದ್ದರು. ರಾಷ್ಟ್ರೀಯ ಸಭೆಯ ಉದ್ದೇಶಗಳು ಮತ್ತು ಘಟನಾತ್ಮಕ ಮಾರ್ಗದಿಂದ ಚಳುವಳಿಯನ್ನು ಮುಂದುವರಿಸುವುದರಲ್ಲಿ ಅವರ ಒಮ್ಮತವಿದ್ದರೂ ಕಾರ್ಯ ಪದ್ಧತಿಯ ವಿಷಯವಾಗಿ ಅವರಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಈ ಭಿನ್ನಾಭಿಪ್ರಾಯಗಳು ತಾತ್ವಿಕ ಸ್ವರೂಪದ್ದಾಗಿದ್ದವು. ರಾಜಕೀಯ ಚಳುವಳಿಯಲ್ಲಿಯ ಈ ಭಿನ್ನಾಭಿಪ್ರಾಯಗಳ ಮೇಲಿಂದ ಎರಡು ಪ್ರಮುಖ ರಾಜಕೀಯ ಗುಂಪುಗಳು ನಿರ್ಮಾಣವಾದವು. ಶಾಂಶತೆಯ ಘಟನಾತ್ಮಕ ಮಾರ್ಗದ ಸಮರ್ಥನೆ ಮಾಡುವವರು ಸೌಮ್ಯವಾದಿಗಳು ಹಾಗೂ ಸ್ವಾತಂತ್ರ್ಯದ ಸಲುವಾಗಿ ಅಧಿಕ ತೀವ್ರ ಸಂಘರ್ಷ ಮಾಡಬೇಕು ಎಂದು ತಿಳಿಯುವವರು ಉಗ್ರವಾದಿಗಳು. ಲಾಲಾ ಲಜಪತರಾಯ, ಬಾಳ ಗಂಗಾಧರ ಟಿಳಕ ಮತ್ತು ಬಿಪಿನಚಂದ್ರ ಪಾಲ ಇವರು ಉಗ್ರವಾದಿ ಮುಖಂಡರೆಂದು ತಿಳಿಯಲ್ಪಡುತ್ತಿದ್ದರು.




ಲೋಕಮಾನ್ಯ ಟಿಳಕ

ಆರಂಭದ ಕಾಲದಲ್ಲಿ ಉಗ್ರವಾದಿ ಮುಖಂಡರು ಭಾರತೀಯರಲ್ಲಿ ರಾಜಕೀಯ ಜಾಗೃತಿಯನ್ನುಂಟು ಮಾಡುವ ಸಲುವಾಗಿ ವರ್ತಮಾನಪತ್ರ, ರಾಷ್ಟ್ರೀಯ ಉತ್ಸವ ಮತ್ತು ರಾಷ್ಟ್ರೀಯ ಶಿಕ್ಷಣ ಈ ಮಾರ್ಗಗಳನ್ನು ಅನುಸರಿಸಿದರು. 'ಕೇಸರಿ' ಮತ್ತು 'ಮರಾಠಾ' ಈ ವೃತ್ತಪತ್ರಗಳಲ್ಲಿ ಲೋಕಮಾನ್ಯ ಟಿಳಕರು ಸರಕಾರದ ದಬ್ಬಾಳಿಕೆಯ ಮೇಲೆ ಕಟುವಾದ ಟೀಕೆ ಮಾಡಿದರು. ಬಂಗಾಲ ಪ್ರಾಂತದಲ್ಲಿ 'ಅಮೃತ ಬಝಾರ ಪತ್ರಿಕಾ' ಇದು ಉಗ್ರವಾದಿ ವಿಚಾರಗಳ ಮುಖಪತ್ರವಾಗಿತ್ತು. ಪರಸ್ಪರರಲ್ಲಿಯ ಭೇದಗಳನ್ನು ಮರೆತು ಜನರು ಒಂದಾಗಬೇಕು, ಅವರಲ್ಲಿ ವಿಚಾರಗಳ ಕೊಡು-ಕೊಳ್ಳುವಿಕೆಯಾಗಬೇಕು, ರಾಷ್ಟ್ರಪುರುಷರ ಕಾರ್ಯಗಳಿಂದ ಸಾಮಾನ್ಯ ಜನತೆಗೆ ಪ್ರೇರಣೆ ದೊರೆಯಬೇಕು ಎಂಬ ಉದ್ದೇಶಗಳಿಂದ ಟಿಳಕರು ಶಿವಜಯಂತಿ ಮತ್ತು ಗಣೇಶೋತ್ಸವಗಳನ್ನು ಆಯೋಜಿಸಿದರು. ರಾಜಕೀಯ ಕಾರಣಕ್ಕಾಗಿ ಜನರು ಒಂದೆಡೆ ಬಂದರೆ ಸರಕಾರವು ಅದನ್ನು ಪ್ರತಿಬಂಧಿಸುವುದು, ಆದರೆ ಧಾರ್ಮಿಕ ಕಾರಣಕ್ಕಾಗಿ ಜನರು ಒಂದೆಡೆ ಸೇರಿದರೆ ಸರಕಾರವು ಅದನ್ನು ಪ್ರತಿಬಂಧಿಸಲಾರದು ಎಂಬುದು ಅವರ ಅಭಿಪ್ರಾಯವಾಗಿತ್ತು. ಟಿಳಕರು ಮಂಡಾಲೆಯ ಸೆರೆಮನೆಯಲ್ಲಿ 'ಗೀತಾರಹಸ್ಯ' ಎಂಬ ಗ್ರಂಥವನ್ನು ಬರೆದರು. ಅದರ ತಿರುಳು ಕರ್ಮಯೋಗವಾಗಿದ್ದು ಜನರು ಕೂಡ ಕೃತಿಶೀಲರಾಗಬೇಕು ಎಂಬುದಕ್ಕೆ ಅವರು ಮಹತ್ವ ನೀಡಿದರು. ಸ್ವಭಾಷೆ ಮತ್ತು ಸ್ವಸಂಸ್ಕೃತಿಯ ವಿಷಯವಾಗಿ ಪ್ರೇಮ ಮತ್ತು ಆಸಕ್ತಿಯನ್ನು ಹೊಂದಿರುವ ಪೀಳಿಗೆ ನಿರ್ಮಾಣವಾಗಬೇಕೆಂಬ ಉದ್ದೇಶದಿಂದ ಉಗ್ರವಾದಿ ಮುಖಂಡರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದರು. ಲಕ್ಷಾವಧಿ ಜನರು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ ಸರಕಾರಕ್ಕೆ ಆಹ್ವಾನ ನೀಡಿ ಸಂಘರ್ಷ ಮಾಡಿದರೆ ಮಾತ್ರ ಯಶಸ್ಸು ದೊರೆಯುವುದು ಎಂಬುದು ಉಗ್ರವಾದಿ ನೇತಾರರ ಅಭಿಮತವಾಗಿತ್ತು. ಚಳುವಳಿಯನ್ನು ಹೆಚ್ಚು ತೀವ್ರಗೊಳಿಸ ಬೇಕೆಂಬುದರ ಬಗ್ಗೆ ಅವರಲ್ಲಿ ಒಮ್ಮತವಿತ್ತು. ಆದರೆ ಅವರು ಸಶಸ್ತ್ರ ಬಂಡಾಯದ ನಿಲುವನ್ನು ತಾಳದೆ ವ್ಯಾಪಕ ಜನ ಆಂದೋಲನೆಯನ್ನು ಮಾಡಬೇಕು ಎಂದು ಆಗ್ರಹದಿಂದ ಪ್ರತಿಪಾದಿಸಿದರು. ಸೌಮ್ಯ ವಾದಿಗಳು ಸ್ವಾತಂತ್ರ್ಯ ಚಳುವಳಿಯ ಅಡಿಪಾಯವನ್ನು ಹಾಕಿದರು ಹಾಗೂ ಉಗ್ರವಾದಿಗಳು ಈ ಚಳುವಳಿಯನ್ನು ಮುಂದುವರಿಸಿದರು.

1897ರಲ್ಲಿ ಪುಣೆಯಲ್ಲಿ ಪ್ಲೇಗಿನ ಹಾವಳಿಯು ಹಾಹಾಕಾರವನ್ನೆಬ್ಬಿಸಿತು. ನೂರಾರು ಜನರು ಮರಣವನ್ನಪ್ಪಿದರು. ಈ ಸಾಂಕ್ರಾಮಿಕ ರೋಗವನ್ನು ನಿಯಂತ್ರಿಸಲು ರ್‍ಯಾಂಡ್ ಎಂಬ ಅಧಿಕಾರಿಯ ನೇಮಕ ಮಾಡಲಾಯಿತು. ಪ್ಲೇಗ ರೋಗಿಯನ್ನು ಹುಡುಕಿ ತೆಗೆಯುವ ಸಲುವಾಗಿ ಪರಿಶೋಧನೆಯ ಸತ್ರ ಆರಂಭವಾಯಿತು. ಜನರ ಮೇಲೆ ಅನ್ಯಾಯ ದೌರ್ಜನ್ಯ ಮಾಡಲಾಯಿತು. ಇದರ ಸೇಡು ತೀರಿಸಿಕೊಳ್ಳುವ ಸಲುವಾಗಿ ಚಾಫೇಕರ ಬಂಧುಗಳು ರ್‍ಯಾಂಡನ ಕೊಲೆ ಮಾಡಿದರು. ಈ ಒಳಸಂಚಿನಲ್ಲಿ ಟಿಳಕರ ಸಂಬಂಧವನ್ನು ಜೋಡಿಸುವ ಪ್ರಯತ್ನವನ್ನು ಸರಕಾರವು ಮಾಡಿತು. ಅದರಲ್ಲಿ ಯಶಸ್ಸು ದೊರೆಯಲಿಲ್ಲವಾದರೂ. ಸರಕಾರವು ಸೇಡಿನ ಭಾವನೆಯಿಂದ ಟಿಳಕರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಿತು.

**ಬಂಗಾಲದ ವಿಭಜನೆ:** ಹಿಂದೂ-ಮುಸ್ಲಿಮ ಸಮಾಜದಲ್ಲಿ ಒಡಕಿನ ಬೀಜಗಳನ್ನು ಬಿತ್ತಿ 'ವಿಭಜಿಸಿ ಆಳು' ಎಂಬ ನೀತಿಯನ್ನು ಅನುಸರಿಸಲು ಬ್ರಿಟಿಶರು ನಿರ್ಧರಿಸಿದರು. ತತ್ಕಾಲೀನ ವೈಸರಾಯ ಲಾರ್ಡ್ ಕರ್ಝನ್ನನು ಅದಕ್ಕೆ ಉತ್ತೇಜನೆ ನೀಡಿದನು. ಬಂಗಾಲ ಇದು ದೊಡ್ಡ ಪ್ರಾಂತವಾಗಿತ್ತು. ಇಷ್ಟು ದೊಡ್ಡ ಪ್ರಾಂತದ ಆಡಳಿತವನ್ನು ನೋಡಿಕೊಳ್ಳುವುದು ಕಠಿಣವಾಗಿದೆಯೆಂಬ ಕಾರಣವನ್ನು ಮುಂದಿಟ್ಟು ಲಾರ್ಡ್ ಕರ್ಝನ್ ಇವನು 1905ರಲ್ಲಿ ಬಂಗಾಲ ಪ್ರಾಂತದ ವಿಭಜನೆಯನ್ನು ಜಾಹೀರು ಮಾಡಿದನು. ಈ ವಿಭಜನೆಯಿಂದಾಗಿ ಮುಸ್ಲಿಮರು ಬಹುಸಂಖ್ಯಾತರಿರುವ ಪೂರ್ವ ಬಂಗಾಲ ಹಾಗೂ ಹಿಂದುಗಳು ಬಹುಸಂಖ್ಯಾತರಿರುವ ಪಶ್ಚಿಮ ಬಂಗಾಲ ಈ ರೀತಿಯ ರಚನೆಯಾಯಿತು. ವಿಭಜನೆಯಿಂದ ಹಿಂದೂ- ಮುಸ್ಲಿಮರಲ್ಲಿ ಒಡಕನ್ನು ಹುಟ್ಟಿಸಿ ಸ್ವಾತಂತ್ರ್ಯ ಚಳುವಳಿಯನ್ನು ದುರ್ಬಲಗೊಳಿಸುವುದು ಅವನ ನಿಜವಾದ ಉದ್ದೇಶವಾಗಿತ್ತು.

**ವಂಗಭಂಗ ಚಳುವಳಿ:** ಬಂಗಾಲದಲ್ಲಷ್ಟೇ ಅಲ್ಲ, ಸಂಪೂರ್ಣ ಭಾರತದಲ್ಲಿ ವಿಭಜನೆಯ ವಿರುದ್ಧ ಜನಮತವು ಜಾಗೃತವಾಯಿತು. 16 ಅಕ್ಟೋಬರ ಈ ವಿಭಜನೆಯ ದಿನವನ್ನು ರಾಷ್ಟ್ರೀಯ ಶೋಕದಿನವೆಂದು ಆಚರಿಸಲಾಯಿತು. ಭಾರತದ ತುಂಬೆಲ್ಲ ನಿಷೇಧ ಸಭೆಗಳ ಮುಖಾಂತರ ಸರಕಾರವನ್ನು ಧಿಕ್ಕರಿಸಲಾಯಿತು ಎಲ್ಲೆಡೆ ಜನರು 'ಒಂದೇ ಮಾತರಂ' ಗೀತೆಯನ್ನು ಹಾಡತೊಡಗಿದರು. ಐಕ್ಯತೆಯ ಪ್ರತೀಕವೆಂದು ರಕ್ಷಾಬಂಧನದ ಕಾರ್ಯಕ್ರಮವನ್ನು ಏರ್ಪಡಿಸಲಾಯಿತು. ಸರಕಾರಿ ಶಾಲೆ, ಮಹಾವಿದ್ಯಾಲಯಗಳ ಮೇಲೆ ಬಹಿಷ್ಕಾರ ಹಾಕಿ ಬೃಹತ್ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಚಳುವಳಿಯಲ್ಲಿ ಭಾಗವಹಿಸಿದರು. ವಂಗಭಂಗ ಚಳುವಳಿಯ ನೇತೃತ್ವವನ್ನು ಸುರೇಂದ್ರನಾಥ ಬ್ಯಾನರ್ಜಿ, ಆನಂದ ಮೋಹನ ಬೋಸ, ರವೀಂದ್ರನಾಥ ಟಾಗೋರ ಮುಂತಾದವರು ವಹಿಸಿದರು. ವಂಗಭಂಗ ಚಳುವಳಿಯಿಂದ ಭಾರತೀಯ ರಾಷ್ಟ್ರೀಯ ಸಭೆಯ ವ್ಯಾಪ್ತಿ ಹೆಚ್ಚಿತು. ಅದು ಒಂದು ರಾಷ್ಟ್ರೀಯ ಚಳುವಳಿಯಾಯಿತು. ಅಸಂತೋಷದ ತೀವ್ರತೆಯನ್ನು ಕಂಡು 1911ರಲ್ಲಿ ಬ್ರಿಟಿಶರು ಬಂಗಾಲದ ವಿಭಜನೆಯನ್ನು ರದ್ದುಪಡಿಸಿದರು.


ದಾದಾಭಾಯಿ ನೌರೋಜಿ

**ರಾಷ್ಟ್ರೀಯ ಸಭೆಯ ಚತು: ಸೂತ್ರಗಳು:** 1905ರ ರಾಷ್ಟ್ರೀಯ ಸಭೆಯ ಅಧಿವೇಶನದ ಅಧ್ಯಕ್ಷರು ಗೋಪಾಲಕೃಷ್ಣ ಗೋಖಲೆ ಯವರಾಗಿದ್ದರು. ಅವರು ವಂಗ ಭಂಗ ಚಳುವಳಿಗೆ ಬೆಂಬಲ ನೀಡಿದರು. 1906ರ ಅಧಿವೇಶನದ ಅಧ್ಯಕ್ಷರು ದಾದಾಭಾಯಿ ನೌರೋಜಿ ಯವರಾಗಿದ್ದರು. ದಾದಾಭಾಯಿ ನೌರೋಜಿಯವರು ವೇದಿಕೆಯ ಮೇಲಿಂದ 'ಸ್ವರಾಜ್ಯ' ಈ ಶಬ್ದವನ್ನು ಪ್ರಪ್ರಥಮವಾಗಿ ಉಚ್ಚರಿಸಿದರು. ಅಧ್ಯಕ್ಷಸ್ಥಾನದಿಂದ

ಮಾತನಾಡುವಾಗ ಅವರು ಸಂಘಟಿತರಾಗಿರಿ, ಅವಿಶ್ರಾಂತ ಪ್ರಯತ್ನ ಮಾಡಿರಿ ಹಾಗೂ ಸ್ವರಾಜ್ಯದ ಧ್ಯೇಯವನ್ನು ಪೂರ್ಣಗೊಳಿಸಿರಿ ಅಂದರೆ ಇಂದು ದಾರಿದ್ರ್ಯ, ಹೊಟ್ಟೆಗೆ ಅನ್ನವಿಲ್ಲದಿರುವಿಕೆ ಮತ್ತು ರೋಗ ರುಜಿನಗಳಿಗೆ ಬಲಿಯಾಗುತ್ತಿರುವ ಲಕ್ಷಾವಧಿ ಬಾಂಧವರನ್ನು ಉಳಿಸಬಹುದು ಅಲ್ಲದೆ ಸುಧಾರಿತ ರಾಷ್ಟ್ರಗಳಲ್ಲಿ ಮೊದಲು ಭಾರತಕ್ಕಿದ್ದ ಗೌರವದ ಸ್ಥಾನವು ಮತ್ತೆ ಪ್ರಾಪ್ತವಾಗುವುದು ಎಂಬ ಸಂದೇಶ ನೀಡಿದರು. ಇದೇ ಅಧಿವೇಶನದಲ್ಲಿ ಸ್ವರಾಜ್ಯ, ಸ್ವದೇಶಿ, ರಾಷ್ಟ್ರೀಯ ಶಿಕ್ಷಣ ಹಾಗೂ ಬಹಿಷ್ಕಾರ ಈ ಚತು:ಸೂತ್ರಗಳನ್ನು ರಾಷ್ಟ್ರೀಯ ಸಭೆಯು ಒಮ್ಮತದಿಂದ ಸ್ವೀಕರಿಸಿತು. ಸ್ವದೇಶಿ ಚಳುವಳಿಯಿಂದಾಗಿ ನಾವು ಸ್ವಯಂಪೂರ್ಣ ಮತ್ತು ಸ್ವಾವಲಂಬಿಯಾಗೋಣ. ಸ್ವದೇಶಿಯ ಮಾರ್ಗದಿಂದ ನಡೆಯುವ ಸಲುವಾಗಿ ನಮ್ಮ ದೇಶದಲ್ಲಿಯ ಬಂಡವಾಳ, ಸಾಧನಸಾಮಗ್ರಿಗಳು, ಮಾನವ ಸಂಪನ್ಮೂಲ ಮತ್ತು ಇನ್ನಿತರ ಸರ್ವ ಶಕ್ತಿಯನ್ನು ಒಟ್ಟುಗೂಡಿಸಬೇಕಾಗುವುದು ಹಾಗೂ ಇದರಿಂದಲೇ ನಮ್ಮ ದೇಶದ ಹಿತವನ್ನು ಸಾಧಿಸಬಹುದು.

**ಗೊತ್ತಿದೆಯೇ ನಿಮಗೆ ?**


ಗೋಪಾಳಕೃಷ್ಣ ಗೋಖಲೆ

ಗೋಪಾಳಕೃಷ್ಣ ಗೋಖಲೆ ಯವರು 1905ರಲ್ಲಿ 'ಭಾರತ ಸೇವಕ ಸಮಾಜ'ದ ಸ್ಥಾಪನೆ ಮಾಡಿದರು. ಜನರಲ್ಲಿ ದೇಶಭಕ್ತಿಯನ್ನು ನಿರ್ಮಾಣ ಮಾಡಿ ಸ್ವಾರ್ಥ ತ್ಯಾಗದ ಭಾವನೆಯನ್ನು ಮೂಡಿಸುವುದು, ಧರ್ಮ ಮತ್ತು ಜಾತಿಗಳಲ್ಲಿಯ ವಿರೋಧವನ್ನು ನಷ್ಟಪಡಿಸಿ ಸಾಮಾಜಿಕ ಐಕ್ಯತೆಯನ್ನು ನಿರ್ಮಿಸುವುದು, ಶಿಕ್ಷಣದ ಪ್ರಸಾರ ಮಾಡುವುದು-ಇವು ಭಾರತ ಸೇವಕ ಸಮಾಜದ ಮುಖ್ಯ ಉದ್ದೇಶಗಳಾಗಿದ್ದವು.

ವಿದೇಶಿ ವಸ್ತುಗಳ ಮೇಲೆ ಬಹಿಷ್ಕಾರವು ಮೊದಲ ಮೆಟ್ಟಲಾಗಿದ್ದು ವಿದೇಶಿ ಅಧಿಪತ್ಯದ ಮೇಲೆ ಬಹಿಷ್ಕಾರವು ನಂತರದ ಮೆಟ್ಟಲು ಎಂದು ನಿರ್ಧರಿಸಲಾಯಿತು. ಬಹಿಷ್ಕಾರದ ಮೂಲಕ ಬ್ರಿಟಿಶ ಸಾಮ್ರಾಜ್ಯದ ಬುಡದ ಮೇಲೆಯೇ ಪೆಟ್ಟು ಹಾಕಬಹುದು ಎಂಬುದು ಮುಖಂಡರ ಅಭಿಪ್ರಾಯವಾಗಿತ್ತು.

**ಉಗ್ರವಾದಿ ಮತ್ತು ಸೌಮ್ಯವಾದಿಗಳಲ್ಲಿಯ ಭಿನ್ನಾಭಿಪ್ರಾಯಗಳು:** ರಾಷ್ಟ್ರೀಯ ಸಭೆಯಲ್ಲಿಯ ವಿಚಾರಸರಣಿಯಲ್ಲಿಯ ಭಿನ್ನಾಭಿಪ್ರಾಯಗಳು 1907ರ ಸೂರತ ಅಧಿವೇಶನದಲ್ಲಿ ಪರಾಕಾಷ್ಠೆಯನ್ನು ತಲುಪಿದವು. ಸ್ವದೇಶಿ ಮತ್ತು ಬಹಿಷ್ಕಾರ ಈ ಠರಾವುಗಳನ್ನು ಬದಿಗಿರಿಸಬೇಕೆಂಬುದು ಸೌಮ್ಯವಾದಿಗಳ ಪ್ರಯತ್ನವಾಗಿತ್ತು. ಅದು ಯಶಸ್ವಿಯಾಗಬಾರದೆಂಬುದು ಉಗ್ರವಾಗಿಗಳ ಪ್ರಯತ್ನವಾಗಿತ್ತು. ಗೋಪಾಳಕೃಷ್ಣ ಗೋಖಲೆ, ಸುರೇಂದ್ರನಾಥ ಬ್ಯಾನರ್ಜಿ, ಫಿರೋಜಶಹಾ ಮೆಹತಾ ಮುಂತಾದ ಸೌಮ್ಯವಾದಿ ಮುಖಂಡರು, ಉಗ್ರವಾದಿ ನೇತಾರರು ರಾಷ್ಟ್ರೀಯ ಸಭೆಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನ ಮಾಡುತ್ತಿದ್ದಾರೆ ಎಂದು ಆರೋಪಿಸಿದರು. ಲಾಲಾ ಲಜಪತರಾಯ ಇವರು ಮಧ್ಯಸ್ಥಿಕೆಯನ್ನು ಮಾಡುವ ಪ್ರಯತ್ನ ಮಾಡಿದರು. ಭಾರತೀಯ ರಾಷ್ಟ್ರೀಯ ಸಭೆಯು ರಾಷ್ಟ್ರೀಯ ವೇದಿಕೆಯಾಗಿದ್ದು ಅದರಲ್ಲಿ ಒಡಕು ನಿರ್ಮಾಣವಾದರೆ ನಡೆಯಲಾರದು ಎಂಬುದು ಟಿಳಕರ ಅಭಿಪ್ರಾಯವಾಗಿತ್ತು. ಅಧಿವೇಶನದ ಸಮಯದಲ್ಲಿ ಉದ್ವೇಗ ಹೆಚ್ಚಿತು ಹಾಗೂ ಒಡಂಬಡಿಕೆ ಅಸಾಧ್ಯವಾದುದರಿಂದ ಕೊನೆಗೆ ಭಾರತೀಯ ರಾಷ್ಟ್ರೀಯ ಸಭೆಯಲ್ಲಿ ಒಡಕು ನಿರ್ಮಾಣವಾಯಿತು.

**ಬ್ರಿಟಿಶ ಸರಕಾರದ ದಬ್ಬಾಳಿಕೆ:** ವಂಗಭಂಗದ ನಂತರ ಆರಂಭವಾದ ಪ್ರಭಾವಶಾಲಿ ಜನ ಆಂದೋಲನವನ್ನು ಕಂಡು ಸರಕಾರವು ಅಸ್ವಸ್ಥವಾಯಿತು. ಈ ಆಂದೋಲನವನ್ನು ನಿಯಂತ್ರಿಸಲು ಸರಕಾರವು ದಬ್ಬಾಳಿಕೆಯ ನೀತಿಯನ್ನು ಅನುಸರಿಸಿತು. ಸಾರ್ವಜನಿಕ ಸಭೆಗಳನ್ನು ಕಾನೂನಿನ ಮೂಲಕ ನಿಷೇಧಿಸಿತು. ಈ ಕಾನೂನನ್ನು ಉಲ್ಲಂಘಿಸುವವರಿಗೆ ಕಠೋರ ಶಿಕ್ಷೆಯನ್ನು ವಿಧಿಸಲಾಯಿತು. ಶಾಲೆಯ ಮಕ್ಕಳಿಗೂ ಚಾಟಿಯಿಂದ ಹೊಡೆಯಲಾಯಿತು. ವೃತ್ತಪತ್ರಿಕೆಗಳ ಮೇಲೆ ಅನೇಕ ನಿರ್ಬಂಧಗಳನ್ನು ಹೇರಲಾಯಿತು. ಸರಕಾರವನ್ನು ಟೀಕಿಸಿದ ಆಪಾದನೆಗಾಗಿ ಅನೇಕ ಮುದ್ರಣಾಲಯಗಳನ್ನು ಜಪ್ತಿ ಮಾಡಲಾಯಿತು. ಲೇಖಕ ಮತ್ತು ಸಂಪಾದಕರನ್ನು ಸೆರೆಮನೆಯಲ್ಲಿಡಲಾಯಿತು. ಸರಕಾರವು ಉಗ್ರವಾದಿ ಮುಖಂಡರ ವಿರುದ್ಧ ಕಠಿಣವಾದ ಕ್ರಮ ಕೈಕೊಂಡಿತು. ಬಂಗಾಲದಲ್ಲಿ ಇದರ ತೀವ್ರ ಪ್ರತಿಕ್ರಿಯೆ ಉಂಟಾಯಿತು. ಕ್ರಾಂತಿಕಾರಕರು ಗೋಲೀಬಾರು, ಬಾಂಬುದಾಳಿಗಳ ಮಾರ್ಗವನ್ನು ಅನುಸರಿಸಿದರು ಕೇಸರಿ ಪತ್ರಿಕೆಯಲ್ಲಿ ಈ ಬಾಂಬು ಹಲ್ಲೆಯ ಸಮರ್ಥನೆಯನ್ನು ಮಾಡುವ ಲೋಕಮಾನ್ಯ ಟಿಳಕರ ಮೇಲೆ ರಾಜದ್ರೋಹದ ಆರೋಪ ಹೊರಿಸಿ ಅವರನ್ನು ಆರು ವರ್ಷ


ಲಾಲ-ಬಾಲ-ಪಾಲ

ಮ್ಯಾನಮಾರದಲ್ಲಿಯ ಮಂಡಾಲೆಯ ಸೆರೆಮನೆಗೆ ಕಳುಹಿಸಿತು. ಬಿಪಿನಚಂದ್ರ ಪಾಲರಿಗೆ ಸೆರೆಮನೆವಾಸದ ಶಿಕ್ಷೆಯನ್ನು ವಿಧಿಸಿತು ಹಾಗೂ ಲಾಲಾ ಲಜಪತರಾಯರನ್ನು ಪಂಜಾಬಿನಿಂದ ಗಡಿಪಾರು ಮಾಡಿತು.

**ಮುಸ್ಲೀಮ ಲೀಗ ಸ್ಥಾಪನೆ:** ವಂಗಭಂಗ ಚಳುವಳಿಯಲ್ಲಿ ರಾಷ್ಟ್ರೀಯ ಸಭೆಗೆ ದೊರೆಯುವ ಜನತೆಯ ಪ್ರಚಂಡವಾದ ಬೆಂಬಲವನ್ನು ನೋಡಿ ಬ್ರಿಟಿಶ ಆಡಳಿತಗಾರರು ಹತಾಶರಾದರು. ಬ್ರಿಟಿಶರು 'ವಿಭಜಿಸಿ ಆಳು' ಎಂಬ ನೀತಿಯನ್ನು ಮತ್ತೊಮ್ಮೆ ಅವಲಂಬಿಸಿದರು. ಮುಸಲ್ಮಾನರ ಹಿತಸಂಬಂಧಗಳ ರಕ್ಷಣೆಗಾಗಿ ಅವರ ಸ್ವತಂತ್ರ ರಾಜಕೀಯ ಸಂಘಟನೆ ಇರಬೇಕೆಂದು ಅವರು ಪ್ರಚಾರ ಮಾಡಲಾರಂಭಿಸಿದರು. ಬ್ರಿಟಿಶ ಸರಕಾರದ ಈ ಪ್ರೋತ್ಸಾಹದಿಂದ ಮುಸ್ಲಿಮ ಸಮಾಜದಲ್ಲಿಯ ಉಚ್ಚ ವರ್ಗದವರ ಒಂದು ನಿಯೋಗವು ಆಗಾಖಾನರ ನೇತೃತ್ವದಲ್ಲಿ ಗವ್ಹರ್ನರ ಜನರಲ್ ಲಾರ್ಡ ಮಿಂಟೋನಿಗೆ ಭೇಟಿಯಾಯಿತು. ಲಾರ್ಡ ಮಿಂಟೋ ಮತ್ತು ಇತರ ಬ್ರಿಟಿಶ ಅಧಿಕಾರಿಗಳ ಉತ್ತೇಜನದಿಂದ 1906ರಲ್ಲಿ 'ಮುಸ್ಲಿಮ ಲೀಗ'ದ ಸ್ಥಾಪನೆಯಾಯಿತು.

**ಮೋರ್ಲೆ-ಮಿಂಟೋ ಕಾಯ್ದೆ:** ಭಾರತೀಯ ಜನರಲ್ಲಿ ಬ್ರಿಟಿಶ ಸರಕಾರದ ಕಾರ್ಯದ ವಿಷಯವಾಗಿ ಅಸಂತೋಷವಿತ್ತು. ಭಾರತೀಯ ಜನತೆಯ ದಾರಿದ್ರ್ಯದ ಮುಖ್ಯಕಾರಣವೆಂದರೆ ಬ್ರಿಟಿಶರ ಆರ್ಥಿಕ ನೀತಿಯಾಗಿದೆಯೆಂಬ ಭಾವನೆ ಜನತೆಯಲ್ಲಿತ್ತು. ಕರ್ಝನ್‌ನ ದಬ್ಬಾಳಿಕೆಯ ನೀತಿ, ಸುಶಿಕ್ಷಿತ ಭಾರತೀಯರನ್ನು ನೌಕರಿಗಳಲ್ಲಿ ಸಮಾವೇಶ ಮಾಡದಿರುವುದು, ಭಾರತದ ಹೊರಗಡೆ ಆಫ್ರಿಕೆಯಲ್ಲಿ ಭಾರತೀಯರ ಜೊತೆ ಅನ್ಯಾಯಕಾರಕ ವರ್ತನೆ ಇವುಗಳಿಂದಾಗಿ ಅಸಂತೋಷವು ಇನ್ನೂ ಹೆಚ್ಚಿತು. ಭಾರತೀಯರ ಈ ಅಸಂತೋಷವನ್ನು ತಾತ್ಕಾಲಿಕವಾಗಿ ಕಡಿಮೆ ಮಾಡುವ ಸಲುವಾಗಿ 1909 ಮೋರ್ಲೆಮಿಂಟೋ ಸುಧಾರಣಾ ಕಾಯ್ದೆಯನ್ನು ಮಾಡಲಾಯಿತು. ಈ ಕಾಯ್ದೆಯ ಪ್ರಕಾರ ಶಾಸಕಾಂಗದಲ್ಲಿ ಭಾರತೀಯ ಪ್ರತಿನಿಧಿಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು. ಮತ್ತು ಶಾಸಕಾಂಗದಲ್ಲಿ ಕೆಲವು ಚುನಾಯಿತ ಭಾರತೀಯ ಪ್ರತಿನಿಧಿಗಳ ಸಮಾವೇಶ ಮಾಡುವ ಏರ್ಪಾಟು ಮಾಡಲಾಯಿತು. ಇದೇ ಕಾಯ್ದೆಯ ಪ್ರಕಾರ ಮುಸ್ಲಿಮರಿಗಾಗಿ ಪ್ರತ್ಯೇಕವಾದ ಮತಕ್ಷೇತ್ರಗಳನ್ನು ನಿರ್ಮಿಸಲಾಯಿತು. ಬ್ರಿಟಿಶರ ಈ ಭೇದನೀತಿಯಿಂದಾಗಿ ಭಾರತದಲ್ಲಿ ಒಡಕಿನ ಬೀಜಗಳು ಬಿತ್ತಲ್ಪಟ್ಟವು.

**ಲಖನೌ ಒಪ್ಪಂದ:** ಭಾರತೀಯ ರಾಷ್ಟ್ರೀಯ ಸಭೆಯ 1916ರ ಲಖನೌ ಅಧಿವೇಶನದಲ್ಲಿ ಟಿಳಕರ ನೇತೃತ್ವದಲ್ಲಿ ರಾಷ್ಟ್ರೀಯ ಸಭೆಯಲ್ಲಿಯ ಭಿನ್ನಾಭಿಪ್ರಾಯಗಳನ್ನು ಕೊನೆಗೊಳಿಸುವ ಪ್ರಯತ್ನ ಮಾಡಲಾಯಿತು. ಇದೇ ವರ್ಷ ಭಾರತೀಯ ರಾಷ್ಟ್ರೀಯ ಸಭೆ ಮತ್ತು ಮುಸ್ಲಿಮ ಲೀಗಗಳಲ್ಲಿಯೂ ಸಂಧಾನವಾಯಿತು. ಇದಕ್ಕೆ 'ಲಖನೌ ಒಪ್ಪಂದ' ಎನ್ನುತ್ತಾರೆ. ಈ ಒಪ್ಪಂದದ ಪ್ರಕಾರ ಮುಸ್ಲಿಮರ ಪ್ರತ್ಯೇಕ ಮತಕ್ಷೇತ್ರಗಳಿಗೆ ರಾಷ್ಟ್ರೀಯ ಸಭೆಯು ಮಾನ್ಯತೆ ನೀಡಿತು ಹಾಗೂ ಭಾರತಕ್ಕೆ ರಾಜಕೀಯ ಅಧಿಕಾರವನ್ನು ದೊರಕಿಸಿ ಕೊಡುವ ಕಾರ್ಯದಲ್ಲಿ ರಾಷ್ಟ್ರೀಯ ಸಭೆಯೊಂದಿಗೆ ಸಹಕರಿಸುವುದಾಗಿ ಮುಸ್ಲಿಮ ಲೀಗ ಒಪ್ಪಿಕೊಂಡಿತು.



ಡಾ. ಆ್ಯನಿಬೆಝೆಂಟ

**ಹೋಮರೂಲ ಚಳುವಳಿ:** 1914ರಲ್ಲಿ ಮಂಡಾಲೆಯ ಸೆರೆಮನೆಯಿಂದ ಟಿಳಕರ ಬಿಡುಗಡೆ ಯಾದ ಸಮಯದಲ್ಲಿ ಯುರೋಪಿನಲ್ಲಿ ಮೊದಲನೆಯ ಮಹಾಯುದ್ಧವು ಆರಂಭವಾಗಿತ್ತು. ಈ ಯುದ್ಧದ ನೇರ ಪರಿಣಾಮವನ್ನು ಭಾರತವೂ ಅನುಭವಿಸಬೇಕಾಯಿತು. ದೈನಂದಿನ ಅಗತ್ಯದ ವಸ್ತುಗಳ ಬೆಲೆಗಳು ಏರಿದವು. ಬ್ರಿಟಿಶ ಸರಕಾರವು ಭಾರತೀಯರ ಮೇಲೆ ಅನೇಕ ನಿರ್ಬಂಧಗಳನ್ನು ಹೇರಿತು. ಇದರಿಂದಾಗಿ ಭಾರತೀಯರಲ್ಲಿ ಅಸಂತೋಷ ಹೆಚ್ಚತೊಡಗಿತು. ಇಂಥ ಪರಿಸ್ಥಿತಿಯಲ್ಲಿ ಡಾ. ಆ್ಯನಿಬೆಝೆಂಟ ಮತ್ತು ಲೋಕಮಾನ್ಯ ಟಿಳಕರು ಹೋಮರೂಲ ಚಳುವಳಿಯನ್ನು ಆರಂಭಿಸಿದರು. ಹೋಮರೂಲ ಎಂದರೆ ನಮ್ಮ ರಾಜ್ಯಾಡಳಿತವನ್ನು ನಾವೇ ಮಾಡುವುದು. ಇದಕ್ಕೇನೆ 'ಸ್ವಯಂ ಆಡಳಿತ' ಎನ್ನುತ್ತಾರೆ. ಆಯರ್ಲಂಡ ದೇಶದಲ್ಲಿ ವಸಾಹತುವಾದದ ವಿರುದ್ಧ ಈ ರೀತಿಯ ಚಳುವಳಿ ಆರಂಭವಾಗಿತ್ತು. ಅದೇ ಪ್ರಕಾರ ಭಾರತೀಯ ಹೋಮರೂಲ ಚಳುವಳಿಯು ಸ್ವಯಂ ಆಡಳಿತದ ಅಧಿಕಾರವನ್ನು ಬ್ರಿಟಿಶ ಸರಕಾರಕ್ಕೆ ಕೇಳಿತು. ಡಾ. ಆ್ಯನಿಬೆಝೆಂಟ ಮತ್ತು ಲೋಕಮಾನ್ಯ ಟಿಳಕರು ದೇಶದ ತುಂಬೆಲ್ಲ ಬಿರುಗಾಳಿಯಂತೆ ಸಂಚರಿಸಿ ಸ್ವಯಂ ಆಡಳಿತದ ಬೇಡಿಕೆಯನ್ನು ಜನತೆಯವರೆಗೆ ತಲುಪಿಸಿದರು. 'ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು, ಅದನ್ನು ನಾನು ಪಡೆದೇ ತೀರುತ್ತೇನೆ!' ಎಂದು ಟಿಳಕರು ಸ್ಪಷ್ಟವಾಗಿ ಹೇಳಿದರು.

**ಮೊದಲನೆಯ ಮಹಾಯುದ್ಧ ಮತ್ತು ಭಾರತ:** ಯುರೋಪದಲ್ಲಿಯ ಯುದ್ಧಜನ್ಯ ಪರಿಸ್ಥಿತಿ, ಭಾರತೀಯ ಜನತೆಯಲ್ಲಿ ಹೆಚ್ಚುತ್ತಿರುವ ಅಸಂತೋಷ, ಹೋಮರೂಲ ಚಳುವಳಿಯ ಹೆಚ್ಚುತ್ತಿರುವ ಜನಪ್ರಿಯತೆ-ಇಂಥ ಪರಿಸ್ಥಿತಿಯಲ್ಲಿ ಬ್ರಿಟಿಶರಿಗೆ ಭಾರತೀಯರ ಸಹಕಾರವನ್ನು ಪಡೆಯುವುದು ಅಗತ್ಯದ್ದಾಗಿತ್ತು. ಅದರ ಸಲುವಾಗಿ ಸುಧಾರಣೆಯ ಮುಂದಿನ ಕಂತನ್ನು ಭಾರತೀಯರಿಗೆ ಕೊಡುವುದು ಎಂದರೆ ಭಾರತೀಯರಿಗೆ ಕೆಲವು ರಾಜಕೀಯ ಹಕ್ಕುಗಳನ್ನು ನೀಡುವುದಾಗಿ ಬ್ರಿಟಿಶ ಸರಕಾರವು ನಿರ್ಧರಿಸಿತು. ಭಾರತೀಯರಿಗೆ ಹಂತಹಂತವಾಗಿ ಸ್ವಯಂ ಆಡಳಿತದ ಅಧಿರಕಾರವನ್ನು ಹಾಗೂ ಜವಾಬ್ದಾರಿ ರಾಜ್ಯಪದ್ಧತಿಯನ್ನು ನೀಡಲಾಗುವುದು ಎಂದು 1917ರಲ್ಲಿ ತತ್ಕಾಲೀನ ಭಾರತ ಮಂತ್ರಿ ಮಾಂಟೆಗ್ಯೂ ಇವರು

ಘೋಷಿಸಿದರು. ಒಂದು ವೇಳೆ ಸರಕಾರವು ಭಾರತೀಯರ ಬೇಡಿಕೆಗಳನ್ನು ಕುರಿತು ಸಹಾನುಭೂತಿ ಮತ್ತು ತಿಳಿವಳಿಕೆಯನ್ನು ತೋರಿಸು ವಂತಿದ್ದರೆ ಭಾರತೀಯರು ಕೂಡ ಸರಕಾರದೊಂದಿಗೆ ಸಹಕರಿಸುವರು ಎಂದು ಲೋಕಮಾನ್ಯ ಟಿಳಕರು ಜಾಹೀರು ಪಡಿಸಿದರು. ಲೋಕಮಾನ್ಯ ಟಿಳಕರ ಈ ನೀತಿಗೆ 'ಪ್ರತಿ ಯೋಗಿ ಸಹಕಾರ' ಎನ್ನುತಾರೆ.

**ಮಾಂಟೆಗ್ಯೂ ಚೇಮ್ಸಫರ್ಡ್ ಕಾಯ್ದೆ:** ಭಾರತದಲ್ಲಿ ಘಟನಾತ್ಮಕ ಸುಧಾರಣೆಗಳನ್ನು ತರುವ ಸಲುವಾಗಿ 1919ರಲ್ಲಿ ಬ್ರಿಟಿಶ ಪಾರ್ಲಿಮೆಂಟು ಒಂದು ಕಾಯ್ದೆ ಪಾಸು ಮಾಡಿತು. ಇದಕ್ಕೆ ಮಾಂಟೆಗ್ಯೂ ಚೇಮ್ಸಫರ್ಡ್ ಕಾಯ್ದೆ ಎನ್ನುತ್ತಾರೆ. ಈ ಕಾಯ್ದೆಯ ಪ್ರಕಾರ ಕೆಲವು ಸಾಮಾನ್ಯ ಖಾತೆಗಳನ್ನು ಭಾರತೀಯ ಮಂತ್ರಿಗಳ ಕಡೆಗೆ ಒಪ್ಪಿಸಲಾಯಿತು. ಆದರೆ ಹಣಕಾಸು, ಕಂದಾಯ, ಗೃಹ ಮುಂತಾದ ಮಹತ್ವದ ಖಾತೆಗಳು ಗವರ್ನರನ ಆಧೀನದಲ್ಲಿದ್ದವು. 1919ರ ಕಾಯ್ದೆಯ ಪ್ರಕಾರ ಭಾರತೀಯರ ಜವಾಬ್ದಾರಿ ರಾಜ್ಯಪದ್ಧತಿಯ ಬೇಡಿಕೆ ಪೂರ್ಣವಾಗಲಿಲ್ಲ. ಈ ಕಾಯ್ದೆಯು ಎಲ್ಲರನ್ನು ನಿರಾಶೆಗೊಳಿಸಿತು. 'ಇದು ಸ್ವರಾಜ್ಯವೂ ಅಲ್ಲ ಹಾಗೂ ಅದರ ಅಡಿಪಾಯವೂ ಅಲ್ಲ' ಎಂಬ ಶಬ್ದಗಳಲ್ಲಿ ಲೋಕಮಾನ್ಯ ಟಿಳಕರು ಈ ಕಾಯ್ದೆಯನ್ನು ಟೀಕಿಸಿದರು. ಸರಕಾರವನ್ನು ಮಣಿಸಬೇಕಾದರೆ ಆಂದೋಲನವನ್ನು ಅಧಿಕ ತೀವ್ರಗೊಳಿಸುವ ಅವಶ್ಯಕತೆ ಇದೆಯೆಂಬುದನ್ನು ಭಾರತೀಯರು ಮನಗಂಡರು. ಭಾರತವು ಹೊಸ ಆಂದೋಲನಕ್ಕೆ ಸಿದ್ಧವಾಯಿತು.

## ಅಭ್ಯಾಸ

**1. (ಅ) ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ಭಾರತ ಸೇವಕ ಸಮಾಜದ ಸ್ಥಾಪನೆಯನ್ನು .......... ಇವರು ಮಾಡಿದರು.
(ಅ) ಗಣೇಶ ವಾಸುದೇವ ಜೋಶಿ
(ಬ) ಭಾವೂ ದಾಜಿ ಲಾಡ
(ಕ) ಮ.ಗೋ.ರಾನಡೆ
(ಡ) ಗೋಪಾಳ ಕೃಷ್ಣ ಗೋಖಲೆ

(2) ರಾಷ್ಟ್ರೀಯ ಸಭೆಯ ಪ್ರಥಮ ಅಧಿವೇಶನವು .......... ಯಲ್ಲಿ ಜರುಗಿತು.
(ಅ) ಪುಣೆ (ಬ) ಮುಂಬಯಿ
(ಕ) ಕೋಲಕಾತಾ (ಡ) ಲಖನೌ

(3) ಗೀತಾ ರಹಸ್ಯ ಎಂಬ ಗ್ರಂಥವನ್ನು ..........ಇವರು ಬರೆದರು
(ಅ) ಲೋಕಮಾನ್ಯ ಟಿಳಕ
(ಬ) ದಾದಾಭಾಯಿ ನೌರೋಜಿ
(ಕ) ಲಾಲಾ ಲಜಪತರಾಯ
(ಡ) ಬಿಪಿನಚಂದ್ರ ಪಾಲ

**(ಬ) ಹೆಸರುಗಳನ್ನು ಬರೆಯಿರಿ.**

(1) ಸೌಮ್ಯವಾದಿ ಮುಖಂಡರು ........... .........
(2) ಉಗ್ರವಾದಿ ಮುಖಂಡರು .............. ..............

**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯರಲ್ಲಿ ಸ್ವಾಭಿಮಾನ ಜಾಗೃತವಾಯಿತು.
(2) ಭಾರತೀಯ ರಾಷ್ಟ್ರೀಯ ಸಭೆಯಲ್ಲಿ ಎರಡು ಗುಂಪುಗಳು ನಿರ್ಮಾಣವಾದವು.
(3) ಲಾರ್ಡ್ ಕರ್ಝನ್‌ನು ಬಂಗಾಲದ ವಿಭಜನೆ ಮಾಡುವುದಾಗಿ ನಿರ್ಧರಿಸಿದನು.

**3. ಟಿಪ್ಪಣಿ ಬರೆಯಿರಿ**

(1) ರಾಷ್ಟ್ರೀಯ ಸಭೆಯ ಉದ್ದೇಶಗಳು
(2) ವಂಗಭಂಗ ಚಳುವಳಿ
(3) ರಾಷ್ಟ್ರೀಯ ಸಭೆಯ ಚತು:ಸೂತ್ರಗಳು

**4. ಭಾರತೀಯ ರಾಷ್ಟ್ರೀಯ ಸಭೆಯ ಹಿನ್ನೆಲೆಯನ್ನು ಕೆಳಗಿನ ಅಂಶಗಳ ಆಧಾರದಿಂದ ಸ್ಪಷ್ಟಪಡಿಸಿರಿ.**

- ಆಡಳಿತದ ಕೇಂದ್ರೀಕರಣ
- ಆರ್ಥಿಕ ಶೋಷಣೆ
- ಪಾಶ್ಚಾತ್ಯ ಶಿಕ್ಷಣ
- ಭಾರತದ ಪ್ರಾಚೀನ ಇತಿಹಾಸದ ಅಭ್ಯಾಸ
- ವರ್ತಮಾನಪತ್ರಗಳ ಕಾರ್ಯ

**ಉಪಕ್ರಮ**

ರಾಷ್ಟ್ರೀಯ ಸಭೆಯ ಆರಂಭದ ಕಾಲದಲ್ಲಿಯ ಮುಖಂಡರ ವಿಷಯವಾಗಿ ಹೆಚ್ಚಿನ ಮಾಹಿತಿಯನ್ನು ಇಂಟರ್ನೆಟ್ ಸಹಾಯದಿಂದ ಪಡೆಯಿರಿ.

ALZL6F

# 7. ಅಸಹಕಾರ ಚಳುವಳಿ

ಕ್ರಿ.ಶ. 1920ರಿಂದ 1947 ಈ ಭಾರತೀಯ ಸ್ವಾತಂತ್ರ್ಯ ಚಳುವಳಿಯ ಕಾಲಖಂಡವು 'ಗಾಂಧಿಯುಗ' ಎಂಬ ಹೆಸರಿನಿಂದ ಗುರುತಿಸಲ್ಪಡುತ್ತದೆ. 1920ರಲ್ಲಿ ಲೋಕಮಾನ್ಯ ಟಿಳಕರ ನಿಧನದ ನಂತರ ರಾಷ್ಟ್ರೀಯ ಚಳುವಳಿಯ ಸೂತ್ರಗಳು ಮಹಾತ್ಮಾ ಗಾಂಧೀಜಿಯವರ ಕೈಗೆ ಬಂದವು. ಗಾಂಧೀಜಿಯವರು ಸತ್ಯ, ಅಹಿಂಸೆ, ಸತ್ಯಾಗ್ರಹ ಈ ಸೂತ್ರಗಳ ಆಧಾರದಿಂದ ಭಾರತೀಯ ಸ್ವಾತಂತ್ರ್ಯ ಹೋರಾಟಕ್ಕೆ ಒಂದು ಹೊಸ ದಿಶೆಯನ್ನು ನೀಡಿದರು. ಗಾಂಧೀಜಿಯವರ ಪ್ರಭಾವಶಾಲಿ ನೇತೃತ್ವದಿಂದಾಗಿ ರಾಷ್ಟ್ರೀಯ ಚಳುವಳಿಯು ಹೆಚ್ಚು ವ್ಯಾಪಕವಾಯಿತು. ಭಾರತದ ಸ್ವಾತಂತ್ರ್ಯ ಹೋರಾಟದ ಹೊಸ ಅಧ್ಯಾಯ ಆರಂಭವಾಯಿತು.

**ದಕ್ಷಿಣ ಆಫ್ರಿಕೆಯಲ್ಲಿಯ ಗಾಂಧೀಜಿಯವರ ಕಾರ್ಯ:** ಮಹಾತ್ಮಾ ಗಾಂಧಿಯವರು 1893ರಲ್ಲಿ ವಕೀಲಿಯ ಕೆಲಸದ ನಿಮಿತ್ತವಾಗಿ ದಕ್ಷಿಣ ಆಫ್ರಿಕೆಗೆ ಹೋಗಿದ್ದರು. ದಕ್ಷಿಣ ಆಫ್ರಿಕಾ ಇದು ಇಂಗ್ಲಂಡಿನ ಒಂದು ವಸಾಹತುವಾಗಿತ್ತು. ಅಲ್ಲಿ ಉದ್ಯೋಗ, ವ್ಯಾಪಾರ ಮತ್ತು ಇತರ ಕೆಲಸಗಳಿಗಾಗಿ ಅನೇಕ ಭಾರತೀಯರು ನೆಲೆಸಿದ್ದರು. ಅಲ್ಲಿಯ ಹಿಂದೀ ಜನರನ್ನು ಅಪರಾಧಿ ಗಳಂತೆ ನಡೆಸಿಕೊಳ್ಳಲಾಗು ತ್ತಿತ್ತು. ಹೆಜ್ಜೆ ಹೆಜ್ಜೆಗೆ ಅವರನ್ನು ಅವಮಾನಿಸಲಾಗುತ್ತಿತ್ತು. 1906ರಲ್ಲಿ ಸರಕಾರವು ಒಂದು ಆದೇಶವನ್ನು ಜಾರಿಗೊಳಿಸಿ ಕಪ್ಪುವರ್ಣೀಯರಿಗೆ ಗುರುತಿನ ಚೀಟಿಯನ್ನು ಇಟ್ಟುಕೊಳ್ಳುವುದನ್ನು ಕಡ್ಡಾಯವನ್ನಾಗಿ ಮಾಡಿತ್ತು. ಅವರ ಸ್ವಾತಂತ್ರ್ಯದ ಮೇಲೆ ಬಂಧನಗಳನ್ನು ಹಾಕಿತ್ತು. ಈ ಅನ್ಯಾಯದ ವಿರುದ್ಧ ಗಾಂಧೀಜಿಯವರು ಸತ್ಯಾಗ್ರಹದ ಮಾರ್ಗದಿಂದ ಅಲ್ಲಿಯ ಜನರಿಗೆ ನ್ಯಾಯವನ್ನು ದೊರಕಿಸಿಕೊಟ್ಟರು.



ಮಹಾತ್ಮಾ ಗಾಂಧಿ

**ಭಾರತಕ್ಕೆ ಗಾಂಧೀಜಿಯವರ ಆಗಮನ:** 9 ಜನೇವರಿ 1915 ರಂದು ಗಾಂಧೀಜಿಯವರು ದಕ್ಷಿಣ ಆಫ್ರಿಕೆಯಿಂದ ಭಾರತಕ್ಕೆ ಮರಳಿದರು. ಗೋಪಾಳ ಕೃಷ್ಣ ಗೋಖಲೆಯವರ ಸಲಹೆಯಂತೆ ಅವರು ದೇಶದ ತುಂಬೆಲ್ಲ ಸಂಚರಿಸಿದರು. ಜನಸಾಮಾನ್ಯರ ದುಃಖ, ದಾರಿದ್ರ್ಯಗಳನ್ನು ಕಂಡು ಅವರು ದುಃಖಿತರಾದರು. ಅವರು ರಾಷ್ಟ್ರಸೇವೆಯ ವ್ರತವನ್ನು ಸ್ವೀಕರಿಸಿದರು. ಅಹಮದಾಬಾದ ಹತ್ತಿರ ಸಾಬರಮತಿ ನದಿ ತೀರದಲ್ಲಿ ಆಶ್ರಮದಲ್ಲಿ ಅವರು ಇರತೊಡಗಿದರು. ಸರ್ವಸಾಮಾನ್ಯ ಜನರಿಗೆ ನ್ಯಾಯವನ್ನು ದೊರಕಿಸಿಕೊಡುವ ಸಲುವಾಗಿ ಅವರು ಸತ್ಯಾಗ್ರಹದ ಅಭಿನವ ತಂತ್ರವನ್ನು ಅವಲಂಬಿಸಿದರು.

**ಸತ್ಯಾಗ್ರಹದ ತತ್ವಜ್ಞಾನ:** ಗಾಂಧೀಜಿಯವರು ಜನರ ಚಳುವಳಿಯಲ್ಲಿ ಸತ್ಯಾಗ್ರಹದ ಹೊಸ ತಂತ್ರವನ್ನು ತಂದರು. ಸತ್ಯಾಗ್ರಹವೆಂದರೆ ಸತ್ಯಕ್ಕಾಗಿ, ನ್ಯಾಯಕ್ಕಾಗಿ ಆಗ್ರಹ ಮಾಡುವುದು. ಅನ್ಯಾಯ ಮಾಡುವ ವ್ಯಕ್ತಿಗೆ ಸಂಯಮದಿಂದ ಮತ್ತು ಅಹಿಂಸೆಯ ಮಾರ್ಗದಿಂದ ಸತ್ಯ ಮತ್ತು ನ್ಯಾಯಗಳ ಅರಿವು ಮಾಡಿಕೊಡುವುದು ಹಾಗೂ ಅವನ ವಿಚಾರ ಪರಿವರ್ತನೆ ಮಾಡುವುದು. ಇವು ಸತ್ಯಾಗ್ರಹದ ಉದ್ದೇಶಗಳಾಗಿದ್ದವು. ಸತ್ಯಾಗ್ರಹವನ್ನು ಮಾಡುವ ವ್ಯಕ್ತಿಯು ಹಿಂಸೆ ಮತ್ತು ಅಸತ್ಯ ಇವುಗಳನ್ನು ಬಳಸಕೂಡದು ಎಂಬುದು ಗಾಂಧೀಜಿಯವರ ಉಪದೇಶವಾಗಿತ್ತು.

ಮುಂದೆ ಭಾರತದಲ್ಲಷ್ಟೇ ಅಲ್ಲ, ಜಗತ್ತಿನಲ್ಲಿಯ ಅನೇಕ ದೇಶಗಳಲ್ಲಿ ಜನರು ಅನ್ಯಾಯವನ್ನು ಪ್ರತಿಭಟಿಸಲು ಸತ್ಯಾಗ್ರಹದ ಮಾರ್ಗವನ್ನು ಸ್ವೀಕರಿಸಿದರು. ಅಮೇರಿಕೆಯಲ್ಲಿಯ ಕಪ್ಪುವರ್ಣೀಯರ ಹಕ್ಕುಗಳಿಗಾಗಿ ಹೋರಾಡುವ ಮಾರ್ಟಿನ್ ಲ್ಯೂಥರ ಕಿಂಗ ಮತ್ತು ದಕ್ಷಿಣ ಆಫ್ರಿಕೆಯ ನೆಲ್ಸನ್ ಮಂಡೇಲಾರಂತಹ ನೇತಾರರ ಮೇಲೆ ಗಾಂಧೀಜಿಯವರ ಸತ್ಯಾಗ್ರಹದ ಮಾರ್ಗದ ಪ್ರಭಾವವುಂಟಾಯಿತು.

**ಚಂಪಾರಣ್ಯ ಸತ್ಯಾಗ್ರಹ:** ಬಿಹಾರದ ಚಂಪಾರಣ್ಯ ಪ್ರದೇಶದಲ್ಲಿ ಬ್ರಿಟಿಶ ತೋಟಗಾರರು ಭಾರತೀಯ ರೈತರಿಗೆ ನೀಲಿ ಬೆಳೆಯುವಂತೆ ಒತ್ತಾಯ ಮಾಡುತ್ತಿದ್ದರು. ಈ ನೀಲಿಯನ್ನು ನಿಗದಿಪಡಿಸಿದ ಬೆಲೆಗೇ ತೋಟಗಾರರಿಗೆ ಮಾರಬೇಕೆಂಬ ಕಡ್ಡಾಯವಿದ್ದುದರಿಂದ ಅದರಲ್ಲಿ ರೈತರ ಆರ್ಥಿಕ ಹಾನಿಯಾಗುತ್ತಿತ್ತು. ಗಾಂಧೀಜಿಯವರು 1917ರಲ್ಲಿ ಚಂಪಾರಣ್ಯಕ್ಕೆ ಹೋದರು. ಗಾಂಧೀಜಿಯವರು ಚಂಪಾರಣ್ಯದಲ್ಲಿ ರೈತರನ್ನು ಸಂಘಟಿಸಿ ಸತ್ಯಾಗ್ರಹದ ಮಾರ್ಗದಿಂದ ಆಂದೋಲನ ಮಾಡಿದರು. ಗಾಂಧೀಜಿಯವರು ಮಾಡಿದ ಭಾರತದಲ್ಲಿಯ ಈ ಮೊದಲನೆಯ ಹೋರಾಟವು ಯಶಸ್ವಿಯಾಯಿತು, ರೈತರಿಗೆ ನ್ಯಾಯ ದೊರಕಿತು.

**ಖೇಡಾ ಸತ್ಯಾಗ್ರಹ;** ಗುಜರಾತದ ಖೇಡಾ ಜಿಲ್ಲೆಯಲ್ಲಿ ಸತತವಾಗಿ ತಲೆದೋರಿದ ಕ್ಷಾಮದಿಂದಾಗಿ ಬೆಳೆಗಳ ಸ್ಥಿತಿ ಅತ್ಯಂತ ನಿಕೃಷ್ಟವಾಗಿತ್ತು. ಆದರೂ ಸರಕಾರವು ಒತ್ತಾಯದಿಂದ ಭೂಕಂದಾಯವನ್ನು ವಸೂಲು ಮಾಡುತ್ತಿತ್ತು. ಗಾಂಧೀಜಿಯವರು ರೈತರಿಗೆ ಭೂಕಂದಾಯವನ್ನು ಕೊಡಬಾರದೆಂಬ ಸಲಹೆಯನ್ನು ನೀಡಿದರು. ಆಗ ಸ್ಥಳೀಯ ರೈತರು 1918ರಲ್ಲಿ ಖೇಡಾ ಜಿಲ್ಲೆಯಲ್ಲಿ ಭೂಕಂದಾಯ ನಿರಾಕರಣೆಯ ಚಳುವಳಿಯನ್ನು ಆರಂಭಿಸಿದರು. ಗಾಂಧೀಜಿಯವರು ಚಳುವಳಿಯ ನೇತೃತ್ವವನ್ನು ವಹಿಸಿದರು. ಅಲ್ಪಾವಧಿಯಲ್ಲಿಯೇ ಸರಕಾರವು ಭೂಕಂದಾಯವನ್ನು ಮನ್ನಾಮಾಡಿತು.


**ಅಹಮದಾಬಾದಿನ ಕಾರ್ಮಿಕರ ಹೋರಾಟ:** ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಪ್ರಚಂಡ ಪ್ರಮಾಣದಲ್ಲಿ ಬೆಲೆಯೇರಿಕೆಯಾಗಿತ್ತು. ಗಿರಣಿ ಕಾರ್ಮಿಕರು ಹೆಚ್ಚು ಸಂಬಳದ ಬೇಡಿಕೆ ಮಾಡಿದರು. ಆದರೆ ಗಿರಣಿ ಮಾಲೀಕರು ಈ ಬೇಡಿಕೆಯನ್ನು ತಿರಸ್ಕರಿಸಿದರು. ಗಾಂಧೀಜಿಯವರ ಸಲಹೆಯಂತೆ ಕಾರ್ಮಿಕರು ಮುಷ್ಕರ ಮತ್ತು ಉಪವಾಸ ಮಾಡಿದರು. ಗಾಂಧೀಜಿಯವರು ಕೂಡ ಕಾರ್ಮಿಕರ ಜೊತೆ ಉಪವಾಸಕ್ಕೆ ಕುಳಿತರು. ಕೊನೆಗೆ ಗಿರಣಿ ಮಾಲೀಕರು ಹಿಂದೆ ಸರಿದರು ಹಾಗೂ ಕಾರ್ಮಿಕರ ಸಂಬಳವನ್ನು ಹೆಚ್ಚಿಸಿದರು.

**ರೌಲೆಟ್ ಕಾನೂನಿನ ವಿರುದ್ಧ ಸತ್ಯಾಗ್ರಹ:** ಮೊದಲನೆಯ ಮಹಾಯುದ್ಧದಲ್ಲಿ ಭಾರತೀಯರು ಬ್ರಿಟಿಶರಿಗೆ ಸಹಾಯ ಮಾಡಿದರು. ಯುದ್ಧ ಮುಗಿದ ನಂತರ ಭಾರತೀಯರ ಹಿತದ ನಿರ್ಣಯಗಳನ್ನು ತೆಗೆದುಕೊಳ್ಳಬಹುದು, ಜವಾಬ್ದಾರಿ ಸರಕಾರವನ್ನು ರಚಿಸಬಹುದು ಎಂದು ಭಾರತೀಯರಿಗೆ ಅನಿಸುತ್ತಿತ್ತು. ಭಾರತೀಯರಲ್ಲಿ ಬೆಲೆ ಏರಿಕೆ, ಹೆಚ್ಚಿದ ಕರಗಳು ಇತ್ಯಾದಿ ಆರ್ಥಿಕ ಮತ್ತು ರಾಜಕೀಯ ಕಾರಣಗಳಿಂದಾಗಿ ಬ್ರಿಟಿಶ ಸರಕಾರದ ವಿರುದ್ಧ ಅಸಂತೋಷವು ಹೆಚ್ಚುತ್ತಿತ್ತು.

ಬ್ರಿಟಿಶ ಸರಕಾರವು ಈ ಅಸಂತೋಷವನ್ನು ಅಡಗಿಸುವ ಸಲುವಾಗಿ ಮತ್ತು ಅದಕ್ಕೆ ಸಂಬಂಧಿತ ಉಪಾಯಗಳನ್ನು ಸೂಚಿಸುವ ಸಲುವಾಗಿ ಸರ ಸಿಡನಿ ರೌಲೆಟ್ ಎಂಬ ಅಧಿಕಾರಿಯ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿತು. ಈ ಸಮಿತಿಯ ಶಿಫಾರಸಿಗನುಸಾರವಾಗಿ 17 ಮಾರ್ಚ 1919ರಂದು ಕೇಂದ್ರ ಶಾಸಕಾಂಗದಲ್ಲಿಯ ಭಾರತೀಯ ಸದಸ್ಯರು ಮಾಡಿದ ವಿರೋಧವನ್ನು ಲೆಕ್ಕಿಸದೆ ಸರಕಾರವು ಹೊಸ ಕಾನೂನನ್ನು ಮಾಡಿತು. ಅದಕ್ಕೆ 'ರೌಲೆಟ್ ಕಾನೂನು' ಎನ್ನುವರು. ಈ ಕಾನೂನಿನ ಪ್ರಕಾರ ಯಾವುದೇ ಭಾರತೀಯ ವ್ಯಕ್ತಿಯನ್ನು ವಿಚಾರಣೆಯಿಲ್ಲದೆ ಬಂಧಿಸುವ, ನ್ಯಾಯಾಲಯದಲ್ಲಿ ಖಟ್ಲೆಯನ್ನು ಹಾಕದೆ ಸೆರೆಮನೆಯಲ್ಲಿಡುವ ಅಧಿಕಾರವನ್ನು ಸರಕಾರಕ್ಕೆ ನೀಡಲಾಯಿತು. ಈ ಕಾನೂನು ನೀಡಿದ ಶಿಕ್ಷೆಯ ವಿರುದ್ಧ ಮೇಲ್ಮನವಿ ಮಾಡಲು ಪ್ರತಿಬಂಧಿಸಲಾಯಿತು. ಭಾರತೀಯರು ಈ ಕಾನೂನಿಗೆ ಕಪ್ಪು ಕಾನೂನು ಎಂದು ಕರೆದರು. ಈ ಕಾನೂನಿನ ವಿರುದ್ಧ ದೇಶದ ತುಂಬೆಲ್ಲ ಜನತೆಯ ಕ್ರೋಧವು ಸಿಡಿದೆದ್ದಿತು. ಗಾಂಧೀಜಿಯವರು ಈ ಕಾನೂನಿನ ವಿರುದ್ಧ ಸತ್ಯಾಗ್ರಹವನ್ನು ಘೋಷಿಸಿದರು. 6 ಎಪ್ರಿಲ 1919ರಂದು ರೌಲೆಟ್ ಕಾನೂನನ್ನು ವಿರೋಧಿಸಲು ದೇಶದ ತುಂಬೆಲ್ಲ ಹರತಾಳವನ್ನು ಆಚರಿಸುವಂತೆ ಗಾಂಧೀಜಿಯವರು ಜನತೆಗೆ ಕರೆ ನೀಡಿದರು. ಅವರ ಈ ಕರೆಗೆ ಭಾರತೀಯರು ಪ್ರಚಂಡ ಪ್ರಮಾಣದಲ್ಲಿ ಬೆಂಬಲ ನೀಡಿದರು.

**ಜಾಲಿಯನ್‌ವಾಲಾ ಬಾಗ ಹತ್ಯಾಕಾಂಡ:** ರೌಲೆಟ್ ಕಾನೂನಿನ ವಿರುದ್ಧ ಆರಂಭವಾದ ಹೋರಾಟವು ಪಂಜಾಬ್‌ನಲ್ಲಿ ಉಗ್ರರೂಪವನ್ನು ಧರಿಸಿತು. ಅಮೃತಸರ ಈ ಪಟ್ಟಣವು ಈ ಚಳುವಳಿಯ ಪ್ರಮುಖ ಕೇಂದ್ರವಾಗಿತ್ತು. ಸರಕಾರವು ದಬ್ಬಾಳಿಕೆಯನ್ನು ಆರಂಭಿಸಿತು. ಪಂಜಾಬ ಪ್ರಾಂತವನ್ನು ಪ್ರವೇಶಿಸಲು ಗಾಂಧೀಜಿಯವರನ್ನು ಪ್ರತಿಬಂಧಿಸಲಾಯಿತು. ಜನರಲ ಡಾಯರನು ಅಮೃತಸರದಲ್ಲಿ ಸಭೆಯನ್ನು ನಿಷೇಧಿಸುವ ಆಜ್ಞೆಯನ್ನು ಜಾರಿಗೊಳಿಸಿದನು. ಅಮೃತಸರದಲ್ಲಿಯ ಹರತಾಳ ಪ್ರಕರಣದಲ್ಲಿ ಡಾ. ಸತ್ಯಪಾಲ ಮತ್ತು ಸೈಫುದ್ದೀನ ಕಿಚಲು ಮುಂತಾದ ಪ್ರಮುಖ ಮುಖಂಡರನ್ನು ಬಂಧಿಸಲಾಯಿತು.

ಈ ಘಟನೆಯ ನಿಷೇಧಾರ್ಥವಾಗಿ 13 ಎಪ್ರಿಲ 1919ರಂದು ಅಮೃತಸರದಲ್ಲಿಯ ಜಾಲಿಯನ್‌ವಾಲಾ ಬಾಗ್‌ನಲ್ಲಿ ಬೈಸಾಖಿ ಹಬ್ಬದ ನಿಮಿತ್ತವಾಗಿ ಒಂದು ಸಭೆಯನ್ನು ಏರ್ಪಡಿಸಲಾಗಿತ್ತು. ಆ ಸಮಯದಲ್ಲಿ ಜನರಲ ಡಾಯರನು ಸೈನ್ಯದ ವಾಹನಗಳೊಂದಿಗೆ ಅಲ್ಲಿ ಬಂದನು. ಜಾಲಿಯನ್‌ವಾಲಾ ಬಾಗ ಮೈದಾನದ ಒಂದೇ ಬದಿಗಿದ್ದ ಕಿರಿದಾದ ರಸ್ತೆಯು ತಡೆಯಲ್ಪಟ್ಟಿತು. ಹಾಗೂ ನಿಶಸ್ತ್ರ ನಿರಪರಾಧ ಜನರ ಮೇಲೆ ಪೂರ್ವ ಸೂಚನೆ ನೀಡದೆ ಅಮಾನುಷವಾಗಿ ಗುಂಡಿನ ಸುರಿಮಳೆ ಮಾಡಿದನು. ಬಂದೂಕಿನಿಂದ 1600 ಸುತ್ತುಗಳನ್ನು ಹಾರಿಸಿದ ನಂತರ ಅದರಲ್ಲಿಯ ಮದ್ದು – ಮುಗಿದುದರಿಂದ ಗುಂಡಿನ ಸುರಿಮಳೆ ನಿಂತಿತು. ಈ ಹತ್ಯಾಕಾಂಡದಲ್ಲಿ ಸುಮಾರು ನಾಲ್ಕು ನೂರು ಸ್ತ್ರೀ ಪುರುಷರು ಕೊಲ್ಲಲ್ಪಟ್ಟರು. ಅಸಂಖ್ಯ ಜನರು ಗಾಯಗೊಂಡರು. ಗೋಲೀಬಾರಿನ ನಂತರ ತಕ್ಷಣ ಕರ್ಫ್ಯೂ ಜಾರಿಗೊಳಿಸಿದ್ದರಿಂದ ಗಾಯಾಳುಗಳನ್ನು ಶೀಘ್ರವಾಗಿ ಉಪಚರಿಸಲು ಸಾಧ್ಯವಾಗಲಿಲ್ಲ. ಸಂಪೂರ್ಣ ಪಂಜಾಬ್‌ನಲ್ಲಿ ಸೈನಿಕ ಕಾಯ್ದೆಯನ್ನು ಜಾರಿಗೊಳಿಸಿ ಸರಕಾರವು ಅನೇಕ ಜನರನ್ನು ಬಂಧಿಸಿ ಸೆರೆಮನೆಯಲ್ಲಿಟ್ಟಿತು.


ರವೀಂದ್ರನಾಥ ಟಾಗೋರ

ಈ ಹತ್ಯಾಕಾಂಡಕ್ಕೆ ಪಂಜಾಬ್‌ನ ಗವರ್ನರ ಮೈಕೆಲ್ ಓಡವಾಯರನು ಜವಾಬ್ದಾರನಾಗಿದ್ದನು. ದೇಶದ ತುಂಬೆಲ್ಲ ಈ ಕಾನೂನನ್ನು ನಿಷೇಧಿಸಲಾಯಿತು. ಹತ್ಯಾಕಾಂಡದ ನಿಷೇಧವೆಂದು ರವೀಂದ್ರನಾಥ ಟಾಗೋರರು ಬ್ರಿಟಿಶ ಸರಕಾರವು ನೀಡಿದ್ದ 'ಸರ' ಪದವಿಯನ್ನು ತ್ಯಾಗಮಾಡಿದರು. ಮುಂದೆ ಈ ಹತ್ಯಾಕಾಂಡದ ವಿಚಾರಣೆಯ ಬೇಡಿಕೆಯನ್ನು ಭಾರತೀಯರು ಮಾಡಿದರು. ಅದಕ್ಕಾಗಿ ಸರಕಾರವು ಹಂಟರ ಕಮೀಶನ್ ನೇಮಿಸಿತು.

**ಖಿಲಾಫತ ಚಳುವಳಿ:** ತುರ್ಕಸ್ತಾನದ ಸುಲ್ತಾನನು ಜಗತ್ತಿನಲ್ಲಿಯ ಎಲ್ಲ ಮುಸಲ್ಮಾನರ ಖಲೀಫ ಅಂದರೆ ಧರ್ಮ ಪ್ರಮುಖನಾಗಿದ್ದನು. ಮೊದಲನೆಯ ಮಹಾಯುದ್ಧದಲ್ಲಿ ತುರ್ಕಸ್ತಾನ ಇದು ಇಂಗ್ಲಂಡಿನ ವಿರೋಧಿ ಗುಂಪಿನಲ್ಲಿ ಇತ್ತು. ಯುದ್ಧದಲ್ಲಿ ಭಾರತೀಯ ಮುಸ್ಲೀಮರ ಸಹಕಾರವನ್ನು ದೊರಕಿಸುವ ಸಲುವಾಗಿ ಯುದ್ಧ ಮುಗಿದ ನಂತರ ಖಲೀಫನ ಸಾಮ್ರಾಜ್ಯಕ್ಕೆ ಅಪಾಯ ಮಾಡುವುದಿಲ್ಲ ಎಂಬ ಭರವಸೆಯನ್ನು ಇಂಗ್ಲಂಡಿನ ಪ್ರಧಾನಮಂತ್ರಿಗಳು ನೀಡಿದರು. ಆದರೆ ಯುದ್ಧಸಮಾಪ್ತಿಯ ನಂತರ ಇಂಗ್ಲಂಡ ಈ ಆಶ್ವಾಸನೆಯನ್ನು ಪಾಲಿಸಲಿಲ್ಲ. ಅದರಿಂದಾಗಿ ಮುಸ್ಲಿಮರು ಕೋಪದಿಂದ ಕಿಡಿಕಿಡಿಯಾದರು. ಖಲೀಫನಿಗೆ ಬೆಂಬಲ ನೀಡುವುದಕ್ಕಾಗಿ ಭಾರತೀಯ ಮುಸ್ಲೀಮರು ಆರಂಭಿಸಿದ ಚಳುವಳಿಗೆ 'ಖಿಲಾಫತ ಚಳುವಳಿ' ಎನ್ನುತ್ತಾರೆ. ಈ ಪ್ರಶ್ನೆಯ ಮೇಲಿಂದ ಒಂದು ವೇಳೆ ಹಿಂದೂ-ಮುಸ್ಲಿಮ ಐಕ್ಯದ ಮೇಲೆ ಆಧಾರಿತ ರಾಷ್ಟ್ರೀಯ ಚಳುವಳಿಯನ್ನು ಆರಂಭಿಸಿದರೆ ಸರಕಾರವು ನಿಶ್ಚಿತವಾಗಿ ದಾರಿಗೆ ಬರಬಹುದು ಎಂದು ಗಾಂಧೀಜಿಯವರಿಗೆ ಅನಿಸತೊಡಗಿತು. ಆದ್ದರಿಂದ ಗಾಂಧೀಜಿಯವರು ಖಿಲಾಫತ ಚಳುವಳಿಗೆ ಬೆಂಬಲ ನೀಡಿದರು. ಸರಕಾರದೊಂದಿಗೆ ಅಸಹಕಾರ ಮಾಡುವ ಗಾಂಧೀಜಿಯವರ ಸೂಚನೆಯನ್ನು ಖಿಲಾಫತ ಕಮೀಟಿಯು ಒಪ್ಪಿಕೊಂಡಿತು. ಈ ಕಾಲದಲ್ಲಿ ಹಿಂದೂ-ಮುಸ್ಲಿಮ ಐಕ್ಯತೆಯು ವಿಶೇಷವಾಗಿ ಕಂಡು ಬಂದಿತು.


**ಅಸಹಕಾರ ಚಳುವಳಿ:** ಭಾರತದಲ್ಲಿ ಬ್ರಿಟಿಶ ಸರಕಾರವು ಭಾರತೀಯರ ಸಹಕಾರದ ಮೇಲೆಯೇ ಅವಲಂಬಿಸಿದೆ. ಒಂದು ವೇಳೆ ಭಾರತೀಯರು ಬ್ರಿಟಿಶ ಸರಕಾರದೊಡನೆ ಸಂಪೂರ್ಣ ಅಸಹಕಾರವನ್ನು ಘೋಷಿಸಿದರೆ ಅದು ಕುಸಿದು ಬೀಳುವುದು, ಎಂಬುದು ಗಾಂಧೀಜಿಯವರ ಊಹೆಯಾಗಿತ್ತು. ಈ ಉದ್ದೇಶದಿಂದ ಅವರು ಅಸಹಕಾರ ಚಳುವಳಿಯಲ್ಲಿ ಭಾಗವಹಿಸುವಂತೆ ಜನತೆಗೆ ಕರೆ ನೀಡಿದರು.

1920ರಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನವು ನಾಗಪೂರದಲ್ಲಿ ಜರುಗಿತು. ಈ ಅಧಿವೇಶನಲ್ಲಿ ಚಿತ್ತರಂಜನ ದಾಸ ಇವರು ಮಂಡಿಸಿದ ಅಸಹಕಾರದ ಗೊತ್ತುವಳಿಗೆ ಮಾನ್ಯತೆ ದೊರಕಿತು. ಅಸಹಕಾರ ಚಳುವಳಿಯ ಎಲ್ಲ ಸೂತ್ರಗಳನ್ನು ಗಾಂಧೀಜಿಯವರ ಕಡೆಗೆ ಒಪ್ಪಿಸಲಾಯಿತು. ಈ ಗೊತ್ತುವಳಿಗನುಸಾರವಾಗಿ ಸರಕಾರಿ ಕಾರ್ಯಾಲಯಗಳು, ನ್ಯಾಯಾಲಯಗಳು, ವಿದೇಶಿ ವಸ್ತುಗಳು, ಸರಕಾರಿ ಶಾಲೆ, ಮಹಾವಿದ್ಯಾಲಯಗಳು, ಮುಂತಾದವುಗಳ ಮೇಲೆ ಬಹಿಷ್ಕಾರ ಹಾಕುವ ಕಾರ್ಯಕ್ರಮವನ್ನು ನಿಶ್ಚಿತಪಡಿಸಲಾಯಿತು.

**ಅಸಹಕಾರ ಚಳುವಳಿಯ ಮುನ್ನಡೆ:** ಅಸಹಕಾರ ಚಳುವಳಿಯ ಕಾರ್ಯಕ್ರಮಕ್ಕನುಸಾರವಾಗಿ ಪಂಡಿತ ಮೋತಿಲಾಲ ನೆಹರೂ, ಚಿತ್ತರಂಜನ ದಾಸ ಮುಂತಾದ ಪ್ರಸಿದ್ಧ ವಕೀಲರು ನ್ಯಾಯಾಲಯಗಳ ಮೇಲೆ ಬಹಿಷ್ಕಾರ ಹಾಕಿದರು. ಇದೇ ಕಾಲದಲ್ಲಿ ಶಾಲೆ-ಕಾಲೇಜುಗಳ ಮೇಲಿನ ಬಹಿಷ್ಕಾರದಿಂದ ರಾಷ್ಟ್ರೀಯ ಶಿಕ್ಷಣದ ಕಲ್ಪನೆಯನ್ನು ಹಮ್ಮಿಕೊಳ್ಳಲಾಯಿತು. ಅನೇಕ ರಾಷ್ಟ್ರೀಯ ಶಾಲೆ, ಮಹಾವಿದ್ಯಾಲಯ ಮತ್ತು ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಲಾಯಿತು. ಮುಂಬರುವ ಚುನಾವಣೆಗಳ ಮೇಲೆ ಬಹಿಷ್ಕಾರ ಹಾಕಲಾಯಿತು. ವಿದೇಶಿ ಬಟ್ಟೆಗಳ ಮೇಲೆ ಬಹಿಷ್ಕಾರ ಹಾಕಲಾಯಿತು, ವಿದೇಶಿ ಬಟ್ಟೆಗಳ ಹೋಳಿ ಮಾಡಲಾಯಿತು. ವಿದೇಶಿ ಬಟ್ಟೆಗಳನ್ನು ಮಾರಾಟ ಮಾಡುವ ಅಂಗಡಿಗಳ ಮುಂದೆ ನಿದರ್ಶನ ಮಾಡಲಾಯಿತು. ಇದರಿಂದಾಗಿ ವಿದೇಶಿ ಬಟ್ಟೆಗಳ ಆಯಾತ ಕಡಿಮೆಯಾಯಿತು.

1921ರಲ್ಲಿ ಮುಂಬಯಿಗೆ ಬಂದ 'ಪ್ರಿನ್ಸ ಆಫ ವೇಲ್ಸ'ನ ಸ್ವಾಗತವನ್ನು ಹರತಾಳವನ್ನು ಆಚರಿಸಿ ಮಾಡಲಾಯಿತು. ಮಾನವರಹಿತ ರಸ್ತೆಗಳು ಮತ್ತು ಮುಚ್ಚಿದ ಅಂಗಡಿಗಳು ರಾಜಕುಮಾರನ ಸ್ವಾಗತ ಮಾಡಿದವು. ಆಸಾಮದಲ್ಲಿಯ ಚಹಾದ ತೋಟಗಾರರಿಂದ ಹಿಡಿದು ಬಂಗಾಲದಲ್ಲಿಯ ರೇಲ್ವೆ ಸಿಬ್ಬಂದಿಯವರೆಗೆ ಈ ಚಳುವಳಿ ಹರಡಿತು. ಅಸಹಕಾರ ಚಳುವಳಿಯನ್ನು ನಿಯಂತ್ರಿಸಲು ಸರಕಾರವು ದಬ್ಬಾಳಿಕೆಯನ್ನು ಆರಂಭಿಸಿತು.

ಉತ್ತರ ಪ್ರದೇಶದ ಗೋರಖಪೂರ ಜಿಲ್ಲೆಯಲ್ಲಿಯ ಚೌರಿ ಚೌರಾ ಎಂಬಲ್ಲಿ ಫೆಬ್ರುವರಿ 1922ರಲ್ಲಿ ಶಾಂತತಾಪೂರ್ಣ ಮೆರವಣಿಗೆಯ ಮೇಲೆ ಪೋಲಿಸರು ಗೋಳಿಬಾರು ಮಾಡಿದರು. ಇದರಿಂದ ಸಂತಪ್ತವಾದ ಜನಸಮೂಹವು ಪೋಲೀಸ ಚೌಕಿಗೆ ಬೆಂಕಿ ಹಚ್ಚಿತು. ಅದರಲ್ಲಿ ಒಬ್ಬ ಪೋಲೀಸ ಅಧಿಕಾರಿಸಹಿತ 22 ಪೋಲೀಸರು ಕೊಲ್ಲಲ್ಪಟ್ಟರು. ಈ ಘಟನೆಯಿಂದ ಗಾಂಧೀಜಿ ಯವರು ತುಂಬಾ ವ್ಯಥೆಗೊಂಡರು. 12 ಫೆಬ್ರುವರಿ 1922ರಂದು ಗಾಂಧೀಜಿವರು ಅಸಹಕಾರ ಚಳುವಳಿಯನ್ನು ನಿಲ್ಲಿಸಿದರು.



**ಗೊತ್ತಿದೆಯೇ ನಿಮಗೆ?**

**ಮುಳಶೀ ಸತ್ಯಾಗ್ರಹ:** ಅಸಹಕಾರ ಚಳುವಳಿಯ ಕಾಲದಲ್ಲಿ ಪುಣೆ ಜಿಲ್ಲೆಯ ಮುಳಶೀ ತಾಲೂಕಿನಲ್ಲಿಯ ರೈತರು ಸರಕಾರದ ವಿರುದ್ಧ ಸತ್ಯಾಗ್ರಹ ಮಾಡಿದರು. ಈ ಸತ್ಯಾಗ್ರಹದ ನೇತೃತ್ವವನ್ನು ಸೇನಾಪತಿ ಪಾಂಡುರಂಗ ಮಹಾದೇವ ಬಾಪಟ ಇವರು ಮಾಡಿದರು. ಅದರ ಸಲುವಾಗಿ ಅವರಿಗೆ ಏಳು ವರ್ಷಗಳ ಶಿಕ್ಷೆಯಾಯಿತು.

ಮಾರ್ಚ 1922ರಲ್ಲಿ ಗಾಂಧೀಜಿಯವರನ್ನು ಬಂಧಿಸಲಾಯಿತು. ಅವರ ಮೇಲೆ 'ಯಂಗ ಇಂಡಿಯಾ'ದಲ್ಲಿ ಮೂರು ರಾಷ್ಟ್ರದ್ರೋಹಿ ಲೇಖಗಳನ್ನು ಬರೆದ ಆರೋಪವನ್ನು ಹೊರಿಸಿ ರಾಜದ್ರೋಹದ ಖಟ್ಲೆ ಹಾಕಲಾಯಿತು. ಅಹಮದಾಬಾದ್‌ನಲ್ಲಿ ವಿಶೇಷ ನ್ಯಾಯಾಲಯವನ್ನು ಸ್ಥಾಪಿಸಲಾಯಿತು. ಗಾಂಧೀಜಿಯವರಿಗೆ ಆರು ವರ್ಷಗಳ ಶಿಕ್ಷೆಯನ್ನು ವಿಧಿಸಲಾಯಿತು.

ಮುಂದೆ ಅನಾರೋಗ್ಯದ ಕಾರಣದಿಂದ ಗಾಂಧೀಜಿಯವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಲಾಯಿತು. ಗಾಂಧೀಜಿಯವರು ಅಸಹಕಾರ ಚಳುವಳಿಯ ಜೊತೆಗೆ ರಚನಾತ್ಮಕ ಕಾರ್ಯಕ್ರಮಗಳನ್ನು ಕೈಕೊಂಡರು. ಅದರಲ್ಲಿ ಪ್ರಾಮುಖ್ಯವಾಗಿ ಸ್ವದೇಶಿಯ ಪ್ರಸಾರ, ಹಿಂದೂ-ಮುಸ್ಲಿಮ ಐಕ್ಯತೆ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ಖಾದಿಯ ಪ್ರಸಾರ, ರಾಷ್ಟ್ರೀಯ ಶಿಕ್ಷಣ ಇತ್ಯಾದಿ ಸಂಗತಿಗಳ ಸಮಾವೇಶವಿತ್ತು. ಈ ರಚನಾತ್ಮಕ ಕಾರ್ಯಕ್ರಮಗಳಿಂದಾಗಿ ಗ್ರಾಮೀಣ ಪ್ರದೇಶಗಳಲ್ಲಿ ರಾಷ್ಟ್ರೀಯ ಚಳುವಳಿಯು ಅಧಿಕ ವ್ಯಾಪಕವಾಯಿತು.

**ಸ್ವರಾಜ್ಯ ಪಕ್ಷ:** ಸರಕಾರದ ಕಾರ್ಯಕಲಾಪಗಳಲ್ಲಿ ಅಡ್ಡಿ-ಆತಂಕಗಳನ್ನು ತಂದೊಡ್ಡುವ ಸಲುವಾಗಿ ಶಾಸಕಾಂಗವನ್ನು ಪ್ರವೇಶಿಸುವ ಕಲ್ಪನೆಯನ್ನು ರಾಷ್ಟ್ರೀಯ ಸಭೆಯಲ್ಲಿಯ ಚಿತ್ತರಂಜನದಾಸ, ಮೋತಿಲಾಲ ನೆಹರೂ ಇವರು ಮಂಡಿಸಿದರು. ಅವರು 1922ರಲ್ಲಿ ರಾಷ್ಟ್ರೀಯ ಸಭೆಯ ಅಂತರ್ಗತವಾಗಿ ಸ್ವರಾಜ್ಯ ಪಕ್ಷದ ಸ್ಥಾಪನೆ ಮಾಡಿದರು.

1923ರ ಚುನಾವಣೆಯಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಶಾಸಕಾಂಗಗಳಲ್ಲಿ ಸ್ವರಾಜ್ಯ ಪಕ್ಷದ ಅನೇಕ ಅಭ್ಯರ್ಥಿಗಳು ಆರಿಸಿಬಂದರು. ಅವರಲ್ಲಿ ಪ್ರಾಮುಖ್ಯವಾಗಿ ಮೋತಿಲಾಲ ನೆಹರೂ, ಮದನಮೋಹನ ಮಾಲವೀಯ, ಲಾಲಾ ಲಜಪತರಾಯ, ನ.ಚಿಂ.ಕೇಳಕರ ಇವರ ಸಮಾವೇಶವಿತ್ತು. ದೇಶದಲ್ಲಿ ಯಾವಾಗ ರಾಜಕೀಯ ಚಳುವಳಿಯು ಶಾಂತವಾಗಿತ್ತೋ ಆಗ ಸ್ವರಾಜ್ಯ ಪಕ್ಷವು ಶಾಸಕಾಂಗದಲ್ಲಿ ಹೋರಾಟ ಮಾಡುತ್ತಿತ್ತು. ಶಾಸಕಾಂಗದಲ್ಲಿ ಸರಕಾರದ ಅನ್ಯಾಯಕಾರಕ ಧೋರಣೆಗಳನ್ನು ಅವರು ತೀವ್ರವಾಗಿ ವಿರೋಧಿಸಿದರು. ಮುಂಬರುವ ಕಾಲದಲ್ಲಿ ಭಾರತಕ್ಕೆ ಜವಾಬ್ದಾರ ರಾಜ್ಯಪದ್ಧತಿಯನ್ನು ನೀಡಬೇಕು ಎಂಬ ಬೇಡಿಕೆ ಮಾಡಿದರು. ಭಾರತೀಯರ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ದುಂಡುಮೇಜಿನ ಪರಿಷತ್ತನ್ನು ಕರೆಯಬೇಕು, ರಾಜಕೀಯ ಕೈದಿಗಳ ಬಿಡುಗಡೆ ಮಾಡಬೇಕು. ಅದರ ಸಲುವಾಗಿ ಶಾಸಕಾಂಗದಲ್ಲಿ ಗೊತ್ತುವಳಿಗಳನ್ನು ಪಾಸು ಮಾಡಿಕೊಂಡರು ಸರಕಾರವು ಸ್ವರಾಜ್ಯ ಪಕ್ಷದ ಬಹುತೇಕ ಗೊತ್ತುವಳಿಗಳನ್ನು ತಿರಸ್ಕರಿಸಿತು.


**ಸೈಮನ್ ಕಮಿಶನ್;** 1919ರ ಮಾಂಟೆಗ್ಯೂ- ಚೇಮ್ಸಫರ್ಡ್ ಕಾನೂನು ನೀಡಿದ ಸುಧಾರಣೆಗಳು ಅಸಮಾಧಾನ ಕಾರಕವಾಗಿದ್ದವು. ಅದರಿಂದಾಗಿ ಭಾರತೀಯರು ಅಸಂತುಷ್ಟ ರಾಗಿದ್ದರು. ಈ ಹಿನ್ನೆಲೆಯಲ್ಲಿ ಇಂಗ್ಲೀಷ ಸರಕಾರವು 1927ರಲ್ಲಿ ಸರ ಜಾನ್ ಸೈಮನ್ ಇವರ ಅಧ್ಯಕ್ಷತೆಯಲ್ಲಿ ಒಂದು ಕಮೀಶನ್ ನೇಮಿಸಿತು. ಈ ಏಳು ಸದಸ್ಯರುಳ್ಳ ಕಮೀಶನ್ನಿನಲ್ಲಿ ಒಬ್ಬ ಭಾರತೀಯ ಸದಸ್ಯನೂ ಇರಲಿಲ್ಲ. ಆದ್ದರಿಂದ ಭಾರತದಲ್ಲಿಯ ರಾಜಕೀಯ ಪಕ್ಷಗಳು ಸೈಮನ್ ಕಮೀಶನ್ನಿನ ಮೇಲೆ ಬಹಿಷ್ಕಾರ ಹಾಕುವ ನಿರ್ಣಯವನ್ನು ತೆಗೆದುಕೊಂಡವು.

1928ರಲ್ಲಿ ಸೈಮನ್ ಕಮೀಶನ್ ಭಾರತಕ್ಕೆ ಬಂದಾಗ, ಅದು ಯಾವ ಯಾವ ಸ್ಥಳಗಳಲ್ಲಿ ಹೋಯಿತೋ ಅಲ್ಲಲ್ಲಿ ಅದರ




ಸೈಮನ್ನರೇ ಹಿಂದಿರುಗಿರಿ

ವಿರುದ್ಧ ನಿದರ್ಶನಗಳನ್ನು ಮಾಡಲಾಯಿತು. 'ಸೈಮನ್ ಗೋ ಬ್ಯಾಕ್', 'ಸೈಮನ್ನರೇ ಹಿಂದಿರುಗಿರಿ' ಎಂಬ ಘೋಷಣೆಗಳನ್ನು ಮಾಡುತ್ತ ಪ್ರಖರ ವಿರೋಧ ಮಾಡಲಾಯಿತು. ಮೆರವಣಿಗೆಕಾರರ ಮೇಲೆ ಲಾಠಿ ಪ್ರಹಾರ ಮಾಡಲಾಯಿತು. ಲಾಹೋರದಲ್ಲಿ ಸೈಮನ್ ಕಮೀಶನ್ ವಿರುದ್ಧ ನಡೆದ ನಿದರ್ಶನದ ನೇತೃತ್ವವನ್ನು ಲಾಲಾ ಲಜಪತರಾಯ ಇವರು ಮಾಡಿದರು. ಮೆರವಣಿಗೆಕಾರರ ಮೇಲೆ ಪೋಲಿಸರು ಲಾಠಿ ಪ್ರಹಾರ ಮಾಡಿದರು. ಸ್ಯಾಂಡರ್ಸ್ ಎಂಬ ಉದ್ದಾಮ ಪೋಲೀಸ ಅಧಿಕಾರಿಯು ಲಾಲಾಜಿಯವರ ಎದೆಯ ಮೇಲೆ ಲಾಠಿ ಪ್ರಹಾರ ಮಾಡಿದನು. ಈ ಹಲ್ಲೆಯ ನಂತರದ ನಿಷೇಧ ಸಭೆಯಲ್ಲಿ ಲಾಲಾಜಿ ಹೀಗೆ ಅಂದರು 'ಲಾಠಿಯ ಪ್ರತಿ ಯೊಂದು ಆಘಾತದ ಜೊತೆಗೆ ಬ್ರಿಟಿಶ ಸಾಮ್ರಾಜ್ಯದ ಶವ ಪೆಟ್ಟಿಗೆಯ ಮೇಲೆ ಒಂದೊಂದು ಮೊಳೆಯನ್ನು ಹೊಡೆಯ ಲಾಗುತ್ತಿದೆ.' ಮುಂದೆ ಕೆಲವು ದಿನಗಳಲ್ಲಿಯೇ ಲಾಲಾಜಿಯವರ ನಿಧನವಾಯಿತು.



ಲಾಲಾ ಲಜಪತರಾಯ

**ನೆಹರೂ ವರದಿ:** ಭಾರತೀಯ ಮುಖಂಡರು ಒಮ್ಮತದಿಂದ ಸಂವಿಧಾನವನ್ನು ಸಿದ್ಧಪಡಿಸಲು ಸಾಧ್ಯವಿಲ್ಲವೆಂದು ಭಾರತ ಮಂತ್ರಿ ಬರ್ಕನ್ ಹೆಡ್ ಟೀಕಿಸಿದ್ದರು. ಈ ಆಹ್ವಾನವನ್ನು ಸ್ವೀಕರಿಸಿ ಸರ್ವಪಕ್ಷಗಳಿಂದ ಕೂಡಿದ ಸಮಿತಿಯನ್ನು ಸ್ಥಾಪಿಸಲಾಯಿತು. ಪಂಡಿತ ಮೋತಿಲಾಲ ನೆಹರೂ ಈ ಸಮಿತಿಯ ಅಧ್ಯಕ್ಷರಾಗಿದ್ದರು.

ಭಾರತದಲ್ಲಿ ವಸಾಹತಿನ ಸ್ವರಾಜ್ಯವನ್ನು ಸ್ಥಾಪಿಸಬೇಕು, ಪ್ರೌಢ ಮತದಾನ ಪದ್ಧತಿಯನ್ನು ಜಾರಿಗೊಳಿಸಬೇಕು, ಭಾರತೀಯರಿಗೆ ಮೂಲಭೂತ ನಾಗರಿಕ ಹಕ್ಕುಗಳನ್ನು

ನೀಡಬೇಕು, ಭಾಷಾವಾರ ಪ್ರಾಂತರಚನೆ ಮಾಡಬೇಕು ಎಂಬ ಸೂಚನೆಗಳು ಈ ವರದಿಯಲ್ಲಿದ್ದವು. ಈ ವರದಿಗೆ 'ನೆಹರೂ ವರದಿ' ಎಂದು ಕರೆಯುತ್ತಾರೆ.

1929ರ ಕೊನೆಯವರೆಗೆ ಸರಕಾರವು ನೆಹರೂ ವರದಿಯನ್ನು ಸ್ವೀಕರಿಸದಿದ್ದರೆ ಸವಿನಯ ಕಾಯ್ದೆಭಂಗದ ಚಳುವಳಿಯನ್ನು ಆರಂಭಿಸಲಾಗುವುದು ಎಂಬ ಎಚ್ಚರಿಕೆಯನ್ನು ನೀಡಲಾಯಿತು. ಈ ಹಿನ್ನೆಲೆಯಲ್ಲಿ 1929ರ ಡಿಸೆಂಬರ್‌ನಲ್ಲಿಯ ಪಂಡಿತ ಜವಾಹರಲಾಲ ನೆಹರೂರವರ ಆಧ್ಯಕ್ಷತೆಯಲ್ಲಿ ಜರುಗಿದ ಲಾಹೋರ ಅಧಿವೇಶನವು ಐತಿಹಾಸಿಕವಾಯಿತು.

**ಸಂಪೂರ್ಣ ಸ್ವರಾಜ್ಯದ ಬೇಡಿಕೆ:** ರಾಷ್ಟ್ರೀಯ ಸಭೆಯ ಈವರೆಗಿನ ವಸಾಹತಿತ ಸ್ವರಾಜ್ಯದ ಉದ್ದೇಶವು ಅನೇಕ ತರುಣ ಕಾರ್ಯಕರ್ತರಿಗೆ ಮಾನ್ಯವಿರಲಿಲ್ಲ. ಪಂ. ಜವಾಹರಲಾಲ ನೆಹರೂ ಮತ್ತು ಸುಭಾಷಚಂದ್ರ ಬೋಸ ಇವರು ಸಂಪೂರ್ಣ ಸ್ವರಾಜ್ಯದ ಬೇಡಿಕೆಯನ್ನು ಮಾಡುವ ತರುಣರ ಮುಖಂಡರಾಗಿದ್ದರು. ಈ ತರುಣ ವರ್ಗದ ಪ್ರಭಾವದಿಂದಾಗಿ ರಾಷ್ಟ್ರೀಯ ಸಭೆಯ ಲಾಹೋರ ಅಧಿವೇಶನದಲ್ಲಿ ಸಂಪೂರ್ಣ ಸ್ವರಾಜ್ಯದ ಠರಾವನ್ನು ಸಮ್ಮತಿಸಲಾಯಿತು. ಈ ಠರಾವಿನ ಮೂಲಕ ರಾಷ್ಟ್ರೀಯ ಸಭೆಯು ವಸಾಹತಿನ ಸ್ವರಾಜ್ಯದ ಉದ್ದೇಶವನ್ನು ತ್ಯಜಿಸಿತು. ಆನಂತರ ಭಾರತದ ಸಂಪೂರ್ಣ ಸ್ವಾತಂತ್ರ್ಯವು ರಾಷ್ಟ್ರೀಯ ಚಳುವಳಿಯ ಧ್ಯೇಯವಾಯಿತು.



ಪ. ಜವಾಹರಲಾಲ ನೆಹರೂ

31 ಡಿಸೆಂಬರ 1929 ರಂದು ರಾವಿ ನದೀ ತೀರದಲ್ಲಿ ಪಂ. ಜವಾಹರಲಾಲ ನೆಹರೂ ಇವರು ತ್ರಿವರ್ಣ ಧ್ವಜವನ್ನು ಹಾರಿಸಿದರು ಹಾಗೂ 26 ಜನೇವರಿ ಈ ದಿನವನ್ನು ಸ್ವಾತಂತ್ರ್ಯದಿನವೆಂದು ಆಚರಿಸ ಬೇಕು ಎಂದು ನಿರ್ಧರಿಸ ಲಾಯಿತು. ಬ್ರಿಟಿಶ ಅಧಿಪತ್ಯದಿಂದ ಭಾರತವನ್ನು ಬಿಡುಗಡೆ ಮಾಡುವ ಸಲುವಾಗಿ ಸ್ವಾತಂತ್ರ್ಯದ ಹೋರಾಟವನ್ನು ಅಹಿಂಸಾತ್ಮಕ ಮಾರ್ಗದಿಂದ ನಡೆಸುವ ಪ್ರತಿಜ್ಞೆಯನ್ನು 26 ಜನೇವರಿ 1930ರಂದು ದೇಶದ ತುಂಬೆಲ್ಲ ಮಾಡಲಾಯಿತು. ಆದರಿಂದಾಗಿ ದೇಶದಲ್ಲಿ ಎಲ್ಲೆಡೆ ಚೈತನ್ಯಮಯ ವಾತಾವರಣ ನಿರ್ಮಾಣವಾಯಿತು.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ಗಾಂಧೀಜಿಯವರು ತಮ್ಮ ಕಾರ್ಯದ ಆರಂಭವನ್ನು .......... ಈ ದೇಶದಿಂದ ಮಾಡಿದರು.

(ಅ) ಭಾರತ (ಬ) ಇಂಗ್ಲಂಡ

(ಕ) ದಕ್ಷಿಣ ಆಫ್ರಿಕಾ (ಡ) ಮ್ಯಾನಮಾರ

(2) ರೈತರು .......... ಜಿಲ್ಲೆಯಲ್ಲಿ ಭೂಕಂದಾಯ ನಿರಾಕರಣೆಯ ಚಳುವಳಿಯನ್ನು ಆರಂಭಿಸಿದರು.

(ಅ) ಗೋರಖಪೂರ (ಬ) ಖೇಡಾ

(ಕ) ಸೋಲಾಪೂರ (ಡ) ಅಮರಾವತಿ

(3) ಜಾಲಿಯನ್‌ವಾಲಾ ಬಾಗ ಹತ್ಯಾಕಾಂಡದ ನಿಷೇಧವೆಂದು ರವೀಂದ್ರನಾಥ ಟಾಗೋರರು ಸರಕಾರವು ನೀಡಿದ್ದ .......... ಪದವಿಯನ್ನು ತ್ಯಾಗಮಾಡಿದರು.

(ಅ) ಲಾರ್ಡ್ (ಬ) ಸರ

(ಕ) ರಾವಬಹಾದ್ದೂರ (ಡ) ರಾವಸಾಹೇಬ

**2. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**

(1) ದಕ್ಷಿಣ ಆಫ್ರಿಕೆಯಲ್ಲಿ 1906ರ ಆದೇಶದ ಪ್ರಕಾರ ಕಪ್ಪುವರ್ಣೀಯರ ಮೇಲೆ ಯಾವ ಬಂಧನವನ್ನು ಹಾಕಲಾಯಿತು?

(2) ಗಾಂಧೀಜಿಯವರು ಭಾರತದಲ್ಲಿ ಮೊದಲನೆಯ ಸತ್ಯಾಗ್ರಹವನ್ನು ಎಲ್ಲಿ ಮಾಡಿದರು?

(3) ಜಾಲಿಯನ್‌ವಾಲಾ ಬಾಗ್‌ನಲ್ಲಿ ಗೋಲಿಬಾರಿನ ಆದೇಶವನ್ನು ನೀಡುವ ಅಧಿಕಾರಿ ಯಾರು?

**3. ಕೆಳಗಿನ ಪ್ರಶ್ನೆಗಳಿಗೆ 25ರಿಂದ 30 ಶಬ್ದಗಳಲ್ಲಿ ಉತ್ತರ ಬರೆಯಿರಿ.**

(1) ಸತ್ಯಾಗ್ರಹದ ತತ್ವಜ್ಞಾನವನ್ನು ಸ್ಪಷ್ಟಪಡಿಸಿರಿ.

(2) ಸ್ವರಾಜ್ಯ ಪಕ್ಷದ ಸ್ಥಾಪನೆಯನ್ನು ಏಕೆ ಮಾಡಲಾಯಿತು?

**4. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ರಾಲೆಟ್ ಕಾನೂನನ್ನು (ಕಾಯ್ದೆಯನ್ನು) ಭಾರತೀಯ ಜನತೆ ವಿರೋಧಿಸಿತು.

(2) ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ನಿಲ್ಲಿಸಿದರು.

(3) ಭಾರತೀಯರು ಸೈಮನ್ ಕಮೀಶನ್ನಿನ ಮೇಲೆ ಬಹಿಷ್ಕಾರ ಹಾಕಿದರು

(4) ಭಾರತದಲ್ಲಿ ಖಿಲಾಫತ ಚಳುವಳಿಯನ್ನು ಆರಂಭಿಸಲಾಯಿತು.

**ಉಪಕ್ರಮ**

26 ಜನೇವರಿ 1930ರಂದು ಮಾಡಲಾದ ಸ್ವಾತಂತ್ರ್ಯದ ಪ್ರತಿಜ್ಞೆಯನ್ನು ಪಡೆದು ವರ್ಗದಲ್ಲಿ ಅದರ ಸಾಮೂಹಿಕ ವಾಚನ ಮಾಡಿರಿ.

AUZCZK

# 8. ಸವಿನಯ ಕಾಯ್ದೆಭಂಗ ಚಳುವಳಿ

ಲಾಹೋರ ಅಧಿವೇಶನದಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಠರಾವು ಸಮ್ಮತವಾದ ನಂತರ ಮಹಾತ್ಮಾ ಗಾಂಧಿಯವರು ಸವಿನಯ ಕಾಯಿದೆಭಂಗ ಮಾಡುವ ನಿರ್ಣಯವನ್ನು ತೆಗೆದು ಕೊಂಡರು. ಈ ಚಳುವಳಿಯನ್ನು ಆರಂಭಿಸುವ ಮೊದಲು ಗಾಂಧೀಜಿಯವರು ಬ್ರಿಟಿಶ ಸರಕಾರದ ಕಡೆಗೆ ವಿವಿಧ ಬೇಡಿಕೆಗಳನ್ನು ಮಾಡಿದ್ದರು. ಇವುಗಳಲ್ಲಿ ಉಪ್ಪಿನ ಮೇಲಿನ ಕರವನ್ನು ರದ್ದುಪಡಿಸಿ ಉಪ್ಪು ತಯಾರಿಸುವ ಸರಕಾರದ ಏಕಸ್ವಾಮ್ಯವನ್ನು ರದ್ದು ಮಾಡಬೇಕು ಎಂಬ ಪ್ರಮುಖ ಬೇಡಿಕೆಯಿತ್ತು. ಆದರೆ ಸರಕಾರವು ಗಾಂಧೀಜಿಯವರ ಬೇಡಿಕೆಗಳನ್ನು ತಿರಸ್ಕರಿಸಿದ್ದರಿಂದ ಗಾಂಧೀಜಿಯವರು ಉಪ್ಪಿನ ಕಾಯ್ದೆಯನ್ನು ಉಲ್ಲಂಘಿಸಿ ದೇಶದ ತುಂಬೆಲ್ಲ ಸತ್ಯಾಗ್ರಹ ಮಾಡಬೇಕೆಂದು ನಿರ್ಧರಿಸಿದರು.




ದಾಂಡೀಯಾತ್ರೆ

ಉಪ್ಪು ಇದು ಸಾಮಾನ್ಯ ಜನರ ಆಹಾರದಲ್ಲಿಯ ಮಹತ್ವದ ಘಟಕವಾಗಿದೆ. ಅದರಿಂದ ಉಪ್ಪಿನಂತಹ ಜೀವನಾವಶ್ಯಕ ವಸ್ತುಗಳ ಮೇಲೆ ಕರ ಹೇರುವುದು ಅನ್ಯಾಯಕಾರಕವಾಗಿತ್ತು. ಅದಕ್ಕಾಗಿ ಗಾಂಧೀಜಿಯವರು ಉಪ್ಪಿನ ಸತ್ಯಾಗ್ರಹ ಮಾಡಿದರು. ಉಪ್ಪಿನ ಸತ್ಯಾಗ್ರಹವು ಸಾಂಕೇತಿಕವಾಗಿತ್ತು. ಬ್ರಿಟಿಶ ಸರಕಾರದ ಅನ್ಯಾಯ ಕಾರಕವಾದ ಕಾನೂನುಗಳನ್ನು ಶಾಂತತೆಯ ಮತ್ತು ಸತ್ಯಾಗ್ರಹದ ಮಾರ್ಗದಿಂದ ಉಲ್ಲಂಘಿಸುವುದು ಅದರ ಹಿಂದಿನ ವ್ಯಾಪಕ ಉದ್ದೇಶವಾಗಿತ್ತು.

ಉಪ್ಪಿನ ಸತ್ಯಾಗ್ರಹ ಮಾಡುವ ಸಲುವಾಗಿ ಗಾಂಧೀಜಿಯವರು ಗುಜರಾತ ಸಮುದ್ರತೀರದಲ್ಲಿಯ ದಾಂಡೀ ಎಂಬ ಸ್ಥಳವನ್ನು ಆಯ್ಕೆಮಾಡಿದರು.12 ಮಾರ್ಚ 1930 ರಂದು ಗಾಂಧೀಜಿಯವರು ತಮ್ಮ 78 ಸಹಕಾರಿಗಳೊಂದಿಗೆ ಸಾಬರಮತಿ ಆಶ್ರಮದಿಂದ ಹೊರಟರು. ಸುಮಾರು 385 ಕಿ.ಮೀ ಪಾದಯಾತ್ರೆಯ ಮಾರ್ಗದಲ್ಲಿ ಅನೇಕ ಊರುಗಳಲ್ಲಿ ಅವರು ಭಾಷಣ ಮಾಡಿದರು. ತಮ್ಮ ಭಾಷಣಗಳಲ್ಲಿ ಗಾಂಧೀಜಿಯವರು ನಿರ್ಭಯರಾಗಿ ಕಾಯ್ದೆಭಂಗ ಚಳುವಳಿಯಲ್ಲಿ ಭಾಗವಹಿಸ ಬೇಕೆಂದು ಕರೆ ನೀಡಿದರು. ಗಾಂಧೀಜಿಯವರ ಭಾಷಣಗಳಿಂದ ಕಾಯ್ದೆಭಂಗ ಸಂದೇಶವು ಎಲ್ಲ ಕಡೆಗೆ ಹರಡುತ್ತ ಹೋಯಿತು ಹಾಗೂ ಚಳುವಳಿಗೆ ಅನುಕೂಲ ವಾತಾವರಣ ಸಿದ್ಧವಾಯಿತು. 5 ಎಪ್ರಿಲ 1930ರಂದು ಗಾಂಧೀಜಿಯವರು ದಾಂಡೀ ತಲುಪಿದರು. ಎಪ್ರಿಲ 6ರಂದು ದಾಂಡೀಯ ಸಮುದ್ರ ತೀರದಲ್ಲಿರುವ ಉಪ್ಪನ್ನು ಎತ್ತಿ ಗಾಂಧೀಜಿಯವರು ಉಪ್ಪಿನ ಕಾನೂನನ್ನು ಉಲ್ಲಂಘಿಸಿದರು. ದೇಶವಿಡೀ ಕಾಯ್ದೆಭಂಗ ಚಳುವಳಿ ಆರಂಭವಾಯಿತು.

**ಪೇಶಾವರದ ಸತ್ಯಾಗ್ರಹ:** ವಾಯವ್ಯ ಸರಹದ್ದು ಪ್ರಾಂತದಲ್ಲಿ ಖಾನ ಅಬ್ದುಲ ಗಫಾರಖಾನರು ಗಾಂಧೀಜಿಯವರ ನಿಷ್ಠಾವಂತ ಅನುಯಾಯಿಗಳಾಗಿದ್ದರು ಅವರನ್ನು 'ಗಡಿನಾಡ ಗಾಂಧಿ' ಎಂದು ಗುರುತಿಸಲಾಗುತ್ತದೆ. ಅವರು 'ಖುದಾ-ಇ-ಖಿದಮತಗಾರ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. 23 ಎಪ್ರಿಲ 1930ರಂದು ಪೇಶಾವರ ಎಂಬಲ್ಲಿ ಅವರು ಸತ್ಯಾಗ್ರಹವನ್ನು ಆರಂಭಿಸಿದರು. ಸುಮಾರು ಒಂದು ವಾರದ ವರೆಗೆ ಪೇಶಾವರ ನಗರವು ಸತ್ಯಾಗ್ರಹಿಗಳ ವಶದಲ್ಲಿತ್ತು. ಸರಕಾರವು ಸತ್ಯಾಗ್ರಹಿಗಳ ಮೇಲೆ ಗೋಳೀಬಾರು ಮಾಡುವಂತೆ ಗಢವಾಲ ಪಡೆಗೆ ಆಜ್ಞೆ ಮಾಡಿತು. ಆದರೆ ಗಢವಾಲ ಪಡೆಯ ಅಧಿಕಾರಿಯಾದ ಚಂದ್ರಸಿಂಗ ಠಾಕೂರ ಈತನು ಸತ್ಯಾಗ್ರಹಿಗಳ ಮೇಲೆ ಗುಂಡುಹಾರಿಸಲು ನಿರಾಕರಿಸಿದನು. ಆದ್ದರಿಂದ ಅವನಿಗೆ ಸೈನಿಕ ನ್ಯಾಯಾಲಯವು ಕಠೋರ ಶಿಕ್ಷೆಯನ್ನು ವಿಧಿಸಿತು.



ಖಾನ ಅಬ್ದುಲ ಗಫಾರಖಾನ

ಮಹಾತ್ಮಾ ಗಾಂಧೀಜಿಯವರು ಆರಂಭಿಸಿದ ಸವಿನಯ ಕಾಯ್ದೆಭಂಗ ಚಳುವಳಿಯಿಂದ ಬ್ರಿಟಿಶ ಸರಕಾರವು ಅಡಚಣೆಯಲ್ಲಿ ಸಿಲುಕಿತು. 4 ಮೇ 1930ರಂದು ಗಾಂಧೀಜಿಯವರನ್ನು ಬಂಧಿಸಲಾಯಿತು. ದೇಶದ ತುಂಬೆಲ್ಲಾ ದಬ್ಬಾಳಿಕೆ ಆರಂಭವಾಯಿತು. ದೇಶದ ತುಂಬೆಲ್ಲ ಗಾಂಧೀಜಿಯವರ ಬಂಧನವನ್ನು ನಿಷೇಧಿಸ ಲಾಯಿತು.

**ಸೋಲಾಪೂರ ಸತ್ಯಾಗ್ರಹ:** ಸೋಲಾಪೂರದಲ್ಲಿಯ ಸತ್ಯಾಗ್ರಹದಲ್ಲಿ ಗಿರಣಿ ಕಾರ್ಮಿಕರು ಮುಂಚೂಣಿಯಲ್ಲಿದ್ದರು. 6 ಮೇ 1930ರಂದು ಸೋಲಾಪೂರದಲ್ಲಿ ಹರತಾಳವನ್ನು ಆಚರಿಸಲಾಯಿತು. ಈ ಪ್ರಸಂಗದಲ್ಲಿ ಸೋಲಾಪೂರದಲ್ಲಿ ಪ್ರಚಂಡ ಮೋರ್ಚಾ ತೆಗೆಯಲಾಯಿತು. ತತ್ಕಾಲೀನ ಕಲೆಕ್ಟರನು ಮೋರ್ಚಾದ ಮೇಲೆ ಗೋಳೀಬಾರು ಮಾಡುವಂತೆ ಆಜ್ಞೆ ನೀಡಿದನು. ಇದರಲ್ಲಿ ಶಂಕರ ಶಿವದಾರೆಯವರ ಜೊತೆ ಅನೇಕ ಸ್ವಯಂ ಸೇವಕರು ಮರಣವನ್ನಪ್ಪಿದರು. ಇದರ ಪರಿಣಾಮವಾಗಿ ಜನರು ಪೋಲೀಸಸ್ಟೇಶನ್, ರೇಲ್ವೆ ನಿಲ್ದಾಣ, ನ್ಯಾಯಾಲಯ, ನಗರ ಪರಿಷತ್ತಿನ ಕಟ್ಟಡ ಮುಂತಾದವುಗಳ ಮೇಲೆ ದಾಳಿಮಾಡಿದರು.

ಸರಕಾರವು ಮಾರ್ಶಲ ಲಾ ಅಂದರೆ ಸೈನಿಕ ಕಾಯ್ದೆಯನ್ನು ಜಾರಿಗೊಳಿಸಿತು. ಆಂದೋಲನವನ್ನು ಹತ್ತಿಕ್ಕಲಾಯಿತು. ಈ ಆಂದೋಲನದಲ್ಲಿ ಮುಂಚೂಣಿಯಲ್ಲಿದ್ದ ಮಲ್ಲಪ್ಪಾ ಧನಶೆಟ್ಟಿ, ಶ್ರೀಕೃಷ್ಣ ಸಾರಡಾ, ಕುರ್ಬಾನ ಹುಸೇನ ಮತ್ತು ಜಗನ್ನಾಥ ಶಿಂದೆ ಇವರನ್ನು ಗಲ್ಲಿಗೇರಿಸಲಾಯಿತು.

**ಧಾರಾಸನಾ ಸತ್ಯಾಗ್ರಹ:** ಗುಜರಾತಿನ ಧಾರಾಸನಾ ಎಂಬಲ್ಲಿಯ ಸತ್ಯಾಗ್ರಹದ ನೇತೃತ್ವವನ್ನು ಸರೋಜಿನಿ ನಾಯ್ಡು ಇವರು ವಹಿಸಿಕೊಂಡರು. ಉಪ್ಪಿನ ಕಾಯ್ದೆಯನ್ನು ಉಲ್ಲಂಘಿಸುವ ಸಲುವಾಗಿ ಹೊರಟ ಸತ್ಯಾಗ್ರಹಿಗಳ ಮೇಲೆ ಪೋಲೀಸರು ಲಾಠಿ


ಮಲ್ಲಪ್ಪಾ ಧನಶೆಟ್ಟಿ


ಶ್ರೀಕೃಷ್ಣ ಸಾರಡಾ


ಕುರ್ಬಾನ ಹುಸೇನ


ಜಗನ್ನಾಥ ಶಿಂದೆ

ಪ್ರಹಾರ ಮಾಡಿದರು. ಸತ್ಯಾಗ್ರಹಿಗಳು ಕೂಡ ಶಾಂತವಾಗಿ ಲಾಠಿ ಪ್ರಹಾರಗಳನ್ನು ಸಹಿಸುತ್ತಿದ್ದರು. ಅವರನ್ನು ಔಷಧೋಪಚಾರಕ್ಕಾಗಿ ಕರೆದೊಯ್ದ ನಂತರ ಇನ್ನೊಂದು ಪಡೆ ಸತ್ಯಾಗ್ರಹ ಮಾಡಲು ಮುಂದೆ ಬರುತ್ತಿತ್ತು. ಈ ರೀತಿ ನಿರಂತರವಾಗಿ ನಡೆದಿತ್ತು. ಮಹಾರಾಷ್ಟ್ರದ ವಡಾಳಾ, ಮಾಲವಣ, ಶಿರೋಡಾ ಇತ್ಯಾದಿ ಸ್ಥಳಗಳಲ್ಲಿ ಉಪ್ಪಿನ ಸತ್ಯಾಗ್ರಹ ನಡೆಯಿತು.


ಸರೋಜಿನಿ ನಾಯ್ಡು

ಎಲ್ಲಿ ಉಪ್ಪಿನ ಮಳಿಗೆಗಳಿರಲಿಲ್ಲವೋ ಅಲ್ಲಿ ಜನರು ಅರಣ್ಯಕಾನೂನನ್ನು ಉಲ್ಲಂಘಿಸಲು ಆರಂಭಿಸಿದರು. ಮಹಾರಾಷ್ಟ್ರದ ಬಿಳಾಶಿ, ಸಂಗಮನೇರ, ಕಳವಣ, ಚಿರನೇರ, ಪುಸದ ಇತ್ಯಾದಿ ಸ್ಥಳಗಳಲ್ಲಿ ಅರಣ್ಯ ಸತ್ಯಾಗ್ರಹವಾಯಿತು. ಆದಿವಾಸಿಗಳು ದೊಡ್ಡ ಸಂಖ್ಯೆಯಲ್ಲಿ ಅರಣ್ಯಸತ್ಯಾಗ್ರಹದಲ್ಲಿ ಭಾಗವಹಿಸಿದರು.

**ಬಾಬೂ ಗೇನೂವಿನ ಬಲಿದಾನ:** ಮುಂಬಯಿಯಲ್ಲಿ ವಿದೇಶಿ ವಸ್ತುಗಳ ಮೇಲಿನ ಬಹಿಷ್ಕಾರ ಆಂದೋಲನ ನಡೆದಿತ್ತು. ವಿದೇಶಿ ವಸ್ತುಗಳ ಸಾಗಾಟ ಮಾಡುವ ವಾಹನಗಳನ್ನು ಆಂದೋಲನಕಾರರು ತಡೆಯುತ್ತಿದ್ದರು. ಮುಂಬಯಿಯಲ್ಲಿಯ ಗಿರಣಿಯಲ್ಲಿ ಕೆಲಸ ಮಾಡುವ ಬಾಬೂ ಗೇನೂ ಸೈದ ಎಂಬ ಆಂದೋಲನಕಾರರು ಮುಂಚೂಣಿಯಲ್ಲಿದ್ದರು. ಪೋಲೀಸ ಬಂದೋಬಸ್ತಿನಲ್ಲಿ ವಿದೇಶಿ ವಸ್ತುಗಳನ್ನು ಕೊಂಡೊಯ್ಯುತ್ತಿದ್ದ ಒಂದು ಟ್ರಕ್ಕು ಬಾಬೂ ಗೇನೂ ಇವರ ಮುಂದೆ ಬಂದಿತು. ಟ್ರಕ್ಕನ್ನು ತಡೆಯುವ ಸಲುವಾಗಿ ಅವರು ರಸ್ತೆಯ ಮೇಲೆ ಅಡ್ಡ ಬಿದ್ದರು. ಪೋಲೀಸರು ಬೆದರಿಕೆ ಹಾಕಿದರೂ ಅವರು ಆ ಸ್ಥಳದಿಂದ ಕದಲಲಿಲ್ಲ. ಕೊನೆಗೆ ಟ್ರಕ್ಕು ಅವರ ಮೇಲೆ ಹಾಯ್ದು ಹೋಯಿತು. ಅದರಲ್ಲಿ ಬಾಬೂ ಗೇನೂ ಇವರು ಹುತಾತ್ಮರಾದರು. ಬಾಬೂ ಗೇನೂ ಇವರ ಬಲಿದಾನವು ರಾಷ್ಟ್ರೀಯ ಚಳುವಳಿಗೆ ಪ್ರೇರಣೆಯನ್ನು ನೀಡಿತು.


ಬಾಬೂ ಗೇನೂ

**ಗೊತ್ತಿದೆಯೇ ನಿಮಗೆ ?**

**ಕಾಯ್ದೆಭಂಗ ಚಳುವಳಿಯ ವೈಶಿಷ್ಟ್ಯಗಳು:**

- ಇಲ್ಲಿಯವರೆಗಿನ ಚಳುವಳಿಗಳು ನಗರ ವಿಭಾಗಗಳವರೆಗೆ ಸೀಮಿತವಾಗಿದ್ದವು. ಆದರೆ ಈ ಚಳುವಳಿಯು ದೇಶವ್ಯಾಪಿಯಾಯಿತು. ಹಳ್ಳಿ-ಹಳ್ಳಿಗಳಲ್ಲಿಯ ಜನರು ಇದರಲ್ಲಿ ಭಾಗವಹಿಸಿದರು.
- ಇದರಲ್ಲಿ ಸ್ತ್ರೀಯರು ಕೂಡ ಸಾಕಷ್ಟು ಸಂಖ್ಯೆಯಲ್ಲಿ ಭಾಗವಹಿಸಿದರು. ಕಸ್ತೂರಬಾ ಗಾಂಧಿ, ಕಮಲಾದೇವಿ ಚಟ್ಟೋಪಾಧ್ಯಾಯ, ಅವಂತಿಕಾಬಾಯಿ ಗೋಖಲೆ, ಲೀಲಾವತಿ ಮುನ್ಶಿ, ಹಂಸಾಬೆನ್ ಮೆಹತಾ ಇವರು ಸತ್ಯಾಗ್ರಹಿಗಳ ನೇತೃತ್ವವಹಿಸಿದರು.
- ಈ ಚಳುವಳಿಯು ಸಂಪೂರ್ಣವಾಗಿ ಅಹಿಂಸಾತ್ಮಕ ಪದ್ಧತಿಯಿಂದ ಆಯಿತು. ಬ್ರಿಟಿಶ ಸರಕಾರವು ಜೋರಾಗಿ ದಬ್ಬಾಳಿಕೆಯನ್ನು ಮಾಡುತ್ತಿದ್ದರೂ ಜನರು ನಿ:ಶಸ್ತ್ರ ಪ್ರತಿಭಟನೆ ಮಾಡಿದರು. ಇದರಿಂದ ಭಾರತೀಯ ಜನತೆ ನಿರ್ಭಯವಾಯಿತು.

**ದುಂಡುಮೇಜಿನ ಪರಿಷತ್ತು:** ಸವಿನಯ ಕಾಯ್ದೆಭಂಗ ಚಳುವಳಿ ನಡೆದಾಗ ಭಾರತಕ್ಕೆ ಸಂಬಂಧಿತ ಘಟನಾತ್ಮಕ ಸಮಸ್ಯೆಗಳನ್ನು ಕುರಿತು ವಿಚಾರ ಮಾಡಬೇಕು ಎಂಬುದು ಬ್ರಿಟನ್ನಿನ ಪ್ರಧಾನ ಮಂತ್ರಿ ರ‍್ಯಾಮ್ಸೆ ಮ್ಯಾಕ್ಡೋನಾಲ್ಡ ಇವರ ಅಭಿಪ್ರಾಯವಾಗಿತ್ತು. ಅದಕ್ಕಾಗಿ ಅವರು ಲಂಡನ್ನಿನಲ್ಲಿ ಒಂದು ಪರಿಷತ್ತನ್ನು ಆಯೋಜಿಸಿದರು. ಈ ಪರಿಷತ್ತಿಗೆ ದುಂಡುಮೇಜಿನ ಪರಿಷತ್ತು ಎಂದು ಕರೆಯಲಾಗುತ್ತದೆ. 1930ರಿಂದ 1932ರ ಕಾಲಾವಧಿಯಲ್ಲಿ ಮೂರು ದುಂಡು ಮೇಜಿನ ಪರಿಷತ್ತುಗಳನ್ನು ಆಯೋಜಿಸಲಾಗಿತ್ತು.

**ಮೊದಲನೆಯ ದುಂಡುಮೇಜಿನ ಪರಿಷತ್ತು:** ರ‍್ಯಾಮ್ಸೆ ಮ್ಯಾಕ್ಡೋನಾಲ್ಡ ಇವರು ಮೊದಲನೆಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಈ ಪರಿಷತ್ತಿಗೆ ಭಾರತ ಹಾಗೂ ಇಂಗ್ಲಂಡಿನಲ್ಲಿನ ವಿವಿಧ ಪ್ರತಿನಿಧಿಗಳು ಹಾಜರಿದ್ದರು. ಅವರಲ್ಲಿ ಡಾ. ಬಾಬಾಸಾಹೇಬ ಅಂಬೇಡಕರ, ಸರ ತೇಜಬಹಾದೂರ ಸಪ್ರೂ, ಬ್ಯಾರಿಸ್ಟರ ಜೀನಾ ಮುಂತಾದವರ ಸಹಭಾಗವಿತ್ತು. ಕೇಂದ್ರೀಯ ಮಟ್ಟದಲ್ಲಿ ಜವಾಬ್ದಾರ ಸರಕಾರ ಪದ್ಧತಿ, ಭಾರತದಲ್ಲಿ ಒಕ್ಕೂಟ ಸರಕಾರದ ಸ್ಥಾಪನೆ ಇತ್ಯಾದಿ ವಿವಿಧ ವಿಷಯಗಳ ಮೇಲೆ ಈ ಪರಿಷತ್ತಿನಲ್ಲಿ ಚರ್ಚೆಯಾಯಿತು. ಈ ಪರಿಷತ್ತಿನಲ್ಲಿ ವಿವಿಧ ರಾಷ್ಟ್ರೀಯ ಪಕ್ಷಗಳು ಮತ್ತು ಸಂಸ್ಥಾನಿಕರ ಪ್ರತಿನಿಧಿಗಳು ಉಪಸ್ಥಿತರಿದ್ದರು. ಆದರೆ ರಾಷ್ಟ್ರೀಯ ಸಭೆಯು ಈ ಪರಿಷತ್ತಿನಲ್ಲಿ ಭಾಗವಹಿಸಲಿಲ್ಲ. ರಾಷ್ಟ್ರೀಯ ಸಭೆಯು ದೇಶದ ಪ್ರಾತಿನಿಧಿಕ ಸಂಸ್ಥೆಯಾಗಿತ್ತು. ಅದರ ಸಹಭಾಗದ ಹೊರತು ದುಂಡುಮೇಜಿನ ಪರಿಷತ್ತಿನಲ್ಲಿಯ ಚರ್ಚೆಯು ನಿಷ್ಫಲವಾಯಿತು.

**ಗಾಂಧಿ-ಆಯರ್ವಿನ್ ಒಪ್ಪಂದ:** ದುಂಡುಮೇಜಿನ ಪರಿಷತ್ತಿನ ಎರಡನೆಯ ಸುತ್ತಿನ ಚರ್ಚೆಯಲ್ಲಿ ರಾಷ್ಟ್ರೀಯ ಸಭೆಯು ಪಾಲ್ಗೊಳ್ಳಬಹುದೆಂಬ ಆಸೆಯನ್ನು ಬ್ರಿಟಿಶ ಪ್ರಧಾನಮಂತ್ರಿಗಳು ವ್ಯಕ್ತಪಡಿಸಿದರು. ಪ್ರಧಾನಮಂತ್ರಿಗಳ ಕರೆಗೆ ಓಗೊಟ್ಟು ವೈಸರಾಯನು ಗಾಂಧೀಜಿ ಮತ್ತು ಅನ್ಯ ಮುಖಂಡರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದನು. ರಾಷ್ಟ್ರೀಯ ಸಭೆಗೆ ಮುಕ್ತವಾಗಿ ಚರ್ಚೆಮಾಡಲು ಅನುಕೂಲವಾಗಬೇಕೆಂದು ಪೋಷಕ ವಾತಾವರಣವನ್ನು ನಿರ್ಮಾಣ ಮಾಡಲಾಯಿತು. ಮಹಾತ್ಮಾಗಾಂಧಿ ಮತ್ತು ವೈಸರಾಯ ಆಯರ್ವಿನ್‌ರ ನಡುವೆ ಒಂದು ಒಪ್ಪಂದವಾಯಿತು. ಇದಕ್ಕೆ ಗಾಂಧಿ-ಆಯರ್ವಿನ್ ಒಪ್ಪಂದ ಎಂದು ಕರೆಯುತ್ತಾರೆ. ಈ ಒಪ್ಪಂದದ ಪ್ರಕಾರ ಬ್ರಿಟಿಶ ಸರಕಾರವು ಭಾರತದ ಭಾವೀ ರಾಜ್ಯಘಟನೆಯಲ್ಲಿ ಜವಾಬ್ದಾರಿಯುತ ರಾಜ್ಯಪದ್ಧತಿಯನ್ನು ಸ್ವೀಕರಿಸುವ ಭರವಸೆಯನ್ನು ನೀಡಿತು. ಇದರ ಪರಿಣಾಮವಾಗಿ ರಾಷ್ಟ್ರೀಯ ಸಭೆಯು ಸವಿನಯ ಕಾಯ್ದೆಭಂಗ ಚಳುವಳಿಯನ್ನು ಹಿಂತೆಗೆದುಕೊಂಡಿತು ಮತ್ತು ಎರಡನೆಯ ದುಂಡುಮೇಜಿನ ಪರಿಷತ್ತಿನಲ್ಲಿಯ ಚರ್ಚೆಯಲ್ಲಿ ಭಾಗವಹಿಸುವ ಸಿದ್ಧತೆಯನ್ನು ತೋರಿಸಿತು.

**ಎರಡನೆಯ ದುಂಡುಮೇಜಿನ ಪರಿಷತ್ತು:** 1931ರಲ್ಲಿ ಎರಡನೆಯ ದುಂಡುಮೇಜಿನ ಪರಿಷತ್ತನ್ನು ಆಯೋಜಿಸಲಾಯಿತು. ರಾಷ್ಟ್ರೀಯ ಸಭೆಯ ಪ್ರತಿನಿಧಿಯಾಗಿ ಮಹಾತ್ಮಾ ಗಾಂಧಿಯವರು ಈ ಪರಿಷತ್ತಿಗೆ ಹಾಜರಾದರು.ರಾಷ್ಟ್ರೀಯ ಸಭೆಯ ಜೊತೆಗೆ ಭಾರತದಲ್ಲಿಯ ವಿವಿಧ ಜಾತಿ-ಪಂಗಡಗಳ, ಪಕ್ಷಗಳ ಮತ್ತು ಸಂಸ್ಥಾನಿಕರ ಪ್ರತಿನಿಧಿಗಳನ್ನು ಕರೆಯಲಾಗಿತ್ತು. ದುಂಡುಮೇಜಿನ ಪರಿಷತ್ತಿನಲ್ಲಿ ಸರಕಾರವು ಅಲ್ಪಸಂಖ್ಯಾತರ ಸಮಸ್ಯೆಗಳನ್ನು ಮಂಡಿಸಿತು. ಈ ಸಮಸ್ಯೆಗಳನ್ನು ಕುರಿತು ಮತ್ತು ಭಾವಿ ಒಕ್ಕೂಟ ರಾಜ್ಯದ ಸಂವಿಧಾನದ ಸ್ವರೂಪವನ್ನು ಕುರಿತು ಭಿನ್ನಾಭಿಪ್ರಾಯಗಳು ಉಂಟಾದವು. ಗಾಂಧೀಜಿಯವರು ಮತೈಕ್ಯವನ್ನುಂಟು ಮಾಡುವ ಪ್ರಯತ್ನ ಮಾಡಿದರು. ಆದರೆ ಅದರಲ್ಲಿ ಅವರಿಗೆ ಯಶಸ್ಸು ದೊರೆಯಲಿಲ್ಲ. ಕೊನೆಗೆ ನಿರಾಶರಾಗಿ ಗಾಂಧೀಜಿಯವರು ಭಾರತಕ್ಕೆ ಮರಳಿದರು.

**ಪುಣೆ ಕರಾರು:** ಡಾ. ಬಾಬಾಸಾಹೇಬ ಅಂಬೇಡಕರ ಇವರು ದುಂಡುಮೇಜಿನ ಪರಿಷತ್ತುಗಳಲ್ಲಿ ದಲಿತರ ಪ್ರತಿನಿಧಿತ್ವ ಮಾಡಿದರು. ಅಲ್ಲಿ ಅವರು ದಲಿತರಿಗಾಗಿ ಸ್ವತಂತ್ರ ಮತಕ್ಷೇತ್ರಗಳ ಬೇಡಿಕೆ ಮಾಡಿದರು. ಎರಡನೆಯ ದುಂಡುಮೇಜಿನ ಪರಿಷತ್ತಿನ ನಂತರ ಬ್ರಿಟಿಶ ಪ್ರಧಾನ ಮಂತ್ರಿ ರ‍್ಯಾಮ್ಸೆ ಮ್ಯಾಕ್ಡೋನಾಲ್ಡ ಇವರು ಜಾತೀಯ ಕೊಡುಗೆಯನ್ನು ಜಾಹೀರುಪಡಿಸಿದರು. ಅದಕ್ಕನುಸಾರವಾಗಿ ದಲಿತರಿಗಾಗಿ ಸ್ವತಂತ್ರ ಮತಕ್ಷೇತ್ರಗಳನ್ನು ಜಾಹೀರು ಮಾಡಲಾಯಿತು. ಜಾತೀಯ ಕೊಡುಗೆಯು ಮಾಡಿದ ಹಿಂದೂ ಸಮಾಜದ ವಿಭಜನೆಯು ಗಾಂಧೀಜಿಯವರಿಗೆ ಮಾನ್ಯವಿರಲಿಲ್ಲ. ಆದ್ದರಿಂದ ಅವರು ಈ ಕೊಡುಗೆಯ ವಿರುದ್ಧ ಯೆರವಡಾ ಸೆರೆಮನೆಯಲ್ಲಿ ಆಮರಣ ಉಪವಾಸ ಆರಂಭಿಸಿದರು. ರಾಷ್ಟ್ರೀಯ ಸಭೆಯ ಮುಖಂಡರು ತಮ್ಮ ಬೇಡಿಕೆಯ ಪುನರ್ವಿಚಾರ ಮಾಡುವಂತೆ ಡಾ. ಬಾಬಾಸಾಹೇಬ ಅಂಬೇಡಕರರನ್ನು ವಿನಂತಿಸಿಕೊಂಡರು. ರಾಷ್ಟ್ರಹಿತವನ್ನು ಲಕ್ಷದಲ್ಲಿಟ್ಟುಕೊಂಡು ಡಾ. ಬಾಬಾಸಾಹೇಬ ಅಂಬೇಡಕರರು ಈ ವಿನಂತಿಯನ್ನು ಮನ್ನಿಸಿದರು. 1932ರಲ್ಲಿ ಮಹಾತ್ಮಾಗಾಂಧಿ ಮತ್ತು ಬಾಬಾಸಾಹೇಬ ಅಂಬೇಡಕರ ಇವರ ನಡುವೆ ಪುಣೆಯಲ್ಲಿ ಒಂದು ಒಪ್ಪಂದವಾಯಿತು. ಈ ಒಪ್ಪಂದವು 'ಪುಣೆ ಕರಾರು' ಎಂದು ಪ್ರಸಿದ್ಧವಾಗಿದೆ. ಈ ಕರಾರಿನ ಪ್ರಕಾರ ದಲಿತರಿಗಾಗಿ ಸ್ವತಂತ್ರ ಮತಕ್ಷೇತ್ರಗಳ ಬದಲಾಗಿ ಮೀಸಲು ಸ್ಥಾನಗಳನ್ನು ನೀಡಬೇಕೆಂದು ನಿರ್ಧರಿಸಲಾಯಿತು.



ಡಾ. ಬಾಬಾಸಾಹೇಬ ಅಂಬೇಡಕರ

**ಮೂರನೆಯ ದುಂಡುಮೇಜಿನ ಪರಿಷತ್ತು:** ನವೆಂಬರ 1932ರಲ್ಲಿ ಇಂಗ್ಲಂಡಿನಲ್ಲಿ ಮೂರನೆಯ ದುಂಡುಮೇಜಿನ ಪರಿಷತ್ತು ಜರುಗಿತು. ಆದರೆ ರಾಷ್ಟ್ರೀಯ ಸಭೆಯು ಈ ಪರಿಷತ್ತಿನ ಮೇಲೆ ಬಹಿಷ್ಕಾರ ಹಾಕಿತು. ಅದರಿಂದಾಗಿ ಈ ಪರಿಷತ್ತು ಅರ್ಥಹೀನವಾಯಿತು.

**ಸವಿನಯ ಕಾಯ್ದೆಭಂಗದ ಎರಡನೆಯ ಸುತ್ತು:** ಎರಡನೆಯ ದುಂಡುಮೇಜಿನ ಪರಿಷತ್ತಿನಿಂದ ಉದ್ವಿಗ್ನ ಮನಸ್ಸಿನಿಂದ ಗಾಂಧೀಜಿಯವರು ಭಾರತಕ್ಕೆ ಮರಳಿ ಬಂದರು. ಅವರು ಸವಿನಯ ಕಾಯ್ದೆಭಂಗ ಚಳುವಳಿಯನ್ನು ಪುನ: ಆರಂಭಿಸುವುದಾಗಿ ನಿರ್ಧರಿಸಿದರು. ಸರಕಾರವು ಕೂಡಲೇ ಗಾಂಧೀಜಿಯವರನ್ನು ಬಂಧಿಸಿತು. ಆದ್ದರಿಂದ ಜನತೆಯಲ್ಲಿ ಅಸಂತೋಷ ನಿರ್ಮಾಣವಾಯಿತು.

ಸರಕಾರವು ಈ ಚಳುವಳಿಗೆ ಅಮಾನವೀಯ ದಬ್ಬಾಳಿಕೆಯಿಂದ ಉತ್ತರ ನೀಡಿತು. ಎಲ್ಲೆಡೆ ನಾಗರಿಕ ಹಕ್ಕುಗಳನ್ನು ಕಸಿದುಕೊಳ್ಳಲಾಯಿತು. ರಾಷ್ಟ್ರೀಯ ಸಭೆ ಮತ್ತು ಅದರ ಸಹಯೋಗಿ ಸಂಘಟನೆಗಳನ್ನು ಕಾನೂನು ಬಾಹಿರವೆಂದು ಘೋಷಿಸಲಾಯಿತು. ಅವುಗಳ ಕಚೇರಿಗಳನ್ನು ಮತ್ತು ಸಂಪತ್ತನ್ನು ವಶಪಡಿಸಿಕೊಳ್ಳಲಾಯಿತು. ರಾಷ್ಟ್ರೀಯ ವರ್ತಮಾನಪತ್ರ ಮತ್ತು ಸಾಹಿತ್ಯಗಳ ಮೇಲೆ ನಿರ್ಬಂಧ ಹಾಕಲಾಯಿತು. ಕೊನೆಗೆ ಎಪ್ರಿಲ 1934ರಲ್ಲಿ ಗಾಂಧೀಜಿಯವರು ಚಳುವಳಿಯನ್ನು ಹಿಂತೆಗೆದುಕೊಂಡರು ಹಾಗೂ ಸವಿನಯ ಕಾಯ್ದೆಭಂಗ ಚಳುವಳಿಯ ಐತಿಹಾಸಿಕ ಅಧ್ಯಾಯ ಮುಕ್ತಾಯವಾಯಿತು.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(ಮಹಾತ್ಮಾಗಾಂಧಿ, ಖುದಾ-ಇ-ಖಿದಮತಗಾರ, ರ್‍ಯಾಮ್ಸೆ, ಮ್ಯಾಕ್ಡೋನಾಲ್ಡ, ಸರೋಜನಿ ನಾಯ್ಡು)

(1) ......... ಇವರು ಲಂಡನ್ನಿನಲ್ಲಿ ದುಂಡುಮೇಜಿನ ಪರಿಷತ್ತನ್ನು ಆಯೋಜಿಸಿದ್ದರು.

(2) ಖಾನ ಅಬ್ದುಲ ಗಫಾರಖಾನ ಇವರು ......... ಈ ಸಂಘಟನೆಯನ್ನು ಸ್ಥಾಪಿಸಿದರು.

(3) ಧಾರಾಸನಾ ಸತ್ಯಾಗ್ರಹದ ನೇತೃತ್ವವನ್ನು ......... ಇವರು ವಹಿಸಿಕೊಂಡರು.

(4) ಎರಡನೆಯ ದುಂಡುಮೇಜಿನ ಪರಿಷತ್ತಿಗೆ ರಾಷ್ಟ್ರೀಯ ಸಭೆಯ ಪ್ರತಿನಿಧಿಯಾಗಿ .........ಇವರು ಹಾಜರಾದರು.

**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಚಂದ್ರಸಿಂಗ ಠಾಕೂರ ಇವರಿಗೆ ಸೈನಿಕ ನ್ಯಾಯಾಲಯವು ಕಠೋರ ಶಿಕ್ಷೆಯನ್ನು ವಿಧಿಸಿತು.

(2) ಸೋಲಾಪೂರದಲ್ಲಿ ಸರಕಾರವು ಮಾರ್ಶಲ ಲಾ ಅಂದರೆ ಸೈನಿಕ ಕಾಯ್ದೆಯನ್ನು ಜಾರಿಗೊಳಿಸಿತು.

(3) ಮೊದಲನೆಯ ದುಂಡುಮೇಜಿನ ಪರಿಷತ್ತಿನಲ್ಲಿಯ ಚರ್ಚೆಯು ನಿಷ್ಫಲವಾಯಿತು.

(4) ಗಾಂಧೀಜಿಯವರು ಯೆರವಡಾ ಸೆರೆಮನೆಯಲ್ಲಿ ಆಮರಣ ಉಪವಾಸ ಆರಂಭಿಸಿದರು.

**3. ಕೆಳಗಿನ ಪ್ರಶ್ನೆಗಳಿಗೆ 25ರಿಂದ 30 ಶಬ್ದಗಳಲ್ಲಿ ಉತ್ತರ ಬರೆಯಿರಿ.**

(1) ಗಾಂಧೀಜಿಯವರು ಉಪ್ಪಿನ ಕಾಯ್ದೆಯನ್ನು ಉಲ್ಲಂಘಿಸಿ ದೇಶದ ತುಂಬೆಲ್ಲ ಸತ್ಯಾಗ್ರಹ ಮಾಡಬೇಕೆಂದು ಏಕೆ ನಿರ್ಧರಿಸಿದರು?

(2) ರಾಷ್ಟ್ರೀಯ ಸಭೆಯು ಸವಿನಯ ಕಾಯ್ದೆಭಂಗ ಚಳುವಳಿಯನ್ನು ಏಕೆ ಹಿಂತೆಗೆದುಕೊಂಡಿತು?

**4. ಸವಿನಯ ಕಾಯ್ದೆಭಂಗ ಚಳುವಳಿಯ ಕೆಳಗಿನ ಕಾಲರೇಷೆಯನ್ನು ಪೂರ್ಣಮಾಡಿರಿ.**

| 12 ಮಾರ್ಚ 1930 | 6 ಎಪ್ರಿಲ 1930 | 23 ಎಪ್ರಿಲ 1930 | 4 ಮೇ 1930 | 6 ಮೇ 1930 |
|---|---|---|---|---|
| | | | | |

**ಉಪಕ್ರಮ**

(1) ಸವಿನಯ ಕಾಯ್ದೆಭಂಗ ಚಳುವಳಿಯಲ್ಲಿಯ ಕೆಳಗಿನ ವ್ಯಕ್ತಿಗಳ ಕಾರ್ಯಗಳ ವಿಷಯವಾಗಿ ಅಧಿಕ ಮಾಹಿತಿಯನ್ನು ಪಡೆದು ಅವರ ಭಾವಚಿತ್ರಗಳೊಂದಿಗೆ ವರ್ಗದಲ್ಲಿ ಪ್ರದರ್ಶಿಸಿರಿ.

(ಅ) ಸರೋಜನಿ ನಾಯ್ಡು (ಬ) ಖಾನ ಅಬ್ದುಲ ಗಫಾರಖಾನ (ಕ) ಬಾಬೂ ಗೇನೂ ಸೈದ

(2) ಪಾಠದಲ್ಲಿ ಉಲ್ಲೇಖಿಸಲಾದ ಸವಿನಯ ಕಾಯ್ದೆಭಂಗ ಚಳುವಳಿಯಲ್ಲಿಯ ಸ್ಥಳಗಳನ್ನು ಭಾರತದ ಬಾಹ್ಯರೇಷಾ ನಕ್ಷೆಯಲ್ಲಿ ತೋರಿಸಿರಿ.

AV9928

# 9. ಸ್ವಾತಂತ್ರ್ಯ ಹೋರಾಟದ ಅಂತಿಮ ಅಧ್ಯಾಯ

ಈ ಪಾಠದಲ್ಲಿ ನಾವು ಭಾರತಬಿಟ್ಟು ತೊಲಗಿರಿ ಆಂದೋಲನ, ಭೂಗತ ಚಳುವಳಿ, ಆಝಾದ ಹಿಂದ ಸೇನೆಯ ಕಾರ್ಯ ಇವುಗಳ ಅಭ್ಯಾಸ ಮಾಡುವವರಿದ್ದೇವೆ.

**1935ರ ಕಾಯ್ದೆ:** ಈ ಕಾಯ್ದೆಯಿಂದ ಭಾರತದಲ್ಲಿ ಬ್ರಿಟಿಶ ಆಡಳಿತದ ಪ್ರಾಂತ ಮತ್ತು ಸಂಸ್ಥಾನಗಳನ್ನೊಳಗೊಂಡ ಒಕ್ಕೂಟ ರಾಜ್ಯವನ್ನು ಸ್ಥಾಪಿಸುವ ಏರ್ಪಾಟು ಮಾಡಲಾಯಿತು. ಇದಕ್ಕನುಸಾರವಾಗಿ ಬ್ರಿಟಿಶ ಆಡಳಿತದ ಪ್ರದೇಶಗಳ ರಾಜ್ಯಾಡಳಿತವನ್ನು ಭಾರತೀಯ ಪ್ರತಿನಿಧಿಗಳ ಕೈಗೆ ಒಪ್ಪಿಸಿಕೊಡುವುದಿತ್ತು. ಸಂಸ್ಥಾನಗಳು ಒಕ್ಕೂಟ ರಾಜ್ಯದಲ್ಲಿ ಸೇರಿಕೊಂಡರೆ ಅವು ಸ್ವಾಯತ್ತತೆಯನ್ನು ಕಳೆದುಕೊಳ್ಳ ಬೇಕಾಗುತ್ತಿತ್ತು. ಆದ್ದರಿಂದ ಸಂಸ್ಥಾನಿಕರು ಒಕ್ಕೂಟ ರಾಜ್ಯದಲ್ಲಿ ಸೇರ್ಪಡೆಯಾಗಲು ನಿರಾಕರಿಸಿದರು. ಹೀಗಾಗಿ ಈ ಕಾಯ್ದೆಯಲ್ಲಿಯ ಒಕ್ಕೂಟ ರಾಜ್ಯದ ಯೋಜನೆ ಜಾರಿಗೆ ಬರಲಿಲ್ಲ.

**ಪ್ರಾಂತೀಯ ಮಂತ್ರಿಮಂಡಳಗಳು:** 1935ರ ಕಾಯ್ದೆಯಿಂದ ರಾಷ್ಟ್ರೀಯ ಸಭೆಯ ಸಮಾಧಾನವಾಗಲಿಲ್ಲ. ಆದರೂ ಈ ಕಾಯ್ದೆಗನುಸಾರವಾಗಿ ನಡೆಯಲಿರುವ ಪ್ರಾಂತೀಯ ಚುನಾವಣೆಗಳಲ್ಲಿ ಭಾಗವಹಿಸಬೇಕೆಂದು ರಾಷ್ಟ್ರೀಯ ಸಭೆಯು ನಿರ್ಧರಿಸಿತು. 1937ರಲ್ಲಿ ದೇಶದ ಹನ್ನೊಂದು ಪ್ರಾಂತಗಳಲ್ಲಿ ಚುನಾವಣೆಗಳು ನಡೆದವು. ಅವುಗಳಲ್ಲಿಯ ಎಂಟು ಪ್ರಾಂತಗಳಲ್ಲಿ ರಾಷ್ಟ್ರೀಯ ಸಭೆಗೆ ಬಹುಮತ ದೊರೆತು ಅವುಗಳ ಮಂತ್ರಿ ಮಂಡಳಗಳು ಅಧಿಕಾರಕ್ಕೆ ಬಂದವು. ಉಳಿದ ಮೂರು ಪ್ರಾಂತಗಳಲ್ಲಿ ಯಾವುದೇ ಒಂದು ಪಕ್ಷಕ್ಕೆ ಬಹುಮತ ದೊರೆಯದ ಕಾರಣ ಅಲ್ಲಿ ಸಮ್ಮಿಶ್ರ ಮಂತ್ರಿ ಮಂಡಳಗಳು ಸ್ಥಾಪಿಸಲ್ಪಟ್ಟವು.

ರಾಷ್ಟ್ರೀಯ ಸಭೆಯ ಮಂತ್ರಿಮಂಡಳಗಳು ಸೆರೆಮನೆಯಿಂದ ರಾಜಕೀಯ ಕೈದಿಗಳ ಬಿಡುಗಡೆ, ಮೂಲೋದ್ಯೋಗ ಶಿಕ್ಷಣದ ಆರಂಭ, ದಲಿತ ಸಮಾಜದ ಸುಧಾರಣೆಗಾಗಿ ಉಪಾಯಯೋಜನೆ, ಮದ್ಯಪಾನ ನಿಷೇಧ, ರೈತರಿಗಾಗಿ ಸಾಲವನ್ನು ಮನ್ನಾ ಮಾಡುವ ಕಾನೂನುಗಳಂತಹ ಅನೇಕ ಜನಹಿತದ ಕಾರ್ಯಗಳನ್ನು ಮಾಡಿದವು.

**ಕ್ರಿಪ್ಸ್ ಯೋಜನೆ:** ಎರಡನೆಯ ಮಹಾಯುದ್ಧದಲ್ಲಿ ಇಂಗ್ಲಂಡ ಜಪಾನಿನ ವಿರುದ್ಧ ಅಮೇರಿಕೆಯ ಪಕ್ಷ ವಹಿಸಿತು. ಜಪಾನಿನ ಸೈನ್ಯವು ಭಾರತದ ಪೂರ್ವದ ಗಡಿಯ ಹತ್ತಿರ ಬಂದು ನೆಲೆಯೂರಿತು. ಜಪಾನ ಭಾರತದ ಮೇಲೆ ದಾಳಿ ಮಾಡಿದರೆ ಅದನ್ನು ಪ್ರತಿಭಟಿಸಲು ಇಂಗ್ಲಂಡಿಗೆ ಭಾರತೀಯರ ಸಹಕಾರವನ್ನು ಪಡೆಯುವುದು ಅವಶ್ಯಕವೆನಿಸತೊಡಗಿತು. ಆದ್ದರಿಂದ ಇಂಗ್ಲಂಡಿನ ಪ್ರಧಾನಮಂತ್ರಿ ವಿನ್ಸ್ಟನ್ ಚರ್ಚಿಲ್ಲರು ಸ್ಟ್ಯಾಫರ್ಡ್ ಕ್ರಿಪ್ಸ ಇವರನ್ನು ಭಾರತಕ್ಕೆ ಕಳುಹಿಸಿದರು. ಮಾರ್ಚ 1942ರಲ್ಲಿ ಅವರು ಭಾರತಕ್ಕೆ ಸಂಬಂಧಿಸಿದ ಒಂದು ಯೋಜನೆಯನ್ನು ಭಾರತೀಯರ ಮುಂದೆ ಮಂಡಿಸಿದರು. ಆದರೆ ಈ ಯೋಜನೆಯಿಂದ ಯಾವುದೇ ರಾಜಕೀಯ ಪಕ್ಷಗಳಿಗೂ ಸಮಾಧಾನವಾಗಲಿಲ್ಲ. ಈ ಯೋಜನೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯದ ಬೇಡಿಕೆಯ ಬಗ್ಗೆ ಸ್ಪಷ್ಟ ಉಲ್ಲೇಖವಿರಲಿಲ್ಲ. ಆದ್ದರಿಂದ ರಾಷ್ಟ್ರೀಯ ಸಭೆಯು ಈ ಯೋಜನೆಯನ್ನು ತಿರಸ್ಕರಿಸಿತು. ಕ್ರಿಪ್ಸ್ ಯೋಜನೆಯಲ್ಲಿ ಪಾಕಿಸ್ತಾನ ನಿರ್ಮಿತಿಯ ಸಮಾವೇಶವಿರಲಿಲ್ಲ. ಆದ್ದರಿಂದ ಮುಸ್ಲಿಮ ಲೀಗ್ ಕೂಡ ಈ ಯೋಜನೆಯನ್ನು ತಿರಸ್ಕರಿಸಿತು.

**ಎರಡನೆಯ ಮಹಾಯುದ್ಧ ಮತ್ತು ರಾಷ್ಟ್ರೀಯ ಸಭೆ:** 1939ರಲ್ಲಿ ಯುರೋಪ್‌ನಲ್ಲಿ ಎರಡನೆಯ ಮಹಾಯುದ್ಧ ಆರಂಭವಾಯಿತು. ತತ್ಕಾಲೀನ ವೈಸರಾಯ ಲಾರ್ಡ್ ಲಿನ್ ಲಿಥಗೊ ಇವರು ಇಂಗ್ಲಂಡಿನ ಪರವಾಗಿ ಭಾರತವು ಯುದ್ಧದಲ್ಲಿ ಭಾಗವಹಿಸಿದೆ ಎಂದು ಘೋಷಣೆ ಮಾಡಿದರು. ಯುರೋಪನಲ್ಲಿ ಪ್ರಜಾಪ್ರಭುತ್ವದ ರಕ್ಷಣೆ ಮಾಡುವ ಸಲುವಾಗಿ ನಾವು ಹೋರಾಡುತ್ತಿದ್ದೇವೆ ಎಂದು ಇಂಗ್ಲಂಡ ವಾದಿಸಿತು. ಆ ವಾದವು ನಿಜವಾಗಿದ್ದರೆ ಇಂಗ್ಲಂಡ ಭಾರತಕ್ಕೆ ತಕ್ಷಣ ಸ್ವಾತಂತ್ರ್ಯವನ್ನು ನೀಡಬೇಕು ಎಂಬ ಬೇಡಿಕೆಯನ್ನು ರಾಷ್ಟ್ರೀಯ ಸಭೆಯು ಮಾಡಿತು. ಈ ಬೇಡಿಕೆಯನ್ನು ಪೂರ್ಣಮಾಡಲು ಇಂಗ್ಲಂಡ ನಿರಾಕರಿಸಿದ್ದರಿಂದ ನವಂಬರ 1939ರಲ್ಲಿ ರಾಷ್ಟ್ರೀಯ ಸಭೆಯ ಪ್ರಾಂತೀಯ ಮಂತ್ರಿ ಮಂಡಳಗಳು ರಾಜೀನಾಮೆ ನೀಡಿದವು.

**ಭಾರತ ಬಿಟ್ಟು ತೊಲಗಿರಿ ಚಳುವಳಿ:** ಕ್ರಿಪ್ಸ ಯೋಜನೆಯ ನಂತರ ದೇಶದ ಸ್ವಾತಂತ್ರ್ಯಕ್ಕಾಗಿ ಉಗ್ರವಾದ ಚಳುವಳಿಯನ್ನು ಮಾಡಬೇಕೆಂದು ರಾಷ್ಟ್ರೀಯ ಸಭೆಯು ನಿರ್ಧರಿಸಿತು. ವರ್ಧಾ ಎಂಬಲ್ಲಿ 14 ಜುಲೈ 1942ರಂದು ರಾಷ್ಟ್ರೀಯ ಸಭೆಯ ಕಾರ್ಯನಿರ್ವಾಹಕ ಮಂಡಳಿಯು ಭಾರತದಲ್ಲಿಯ ಬ್ರಿಟಿಶ ಆಡಳಿತವನ್ನು ತಕ್ಷಣ ಕೊನೆಗೊಳಿಸಿ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಬೇಕೆಂಬ ಬೇಡಿಕೆಯನ್ನು ಮಾಡುವ ಠರಾವನ್ನು ಸಮ್ಮತಿಸಿತು. ಈ ಬೇಡಿಕೆಯನ್ನು ಮನ್ನಿಸದಿದ್ದರೆ ರಾಷ್ಟ್ರೀಯ ಸಭೆಯು ಭಾರತದ ಸ್ವಾತಂತ್ರ್ಯಕ್ಕಾಗಿ ಅಹಿಂಸಾತ್ಮಕ ಚಳುವಳಿಯನ್ನು ಆರಂಭಿಸುವುದು ಎಂಬ ಎಚ್ಚರಿಕೆಯನ್ನೂ ಕೊಡಲಾಯಿತು.

**ಭಾರತ ಬಿಟ್ಟು ತೊಲಗಿರಿ ಠರಾವು:** 7 ಅಗಸ್ಟ 1942 ರಂದು ಮುಂಬಯಿಯ ಗವಾಲಿಯಾ ಟ್ಯಾಂಕ ಮೈದಾನದಲ್ಲಿ (ಕ್ರಾಂತಿ ಮೈದಾನ) ರಾಷ್ಟ್ರೀಯ ಸಭೆಯ ಅಧಿವೇಶನವು ಆರಂಭವಾಯಿತು. ಮೌಲಾನಾ ಅಬುಲ್ ಕಲಾಮ ಆಝಾದರು ಈ ಅಧಿವೇಶನದ ಅಧ್ಯಕ್ಷರಾಗಿದ್ದರು. ರಾಷ್ಟ್ರೀಯ ಸಭೆಯ ಕಾರ್ಯನಿರ್ವಾಹಕ ಮಂಡಳಿಯು ವರ್ಧಾದಲ್ಲಿ ಮಂಜೂರು ಮಾಡಿದ ಬ್ರಿಟಿಶರು ಭಾರತ ಬಿಟ್ಟು ತೊಲಗಬೇಕು ಎಂಬ




ಮೌಲಾನಾ ಆಝಾದ

ಠರಾವಿಗೆ ಮುಂಬಯಿ ಅಧಿವೇಶನದಲ್ಲಿ ಮೊಹರು ಹಾಕಬೇಕಾಗಿತ್ತು. ಅಗಸ್ಟ 8ರಂದು ಪಂಡಿತ ಜವಾಹರಲಾಲ ನೆಹರೂ ಮಂಡಿಸಿದ 'ಭಾರತ ಬಿಟ್ಟು ತೊಲಗಿರಿ' ಠರಾವು ಪ್ರಚಂಡ ಬಹುಮತದಿಂದ ಪಾಸಾಯಿತು. ಗಾಂಧೀಜಿಯವರ ನೇತೃತ್ವದಲ್ಲಿ ದೇಶವ್ಯಾಪಿ ಅಹಿಂಸಾತ್ಮಕ ಆಂದೋಲನವನ್ನು ಆರಂಭಿಸುವುದಾಗಿಯೂ ನಿರ್ಧರಿಸ ಲಾಯಿತು. ''ಈ ಕ್ಷಣದಿಂದ ನಿಮ್ಮಲ್ಲಿಯ ಪ್ರತಿಯೊಬ್ಬ ಸ್ತ್ರೀ ಪುರುಷನು ನಾವು ಸ್ವತಂತ್ರರಾಗಿದ್ದೇವೆ, ಎಂದು ತಿಳಿಯಬೇಕು ಹಾಗೂ ಸ್ವತಂತ್ರ ಭಾರತದ ನಾಗರಿಕರಂತೆ ವರ್ತಿಸಬೇಕು ... ನಾವು ಭಾರತವನ್ನು ಸ್ವತಂತ್ರಗೊಳಿಸೋಣ, ಇಲ್ಲವೆ ಈ ಭಗೀರಥ ಪ್ರಯತ್ನ ಮಾಡುತ್ತಿರುವಾಗ ಮಡಿದಾದರೂ ಹೋಗೋಣ'' ಎಂದು ಗಾಂಧೀಜಿ ಹೇಳಿದರು. ಗಾಂಧೀಜಿಯವರು ಜನತೆಗೆ 'ಮಾಡು ಇಲ್ಲವೆ ಮಡಿ' ಈ ಭಾವನೆಯಿಂದ ಬಲಿದಾನಕ್ಕೆ ಸಿದ್ಧರಾಗುವ ಸ್ಫೂರ್ತಿದಾಯಕ ಕರೆ ನೀಡಿದರು.

**ಜನ ಆಂದೋಲನದ ಆರಂಭ:** ರಾಷ್ಟ್ರೀಯ ಸಭೆಯ ಪ್ರಮುಖ ಮುಖಂಡರನ್ನು ಬಂಧಿಸಿದ ಸುದ್ದಿಯು ದೇಶದ ತುಂಬೆಲ್ಲ ಹರಡಿತು. ರೋಷಗೊಂಡ ಜನರು ಎಲ್ಲೆಡೆ ಮೆರವಣಿಗೆಗಳನ್ನು ಮಾಡಿದರು. ಪೋಲೀಸರು ಜನರ ಮೇಲೆ ಲಾಠಿ ಪ್ರಹಾರ ಹಾಗೂ ಗೋಲೀಬಾರು ಮಾಡಿದರು. ಆದರೂ ಜನ ಹೆದರಲಿಲ್ಲ. ಕೆಲವು ಕಡೆ ಬ್ರಿಟಿಶ ಸರಕಾರದ ದಬ್ಬಾಳಿಕೆಯ ಪ್ರತೀಕವಾದ ಸೆರೆಮನೆ, ಪೋಲೀಸ ಠಾಣೆ, ರೇಲ್ವೆ ನಿಲ್ದಾಣ ಮುಂತಾದವುಗಳ ಮೇಲೆ ಆಂದೋಲನಕಾರರು ದಾಳಿ ಮಾಡಿದರು. ಸರಕಾರಿ ಕಚೇರಿಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ ಮಾಡಿದರು. ಮಹಾರಾಷ್ಟ್ರದ ಚಿಮೂರ, ಆಷ್ಟಿ, ಯಾವಲಿ, ಮಹಾಡ, ಗಾರಗೋಟಿ ಮುಂತಾದ ಅನೇಕ ಊರುಗಳಲ್ಲಿ ಚಿಕ್ಕವರಿಂದ ಹಿಡಿದು ವೃದ್ಧರವರೆಗೆ ಎಲ್ಲರೂ ಪರಿಶ್ರಮದಿಂದ ಮತ್ತು ನಿಸ್ಸೀಮ ಧೈರ್ಯದಿಂದ ಮಾಡಿದ ಹೋರಾಟಗಳು ಅವಿಸ್ಮರಣೀಯವಾದವು.

**ಬನ್ನಿ, ಅರಿತುಕೊಳ್ಳೋಣ...**

**ವೈಯಕ್ತಿಕ ಸತ್ಯಾಗ್ರಹ:** ಬ್ರಿಟಿಶ ಸರಕಾರವು ಬೇಡಿಕೆಗಳ ಕಡೆಗೆ ಸತತ ದುರ್ಲಕ್ಷ ಮಾಡುತ್ತಿದ್ದುದರಿಂದ ರಾಷ್ಟ್ರೀಯ ಸಭೆಯು ಯುದ್ಧ ವಿರೋಧಿ ಪ್ರಚಾರ ಮಾಡಬೇಕೆಂದು ನಿರ್ಧರಿಸಿತು. ಅದಕ್ಕಾಗಿ ಸಾಮುದಾಯಿಕ ಚಳುವಳಿ ಮಾಡದೆ ಒಬ್ಬೊಬ್ಬ ವ್ಯಕ್ತಿಯು ಕಾಯ್ದೆಭಂಗ ಮಾಡಬೇಕು. ಎಂದು ನಿರ್ಧರಿಸಲಾಯಿತು. ಇದಕ್ಕೇನೆ ವೈಯಕ್ತಿಕ ಸತ್ಯಾಗ್ರಹ ಎಂದು ಕರೆಯುತ್ತಾರೆ. ಆಚಾರ್ಯ ವಿನೋಬಾ ಭಾವೆಯವರು ವೈಯಕ್ತಿಕ ಸತ್ಯಾಗ್ರಹದ ಪ್ರಥಮ ಸತ್ಯಾಗ್ರಹಿಯಾಗಿದ್ದರು. ಅವರ ನಂತರ ಸುಮಾರು ಇಪ್ಪತ್ತೈದು ಸಾವಿರ ಸತ್ಯಾಗ್ರಹಿಗಳು ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸಿ ಸೆರೆಮನೆವಾಸ ಸ್ವೀಕರಿಸಿದರು.



ಆಚಾರ್ಯ ವಿನೋಬಾ ಭಾವೆ

**ಗೊತ್ತಿದೆಯೇ ನಿಮಗೆ?**

**ಬಾಲವೀರರ ಸ್ಫೂರ್ತಿಗೀತೆ:** ಸ್ವಾತಂತ್ರ್ಯ ಚಳುವಳಿಯಲ್ಲಿ ಶಾಲೆಯ ವಿದ್ಯಾರ್ಥಿಗಳು ಕೂಡ ಕೊಡುಗೆಯನ್ನು ನೀಡಿದರು. ನಂದುರಬಾರ ಎಂಬಲ್ಲಿ ಶಿರೀಷ ಕುಮಾರ ಇವನ ನೇತೃತ್ವದಲ್ಲಿ ಶಾಲೆಯ ವಿದ್ಯಾರ್ಥಿಗಳು ತ್ರಿವರ್ಣ ಧ್ವಜವನ್ನು ಹಿಡಿದುಕೊಂಡು ಮೆರವಣಿಗೆ ಮಾಡಿದರು. 'ವಂದೆ ಮಾತರಂ' ಘೋಷಣೆ ಮಾಡಿದರು. ಪೋಲೀಸರು ಕೆರಳಿ ಚಿಕ್ಕ ಮಕ್ಕಳ ಮೇಲೂ ಗೋಲೀಬಾರು ಮಾಡಿದರು. ಈ ಗೋಲೀಬಾರಿನಲ್ಲಿ ಶಿರೀಶಕುಮಾರ, ಲಾಲದಾಸ, ಧನಸುಖಲಾಲ, ಶಶಿಧರ, ಘನಶ್ಯಾಮ ಈ ಶಾಲೆಯ ವಿದ್ಯಾರ್ಥಿಗಳು ಹುತಾತ್ಮರಾದರು.



ಶಿರೀಷಕುಮಾರ



ಜಯಪ್ರಕಾಶ ನಾರಾಯಣ

**ಭೂಗತ ಚಳುವಳಿ:** 1942ರ ಕೊನೆಗೆ ಈ ಜನ ಆಂದೋಲನಕ್ಕೆ ಹೊಸ ತಿರುವು ದೊರೆಯಿತು. ಆಂದೋಲನದ ನೇತೃತ್ವವು ತರುಣ ಸಮಾಜವಾದಿ ಕಾರ್ಯಕರ್ತರ ಕಡೆಗೆ ಬಂದಿತು. ಜಯಪ್ರಕಾಶ ನಾರಾಯಣ, ಡಾ. ರಾಮ ಮನೋಹರ ಲೋಹಿಯಾ, ಛೋಟೂಭಾಯಿ ಪುರಾಣಿಕ, ಅಚ್ಯುತರಾವ ಪಟವರ್ಧನ, ಅರುಣಾ ಅಸಫ ಅಲಿ, ಯುಸೂಫ ಮೆಹೆರಅಲಿ, ಸುಚೇತಾ ಕೃಪಲಾನಿ, ಎಸ್.ಎಮ್.ಜೋಶಿ, ಶಿರೂಭಾವೂ ಲಿಮಯೆ, ನಾ.ಗ.ಗೋರೆ, ಯಶವಂತರಾವ ಚವ್ಹಾಣ, ವಸಂತದಾದಾ ಪಾಟೀಲ, ಮಗನಲಾಲ ಬಾಗಡಿ, ಉಷಾ ಮೆಹತಾ ಮುಂತಾದ ಅನೇಕ ಮುಖಂಡರು ಮುಂಚೂಣಿಯಲ್ಲಿದ್ದರು. ರೇಲ್ವೆ ಮಾರ್ಗಗಳನ್ನು ಕಿತ್ತೊಗೆಯುವುದು, ಟೆಲಿಫೋನ ತಂತಿಗಳನ್ನು ಕತ್ತರಿಸುವುದು, ಸೇತುವೆಗಳನ್ನು ನಷ್ಟಪಡಿಸುವುದು ಇತ್ಯಾದಿ ಮಾರ್ಗಗಳಿಂದ ಆಂದೋಲನಕಾರರು ಸಂಪರ್ಕ ವ್ಯವಸ್ಥೆ ಮತ್ತು ಸರಕಾರಿ ಆಡಳಿತ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದರು. ಸಂಪೂರ್ಣ ಭಾರತದಲ್ಲಿ ಆಂದೋಲನದ ಪ್ರತಿಕ್ರಿಯೆಗಳು



ಅರುಣಾ ಅಸಫ ಅಲಿ



ಅಚ್ಯುತರಾವ ಪಟವರ್ಧನ

ಮೂಡಿದವು. ಸಿಂಧ ಪ್ರಾಂತದಲ್ಲಿ ಹೇಮೂ ಕಲಾನಿ ಇವರು ಶಸ್ತ್ರಧಾರಿ ಬ್ರಿಟಿಶ ಸೈನಿಕರನ್ನು ಸಾಗಿಸುತ್ತಿದ್ದ ರೇಲ್ವೆ ಬರುತ್ತಿರುವ ಸುದ್ದಿ ತಿಳಿದ ತಕ್ಷಣ ತಮ್ಮ ಸಂಗಡಿಗರೊಂದಿಗೆ ಹೋಗಿ ರೇಲ್ವೆ ಮಾರ್ಗವನ್ನು ಧ್ವಂಸ ಗೊಳಿಸುವ ಪ್ರಯತ್ನ ಮಾಡಿದರು. ನ್ಯಾಯಾಲಯವು ಅವರಿಗೆ ಗಲ್ಲು ಶಿಕ್ಷೆಯನ್ನು ವಿಧಿಸಿತು.

ಈಗಿನ ರಾಯಗಡ ಜಿಲ್ಲೆಯ ಕರ್ಜತ ತಾಲೂಕಿನಲ್ಲಿಯ ಭಾಯಿ ಕೋತವಾಲ ಇವರ 'ಆಝಾದ ದಸ್ತಾ', ನಾಗಪೂರದ ಜನರಲ್ ಆವಾರಿಯವರ 'ಲಾಲಸೇನಾ' ಮುಂತಾದ ಬಣಗಳು ಅನೇಕ ತಿಂಗಳುಗಳವರೆಗೆ ಸರಕಾರವನ್ನು ಹಣ್ಣುಗಾಯಿ, ನೀರುಗಾಯಿ ಮಾಡಿದವು. ಮುಂಬಯಿಯಲ್ಲಿ ವಿಠ್ಠಲ ಜವ್ಹೇರಿ, ಉಷಾ ಮೆಹತಾ ಹಾಗೂ ಅವರ ಸಂಗಡಿಗರು ಒಂದು ಗುಪ್ತ ಆಕಾಶವಾಣಿ ಕೇಂದ್ರವನ್ನು ಸ್ಥಾಪಿಸಿದರು. ಅದಕ್ಕೆ 'ಆಝಾದ ರೇಡಿಯೊ' ಎನ್ನುತ್ತಿದ್ದರು. ಅದರಲ್ಲಿ ದೇಶಭಕ್ತಿ ಗೀತೆಗಳನ್ನು ಹಾಡಲಾಗುತ್ತಿತ್ತು. ದೇಶದಲ್ಲಿ ನಡೆಯುತ್ತಿದ್ದ ಆಂದೋಲನದ ಸುದ್ದಿಗಳನ್ನು ಪ್ರಸಾರ ಮಾಡಲಾಗುತ್ತಿತ್ತು. ದೇಶಭಕ್ತಿಪರ ಭಾಷಣಗಳನ್ನು ಪ್ರಸಾರ ಮಾಡಲಾಗುತ್ತಿತ್ತು. ಇದರಿಂದಾಗಿ ಆಂದೋಲನವನ್ನು ನಡೆಸಲು ಜನರಿಗೆ ಪ್ರೋತ್ಸಾಹ ದೊರೆಯುತ್ತಿತ್ತು. ಇಂಥ ಆಕಾಶವಾಣಿ ಕೇಂದ್ರಗಳು ಕೋಲಕಾತಾ, ದಿಲ್ಲಿ ಮತ್ತು ಪುಣೆಗಳಲ್ಲಿ ಕೆಲವು ಕಾಲ ನಡೆದವು.

**ಪ್ರತಿ ಸರಕಾರಗಳ ಸ್ಥಾಪನೆ:** ದೇಶದ ಕೆಲವು ಭಾಗಗಳಲ್ಲಿ ಬ್ರಿಟಿಶ ಅಧಿಕಾರಿಗಳನ್ನು ಹೊರದಬ್ಬಿ ಅಲ್ಲಿ ಲೋಕಾಭಿಮುಖ ಸರಕಾರಗಳನ್ನು ಸ್ಥಾಪಿಸಲಾಯಿತು. ಇದಕ್ಕೆ ಪ್ರತಿ ಸರಕಾರ ಎನ್ನುತ್ತಾರೆ. ಬಂಗಾಲದಲ್ಲಿಯ ಮಿದನಾಪೂರ, ಉತ್ತರ ಪ್ರದೇಶದಲ್ಲಿಯ ಬಾಲಿಯಾ ಮತ್ತು ಆಝಮಗಡ, ಬಿಹಾರದಲ್ಲಿಯ ಭಾಗಲಪೂರ ಮತ್ತು ಪೂರ್ಣಿಯಾ ಈ ಜಿಲ್ಲೆಗಳಲ್ಲಿ ಪ್ರತಿಸರಕಾರಗಳನ್ನು ಸ್ಥಾಪಿಸಲಾಯಿತು.


ಮಹಾರಾಷ್ಟ್ರದ ಸಾತಾರ ಜಿಲ್ಲೆಯಲ್ಲಿ ಕ್ರಾಂತಿಸಿಂಹ ನಾನಾ ಪಾಟೀಲ ಇವರು 1942ರಲ್ಲಿ ಬ್ರಿಟಿಶ ಆಡಳಿತವನ್ನು ಕೊನೆಗೊಳಿಸಿ ಪ್ರತಿಸರಕಾರವನ್ನು ಸ್ಥಾಪಿಸಿದರು. ಕುಂಡಲದಲ್ಲಿಯ ಕ್ರಾಂತಿಕಾರರ ಮುಂದಾಳುವಾದ ಜಿ.ಡಿ ಉರ್ಫ್ ಬಾಪೂ ಲಾಡ ಇವರ ನೇತೃತ್ವದಲ್ಲಿ ಸ್ಥಾಪನೆಯಾದ ತೂಫಾನ ಸೇನೆಯ ಮೂಲಕ ಕರವನ್ನು ಸಂಗ್ರಹಿಸುವುದು, ಕಾಯ್ದೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವುದು, ಅಪರಾಧಿಗಳಿಗೆ ಶಿಕ್ಷೆ ವಿಧಿಸುವುದು ಇತ್ಯಾದಿ ಕಾರ್ಯಗಳನ್ನು ಪ್ರತಿ ಸರಕಾರಗಳು ಮಾಡುತ್ತಿದ್ದವು. ಈ ಸರಕಾರವು ನೇಮಿಸಿದ ಜನತೆಯ ನ್ಯಾಯಾಲಯಗಳ ಮುಖಾಂತರ ಮಾಡಿದ ನ್ಯಾಯದಾನವನ್ನು ಜನರು ಸ್ವೀಕರಿಸುತ್ತಿದ್ದರು. ಸಾಹುಕಾರಶಾಹಿಗೆ ವಿರೋಧ, ಮದ್ಯಪಾನ ನಿಷೇಧ, ಸಾಕ್ಷರತಾ ಪ್ರಸಾರ, ಜಾತಿಭೇದ ನಿರ್ಮೂಲನೆ ಮುಂತಾದ ಅನೇಕ ರಚನಾತ್ಮಕ ಕಾರ್ಯಗಳನ್ನು ಪ್ರತಿ ಸರಕಾರಗಳು ಮಾಡಿದವು.



ಕ್ರಾಂತಿಸಿಂಹ ನಾನಾ ಪಾಟೀಲ

ಅದರಿಂದಾಗಿ ಪ್ರತಿ ಸರಕಾರಗಳು ಜನತೆಗೆ ಪ್ರೇರಣಾ ಸ್ಥಾನಗಳಾದವು.

**ಚಲೆಜಾವ ಚಳುವಳಿಯ ಮಹತ್ವ:** 1942ರ ಚಳುವಳಿಯು ದೇಶವ್ಯಾಪಿ ಆಂದೋಲನದ ರೂಪವನ್ನು ಧರಿಸಿತು. ಸ್ವಾತಂತ್ರ್ಯ ಪ್ರಾಪ್ತಿಯ ಧ್ಯೇಯವನ್ನು ಪೂರ್ಣ ಮಾಡುವ ಸಲುವಾಗಿ ಲಕ್ಷಾವಧಿ ಭಾರತೀಯರು ಅಪರಿಮಿತ ತ್ಯಾಗ ಮಾಡಿದರು. ಅನೇಕರು ಆತ್ಮಾರ್ಪಣೆ ಮಾಡಿದರು ಆಂದೋಲನಕಾರರ ಸಂಖ್ಯೆ ಎಷ್ಟೊಂದು ಪ್ರಚಂಡವಾಗಿತ್ತೆಂದರೆ ಅವರನ್ನು ಬಂಧಿಸಿಡಲು ದೇಶದಲ್ಲಿಯ ಸೆರೆಮನೆಗಳು ಸಾಲದಾದವು. ಸಾನೆ ಗುರೂಜಿ, ರಾಷ್ಟ್ರಸಂತ ತುಕಡೋಜಿ ಮಹಾರಾಜ ಮುಂತಾದವರ ರಾಷ್ಟ್ರಭಕ್ತಿ ಗೀತೆಗಳು ಆಂದೋಲನಕಾರರಲ್ಲಿ ಉತ್ಸಾಹವನ್ನು ಹೆಚ್ಚಿಸಿದವು. ಈ ರಾಷ್ಟ್ರವ್ಯಾಪಿ ಆಂದೋಲನವನ್ನು 'ಅಗಸ್ಟಕ್ರಾಂತಿ' ಎಂದೂ ಕರೆಯಲಾಗುತ್ತದೆ.



ರಾಷ್ಟ್ರ ಸಂತ ತುಕಡೋಜಿ ಮಹಾರಾಜ

**ಆಝಾದ ಹಿಂದ ಸೇನೆ:** ಭಾರತದ ಸ್ವಾತಂತ್ರ್ಯ ಪ್ರಾಪ್ತಿಗಾಗಿ ನೇತಾಜಿ ಸುಭಾಷಚಂದ್ರ ಬೋಸ ಇವರು ಅಭೂತಪೂರ್ವ ಪ್ರಯತ್ನ ಮಾಡಿದರು. ಭಾರತದ ಪೂರ್ವ ಸೀಮೆಯಲ್ಲಿ ಸಾವಿರಾರು ಭಾರತೀಯ ಸೈನಿಕರು ಬ್ರಿಟಿಶರ ವಿರುದ್ಧ ಯುದ್ಧ ಮಾಡಲು ಸನ್ನದ್ಧರಾಗಿದ್ದರು. ಈ ಎಲ್ಲ ಸೈನಿಕರು ಆಝಾದ ಹಿಂದ ಸೇನೆಯ ಸದಸ್ಯರಾಗಿದ್ದರು. ಸುಭಾಷಚಂದ್ರ ಬೋಸರು ಅವರ ನೇತಾರರಾಗಿದ್ದರು.

ಸುಭಾಷಚಂದ್ರ ಬೋಸ ಇವರು ರಾಷ್ಟ್ರೀಯ ಸಭೆಯ ಮಹತ್ವದ ಮುಖಂಡರಾಗಿದ್ದರು. ಅವರು ಎರಡು ಸಲ ರಾಷ್ಟ್ರೀಯ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಇಂಗ್ಲಂಡ ಎರಡನೆಯ ಮಹಾಯುದ್ಧದಲ್ಲಿ ತೊಡಗಿರುವುದರ ಲಾಭವನ್ನು ಪಡೆದು ಭಾರತದಲ್ಲಿಯ ಆಂದೋಲನವನ್ನು ತೀವ್ರಗೊಳಿಸಬೇಕು. ಅದಕ್ಕಾಗಿ ಇಂಗ್ಲಂಡಿನ ಶತ್ರುಗಳ ನೆರವನ್ನೂ ಪಡೆಯಬೇಕು ಎಂಬುದು ಸುಭಾಸಬಾಬು ಅವರ ಅಭಿಪ್ರಾಯವಾಗಿತ್ತು. ಆದರೆ ಈ ವಿಷಯವನ್ನು ಕುರಿತು ರಾಷ್ಟ್ರೀಯ ಸಭೆಯ ಹಿರಿಯ ಮುಖಂಡರೊಡನೆ ಭಿನ್ನಾಭಿಪ್ರಾಯಗಳು ಉಂಟಾದವು. ಹೀಗಾಗಿ



ನೇತಾಜಿ ಸುಭಾಷಚಂದ್ರ ಬೋಸ

ಸುಭಾಷಬಾಬೂ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ತಮ್ಮ ವಿಚಾರಗಳನ್ನು ಜನತೆಯ ಮುಂದೆ ಮಂಡಿಸಲು ಅವರು 'ಫಾರವರ್ಡ್ ಬ್ಲಾಕ್' ಎಂಬ ಪಕ್ಷವನ್ನು ಸ್ಥಾಪಿಸಿದರು.

ಸುಭಾಷಚಂದ್ರ ಬೋಸರು ತಮ್ಮ ಭಾಷಣಗಳ ಮೂಲಕ ಬ್ರಿಟಿಶ ಆಡಳಿತದ ವಿರುದ್ಧ ಬಂಡೇಳುವಂತೆ ಭಾರತೀಯರಿಗೆ ಕರೆ ನೀಡತೊಡಗಿದರು. ಆದ್ದರಿಂದ ಸರಕಾರವು ಅವರನ್ನು ಸೆರೆಮನೆಯಲ್ಲಿ ಇರಿಸಿತು. ಸೆರೆಮನೆಯಲ್ಲಿ ಸುಭಾಷಬಾಬೂ ಅವರು ಆಮರಣ ಉಪವಾಸವನ್ನು ಆರಂಭಿಸಿದ್ದರಿಂದ ಸರಕಾರವು ಅವರನ್ನು ಬಿಡುಗಡೆಮಾಡಿ ಅವರ ಮನೆಯಲ್ಲಿ ಕಣ್ಗಾವಲಿನಲ್ಲಿ ಇರಿಸಿತು. ಅಲ್ಲಿಂದ ವೇಷಾಂತರ ಮಾಡಿ ಸುಭಾಷಬಾಬೂ ಪಾರಾದರು. ಎಪ್ರಿಲ 1941ರಲ್ಲಿ ಅವರು ಜರ್ಮನಿಯನ್ನು ತಲುಪಿದರು. ಅಲ್ಲಿ ಅವರು ಫ್ರೀ ಇಂಡಿಯಾ ಸೆಂಟರಿನ ಸ್ಥಾಪನೆ ಮಾಡಿದರು. ಜರ್ಮನಿಯ ಬರ್ಲಿನ್ ರೇಡಿಯೊ ಕೇಂದ್ರದ ಮೇಲಿಂದ ಮಾತನಾಡುತ್ತ ಅವರು ಭಾರತದ ಸ್ವಾತಂತ್ರ್ಯಕ್ಕಾಗಿ ಸಶಸ್ತ್ರ ಹೋರಾಟದಲ್ಲಿ ಭಾಗವಹಿಸುವಂತೆ ಜನರಿಗೆ ಕರೆ ನೀಡಿದರು. ಇದೇ ಸಮಯದಲ್ಲಿ ರಾಸ ಬಿಹಾರಿ ಬೋಸರು ಸುಭಾಷಬಾಬೂ ಅವರಿಗೆ ಜಪಾನಿಗೆ ಬರುವ ಆಮಂತ್ರಣ ನೀಡಿದರು.

**ಆಝಾದ ಹಿಂದ ಸೇನೆಯ ಸ್ಥಾಪನೆ:** ರಾಸಬಿಹಾರಿ ಬೋಸರು 1915ರಿಂದ ಜಪಾನಿನಲ್ಲಿ ನೆಲೆಸಿದ್ದರು. ಆಗ್ನೇಯ ಏಶಿಯಾದಲ್ಲಿಯ ದೇಶಪ್ರೇಮಿ ಭಾರತೀಯರನ್ನು ಸಂಘಟಿಸಿ ಅವರು 'ಇಂಡಿಯನ್ ಇಂಡಿಪೆಂಡನ್ಸ ಲೀಗ್' ಎಂಬ ಹೆಸರಿನ ಸಂಘಟನೆಯನ್ನು ಸ್ಥಾಪಿಸಿದರು. 1942ರ ಪೂರ್ವಾರ್ಧದಲ್ಲಿ ಜಪಾನವು ಆಗ್ನೇಯ ಏಶಿಯಾದಲ್ಲಿಯ ಬ್ರಿಟಿಶರ ವಶದಲ್ಲಿದ್ದ ಪ್ರದೇಶಗಳನ್ನು ಗೆದ್ದುಕೊಂಡಿತು. ಅಲ್ಲಿಯ ಬ್ರಿಟಿಶ ಸೈನ್ಯದಲ್ಲಿದ್ದ ಸಾವಿರಾರು ಭಾರತೀಯ ಸೈನಿಕರು ಮತ್ತು ಅಧಿಕಾರಿಗಳು ಜಪಾನಿನ ಕೈವಶವಾದರು. ಸೆರೆಯಾಳುಗಳಾದ ಭಾರತೀಯ ಸೈನಿಕರ ಒಂದು ಸೈನ್ಯಪಡೆಯನ್ನು ಕ್ಯಾಪ್ಟನ್ ಮೋಹನಸಿಂಗರ ಸಹಾಯದಿಂದ ರಾಸಬಿಹಾರಿ ಬೋಸರು ತಯಾರಿಸಿದರು. ಅದಕ್ಕೆ 'ಆಝಾದ ಹಿಂದ ಸೇನೆ' ಎಂಬ ಹೆಸರನ್ನು ಕೊಟ್ಟರು. ಮುಂದೆ ನೇತಾಜಿ ಸುಭಾಷಚಂದ್ರ ಬೋಸರು ಆಝಾದ ಹಿಂದ ಸೇನೆಯ ನೇತೃತ್ವವನ್ನು ವಹಿಸಿದರು.



ರಾಸಬಿಹಾರಿ ಬೋಸ

ಅಕ್ಟೋಬರ 1943ರಲ್ಲಿ ನೇತಾಜಿಯವರು ಸಿಂಗಾಪೂರದಲ್ಲಿ ಆಝಾದ ಹಿಂದ ಸರಕಾರವನ್ನು ಸ್ಥಾಪಿಸಿದರು. ಶಹಾನವಾಝ ಖಾನ, ಜಗನ್ನಾಥ ಭೋಸಲೆ, ಡಾ. ಲಕ್ಷ್ಮೀ ಸ್ವಾಮಿನಾಥನ್, ಗುರುಬಕ್ಷಸಿಂಗ ಧಿಲ್ಲನ್, ಪ್ರೇಮಕುಮಾರ ಸೆಹಗಲ್ ಮುಂತಾದವರು ಅವರ ಪ್ರಮುಖ ಸಹಕಾರಿಗಳಾಗಿದ್ದರು. ಕ್ಯಾಪ್ಟನ್ ಲಕ್ಷ್ಮೀ ಸ್ವಾಮಿನಾಥನ್ ಇವರು ಝಾಶಿ ರಾಣಿ ಮಹಿಳಾ ಪಡೆಯ ಪ್ರಮುಖರಾಗಿದ್ದರು. 'ನೀವು ನನಗೆ ರಕ್ತ ನೀಡಿ, ನಾನು ನಿಮಗೆ ಸ್ವಾತಂತ್ರ್ಯವನ್ನು ದೊರಕಿಸಿಕೊಡುತ್ತೇನೆ' ಎಂದು ನೇತಾಜಿ ಸುಭಾಷಚಂದ್ರರು ಭಾರತೀಯ ಜನತೆಗೆ ಕರೆ ನೀಡಿದರು.

**ಆಝಾದ ಹಿಂದ ಸೇನೆಯ ಪರಾಕ್ರಮ:** ನವಂಬರ 1943ರಲ್ಲಿ ಜಪಾನ ಅಂದಮಾನ ಮತ್ತು ನಿಕೋಬಾರ ದ್ವೀಪಗಳನ್ನು ಗೆದ್ದುಕೊಂಡು ಅವುಗಳನ್ನು ಆಝಾದಹಿಂದ ಸರಕಾರಕ್ಕೆ ಒಪ್ಪಿಸಿತು. ನೇತಾಜಿಯವರು ಅವುಗಳಿಗೆ ಅನುಕ್ರಮವಾಗಿ 'ಶಹೀದ' ಮತ್ತು 'ಸ್ವರಾಜ್ಯ'ಗಳೆಂದು ಹೆಸರಿಟ್ಟರು. 1944ರಲ್ಲಿ ಆಝಾದ ಹಿಂದ ಸೇನೆಯು ಮ್ಯಾನಮಾರದಲ್ಲಿಯ ಆರಾಕಾನ ಪ್ರದೇಶವನ್ನು ಗೆದ್ದುಕೊಂಡಿತು. ಆಸಾಮದ ಪೂರ್ವ ಸೀಮೆಯಲ್ಲಿಯ ಠಾಣೆಗಳನ್ನು ಗೆದ್ದಿತು. ಇದೇ ಕಾಲದಲ್ಲಿ ಆಝಾದ ಹಿಂದ ಸೇನೆಗೆ ಜಪಾನಿನಿಂದ ದೊರೆಯುತ್ತಿರುವ ನೆರವು ನಿಂತುಹೋದುದರಿಂದ ಇಂಫಾಲದ ಮೇಲಿನ ದಾಳಿ ಅರ್ಧಕ್ಕೆ ಉಳಿಯಿತು. ಆದರೂ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಆಝಾದ ಹಿಂದ ಸೇನೆಯ ಸೈನಿಕರು ಶೌರ್ಯದಿಂದ ಹೋರಾಡುತ್ತಿದ್ದರು. ಆದರೆ ಇದೇ ಸಮಯದಲ್ಲಿ ಜಪಾನ ಶರಣಾಗತವಾಯಿತು. 18 ಅಗಷ್ಟ 1945 ರಂದು ವಿಮಾನ ಅಪಘಾತದಲ್ಲಿ ಸುಭಾಷಚಂದ್ರ ಬೋಸರು ನಿಧನ ಹೊಂದಿದರು. ಈ ಹಿನ್ನೆಲೆಯಲ್ಲಿ ಆಝಾದ ಹಿಂದ ಸೇನೆಯು ಶಸ್ತ್ರಗಳನ್ನು ಕೆಳಗಿಡಬೇಕಾಯಿತು. ಈ ರೀತಿ ಆಝಾದ ಹಿಂದ ಸೇನೆಯ ಹೋರಾಟದ ರೋಮಹರ್ಷಕ ಅಧ್ಯಾಯ ಮುಕ್ತಾಯವಾಯಿತು.

ಮುಂದೆ ಆಝಾದ ಹಿಂದ ಸೇನೆಯ ಅಧಿಕಾರಿಗಳ ಮೇಲೆ ಬ್ರಿಟಿಶ ಸರಕಾರವು ರಾಜದ್ರೋಹದ ಆಪಾದನೆಯನ್ನು ಹೊರಿಸಿತು. ಪಂ.ಜವಾಹರಲಾಲ ನೆಹರೂ, ಭುಲಾಭಾಯಿ ದೇಸಾಯಿ, ತೇಜಬಹಾದೂರ ಸಪ್ರೂ ಮುಂತಾದ ನಿಷ್ಣಾತ ಕಾಯ್ದೆ ಪಂಡಿತರು ಅವರ ಪರವಾಗಿ ವಾದಿಸಿದರು. ಆದರೆ ಸೈನಿಕ ನ್ಯಾಯಾಲಯವು ಈ ಅಧಿಕಾರಿಗಳನ್ನು ದೋಷಿಗಳೆಂದು ನಿರ್ಧರಿಸಿ ಅವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿತು. ಆದರಿಂದಾಗಿ ಭಾರತೀಯ ಜನತೆಯಲ್ಲಿ ಬ್ರಿಟಿಶ ಸರಕಾರದ ವಿರುದ್ಧ ತೀವ್ರ ಅಸಂತೋಷ ನಿರ್ಮಾಣವಾಯಿತು. ಕೊನೆಗೆ ಸೈನಿಕ ನ್ಯಾಯಾಲಯವು ನೀಡಿದ ಶಿಕ್ಷೆಯನ್ನು ಸರಕಾರವು ರದ್ದುಪಡಿಸಬೇಕಾಯಿತು.

**ಭಾರತೀಯ ನೌಕಾಸೇನೆ ಮತ್ತು ವಾಯುಸೇನೆಗಳಲ್ಲಿಯ ಬಂಡಾಯ:** ಆಝಾದ ಹಿಂದ ಸೇನೆಯ ಪ್ರೇರಣೆಯಿಂದ ಭಾರತೀಯ ನೌಕಾಸೇನೆ ಮತ್ತು ವಾಯುಸೇನೆಯ ಸೈನಿಕರಲ್ಲಿ ಬ್ರಿಟಿಶ ಆಡಳಿತದ ವಿರುದ್ಧ ಅಂತೋಷ ನಿರ್ಮಾಣವಾಯಿತು. ಅದರ ಉದ್ರೇಕವು 18 ಫೆಬ್ರವರಿ 1946ರಂದು ಮುಂಬಯಿಯಲ್ಲಿಯ 'ತಲವಾರ' ಎಂಬ ಬ್ರಿಟಿಶ ಯುದ್ಧ ನೌಕೆಯ ಮೇಲಾಯಿತು. ಸೈನಿಕರು ಯುದ್ಧ ನೌಕೆಯ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಿದರು. ಬ್ರಿಟಿಶ ಆಡಳಿತದ ವಿರುದ್ಧ ಘೋಷಣೆ ಮಾಡಿದರು. ಬ್ರಿಟಿಶ ಸರಕಾರವು ಸೈನ್ಯವನ್ನು ಕಳುಹಿಸಿ ನೌಕಾದಳದ ಸೈನಿಕರ ಮೇಲೆ ಗೋಳಿಬಾರು ಮಾಡಿತು. ಬಂಡಾಯಗಾರರು ಅದಕ್ಕೆ ಗುಂಡಿನಿಂದಲೇ ಉತ್ತರ ನೀಡಿದರು. ಮುಂಬಯಿಯಲ್ಲಿಯ ಕಾರ್ಮಿಕರು ಮತ್ತು ಸಾಮಾನ್ಯ ನಾಗರಿಕರು ನೌಕಾದಳದ ಸೈನಿಕರಿಗೆ ಬೆಂಬಲ ನೀಡಿದರು. ಕೊನೆಗೆ ಸರದಾರ ವಲ್ಲಭಭಾಯಿ ಪಟೇಲರ ಮಧ್ಯಸ್ಥಿಕೆಯಿಂದ ನೌಕಾಸೇನೆಯ ಸೈನಿಕರು ಶಸ್ತ್ರಗಳನ್ನು ಕೆಳಗಿಟ್ಟರು.

ಮುಂಬಯಿಯಲ್ಲಿಯ ನೌಕಾಸೇನೆಯ ಸೈನಿಕರ ಬಂಡಾಯಕ್ಕೆ ಬೆಂಬಲ ನೀಡುವ ಸಲುವಾಗಿ ದಿಲ್ಲಿ, ಲಾಹೋರ, ಕರಾಚಿ, ಅಂಬಾಲಾ, ಮೇರಠ ಇತ್ಯಾದಿ ಸ್ಥಳಗಳಲ್ಲಿಯ ವಾಯುಪಡೆಯ ಅಧಿಕಾರಿಗಳು ಕೂಡ ಮುಷ್ಕರ ಹೂಡಿದರು. ಈ ಬಂಡಾಯವು ಆಡಳಿತಗಾರರ ವಿರುದ್ಧ ಅಸಂತೋಷದ ಭಾವನೆಯು ಮಿತಿ ಮೀರಿದುದರ ಪ್ರತೀಕವಾಗಿತ್ತು. ಈ ರೀತಿ 1942ರಿಂದ 1946 ಈ ಅವಧಿಯಲ್ಲಿ ಭಾರತದಲ್ಲಿಯ ಬ್ರಿಟಿಶ ಆಡಳಿತದ ಅಡಿಪಾಯವು ಶಿಥಿಲವಾಯಿತು. 'ಚಲೇಜಾವ' ಚಳುವಳಿಯಿಂದ ಭಾರತೀಯರಲ್ಲಿಯ ಪ್ರಖರ ಬ್ರಿಟಿಶ ವಿರೋಧವು ವ್ಯಕ್ತವಾಯಿತು. ಭೂಸೇನೆ, ನೌಕಾಸೇನೆ ಮತ್ತು ವಾಯುಸೇನೆಗಳು ಬ್ರಿಟಿಶ ಆಡಳಿತದ ಆಧಾರಸ್ತಂಭಗಳಾಗಿದ್ದವು. ಅವು ಕೂಡ ಈಗ ಬ್ರಿಟಿಶ ವಿರೋಧಿಯಾಗತೊಡಗಿದವು. ಈ ಎಲ್ಲ ಘಟನೆಗಳಿಂದಾಗಿ ಭಾರತದಲ್ಲಿಯ ತಮ್ಮ ಆಡಳಿತವು ಹೆಚ್ಚು ಕಾಲ ಉಳಿಯಲಾರದು ಎಂಬುದರ ಅರಿವು ಬ್ರಿಟಿಶ ಆಡಳಿತಗಾರರಿಗಾಯಿತು.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ಕೆಳಗಿನ ವಾಕ್ಯಗಳನ್ನು ಪೂರ್ಣಮಾಡಿರಿ.**

(ಅಂದಮಾನ ಮತ್ತು ನಿಕೋಬಾರ, ಅಗಸ್ಟ ಕ್ರಾಂತಿ, ವಿನೋಬಾ ಭಾವೆ)

(1) .......... ಇವರು ವೈಯಕ್ತಿಕ ಸತ್ಯಾಗ್ರಹದ ಪ್ರಥಮ ಸತ್ಯಾಗ್ರಹಿಯಾಗಿದ್ದರು.

(2) 1942ರ ರಾಷ್ಟ್ರವ್ಯಾಪಿ ಆಂದೋಲನವನ್ನು .......... ಎಂದೂ ಕರೆಯಲಾಗುತ್ತದೆ.

(3) ನವಂಬರ 1943 ರಲ್ಲಿ ಜಪಾನ .......... ಮತ್ತು .......... ದ್ವೀಪಗಳನ್ನು ಗೆದ್ದುಕೊಂಡು ಅವುಗಳನ್ನು ಆಝಾದ ಹಿಂದ ಸರಕಾರಕ್ಕೆ ಒಪ್ಪಿಸಿತು.

**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ**

(1) ನವಂಬರ 1939ರಲ್ಲಿ ರಾಷ್ಟ್ರೀಯ ಸಭೆಯ ಪ್ರಾಂತೀಯ ಮಂತ್ರಿ ಮಂಡಳಗಳು ರಾಜೀನಾಮೆ ನೀಡಿದವು.

(2) ಆಝಾದ ಹಿಂದ ಸೇನೆಯು ಶಸ್ತ್ರಗಳನ್ನು ಕೆಳಗಿಡಬೇಕಾಯಿತು.

(3) ಪ್ರತಿಸರಕಾರಗಳು ಜನತೆಯ ಪ್ರೇರಣಾ ಸ್ಥಾನಗಳಾದವು.

**3. ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ**

| ಸಂಘಟನೆ | ಸಂಸ್ಥಾಪಕರು |
|---|---|
| ಫಾರವರ್ಡ್ ಬ್ಲಾಕ್ | |
| ಇಂಡಿಯನ್ ಇಂಡಿಪೆಂಡನ್ಸ್ ಲೀಗ | |
| ತೂಫಾನ ಸೇನೆ | |

**4. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ**

(1) ಶಿರೀಶಕುಮಾರನ ಕಾರ್ಯವು ನಿಮಗೆ ಹೇಗೆ ಪ್ರೇರಣಾದಾಯಕವಾಗಿದೆ?

(2) ಇಂಗ್ಲಂಡಿನ ಪ್ರಧಾನ ಮಂತ್ರಿ ವಿನ್ಸ್ಟನ್ ಚರ್ಚಿಲ್ಲರು ಸ್ಟಾಫರ್ಡ್ ಕ್ರಿಪ್ಸ್ ಇವರನ್ನು ಭಾರತಕ್ಕೆ ಏಕೆ ಕಳುಹಿಸಿದರು?

(3) ರಾಷ್ಟ್ರೀಯ ಸಭೆಯ ಪ್ರಮುಖ ಮುಖಂಡರನ್ನು ಬಂಧಿಸಿದ ಸುದ್ದಿಯು ದೇಶದ ತುಂಬೆಲ್ಲ ಹರಡಿದಾಗ ಯಾವ ಪ್ರತಿಕ್ರಿಯೆ ಉಂಟಾಯಿತು?

**ಉಪಕ್ರಮ**

(1) ಆಝಾದ ಹಿಂದ ಸೇನೆಯ ಹೋರಾಟದಲ್ಲಿಯ ಘಟನೆಗಳ ಕಾಲರೇಷೆಯನ್ನು ತಯಾರಿಸಿರಿ

(2) 1942ರ ಭಾರತ ಬಿಟ್ಟು ತೊಲಗಿರಿ ಆಂದೋಲನದ ಛಾಯಾಚಿತ್ರಗಳನ್ನು ಇಂಟರ್ನೆಟ್ ಸಹಾಯದಿಂದ ಪಡೆದು ರಾಷ್ಟ್ರೀಯ ದಿನದ ನಿಮಿತ್ತವಾಗಿ ಅವುಗಳ ಪ್ರದರ್ಶನವನ್ನು ಏರ್ಪಡಿಸಿರಿ.

AVI53V

# 10. ಸಶಸ್ತ್ರ ಕ್ರಾಂತಿಕಾರಿ ಚಳುವಳಿ

ಬ್ರಿಟಿಶ ಸಾಮ್ರಾಜ್ಯಶಾಹಿಯ ವಿರುದ್ಧ ಭಾರತದಲ್ಲಿ ವಿವಿಧ ಮಾರ್ಗಗಳಿಂದ ಆಂದೋಲನಗಳಾದವು. ಅವುಗಳಲ್ಲಿಯ ಒಂದು ಮಾರ್ಗವು ಸಶಸ್ತ್ರ ಕ್ರಾಂತಿಯದಾಗಿತ್ತು. ಅದರ ಪರಿಚಯವನ್ನು ನಾವು ಈ ಪಾಠದಲ್ಲಿ ಮಾಡಿಕೊಳ್ಳುವವರಿದ್ದೇವೆ.

ಕ್ರಿ.ಶ. 1857ರ ಮೊದಲು ಬ್ರಿಟಿಶ ಆಡಳಿತದ ವಿರುದ್ಧ ನಡೆದ ದಂಗೆಗಳು ಮತ್ತು 1857ರ ಸ್ವಾತಂತ್ರ್ಯ ಹೋರಾಟ ಇವುಗಳ ಅಭ್ಯಾಸವನ್ನು ನಾವು ಮಾಡಿದ್ದೇವೆ. ಆ ನಂತರದ ಕಾಲದಲ್ಲಿ ರಾಮಸಿಂಹ ಕುಕಾ ಇವರು ಪಂಜಾಬ್‌ನಲ್ಲಿ ಸರಕಾರದ ವಿರುದ್ಧ ದಂಗೆಯನ್ನು ಆಯೋಜಿಸಿದ್ದರು.

**ವಾಸುದೇವ ಬಳವಂತ ಫಡಕೆ:** ವಾಸುದೇವ ಬಳವಂತ ಫಡಕೆಯವರು ಮಹಾರಾಷ್ಟ್ರದಲ್ಲಿ ಇಂಗ್ಲೀಷರ ವಿರುದ್ಧ ಸಶಸ್ತ್ರ ಬಂಡಾಯವನ್ನು ಮಾಡಿದರು. ಬ್ರಿಟಿಶ ಸಾಮ್ರಾಜ್ಯದೊಡನೆ ಶಸ್ತ್ರಗಳಿಂದ ಹೋರಾಡಬೇಕು ಎಂಬುದು ಅವರ ವಿಚಾರ ವಾಗಿತ್ತು. ಅವರು ವಸ್ತಾದ ಲಹೂಜಿ ಸಾಳವೆಯವರ ಕಡೆ ಯಿಂದ ಶಸ್ತ್ರವಿದ್ಯೆಯ ಶಿಕ್ಷಣ ಪಡೆದರು. ಬ್ರಿಟಿಶ ಅಧಿಪತ್ಯದ ವಿರುದ್ಧ ಸಶಸ್ತ್ರ ಬಂಡಾಯವನ್ನು ಮಾಡಲು ಅವರು ರಾಮೋಶಿ ಬಾಂಧವರನ್ನು ಸಂಘಟಿಸಿ ದಂಗೆ ಯೆದ್ದರು. ಈ ದಂಗೆಯು ಅಯಶಸ್ವಿಯಾಯಿತು. ಬ್ರಿಟಿಶ ಸರಕಾರವು ಅವರನ್ನು ಬಂಧಿಸಿ ಎಡನ್ ಕಾರಾಗೃಹಕ್ಕೆ ಕಳುಹಿಸಿತು. ಅಲ್ಲಿಯೆ 1883ರಲ್ಲಿ ಅವರ ನಿಧನವಾಯಿತು. ಸ್ವಾತಂತ್ರ್ಯದ ಸಲುವಾಗಿ ಅವರು ಸಶಸ್ತ್ರ ಹೋರಾಟ ಮಾಡಿದರು.



ವಾಸುದೇವ ಬಳವಂತ ಫಡಕೆ

**ಚಾಫೇಕರ ಬಂಧುಗಳು:** 1847ರಲ್ಲಿ ಪುಣೆಯಲ್ಲಿ ಪ್ಲೇಗ ರೋಗವನ್ನು ನಿಯಂತ್ರಿಸುವಾಗ ಪ್ಲೇಗ ಕಮಿಶನರನಾದ ರ‍್ಯಾಂಡ್ ಇವನು ಅನ್ಯಾಯ ಅತ್ಯಾಚಾರ ಮಾಡಿದನು. ಅದರ ಸೇಡು ತೀರಿಸಿಕೊಳ್ಳಲು ದಾಮೋದರ ಮತ್ತು ಬಾಳಕೃಷ್ಣ ಈ ಚಾಫೇಕರ ಬಂಧುಗಳು 22 ಜೂನ್ 1897ರಂದು ರ‍್ಯಾಂಡನ ಕೊಲೆ ಮಾಡಿದರು. ದಾಮೋದರ, ಬಾಳಕೃಷ್ಣ ಮತ್ತು ವಾಸುದೇವ ಈ ಮೂವರು ಬಂಧುಗಳಿಗೆ ಹಾಗೂ ಅವರ ಸಹಕಾರಿಗಳಾದ ಮಹಾದೇವ ರಾನಡೆ ಇವರಿಗೆ ಫಾಶಿ ಶಿಕ್ಷೆಯಾಯಿತು. ಒಂದೇ ಮನೆಯಲ್ಲಿಯ ಮೂವರು ಸಹೋದರರು ದೇಶಸೇವೆಗಾಗಿ ಹುತಾತ್ಮರಾದರು.

ಇದೇ ಸುಮಾರಿಗೆ ಬಿಹಾರನಲ್ಲಿಯ ಮುಂಡಾ ಆದಿವಾಸಿಗಳು ಬಿರಸಾ ಮುಂಡಾ ಇವರ ನೇತೃತ್ವದಲ್ಲಿ ಸರಕಾರದ ವಿರುದ್ಧ ಬಹು ದೊಡ್ಡ ಬಂಡಾಯವನ್ನು ಮಾಡಿದರು.



ಸ್ವಾತಂತ್ರ್ಯವೀರ ಸಾವರಕರ

**ಅಭಿನವ ಭಾರತ:** ಕ್ರಿ.ಶ. 1900ರಲ್ಲಿ ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರಕರ ಇವರು ನಾಸಿಕ ಎಂಬಲ್ಲಿ 'ಮಿತ್ರಮೇಳಾ' ಎಂಬ ಕ್ರಾಂತಿಕಾರಕರ ಗುಪ್ತ ಸಂಘಟನೆಯನ್ನು ಸ್ಥಾಪಿಸಿದರು. 1904ರಲ್ಲಿ ಇದೇ ಸಂಘಟನೆಗೆ 'ಅಭಿನವ ಭಾರತ' ಎಂಬ ಹೆಸರನ್ನು ನೀಡಲಾಯಿತು. ಉನ್ನತ ಶಿಕ್ಷಣವನ್ನು ಪಡೆಯುವ ಸಲುವಾಗಿ ಸಾವರಕರ ಇಂಗ್ಲಂಡಿಗೆ ಹೋದರು. ಅಲ್ಲಿಂದ ಅವರು ಅಭಿನವ ಭಾರತ ಸಂಘಟನೆಯ ಭಾರತದಲ್ಲಿದ್ದ ಸದಸ್ಯರಿಗೆ ಕ್ರಾಂತಿಕಾರಕ ವಾಙ್ಮಯ, ಪಿಸ್ತೂಲು ಮುಂತಾದ ಸಾಹಿತ್ಯಗಳನ್ನು ಕಳುಹಿಸಲು ಆರಂಭಿಸಿದರು. ಅವರು ಜೊಸೆಫ್ ಮ್ಯಾಝಿನಿ ಎಂಬ ಇಟಾಲಿಯನ್ ಕ್ರಾಂತಿಕಾರನ ಸ್ಫೂರ್ತಿದಾಯಕ ಚರಿತ್ರೆಯನ್ನು ಬರೆದರು. 1857ರ ಬಂಡಾಯವು ಮೊದಲನೆಯ ಭಾರತೀಯ ಸ್ವಾತಂತ್ರ್ಯ ಯುದ್ಧವಾಗಿತ್ತು ಎಂಬುದನ್ನು ಪ್ರತಿಪಾದಿಸುವ '1857ರ ಸ್ವಾತಂತ್ರ್ಯ ಸಮರ' ಎಂಬ ಗ್ರಂಥವನ್ನು ಅವರು ಬರೆದರು.

**ಗೊತ್ತಿದೆಯೇ ನಿಮಗೆ?**

ಐವತ್ತು ವರ್ಷಗಳ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸುವ ಸಲುವಾಗಿ ಸ್ವಾ. ಸಾವರಕರರನ್ನು ಅಂದಮಾನಕ್ಕೆ ಕರೆದೊಯ್ಯಲಾಯಿತು. ಅವರು ಅಲ್ಲಿ ಹತ್ತು ವರ್ಷ ಇದ್ದರು. 'ಮಾಝೀ ಜನ್ಮಠೇಪ' ಎಂಬ ಆತ್ಮಚರಿತ್ರೆಯಲ್ಲಿ ಸಾವರಕರರು ಅಂದಮಾನದಲ್ಲಿಯ ಆ ಭಯಂಕರ ದಿನಗಳ ಅನುಭವಗಳನ್ನು ಬರೆದಿಟ್ಟಿದ್ದಾರೆ. ಮುಂದೆ ಸರಕಾರವು ಅವರನ್ನು ರತ್ನಾಗಿರಿಗೆ ಒಯ್ದು ಅಲ್ಲಿ ಸ್ಥಾನಬದ್ಧರನ್ನಾಗಿ ಮಾಡಿದರು. ಅಲ್ಲಿ ಸಾವರಕರರು ಜಾತಿಭೇದ ನಿರ್ಮೂಲನೆ, ಅಸ್ಪೃಶ್ಯತಾ ನಿವಾರಣೆ, ಸಹಭೋಜನ, ಭಾಷಾ ಶುದ್ಧೀಕರಣ ಮುಂತಾದ ಸಾಮಾಜಿಕ ಚಳುವಳಿಗಳನ್ನು ಮಾಡಿದರು. ಅವರು ಒಬ್ಬ ಮಹಾನ್ ಸಾಹಿತಿಗಳಾಗಿದ್ದರು. ಅವರು 1938ರಲ್ಲಿ ಮುಂಬಯಿಯಲ್ಲಿ ಜರುಗಿದ ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ಅಭಿನವ ಭಾರತ ಸಂಘಟನೆಯ ಕಾರ್ಯದ ಬಗ್ಗೆ ಸರಕಾರಕ್ಕೆ ಸುಳಿವು ಹತ್ತಿತು. ಆದ್ದರಿಂದ ಸರಕಾರವು ಬಾಬಾರಾವ ಸಾವರಕರರನ್ನು ಬಂಧಿಸಿತು. ಅವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಯಿತು. ಈ ಶಿಕ್ಷೆಯ ಸೇಡನ್ನು ತೀರಿಸಿಕೊಳ್ಳಲು ಅನಂತ ಲಕ್ಷ್ಮಣ ಕಾನ್ಹೇರೆ ಎಂಬ ತರುಣನು ನಾಸಿಕದ ಕಲೆಕ್ಟರನಾದ ಜಾಕ್ಸನ್‌ನ ಕೊಲೆ ಮಾಡಿದನು. ಸರಕಾರವು ಅಭಿನವ ಭಾರತ ಸಂಘಟನೆಯ ಸಂಪರ್ಕದಲ್ಲಿರುವ ಜನರನ್ನು ಬಂಧಿಸಲಾರಂಭಿಸಿತು.

ಸರಕಾರವು ಜಾಕ್ಸನ್‌ನ ಕೊಲೆಯ ಸಂಬಂಧವನ್ನು ಸ್ವಾತಂತ್ರ್ಯವೀರ ಸಾವರಕರರೊಂದಿಗೆ ಜೋಡಿಸಿತು ಹಾಗೂ ಅವರನ್ನು ಬಂಧಿಸಿ ಅವರ ಮೇಲೆ ಖಟ್ಲೆ ಹೇರಿತು. ನ್ಯಾಯಾಲಯವು ಅವರಿಗೆ ಐವತ್ತು ವರ್ಷಗಳ ಕಾರಾಗೃಹವಾಸದ ಶಿಕ್ಷೆಯನ್ನು ವಿಧಿಸಿತು.

**ಬಂಗಾಲದಲ್ಲಿಯ ಕ್ರಾಂತಿಕಾರಕ ಚಳುವಳಿ:** ಬಂಗಾಲದ ವಿಭಜನೆಯ ನಂತರ ಬ್ರಿಟಿಶ ವಿರೋಧಿ ಪ್ರಕ್ಷೋಭವು ಹೆಚ್ಚು ತೀವ್ರವಾಯಿತು. ಸ್ಥಾನಿಕ ಬಂಡಾಯಗಳ ಬದಲಾಗಿ ವ್ಯಾಪಕವಾದ ಕ್ರಾಂತಿಕಾರಕ ಚಳುವಳಿಗಳು ರಾಷ್ಟ್ರಮಟ್ಟದಲ್ಲಿ ಉದಯಿಸತೊಡಗಿದವು. ದೇಶದ ವಿವಿಧ ಭಾಗಗಳಲ್ಲಿ ಕ್ರಾಂತಿಕಾರಕ ವಿಚಾರಗಳಿಂದ ಯುಕ್ತರಾದ ತರುಣರು ತಮ್ಮ ಗುಪ್ತ ಸಂಘಟನೆಗಳನ್ನು ಸ್ಥಾಪಿಸಲಾರಂಭಿಸಿದರು. ಬ್ರಿಟಿಶ ಅಧಿಕಾರಿಗಳಲ್ಲಿ ಭೀತಿಯನ್ನುಂಟು ಮಾಡುವುದು, ಬ್ರಿಟಿಶ ಆಡಳಿತ ವ್ಯವಸ್ಥೆಯನ್ನು ಶಿಥಿಲಗೊಳಿಸುವುದು, ಬ್ರಿಟಿಶ ಸರಕಾರದ ಬಗ್ಗೆ ಜನರಲ್ಲಿರುವ ಭೀತಿಯನ್ನು ನಷ್ಟಪಡಿಸುವುದು, ಬ್ರಿಟಿಶ ಆಡಳಿತವನ್ನು ಕಿತ್ತೆಸೆಯುವುದು ಇವು ಅವರ ಪ್ರಮುಖ ಉದ್ದೇಶಗಳಾಗಿದ್ದವು.

ಬಂಗಾಲದಲ್ಲಿ 'ಅನುಶೀಲನ ಸಮಿತಿ' ಎಂಬ ಕ್ರಾಂತಿಕಾರಕ ಸಂಘಟನೆಯು ಕಾರ್ಯನಿರತವಾಗಿತ್ತು. ಅನುಶೀಲನ ಸಮಿತಿಯು ಐದು ನೂರಕ್ಕಿಂತ ಹೆಚ್ಚು ಶಾಖೆಗಳನ್ನು ಹೊಂದಿತ್ತು. ಅರವಿಂದ ಘೋಷರ ಸಹೋದರ ಬಾರೀಂದ್ರಕುಮಾರ ಘೋಷರು ಈ ಸಂಘಟನೆಯ ಪ್ರಮುಖರಾಗಿದ್ದರು. ಅರವಿಂದ ಘೋಷರ ಸಲಹೆ ಮತ್ತು ಮಾರ್ಗದರ್ಶನವು ಈ ಸಂಘಟನೆಗೆ ಲಭಿಸುತ್ತಿತ್ತು. ಕೋಲಕಾತಾ ಸಮೀಪದ ಮಾಣಿಕತಾಳಾ ಎಂಬಲ್ಲಿ ಈ ಸಮಿತಿಯ ಬಾಂಬು ತಯಾರಿಸುವ ಕೇಂದ್ರವಿತ್ತು.


1908ರಲ್ಲಿ ಖುದಿರಾಮ ಬೋಸ ಮತ್ತು ಪ್ರಫುಲ್ಲ ಚಾಕಿ ಎಂಬ ಅನುಶೀಲನ ಸಮಿತಿಯ ಸದಸ್ಯರು ಕಿಂಗ್ಸಫೋರ್ಡ ಎಂಬ ನ್ಯಾಯಾಧೀಶನ ಕೊಲೆ ಮಾಡುವ ಯೋಜನೆಯನ್ನು ರೂಪಿಸಿದ್ದರು. ಆದರೆ ಯಾವ ಗಾಡಿಯ ಮೇಲೆ ಅವರು ಬಾಂಬು ಎಸೆದರೋ ಆ ಗಾಡಿಯು ಕಿಂಗ್ಸಫೋರ್ಡ ನದಾಗಿರಲಿಲ್ಲ. ಈ ಹಲ್ಲೆಯಲ್ಲಿ ಗಾಡಿಯಲ್ಲಿಯ ಇಬ್ಬರು ಇಂಗ್ಲೀಷ ಮಹಿಳೆಯರು ಮರಣ ಹೊಂದಿದರು. ಇಂಗ್ಲೀಷರ ಕೈಗೆ ಸಿಗಬಾರದೆಂದು ಪ್ರಫುಲ್ಲ ಚಾಕಿ ಇವರು ಸ್ವತ: ತನ್ನ ಮೇಲೆ ಗುಂಡು ಹಾರಿಸಿಕೊಂಡರು. ಖುದಿರಾಮ ಬೋಸ ಇವರು ಪೋಲೀಸರ ಕೈಗೆ ಸಿಕ್ಕರು. ಅವರನ್ನು ಗಲ್ಲಿಗೇರಿಸ ಲಾಯಿತು. ಈ ಪ್ರಕರಣದ ತಪಾಸಣೆ ಮಾಡುತ್ತಿರುವಾಗ ಅನುಶೀಲನ ಸಮಿತಿಯ ಕಾರ್ಯದ ಬಗ್ಗೆ ಪೋಲಿಸರಿಗೆ ಮಾಹಿತಿ ದೊರಕಿತು. ಅವರು ಈ ಸಂಘಟನೆಯ ಸದಸ್ಯರನ್ನು ಬಂಧಿಸತೊಡಗಿದರು. ಅರವಿಂದ ಘೋಷರನ್ನು ಕೂಡಾ ಬಂಧಿಸಲಾಯಿತು. ಬಾಂಬು ತಯಾರಿಸುವದರೊಂದಿಗೆ ಅರವಿಂದ ಬಾಬೂರ ಸಂಬಂಧವನ್ನು ಜೋಡಿಸುವುದರಲ್ಲಿ ಸರಕಾರವು ಅಯಶಸ್ವಿಯಾದುದರಿಂದ ನ್ಯಾಯಾಲಯವು ಅವರನ್ನು ದೋಷಮುಕ್ತರನ್ನಾಗಿ ಮಾಡಿತು. ಇತರ ಸದಸ್ಯರಿಗೆ ದೀರ್ಘಕಾಲಾವಧಿಯ ಶಿಕ್ಷೆಯನ್ನು ವಿಧಿಸಿತು.

ರಾಸಬಿಹಾರಿ ಬೋಸ ಮತ್ತು ಸಚಿಂದ್ರನಾಥ ಸನ್ಯಾಲರು ಕ್ರಾಂತಿಕಾರಕ ಸಂಘಟನೆಗಳ ಜಾಲವನ್ನು ಬಂಗಾಲದ ಹೊರಗೆ ವಿಸ್ತರಿಸಿದರು. ಪಂಜಾಬ, ದಿಲ್ಲಿ, ಹಾಗೂ ಉತ್ತರ ಪ್ರದೇಶಗಳಲ್ಲಿ ಕ್ರಾಂತಿಕಾರ್ಯದ ಕೇಂದ್ರಗಳು ಸ್ಥಾಪಿಸಲ್ಪಟ್ಟವು. ರಾಸಬಿಹಾರಿ ಬೋಸ ಮತ್ತು ಅವರ ಸಂಗಡಿಗರು ವೈಸರಾಯ ಲಾರ್ಡ ಹಾರ್ಡಿಂಜನ ಮೇಲೆ ಬಾಂಬು ಎಸೆಯುವ ಸಾಹಸದ ಕೃತ್ಯವನ್ನು ಮಾಡಿದರು. ಆದರೆ ಈ ದಾಳಿಯಿಂದ ಲಾರ್ಡ್ ಹಾರ್ಡಿಂಜನು ಸುರಕ್ಷಿತವಾಗಿ ಪಾರಾದನು.

ಮದ್ರಾಸ ಪ್ರಾಂತದಲ್ಲಿಯೂ ಕ್ರಾಂತಿಕಾರಕ ಚಟುವಟಿಕೆ ಗಳು ಮುಂದುವರಿದಿದ್ದವು. ವಾಂಚಿ ಅಯ್ಯರನೆಂಬ ಕ್ರಾಂತಿಕಾರನು ಆ್ಯಶ್ ಎಂಬ ಬ್ರಿಟಿಶ ಅಧಿಕಾರಿಯ ಕೊಲೆ ಮಾಡಿದನು. ಆನಂತರ ಅವನು ಸ್ವತ: ತನ್ನ ಮೇಲೆ ಗುಂಡು ಹಾರಿಸಿಕೊಂಡು ಆತ್ಮಾರ್ಪಣೆ ಮಾಡಿದನು.

**ಇಂಡಿಯಾ ಹೌಸ:** ಭಾರತದಲ್ಲಿಯ ಕ್ರಾಂತಿಕಾರಕ ಚಟುವಟಿಕೆಗಳಿಗೆ ವಿದೇಶದಲ್ಲಿದ್ದ ಭಾರತೀಯ ಕ್ರಾಂತಿಕಾರ ರಿಂದ ಸಹಾಯ ದೊರೆಯುತ್ತಿತ್ತು. ಲಂಡನ್ನಿನಲ್ಲಿಯ ಇಂಡಿಯಾ ಹೌಸ ಇದು ಈ ರೀತಿಯ ಸಹಾಯ ಸಲ್ಲಿಸುವ ಮಹತ್ವದ ಕೇಂದ್ರವಾಗಿತ್ತು. ಭಾರತೀಯ ದೇಶಭಕ್ತರಾದ


ಪಂ. ಶ್ಯಾಮಜಿ ವರ್ಮಾ


ಮಾದಾಮ ಕಾಮಾ

ಪಂಡಿತ ಶ್ಯಾಮಜಿ ಕೃಷ್ಣ ವರ್ಮಾ ಇವರು ಇಂಡಿಯಾ ಹೌಸ ಸ್ಥಾಪಿಸಿದ್ದರು. ಈ ಸಂಸ್ಥೆಯ ವತಿಯಿಂದ ಇಂಗ್ಲಂಡಿನಲ್ಲಿ ಉನ್ನತ ಶಿಕ್ಷಣ ಪಡೆಯುವ ಸಲುವಾಗಿ ಭಾರತೀಯ ತರುಣರಿಗೆ ಶಿಷ್ಯವೇತನವನ್ನು ನೀಡಲಾಗುತ್ತಿತ್ತು. ಸ್ವಾತಂತ್ರ್ಯವೀರ ಸಾವರಕರರಿಗೆ ಇಂಥ ಶಿಷ್ಯವೇತನ ದೊರಕಿತ್ತು. ಮಾದಾಮ ಕಾಮಾ ಇವರು ಜರ್ಮನಿಯ ಸ್ಟುಟಗಾರ್ಡ್ ಎಂಬಲ್ಲಿ ಜರುಗಿದ ಜಾಗತಿಕ ಸಮಾಜವಾದಿ ಪರಿಷತ್ತಿನಲ್ಲಿ ಭಾರತದ ಸ್ವಾತಂತ್ರ್ಯದ ಪ್ರಶ್ನೆಯನ್ನು ಎತ್ತಿದರು. ಇದೇ ಪರಿಷತ್ತಿನಲ್ಲಿ ಅವರು ಭಾರತದ ಧ್ವಜವನ್ನು ಹಾರಿಸಿದ್ದರು. ಇಂಡಿಯಾ ಹೌಸ್‌ಗೆ ಸಂಬಂಧಪಟ್ಟ ಇನ್ನೊಬ್ಬ ಕ್ರಾಂತಿಕಾರನೆಂದರೆ ಮದನಲಾಲ ಧಿಂಗ್ರಾ ಎಂಬ ತರುಣನು. ಅವನು ಕರ್ಝನ್ ವೈಲಿ ಎಂಬ ಬ್ರಿಟಿಶ ಅಧಿಕಾರಿಯ ಕೊಲೆ ಮಾಡಿದನು. ಅದಕ್ಕಾಗಿ ಧಿಂಗ್ರಾ ಇವರನ್ನು ಗಲ್ಲಿಗೇರಿಸಲಾಯಿತು.

**ಗದರ ಚಳುವಳಿ:** ಮೊದಲನೆಯ ಮಹಾಯುದ್ಧದ ಕಾಲದಲ್ಲಿ ಬ್ರಿಟಿಶ ವಿರೋಧಿ ಕ್ರಾಂತಿಕಾರಕ ಚಟುವಟಿಕೆಗಳಿಗೆ ಗತಿ ದೊರಕಿತು. ಬ್ರಿಟಿಶರ ಶತ್ರುಗಳ ನೆರವನ್ನು ಪಡೆದು ಭಾರತದಲ್ಲಿಯ ಬ್ರಿಟಿಶ ಆಡಳಿತವನ್ನು ಉರುಳಿಸಬಹುದು, ಈ ಪ್ರಯತ್ನದಲ್ಲಿ ಭಾರತೀಯ ಸೈನಿಕರ ನೆರವನ್ನು ಪಡೆಯಬಹುದು ಎಂದು ಕ್ರಾಂತಿಕಾರರಿಗೆ ಅನಿಸುತ್ತಿತ್ತು. ಈ ಅವಕಾಶದ ಲಾಭ ಪಡೆದುಕೊಳ್ಳಲು ಕ್ರಾಂತಿಕಾರಕ ಸಂಘಟನೆಗಳು ಸ್ಥಾಪಿಸಲ್ಪಟ್ಟವು. 'ಗದರ' ಇದು ಅದರಲ್ಲಿಯ ಒಂದು ಪ್ರಮುಖ ಸಂಘಟನೆಯಾಗಿತ್ತು.

ಅಮೇರಿಕಾ ಮತ್ತು ಕ್ಯಾನಡಾಗಳಲ್ಲಿಯ ಭಾರತೀಯರು 'ಗದರ' ಸಂಘಟನೆಯ ಸ್ಥಾಪನೆ ಮಾಡಿದ್ದರು. ಲಾಲಾ ಹರದಯಾಳ, ಭಾಯಿ ಪರಮಾನಂದ, ಡಾ ಪಾಂಡುರಂಗ ಸದಾಶಿವ ಖಾನಖೋಜೆ ಮುಂತಾದ ಕ್ರಾಂತಿಕಾರರು ಈ ಸಂಘಟನೆಯ ಪ್ರಮುಖ ಮುಖಂಡರಾಗಿದ್ದರು. 'ಗದರ' ಎಂದರೆ ಬಂಡಾಯ (ದಂಗೆ). 'ಗದರ' ಇದು ಈ ಸಂಘಟನೆಯ ಮುಖಪತ್ರದ ಹೆಸರು. ಬ್ರಿಟಿಶ ಆಡಳಿತದಿಂದ ಭಾರತದ ಮೇಲಾಗುತ್ತಿರುವ ದುಷ್ಪರಿಣಾಮಗಳನ್ನು ಈ ಮುಖಪತ್ರದಲ್ಲಿಪ್ರಕಟಿಸಲಾಗುತ್ತಿತ್ತು. ಭಾರತೀಯ ಕ್ರಾಂತಿಕಾರರ ಸಾಹಸದ ಕೃತ್ಯಗಳ ಮಾಹಿತಿಯನ್ನು ತಿಳಿಸಲಾಗುತ್ತಿತ್ತು. ಈ ರೀತಿ 'ಗದರ' ಈ ಮುಖಪತ್ರವು ಭಾರತೀಯರಿಗೆ ರಾಷ್ಟ್ರಪ್ರೇಮ ಮತ್ತು ಸಶಸ್ತ್ರ ಕ್ರಾಂತಿಯ ಸಂದೇಶವನ್ನು ನೀಡಿತು.

ಬ್ರಿಟಿಶರ ವಿರುದ್ಧ ಬಂಡೇಳಲು ಗದರ ಸಂಘಟನೆಯ ಮುಖಂಡರು ಯುದ್ಧಜನ್ಯ ಪರಿಸ್ಥಿತಿಯ ಲಾಭ ಪಡೆದುಕೊಳ್ಳಲು ನಿರ್ಧರಿಸಿದರು. ಅವರು ಪಂಜಾಬಿನಲ್ಲಿ ಬ್ರಿಟಿಶರ ವಿರುದ್ಧ ಬಂಡಾಯ ಹೂಡುವ ಒಂದು ಯೋಜನೆಯನ್ನು ರೂಪಿಸಿದರು. ಸೈನ್ಯದಲ್ಲಿದ್ದ ಭಾರತೀಯ ಸೈನಿಕರನ್ನು ಬಂಡಾಯದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಲಾಯಿತು. ರಾಸಬಿಹಾರಿ ಬೋಸ ಮತ್ತು ವಿಷ್ಣು ಗಣೇಶ ಪಿಂಗಳೆ ಇವರು ಬಂಡಾಯದ ನೇತೃತ್ವ ವಹಿಸಬೇಕೆಂದು ನಿರ್ಧರಿಸಲಾಯಿತು, ಆದರೆ ಕಪಟ ಕಾರಸ್ಥಾನದಿಂದಾಗಿ ಬ್ರಿಟಿಶರಿಗೆ ಈ ಯೋಜನೆಯ ಸುಳಿವು ಹತ್ತಿತು. ಪಿಂಗಳೆಯವರು ಪೋಲೀಸರ ಕೈಗೆ ಸಿಕ್ಕರು. ಅವರನ್ನು ಗಲ್ಲಿಗೇರಿಸಲಾಯಿತು. ರಾಸಬಿಹಾರಿ ಬೋಸರು ಮಾತ್ರ ತಪ್ಪಿಸಿಕೊಂಡು ಪಾರಾಗುವುದರಲ್ಲಿ ಯಶಸ್ವಿಯಾದರು. ಅವರು ಜಪಾನಿಗೆ ಹೋಗಿ ಅಲ್ಲಿ ತಮ್ಮ ಕ್ರಾಂತಿಕಾರಕ ಚಟುವಟಿಕೆಗಳನ್ನು ಮುಂದುವರಿಸಿದರು.

ಯುದ್ಧಕಾಲದಲ್ಲಿ ವಿದೇಶದಲ್ಲಿ ಇತರೆಡೆಗಳಲ್ಲಿಯೂ ಕ್ರಾಂತಿಕಾರಕ ಚಟುವಟಿಕೆಗಳು ಕಾರ್ಯನಿರತವಾಗಿದ್ದವು. ಬರ್ಲಿನ್‌ನಲ್ಲಿ ವೀರೇಂದ್ರನಾಥ ಚಟ್ಟೋಪಾಧ್ಯಾಯ, ಭೂಪೆನ ದತ್ತ ಹಾಗೂ ಹರದಯಾಳರು ಜರ್ಮನಿಯ ವಿದೇಶಾಂಗ ಖಾತೆಯ ನೆರವಿನೊಂದಿಗೆ ಬ್ರಿಟಿಶ ವಿರೋಧಿ ಯೋಜನೆಗಳನ್ನು ರೂಪಿಸಿದರು. ಕ್ರಿ.ಶ. 1915ರಲ್ಲಿ ಮಹೇಂದ್ರ ಪ್ರತಾಪ, ಬರಕತ ಉಲ್ಲಾ ಮತ್ತು ಓಬಿದುಲ್ಲಾ ಸಿಂಧಿ ಇವರು ಕಾಬೂಲಿನಲ್ಲಿ ಸ್ವತಂತ್ರ ಭಾರತದ ಹಂಗಾಮಿ ಸರಕಾರವನ್ನು ಸ್ಥಾಪಿಸಿದ್ದರು.

**ಕಾಕೋರಿ ಒಳಸಂಚು:** ಸರಕಾರದ ದಬ್ಬಾಳಿಕೆಯಿಂದ ಕ್ರಾಂತಿಕಾರಕ ಚಳುವಳಿಯು ಕೊನೆಗೊಳ್ಳಲಿಲ್ಲ. ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ನಿಲ್ಲಿಸಿದ ನಂತರ ಅನೇಕ ತರುಣರು ಕ್ರಾಂತಿಮಾರ್ಗದ ಕಡೆಗೆ ಹೊರಳಿದರು. ಚಂದ್ರಶೇಖರ ಆಝಾದ, ರಾಮಪ್ರಸಾದ ಬಿಸ್ಮಿಲ, ಯೋಗೇಶ ಚಟರ್ಜಿ, ಸಚಿಂದ್ರನಾಥ ಸನ್ಯಾಲ ಮುಂತಾದ ಕ್ರಾಂತಿಕಾರರು ಒಂದುಗೂಡಿದರು. ಕ್ರಾಂತಿಕಾರ್ಯಕ್ಕಾಗಿ ತಗಲುವ ಹಣವನ್ನು ಕೂಡಿಸಲು ಅವರು 9 ಅಗಸ್ಟ 1925ರಂದು ಉತ್ತರ ಪ್ರದೇಶದಲ್ಲಿಯ ಕಾಕೋರಿ ರೇಲ್ವೆ ನಿಲ್ದಾಣದ ಹತ್ತಿರ ರೈಲಿನಲ್ಲಿ ಕೊಂಡೊಯ್ಯುತ್ತಿರುವ ಸರಕಾರಿ ತಿಜೋರಿಯನ್ನು ಲೂಟಿ ಮಾಡಿದರು. ಇದಕ್ಕೆ 'ಕಾಕೋರಿ ಒಳಸಂಚು' ಎನ್ನಲಾಗುತ್ತದೆ. ಸರಕಾರವು ಶೀಘ್ರ ಕ್ರಮ ಕೈಕೊಂಡು ಕ್ರಾಂತಿಕಾರರನ್ನು ಬಂಧಿಸಿತು. ಅವರ ಮೇಲೆ ಖಟ್ಲೆ ನಡೆಸಲಾಯಿತು. ಅಶಫಾಕ ಉಲ್ಲಾ ಖಾನ, ರಾಮಪ್ರಸಾದ ಬಿಸ್ಮಿಲ, ರೋಶನ ಸಿಂಗ್, ರಾಜೇಂದ್ರ ಲಾಹಿರಿ ಮುಂತಾದವರನ್ನು ಗಲ್ಲಿಗೇರಿಸಲಾಯಿತು. ಚಂದ್ರಶೇಖರ ಆಝಾದರು ಮಾತ್ರ ಪೋಲೀಸರ ಕೈಗೆ ಸಿಗಲಿಲ್ಲ.


ಚಂದ್ರಶೇಖರ ಆಝಾದ

**ಹಿಂದುಸ್ಥಾನ ಸೋಶಾಲಿಸ್ಟ ರಿಪಬ್ಲಿಕನ್ ಅಸೋಸಿಯೇಶನ್:** ಸಮಾಜವಾದಿ ವಿಚಾರಗಳಿಂದ ಪ್ರಭಾವಿತರಾದ ತರುಣರು ದೇಶವ್ಯಾಪಿ ಕ್ರಾಂತಿಕಾರಿ ಸಂಘಟನೆಯನ್ನು ಸ್ಥಾಪಿಸಲು ನಿರ್ಧರಿಸಿದರು. ಚಂದ್ರಶೇಖರ ಆಝಾದ, ಭಗತಸಿಂಗ, ರಾಜಗುರು, ಸುಖದೇವ ಮುಂತಾದ ತರುಣರು ಇವರಲ್ಲಿ ಪ್ರಮುಖರಾಗಿದ್ದರು. ಈ ಎಲ್ಲ ಕ್ರಾಂತಿಕಾರರು ಧರ್ಮನಿರಪೇಕ್ಷ ವಿಚಾರಸರಣಿಯುಳ್ಳವರಾಗಿದ್ದರು. 1928ರಲ್ಲಿ ದಿಲ್ಲಿಯ ಫಿರೋಜಶಹಾ ಕೋಟಲಾ ಮೈದಾನದಲ್ಲಿ ಜರುಗಿದ ಸಭೆಯಲ್ಲಿ ಈ ತರುಣರು 'ಹಿಂದುಸ್ಥಾನ ಸೋಶಾಲಿಸ್ಟ ರಿಪಬ್ಲಿಕನ್ ಅಸೋಸಿಯೇಶನ್' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಭಾರತವನ್ನು ಬ್ರಿಟಿಶರ ಶೋಷಣೆಯಿಂದ ಮುಕ್ತಗೊಳಿಸುವುದು ಈ ಸಂಘಟನೆಯ ಉದ್ದೇಶವಾಗಿತ್ತು. ಅದರ ಜೊತೆಗೆ ಈ ಸಂಘಟನೆಗೆ ರೈತರನ್ನು ಮತ್ತು ಕಾರ್ಮಿಕರನ್ನು ಶೋಷಿಸುವ ಅನ್ಯಾಯಕಾರಕ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯನ್ನು ಕಿತ್ತೆಸೆಯಬೇಕಾಗಿತ್ತು. ಸಾಮಾಜಿಕ ನ್ಯಾಯ ಮತ್ತು ಸಮಾನತೆಗಳ ಮೇಲೆ ಆಧಾರಿತ ಸಮಾಜವನ್ನು ನಿರ್ಮಿಸುವುದಕ್ಕೆ ಭಗತಸಿಂಗ ಇವರು ಮಹತ್ವ ನೀಡಿದರು.


ಭಗತಸಿಂಗ

ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವುದು ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು, ಈ ಕಾರ್ಯಗಳನ್ನು ಸಂಘಟನೆಯ ಒಂದು ಸ್ವತಂತ್ರ ವಿಭಾಗದ ಕಡೆಗೆ ಒಪ್ಪಿಸಲಾಗಿತ್ತು. ಈ ವಿಭಾಗದ ಹೆಸರು 'ಹಿಂದುಸ್ಥಾನ ಸೋಶಾಲಿಸ್ಟ ರಿಪಬ್ಲಿಕನ್ ಆರ್ಮಿ' ಎಂದು ಇತ್ತು ಹಾಗೂ ಚಂದ್ರಶೇಖರ ಆಝಾದರು ಅದರ ಪ್ರಮುಖರಾಗಿದ್ದರು.

ಈ ಸಂಘಟನೆಯ ಸದಸ್ಯರು ಅನೇಕ ಕ್ರಾಂತಿಕಾರಕ ಕಾರ್ಯಗಳನ್ನು ಮಾಡಿದರು. ಭಗತಸಿಂಗ ಮತ್ತು ರಾಜಗುರು ಇವರು ಲಾಲಾ ಲಜಪತರಾಯರ ಮೃತ್ಯುವಿನ ಸೇಡನ್ನು ತೀರಿಸಿ ಕೊಳ್ಳಲು ಸ್ಯಾಂಡರ್ಸ್ ಎಂಬ ಅಧಿಕಾರಿಯ ಮೇಲೆ ಗುಂಡು ಹಾರಿಸಿ ಕೊಲೆ ಮಾಡಿದರು.


ರಾಜಗುರು


ಸುಖದೇವ

ನಾಗರಿಕ ಹಕ್ಕುಗಳನ್ನು ಮೂಲೆಗುಂಪು ಮಾಡುವ ಎರಡು ಮಸೂದೆಗಳನ್ನು ಸರಕಾರವು ಕೇಂದ್ರ ಶಾಸಕಾಂಗದಲ್ಲಿ ಮಂಡಿಸಿತ್ತು. ಅವುಗಳನ್ನು ನಿಷೇಧಿಸುವ ಸಲುವಾಗಿ ಭಗತಸಿಂಗ ಮತ್ತು ಬಟುಕೇಶ್ವರ ದತ್ತ ಇವರು ಕೇಂದ್ರ ಶಾಸಕಾಂಗದಲ್ಲಿ ಬಾಂಬು ಎಸೆದರು.

ಸರಕಾರವು ಕೂಡಲೇ ಹಿಂದುಸ್ಥಾನ ಸೋಶಾಲಿಸ್ಟ ರಿಪಬ್ಲಿಕನ್ ಆರ್ಮಿಯ ಕೇಂದ್ರಗಳ ಮೇಲೆ ದಾಳಿ ಮಾಡಿತು. ಅದರಿಂದ ಸ್ಯಾಂಡರ್ಸನ ಕೊಲೆಯ ಬಗ್ಗೆ ಪೋಲೀಸರಿಗೆ ಸುಳಿವು ದೊರಕಿತು. ಸರಕಾರವು ಕ್ರಾಂತಿಕಾರರನ್ನು ಬಂಧಿಸಲು ಆರಂಭಿಸಿತು ಅವರ ಮೇಲೆ ರಾಜದ್ರೋಹದ ಆರೋಪ ಹೊರಿಸಿ ಖಟ್ಲೆ ಹೇರಿತು. ಭಗತಸಿಂಗ, ರಾಜಗುರು ಮತ್ತು ಸುಖದೇವರನ್ನು 23 ಮಾರ್ಚ 1931ರಂದು ಲಾಹೋರ ಕಾರಾಗೃಹದಲ್ಲಿ ಗಲ್ಲಿಗೇರಿಸಲಾಯಿತು. ಚಂದ್ರಶೇಖರ ಆಝಾದರು ಮಾತ್ರ ಕೊನೆಯವರೆಗೆ ಪೋಲೀಸರ ಕೈಗೆ ಸಿಗಲಿಲ್ಲ. ಮುಂದೆ ಅಲಹಾಬಾದ ಆಲ್ಫ್ರೆಡ್ ಪಾರ್ಕ್‌ನಲ್ಲಿ ಪೋಲೀಸರೊಂದಿಗೆ ನಡೆದ ಘರ್ಷಣೆಯಲ್ಲಿ ಅವರು ಕೊಲ್ಲಲ್ಪಟ್ಟರು.

**ಚಿತಗಾವ ಶಸ್ತ್ರಾಗಾರದ ಮೇಲೆ ದಾಳಿ:** ಸೂರ್ಯಸೇನ ಇವರು ಬಂಗಾಲದ ಚಿತಗಾವದಲ್ಲಿಯ ಕ್ರಾಂತಿಕಾರಿ ಗುಂಪಿನ ಪ್ರಮುಖರಾಗಿದ್ದರು. ಅವರು ಅನಂತಸಿಂಗ, ಗಣೇಶ ಘೋಷ, ಕಲ್ಪನಾ ದತ್ತ, ಪ್ರೀತಿಲತಾ ವಡ್ಡೇದಾರ ಮುಂತಾದ ನಿಷ್ಠಾವಂತ ಕ್ರಾಂತಿಕಾರರ ಪಡೆಯನ್ನು ಕೂಡಿಸಿದರು. ಅವರ ಸಹಾಯದಿಂದ ಚಿತಗಾವದಲ್ಲಿಯ ಶಸ್ತ್ರಾಗಾರದ ಮೇಲೆ ದಾಳಿ ಮಾಡುವ ಯೋಜನೆಯನ್ನು ಸೂರ್ಯಸೇನರು ರೂಪಿಸಿದರು. ಆ ಯೋಜನೆಯ ಪ್ರಕಾರ 18 ಎಪ್ರಿಲ 1930ರಂದು ಕ್ರಾಂತಿಕಾರರು ಚಿತಗಾವದಲ್ಲಿಯ ಎರಡು ಶಸ್ತ್ರಾಗಾರಗಳಲ್ಲಿಯ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡರು. ಟೆಲಿಫೋನ ಮತ್ತು ಟೆಲಿಗ್ರಾಫ ತಂತಿಗಳನ್ನು ಕಡಿದು ಹಾಕಿದರು. ಸಂದೇಶ ವಹನ


ಸೂರ್ಯಸೇನ


ಕಲ್ಪನಾ ದತ್ತ


ಪ್ರೀತಿಲತಾ ವಡ್ಡೇದಾರ

ವ್ಯವಸ್ಥೆಯನ್ನು ನಷ್ಟಪಡಿಸುವುದರಲ್ಲಿ ಯಶಸ್ವಿಯಾದರು. ಆ ನಂತರ ಅವರು ಬ್ರಿಟಿಶ ಸೈನ್ಯದೊಂದಿಗೆ ರೋಮಾಂಚಕಾರಿ ಹೋರಾಟ ನಡೆಸಿದರು.

16 ಫೆಬ್ರವರಿ 1933 ರಂದು ಸೂರ್ಯಸೇನ ಮತ್ತು ಅವನ ಕೆಲವು ಸಂಗಡಿಗರು ಪೋಲೀಸರ ಕೈಗೆ ಸಿಕ್ಕರು. ಸೂರ್ಯಸೇನ ಮತ್ತು ಅವನ ಹನ್ನೆರಡು ಸಂಗಡಿಗರಿಗೆ ಗಲ್ಲು ಶಿಕ್ಷೆಯನ್ನು ವಿಧಿಸಲಾಯಿತು. ಕಲ್ಪನಾ ದತ್ತರಿಗೆ ಜೀವಾವಧಿ ಶಿಕ್ಷೆಯಾಯಿತು. ಪ್ರೀತಿಲತಾ ವಡ್ಡೇದಾರ ಇವರು ಪೋಲೀಸರ ಕೈಗೆ ಸಿಗದೆ ಆತ್ಮಾರ್ಪಣೆ ಮಾಡಿದರು.

ಚಿತಗಾವ ಬಂಡಾಯದಿಂದ ಕ್ರಾಂತಿಕಾರಿ ಚಳುವಳಿಗೆ ಗತಿ ದೊರಕಿತು. ಶಾಂತಿಘೋಷ ಮತ್ತು ಸುನೀತಿ ಚೌಧರಿ ಎಂಬ ಇಬ್ಬರು ಶಾಲಾ ಬಾಲಿಕೆಯರು ಜಿಲ್ಲಾ ನ್ಯಾಯಾಧೀಶನ ಕೊಲೆ ಮಾಡಿದರು. ಬೀನಾ ದಾಸ ಎಂಬ ಯುವತಿಯು ಕೋಲಕಾತಾ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಗವ್ಹರ್ನರನ ಮೇಲೆ ಗುಂಡು ಹಾರಿಸಿದಳು. ಇಂಥ ಅನೇಕ ಕ್ರಾಂತಿಕಾರಿ ಘಟನೆಗಳು ಈ ಕಾಲದಲ್ಲಿ ಸಂಭವಿಸಿದವು.

ಸರದಾರ ಉಧಮಸಿಂಗ ಇವರು 1940ರಲ್ಲಿ ಇಂಗ್ಲಂಡಿನಲ್ಲಿ ಜಾಲಿಯನ್ ವಾಲಾ ಬಾಗ ಹತ್ಯಾಕಾಂಡಕ್ಕೆ ಜವಾಬ್ದಾರನಾದ ಓಡವಾಯರನ ಕೊಲೆ ಮಾಡಿದರು.

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕ್ರಾಂತಿಕಾರಿ ಚಳುವಳಿಯು ಮಹತ್ವದ ಕೊಡುಗೆಯನ್ನು ನೀಡಿದೆ. ಕ್ರಾಂತಿಕಾರರು ಬ್ರಿಟಿಶ ಸರಕಾರದೊಂದಿಗೆ ಹೋರಾಡುತ್ತಿರುವಾಗ ಸಾಹಸ ಮತ್ತು ಮನೋನಿರ್ಧಾರಗಳನ್ನು ತೋರಿಸಿದರು. ಅವರ ರಾಷ್ಟ್ರಪ್ರೇಮ ಮತ್ತು ಸಮರ್ಪಣಾ ಭಾವಗಳು ಅದ್ವಿತೀಯವಾಗಿದ್ದವು. ಅವರ ಬಲಿದಾನವು ಭಾರತೀಯರಿಗೆ ಸ್ಫೂರ್ತಿದಾಯಕವಾಗಿದೆ.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ಕೆಳಗಿನ ವಾಕ್ಯಗಳನ್ನು ಪೂರ್ಣ ಮಾಡಿರಿ.**

(ಪಂ. ಶ್ಯಾಮಜಿ ಕೃಷ್ಣ ವರ್ಮಾ, ಮಿತ್ರಮೇಳ, ರಾಮಸಿಂಹ ಕುಕಾ)

(1) ಸ್ವಾ. ಸಾವರಕರ ಇವರು ..... ಎಂಬ ಕ್ರಾಂತಿಕಾರರ ಗುಪ್ತ ಸಂಘಟನೆಯನ್ನು ಸ್ಥಾಪಿಸಿದರು.

(2) ..... ಇವರು ಪಂಜಾಬಿನಲ್ಲಿ ಸರಕಾರದ ವಿರುದ್ಧ ದಂಗೆಯನ್ನು ಆಯೋಜಿಸಿದ್ದರು

(3) ಇಂಡಿಯಾ ಹೌಸದ ಸ್ಥಾಪನೆಯನ್ನು ..... ಇವರು ಮಾಡಿದರು.

**2. ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

| ಕ್ರಾಂತಿಕಾರರು | ಸಂಘಟನೆ |
|---|---|
| ................... | ಅಭಿನವ ಭಾರತ |
| ಬಾರೀಂದ್ರಕುಮಾರ ಘೋಷ | .................... |
| ಚಂದ್ರಶೇಖರ ಆಝಾದ | .................... |

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಚಾಫೇಕರ ಬಂಧುಗಳು ರ್‍ಯಾಂಡನ ಕೊಲೆ ಮಾಡಿದರು.

(2) ಖುದಿರಾಮ ಬೋಸ ಇವರನ್ನು ಗಲ್ಲಿಗೇರಿಸಲಾಯಿತು.

(3) ಭಗತಸಿಂಗ ಮತ್ತು ಬಟುಕೇಶ್ವರ ದತ್ತ ಇವರು ಕೇಂದ್ರ ಶಾಸಕಾಂಗದಲ್ಲಿ ಬಾಂಬು ಎಸೆದರು.

**4. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ಚಿತಗಾವ ಶಸ್ತ್ರಾಗಾರದ ಮೇಲಿನ ದಾಳಿಯ ವೃತ್ತಾಂತವನ್ನು ಬರೆಯಿರಿ.

(2) ಸ್ವಾ. ಸಾವರಕರರ ಸಶಸ್ತ್ರ ಕ್ರಾಂತಿಯಲ್ಲಿಯ ಕೊಡುಗೆಯನ್ನು ಸ್ಪಷ್ಟಪಡಿಸಿರಿ.

**ಉಪಕ್ರಮ**

(1) ಕ್ರಾಂತಿಕಾರರ ಜೀವನದ ಮೇಲೆ ಆಧಾರಿತ ನಾಟಕ, ಚಲನಚಿತ್ರ ನೋಡಿರಿ ಹಾಗೂ ಅದರಲ್ಲಿ ನಿಮಗೆ ಹಿಡಿಸಿದ ಪ್ರಸಂಗದ ನಾಟಕೀಕರಣವನ್ನು ವರ್ಗದಲ್ಲಿ ಸಾದರಪಡಿಸಿರಿ.

(2) ಕ್ರಾಂತಿಕಾರರ ಗೀತೆ (ಗಾಥಾ) ಇದರ ಮೇಲೆ ಆಧಾರಿತ ಹಸ್ತಲಿಖಿತವನ್ನು ತಯಾರಿಸಿರಿ.


AVS15I

# 11. ಸಮಾನತೆಯ ಹೋರಾಟ

ಆಧುನಿಕ ಭಾರತದ ಪ್ರಗತಿಯಲ್ಲಿ ರಾಜಕೀಯ ಸ್ವಾತಂತ್ರ್ಯದ ಹೋರಾಟವು ಮಹತ್ವದ್ದಾಗಿತ್ತು. ಈ ಹೋರಾಟವು ಮಾನವಮುಕ್ತಿಯ ವ್ಯಾಪಕ ತತ್ವಜ್ಞಾನದ ಮೇಲೆ ಆಧಾರಿತವಾಗಿತ್ತು. ಹೀಗಾಗಿ ಈ ಹೋರಾಟದ ಜೊತೆಗೆ ರಾಜಕೀಯ ಪಾರತಂತ್ರ್ಯದ ಜೊತೆಗೆ ಸರಂಜಾಮಶಾಹಿ, ಸಾಮಾಜಿಕ ವಿಷಮತೆ, ಆರ್ಥಿಕ ಶೋಷಣೆ ಇತ್ಯಾದಿ ಸಂಗತಿಗಳಿಗೂ ವಿರೋಧವಾಗತೊಡಗಿತು. ಸ್ವಾತಂತ್ರ್ಯದಂತೆ ಸಮಾನತೆಯ ತತ್ವಕೂಡ ತುಂಬಾ ಮಹತ್ವದ್ದಾಗಿದೆ. ಆ ದೃಷ್ಟಿಯಿಂದ ರೈತರು, ಕಾರ್ಮಿಕರು, ಸ್ತ್ರೀಯರು, ದಲಿತರು ಮುಂತಾದ ಸಮಾಜ ಘಟಕಗಳು ಆರಂಭಿಸಿದ ಚಳುವಳಿ ಹಾಗೂ ಸಮಾನತೆಗೆ ಮಹತ್ವ ನೀಡುವ ಸಮಾಜವಾದದ ಪ್ರವಾಹ ಇವುಗಳ ಕೊಡುಗೆಯು ಅಮೂಲ್ಯವಾಗಿದೆ. ಅವುಗಳನ್ನು ಗಮನಿಸದೆ ಆಧುನಿಕ ಭಾರತದ ನಿರ್ಮಾಣ ಹೇಗಾಯಿತೆಂಬುದು ತಿಳಿಯಲಾರದು. ಆದ್ದರಿಂದ ನಾವು ಇಂಥ ಕೆಲವು ಚಳುವಳಿಗಳ ಅಭ್ಯಾಸ ಮಾಡೋಣ.

**ರೈತರ ಚಳುವಳಿ :** ಬ್ರಿಟಿಶರ ಆರ್ಥಿಕ ಧೋರಣೆಯ ದುಷ್ಪರಿಣಾಮಗಳನ್ನು ಭಾರತೀಯ ರೈತರು ಅನುಭವಿಸಬೇಕಾಗುತ್ತಿತ್ತು. ಜಮೀನುದಾರ ಮತ್ತು ಸಾಹುಕಾರರಿಗೆ ಬ್ರಿಟಿಶ ಸರಕಾರವು ಸಂರಕ್ಷಣೆ ನೀಡುತ್ತಿತ್ತು. ಅವರು ರೈತರ ಮೇಲೆ ಅನ್ಯಾಯ ಮಾಡುತ್ತಿದ್ದರು. ಈ ಅನ್ಯಾಯದ ವಿರುದ್ಧ ರೈತರು ಅನೇಕ ಬಂಡಾಯಗಳನ್ನು ಮಾಡಿದರು. ಬಂಗಾಲದಲ್ಲಿಯ ರೈತರು ನೀಲಿ ಉತ್ಪಾದನೆಯ ಒತ್ತಾಯದ ವಿರುದ್ಧ ಕೃಷಿ ಸಂಘಟನೆಗಳನ್ನು ಸ್ಥಾಪಿಸಿ ಬಂಡಾಯ ಹೂಡಿದರು. ದೀನಬಂಧು ಮಿತ್ರ ಇವರ 'ನೀಲದರ್ಪಣ' ಎಂಬ ನಾಟಕವು ನೀಲಿ ಬೆಳೆಯುವ ರೈತರ ದಯನೀಯ ಸ್ಥಿತಿಯನ್ನು ಸಂಪೂರ್ಣ ಸಮಾಜಕ್ಕೆ ತಿಳಿಸಿಕೊಟ್ಟಿತು. 1875ರಲ್ಲಿ ಮಹಾರಾಷ್ಟ್ರದ ರೈತರು ಜಮೀನುದಾರ ಮತ್ತು ಸಾಹುಕಾರರ ಅತ್ಯಾಚಾರಗಳ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಬಂಡಾಯ ಹೂಡಿದರು. 1918ರಲ್ಲಿ ಬಾಬಾ ರಾಮಚಂದ್ರರ ಮುಂದಾಳುತನದಲ್ಲಿ ಉತ್ತರ ಪ್ರದೇಶದ ರೈತರು 'ಕಿಸಾನ ಸಭಾ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. ಕೇರಳದಲ್ಲಿ ಮೋಪಲಾ ರೈತರು ದೊಡ್ಡ ಪ್ರಮಾಣದಲ್ಲಿ ಬಂಡಾಯ ಹೂಡಿದರು. ಅದನ್ನು ಬ್ರಿಟಿಶ ಸರಕಾರವು ಹತ್ತಿಕ್ಕಿತು.

1936ರಲ್ಲಿ ಪ್ರಾ. ಎನ್. ಜಿ. ರಂಗಾ ಇವರ ಮುಂದಾಳುತನದಲ್ಲಿ 'ಅಖಿಲ ಭಾರತೀಯ ಕಿಸಾನ ಸಭಾ' ಸ್ಥಾಪಿಸಲ್ಪಟ್ಟಿತು. ಸ್ವಾಮಿ ಸಹಜಾನಂದ ಸರಸ್ವತಿಯವರು ಈ ಸಭೆಯ ಅಧ್ಯಕ್ಷರಾಗಿದ್ದರು. ಈ ಸಭೆಯು ರೈತರ ಹಕ್ಕುಗಳ ಜಾಹೀರುನಾಮೆಯನ್ನು ರಾಷ್ಟ್ರೀಯ ಸಭೆಗೆ ಸಾದರ ಪಡಿಸಿತು. 1936ರಲ್ಲಿ ಮಹಾರಾಷ್ಟ್ರದ ಗ್ರಾಮೀಣ ಭಾಗವಾದ ಫೈಜಪೂರ ಎಂಬಲ್ಲಿ ರಾಷ್ಟ್ರೀಯ ಸಭೆಯ ಅಧಿವೇಶನ ಜರುಗಿತ್ತು. ಈ ಅಧಿವೇಶನಕ್ಕೆ ಸಾವಿರಾರು ರೈತರು ಹಾಜರಿದ್ದರು.



ಪ್ರಾ.ಎನ್.ಜಿ. ರಂಗಾ



ಸಾನೆ ಗುರೂಜಿ

1938ರಲ್ಲಿ ಪೂರ್ವ ಖಾನದೇಶದಲ್ಲಿ ಅತಿವೃಷ್ಟಿಯಾಗಿ ಬೆಳೆಗಳು ನಷ್ಟವಾದವು. ರೈತರ ಸ್ಥಿತಿ ಚಿಂತಾಜನಕವಾಯಿತು. ಭೂಕಂದಾಯವನ್ನು ಮನ್ನಾ ಮಾಡಿಸಿಕೊಳ್ಳುವ ಸಲುವಾಗಿ ಸಾನೆ ಗುರೂಜಿಯವರು ಅಲ್ಲಲ್ಲಿ ಸಭೆ-ಮೆರವಣಿಗೆಗಳನ್ನು ನಡೆಸಿದರು. ಕಲೆಕ್ಟರ ಕಚೇರಿಯ ವರೆಗೆ ಮೋರ್ಚಾ ತೆಗೆದರು. 1942ರ ಕ್ರಾಂತಿಪರ್ವದಲ್ಲಿ ರೈತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದರು.

**ಗೊತ್ತಿದೆಯೇ ನಿಮಗೆ ?**


ಸಾನೆ ಗುರೂಜಿಯವರು ಕೃಷಿ ಕಾರ್ಮಿಕರಲ್ಲಿ ಒಕ್ಕಟ್ಟನ್ನುಂಟು ಮಾಡಿದರು. ಧುಳೆ-ಅಮಳನೇರಗಳನ್ನು ಕಾರ್ಮಿಕ ಸಂಘಟನೆಗಳ ಪ್ರಬಲ ಕೇಂದ್ರಗಳನ್ನಾಗಿ ಮಾಡುವುದು ಅವರ ಪ್ರಯತ್ನವಾಗಿತ್ತು. ಅವರು ಅಮಳನೇರ ಗಿರಣಿ ಕಾರ್ಮಿಕ ಯುನಿಯನ್ನಿನ ಅಧ್ಯಕ್ಷರಾಗಿದ್ದರು.

ಪಂಢರಪೂರದ ವಿಠ್ಠಲ ಮಂದಿರವನ್ನು ದಲಿತರಿಗಾಗಿ ತೆರೆಯಬೇಕು ಎಂಬುದರ ಸಲುವಾಗಿ ಅವರು ಪಂಢರಪೂರದಲ್ಲಿ ಆಮರಣ ಉಪವಾಸ ಮಾಡಿದ್ದರು.

**ಕಾರ್ಮಿಕ ಸಂಘಟನೆ :** ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಭಾರತದಲ್ಲಿ ಬಟ್ಟೆಯ ಗಿರಣಿ, ರೇಲ್ವೆ ಕಂಪನಿಗಳಂತಹ ಕೈಗಾರಿಕೆಗಳ ಆರಂಭವಾಗಿತ್ತು. ದೊಡ್ಡ ಪ್ರಮಾಣದಲ್ಲಿ ಕಾರ್ಮಿಕ ವರ್ಗವು ಉದಯವಾಗಿರಲಿಲ್ಲ.


ನಾರಾಯಣ ಮೇಘಾಜಿ ಲೋಖಂಡೆ

ಆದರೂ ಆ ಕಾಲದಲ್ಲಿ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸುವ ಸಲುವಾಗಿ ಪ್ರಯತ್ನಗಳಾದವು. ಶಶಿಪದ ಬ್ಯಾನರ್ಜಿ, ನಾರಾಯಣ ಮೇಘಾಜಿ ಲೋಖಂಡೆ ಇವರು ಸ್ಥಾನಿಕ ಮಟ್ಟದಲ್ಲಿ ಕಾರ್ಮಿಕರ ಸಂಘಟನೆಗಳನ್ನು ಸ್ಥಾಪಿಸಿದರು. ಲೋಖಂಡೆಯವರ ಕಾರ್ಮಿಕರ ಕುರಿತಾದ ಕಾರ್ಯ ಎಷ್ಟೊಂದು ಅಮೂಲ್ಯವಾಗಿತ್ತೆಂದರೆ, ಅವರನ್ನು 'ಭಾರತೀಯ ಕಾರ್ಮಿಕ ಚಳುವಳಿಯ ಜನಕ'ರೆಂದು ವರ್ಣಿಸಲಾಗುತ್ತದೆ.


**ಗೊತ್ತಿದೆಯೇ ನಿಮಗೆ ?**


ಪುಣೆ ಜಿಲ್ಲೆಯ ಸಾಸವಡ ಹತ್ತಿರದ ಕಾನ್ಹೇಸರ ಇದು ನಾರಾಯಣ ಮೇಘಾಜಿ ಲೋಖಂಡೆಯವರ ಮೂಲ ಊರು (ಹುಟ್ಟೂರು). ಅವರು 1890ರಲ್ಲಿ ಬಾಂಬೆ ಮಿಲ್ ಹ್ಯಾಂಡ್ಸ ಅಸೋಸಿಯೇಶನ್ ಎಂಬ ಗಿರಣಿ ಕಾರ್ಮಿಕರ ಸಂಘಟನೆಯನ್ನು ಸ್ಥಾಪಿಸಿದರು. ಈ ಕಾರ್ಮಿಕ ಸಂಘಟನೆಯನ್ನು ಭಾರತದಲ್ಲಿಯ ಸಂಘಟಿತ ಚಳುವಳಿಯ ಆರಂಭವೆಂದು ತಿಳಿಯಲಾಗುತ್ತದೆ. ಅವರು ಮಹಾತ್ಮಾ ಫುಲೆಯವರು ಸ್ಥಾಪಿಸಿದ ಸತ್ಯ ಶೋಧಕ ಸಮಾಜದ ಮುಂಬಯಿ ಶಾಖೆಯ ಅಧ್ಯಕ್ಷರೂ ಆಗಿದ್ದರು. ಅವರ ಪ್ರಯತ್ನದಿಂದಾಗಿ 10 ಜೂನ 1890ರಿಂದ ಕಾರ್ಮಿಕರಿಗೆ ರವಿವಾರದ ಸಾಪ್ತಾಹಿಕ ರಜೆ ದೊರೆಯತೊಡಗಿತು.

ಇದೇ ಸುಮಾರಿಗೆ ಆಸಾಮದಲ್ಲಿ ಚಹಾದ ತೋಟದಲ್ಲಿಯ ಕೆಲಸಗಾರರ ದಾರುಣ ಅವಸ್ಥೆಯ ವಿರುದ್ಧ ಆಂದೋಲನ ಮಾಡಲಾಯಿತು. 1899ರಲ್ಲಿ ಗ್ರೇಟ ಇಂಡಿಯನ್ ಪೆನಿನ್ಸುಲರ (ಜಿ.ಐ.ಪಿ.) ರೇಲ್ವೆ ಕಾರ್ಮಿಕರು ತಮ್ಮ ಬೇಡಿಕೆಗಳಿಗಾಗಿ ಮುಷ್ಕರ ಹೂಡಿದರು. ವಂಗಭಂಗ ಚಳುವಳಿಯ ಕಾಲದಲ್ಲಿ ಸ್ವದೇಶಿಗೆ ಬೆಂಬಲ ನೀಡುವ ಸಲುವಾಗಿ ಕಾರ್ಮಿಕರು ಆಗಾಗ ಮುಷ್ಕರಗಳನ್ನು ಮಾಡಿದರು. ಮೊದಲನೆಯ ಮಹಾಯುದ್ಧದ ನಂತರ ಭಾರತದಲ್ಲಿ ಔದ್ಯೋಗಿಕರಣದಿಂದಾಗಿ ಕಾರ್ಮಿಕರ ಸಂಖ್ಯೆಯಲ್ಲಿ ಹೆಚ್ಚಳವಾಯಿತು. ಆಗ ಮಾತ್ರ ರಾಷ್ಟ್ರವ್ಯಾಪಿ ಕಾರ್ಮಿಕ ಸಂಘಟನೆಯ ಅವಶ್ಯಕತೆ ಉಂಟಾಗತೊಡಗಿತು. ಈ ಅವಶ್ಯಕತೆಯಿಂದಾಗಿ 1920ರಲ್ಲಿ ಆಲ್ ಇಂಡಿಯಾ ಟ್ರೇಡ ಯುನಿಯನ್ ಕಾಂಗ್ರೆಸ್ (ಆಯ್‌ಟಕ್) ಸ್ಥಾಪಿಸಲಾಯಿತು. ಆಯ್‌ಟಕದ ಕಾರ್ಯದಲ್ಲಿ ನಾ.ಮ. ಜೋಶಿಯವರದು ಸಿಂಹಪಾಲು. ಲಾಲಾ ಲಜಪತರಾಯ ಇವರು ಆಯ್‌ಟಕದ ಮೊದಲನೆಯ ಅಧಿವೇಶನದ ಅಧ್ಯಕ್ಷರಾಗಿದ್ದರು. ಕಾರ್ಮಿಕರು ರಾಷ್ಟ್ರೀಯ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು ಎಂದು ಅವರು ಹೇಳಿದರು.

ಕಾರ್ಮಿಕ ವರ್ಗದಲ್ಲಿ ಸಮಾಜವಾದಿ ವಿಚಾರಗಳನ್ನು ಪ್ರಸಾರ ಮಾಡಿ ಕಾರ್ಮಿಕರಿಗಾಗಿ ಹೋರಾಟ ಮಾಡುವ ಸಂಘಟನೆಗಳನ್ನು ಸ್ಥಾಪಿಸುವ ಕಾರ್ಯವನ್ನು ಶ್ರೀಪಾದ ಅಮೃತ ಡಾಂಗೆ, ಮುಝುಫ್ಫರ ಅಹಮದ ಮುಂತಾದ ಸಮಾಜವಾದಿ ಮುಖಂಡರು ಮಾಡಿದರು 1928ರಲ್ಲಿ ಮುಂಬಯಿಯಲ್ಲಿಯ ಗಿರಣಿ ಕಾರ್ಮಿಕ ಸಂಘವು ಆರು ತಿಂಗಳು ಮುಷ್ಕರ ಹೂಡಿತು. ಇಂಥ ಅನೇಕ ಮುಷ್ಕರಗಳನ್ನು ರೇಲ್ವೆ ಕಾರ್ಮಿಕರು, ಸಣಬು ಕಾರ್ಮಿಕರು ಹಾಗೂ ಇನ್ನಿತರ ಕಾರ್ಮಿಕರು ಮಾಡಿದರು. ಕಾರ್ಮಿಕ ಚಳುವಳಿಯ ಹೆಚ್ಚುತ್ತಿರುವ ಶಕ್ತಿಯನ್ನು ಕಂಡು ಸರಕಾರವು ಅಸ್ವಸ್ಥವಾಯಿತು. ಈ ಚಳುವಳಿಯನ್ನು ಹತ್ತಿಕ್ಕುವ ಸಲುವಾಗಿ ಕಾನೂನುಗಳನ್ನು ಮಾಡಲಾಯಿತು. ಕಾರ್ಮಿಕರ ಹೋರಾಟಗಳು ರಾಷ್ಟ್ರೀಯ ಚಳುವಳಿಗೆ ಪೂರಕವಾದವು.


ಶ್ರೀಪಾದ ಅಮೃತ ಡಾಂಗೆ

**ಸಮಾಜವಾದಿ ಚಳುವಳಿ :** ಜನಸಾಮಾನ್ಯರ ಹಿತರಕ್ಷಣೆಗಾಗಿ ಬ್ರಿಟಿಶ ಸರಕಾರವನ್ನು ಕಿತ್ತು ಹಾಕುವುದು ಅವಶ್ಯಕವಾಗಿದೆಯೆಂದು ರಾಷ್ಟ್ರೀಯ ಸಭೆಯ ಅನೇಕ ತರುಣ ಕಾರ್ಯಕರ್ತರಿಗೆ ಅನಿಸತೊಡಗಿತು. ಅದರಂತೆ ಆರ್ಥಿಕ ಮತ್ತು ಸಾಮಾಜಿಕ ಸಮತೆಯ ತತ್ವದ ಮೇಲೆ ಸಮಾಜದ ಪುನರ್ರಚನೆಯಾಗಬೇಕೆಂದು ಅವರಿಗೆ ಮನವರಿಕೆಯಾಗತೊಡಗಿತು. ಈ ಅರಿವಿನಿಂದ ಸಮಾಜವಾದಿ ವಿಚಾರ ಸರಣಿಯ ಉದಯ ಮತ್ತು ವಿಕಾಸವಾಯಿತು.


ಆಚಾರ್ಯ ನರೇಂದ್ರ ದೇವ


ಡಾ. ರಾಮ ಮನೋಹರ ಲೋಹಿಯಾ

ರಾಷ್ಟ್ರೀಯ ಸಭೆಯಲ್ಲಿಯ ಸಮಾಜವಾದಿ ತರುಣರು ನಾಶಿಕದ ಸೆರೆಮನೆಯಲ್ಲಿದ್ದಾಗ ರಾಷ್ಟ್ರೀಯ ಸಭೆಯ ಅಂತರ್ಗತವಾಗಿ ಸಮಾಜವಾದಿ ಪಕ್ಷವನ್ನು ಸ್ಥಾಪಿಸುವ ನಿರ್ಣಯ ಕೈಕೊಂಡರು. ಈ ನಿರ್ಣಯದ ಪ್ರಕಾರ 1934ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷದ ಸ್ಥಾಪನೆ ಮಾಡಲಾಯಿತು. ಅವರಲ್ಲಿ ಆಚಾರ್ಯ ನರೇಂದ್ರ, ದೇವ, ಜಯಪ್ರಕಾಶ ನಾರಾಯಣ, ಮಿನೂ ಮಸಾನಿ, ಡಾ. ರಾಮ ಮನೋಹರ ಲೋಹಿಯಾ ಮುಂತಾದ ಮುಖಂಡರಿದ್ದರು. 1942ರ 'ಚಲೇಜಾವ್' ಚಳುವಳಿಯಲ್ಲಿ ಸಮಾಜವಾದಿ ತರುಣರು ಮುಂಚೂಣಿಯಲ್ಲಿದ್ದರು.

ಭಾರತೀಯರಿಗೆ ಕಾರ್ಲಮಾರ್ಕ್ಸ ಮತ್ತು ಅವನ ಸಾಮ್ಯವಾದ ಇವುಗಳ ಪರಿಚಯವಾಗತೊಡಗಿತು. ಲೋಕಮಾನ್ಯ ಟಿಳಕರಂತೂ 1881ರಲ್ಲಿಯೇ ಮಾರ್ಕ್ಸನನ್ನು ಕುರಿತು ಲೇಖವನ್ನು ಬರೆದಿದ್ದರು. ಮೊದಲನೆಯ ಮಹಾಯುದ್ಧದ ನಂತರ ಭಾರತದಲ್ಲಿ ಸಾಮ್ಯವಾದದ ಪ್ರಭಾವ ಕಂಡು ಬರತೊಡಗಿತು. ಅಂತರರಾಷ್ಟ್ರೀಯ ಸಾಮ್ಯವಾದಿ ಚಳುವಳಿಯಲ್ಲಿ ಮಾನವೇಂದ್ರನಾಥ ರಾಯ ಇವರ ಸಕ್ರಿಯ ಸಹಭಾಗಿತ್ವವಿತ್ತು.

1925ರಲ್ಲಿ ಭಾರತದಲ್ಲಿ ಸಾಮ್ಯವಾದಿ ಪಕ್ಷದ ಸ್ಥಾಪನೆಯಾಯಿತು. ಕಾರ್ಮಿಕರ ಮತ್ತು ರೈತರ ಹೋರಾಟದ ಸಂಘಟನೆಗಳನ್ನು ಸ್ಥಾಪಿಸುವ ಕಾರ್ಯವನ್ನು ಸಾಮ್ಯವಾದಿ ತರುಣರು ಮಾಡಿದರು. ಸರಕಾರಕ್ಕೆ ಸಾಮ್ಯವಾದಿ ಚಳುವಳಿಯಿಂದ ಅಪಾಯವೆನಿಸ ತೊಡಗಿತು. ಸರಕಾರವು ಈ ಚಳುವಳಿಯನ್ನು ಹತ್ತಿಕ್ಕಬೇಕೆಂದು ನಿರ್ಧರಿಸಿತು. ಶ್ರೀಪಾದ ಅಮೃತ ಡಾಂಗೆ, ಮುಝಫ್ಫರ ಅಹಮದ, ಕೇಶವ ನೀಳಕಂಠ ಜೋಗಳೇಕರ ಮುಂತಾದವರನ್ನು ಬಂಧಿಸಲಾಯಿತು. ಬ್ರಿಟಿಶ ಆಡಳಿತವನ್ನು ಕಿತ್ತು ಹಾಕುವ ಒಳಸಂಚು ಮಾಡಿದ್ದಾರೆಂಬ ಆಪಾದನೆಯನ್ನು ಅವರ ಮೇಲೆ ಹೊರಿಸಲಾಯಿತು. ಅವರಿಗೆ ಬೇರೆ ಬೇರೆ ಶಿಕ್ಷೆಗಳನ್ನು ವಿಧಿಸಲಾಯಿತು. ಈ ಖಟ್ಲೆಯನ್ನು ಮೀರತನಲ್ಲಿ ನಡೆಸಲಾಯಿತು. ಆದ್ದರಿಂದ ಇದಕ್ಕೆ ಮೀರತ ಒಳಸಂಚಿನ ಖಟ್ಲೆ' ಎಂದು ಕರೆಯಲಾಗುತ್ತದೆ. ಮೀರತ ಖಟ್ಲೆಯ ನಂತರವೂ ಕಾರ್ಮಿಕ ಚಳುವಳಿಗಳ ಮೇಲಿನ ಸಾಮ್ಯವಾದಿಗಳ ಪ್ರಭಾವವು ಶಾಶ್ವತವಾಗಿ ಉಳಿಯಿತು.

**ಸ್ತ್ರೀಯರ ಚಳುವಳಿ :** ಭಾರತೀಯ ಸಮಾಜ ವ್ಯವಸ್ಥೆಯಲ್ಲಿ ಸ್ತ್ರೀಯರಿಗೆ ದ್ವಿತೀಯ ಸ್ಥಾನವಿತ್ತು. ಅನೇಕ ಅನಿಷ್ಟ ರೂಢಿ-ಪರಂಪರೆಗಳಿಂದಾಗಿ ಅವರ ಮೇಲೆ ಅನ್ಯಾಯವಾಗುತ್ತಿತ್ತು; ಆದರೆ ಆಧುನಿಕ ಯುಗದಲ್ಲಿ ಇದರ ವಿರುದ್ಧ ಜಾಗೃತಿಯಾಗತೊಡಗಿತು. ಸ್ತ್ರೀಯರ ಬಗೆಗಿನ ಸುಧಾರಣಾ ಚಳುವಳಿಯಲ್ಲಿ ಕೆಲವು ಪುರುಷ ಸುಧಾರಕರು ನೇತೃತ್ವವಹಿಸಿದರು. ಕಾಲಾಂತರದಲ್ಲಿ ಸ್ತ್ರೀಯರ ನೇತೃತ್ವ ಮುಂದೆ ಬರತೊಡಗಿತು. ಅವರ ಸ್ವತಂತ್ರ ಸಂಸ್ಥೆ – ಸಂಘಟನೆಗಳು ಸ್ಥಾಪನೆಯಾಗಲಾರಂಭಿಸಿದವು. ಪಂಡಿತಾ ರಮಾಬಾಯಿಯವರು ಸ್ಥಾಪಿಸಿದ 'ಆರ್ಯ ಮಹಿಲಾ ಸಮಾಜ' ಮತ್ತು 'ಶಾರದಾ ಸದನ' ಈ ಸಂಸ್ಥೆಗಳು, ಅದರಂತೆ ರಮಾಬಾಯಿ ರಾನಡೆಯವರು ಸ್ಥಾಪಿಸಿದ 'ಸೇವಾಸದನ ಸಂಸ್ಥೆ' ಇವು ಅದರ ಉದಾಹರಣೆಗಳಾಗಿವೆ. 'ಭಾರತ ಮಹಿಲಾ ಪರಿಷತ್ತು' (1904), 'ಆಲ್ ಇಂಡಿಯಾ ವುಮನ್ಸ್ ಕಾನ್ಫರನ್ಸ್' (1927) ಈ ಸಂಸ್ಥೆಗಳೂ ಸ್ಥಾಪನೆಯಾದವು. ಅದರಿಂದಾಗಿ ಈ ಸಂಸ್ಥಾತ್ಮಕ ಕಾರ್ಯವು ರಾಷ್ಟ್ರಮಟ್ಟದ ವರೆಗೆ ಹೋಗಿ ತಲುಪಿತು. ವಾರಸಾ ಹಕ್ಕು, ಮತದಾನದ ಹಕ್ಕು ಮುಂತಾದ ಸಮಸ್ಯೆಗಳನ್ನು ಕುರಿತು ಈ ಸಂಘಟನೆಗಳ ಮುಖಾಂತರ ಸ್ತ್ರೀಯರು ಸಂಘರ್ಷ ಮಾಡತೊಡಗಿದರು.



ಪಂಡಿತಾ ರಮಾಬಾಯಿ



ರಮಾಬಾಯಿ ರಾನಡೆ

ರಖಮಾಬಾಯಿ ಜನಾರ್ದನ ಸಾವೆ ಇವರು ಭಾರತಕ್ಕೆ ವೈದ್ಯಕೀಯ ಸೇವೆಯನ್ನು ನೀಡುವ ಪ್ರಥಮ ಮಹಿಳಾ ಡಾಕ್ಟರರು. ಅವರು ಸ್ತ್ರೀಯರ ಆರೋಗ್ಯವನ್ನು ಕುರಿತು ಉಪನ್ಯಾಸಗಳನ್ನು ನೀಡುತ್ತಿದ್ದರು. ಅದರಂತೆ ಅವರು ರಾಜಕೋಟ ಎಂಬಲ್ಲಿ ರೆಡ್ ಕ್ರಾಸ್ ಸೊಸೈಟಿಯ ಶಾಖೆಯನ್ನು ಆರಂಭಿಸಿದರು.



ಡಾ. ರಕಮಾಬಾಯಿ ಸಾವೆ

ಇಪ್ಪತ್ತನೆಯ ಶತಮಾನದಲ್ಲಿ ಸಾರ್ವಜನಿಕ ಜೀವನದಲ್ಲಿ ಸ್ತ್ರೀಯರ ಸಹಭಾಗಿತ್ವವು ಹೆಚ್ಚತ್ತೊಡಗಿತು. ರಾಷ್ಟ್ರೀಯ ಚಳುವಳಿಯಲ್ಲಿ ಮತ್ತು ಕ್ರಾಂತಿಕಾರಕ ಚಟುವಟಿಕೆಗಳಲ್ಲಿ ಸ್ತ್ರೀಯರ ಸಹಭಾಗಿತ್ವವು ಅಮೂಲ್ಯವಾಗಿತ್ತು. 1935ರ ಕಾನೂನಿನ ನಂತರ ಪ್ರಾಂತೀಯ ಮಂತ್ರಿ ಮಂಡಳದಲ್ಲಿಯೂ ಸ್ತ್ರೀಯರ ಸಮಾವೇಶವಾಯಿತು. ಸ್ವಾತಂತ್ರ್ಯ ಪ್ರಾಪ್ತಿಯ ನಂತರ ಭಾರತೀಯ ಸಂವಿಧಾನದಲ್ಲಿ ಸ್ತ್ರೀ ಪುರುಷ ಸಮಾನತೆಯ ತತ್ವವನ್ನು ಸ್ಪಷ್ಟವಾಗಿ ಉಲ್ಲೇಖಿಸಲಾಯಿತು.

**ಗೊತ್ತಿದೆಯೇ ನಿಮಗೆ ?**


**ಡಾ. ಆನಂದಿಬಾಯಿ ಜೋಶಿ :** ಪ್ರಥಮ ಭಾರತೀಯ ಮಹಿಳಾ ಡಾಕ್ಟರ, ಅವರ ಮಗನು 10 ದಿವಸದವನಿರುವಾಗಲೇ ಮರಣ ಹೊಂದಿದನು. ಈ ಮನದ ಕೊರೆತವು ಅವರನ್ನು ವೈದ್ಯಕೀಯ ಶಿಕ್ಷಣದ ಕಡೆಗೆ ಸೆಳೆದೊಯ್ಯಲು ಕಾರಣವಾಯಿತು. ಮಾರ್ಚ 1886ರಲ್ಲಿ ಅವರು ಎಮ್.ಡಿ. ಪದವಿಯನ್ನು ಪಡೆದರು. ಆನಂದೀಬಾಯಿಯವರು ಭಾರತಕ್ಕೆ ಮರಳುವಾಗ ಅವರಿಗೆ ಕ್ಷಯರೋಗವಾಯಿತು. ಮುಂದೆ 16 ಫೆಬ್ರುವರಿ 1887ರಂದು ಪುಣೆಯಲ್ಲಿ ಅವರ ನಿಧನವಾಯಿತು.



ಡಾ. ಆನಂದಿಬಾಯಿ ಜೋಶಿ

**ದಲಿತರ ಚಳುವಳಿ :** ಭಾರತದಲ್ಲಿಯ ಸಮಾಜ ರಚನೆಯು ವಿಷಮತೆಯ ಮೇಲೆ ಆಧಾರಿತವಾಗಿತ್ತು. ಸಮಾಜದಲ್ಲಿ ದಲಿತರಿಗೆ ದೊರೆಯುವ ಅನ್ಯಾಯಕಾರಕ ವರ್ತನೆಯ ವಿರುದ್ಧ ಮಹಾತ್ಮಾ ಜ್ಯೋತಿರಾವ ಫುಲೆ, ನಾರಾಯಣ ಗುರು ಮುಂತಾದ ಸಮಾಜ ಸುಧಾರಕರು ಜನಜಾಗೃತಿಯನ್ನು ಮಾಡಿದರು. ಮಹಾತ್ಮಾ ಫುಲೆಯವರ ಹೇಳಿಕೆಗೆ ಅನುಸಾರವಾಗಿ ಗೋಪಾಳಬಾಬಾ ವಲಂಗಕರ, ಶಿವರಾಮ ಜಾನಬಾ ಕಾಂಬಳೆ ಇವರು ಅಸ್ಪೃಶ್ಯತಾ ನಿವಾರಣೆಯ ಕಾರ್ಯ ಮಾಡಿದರು. ಗೋಪಾಳಬಾಬಾ ವಲಂಗಕರ ಇವರು ಕ್ರಿ.ಶ. 1888ರಲ್ಲಿ 'ವಿಟಾಳ ವಿಧ್ವಂಸನ' ಎಂಬ ಪುಸ್ತಕದಲ್ಲಿ ಅಸ್ಪೃಶ್ಯತೆಯ ಖಂಡನೆ ಮಾಡಿದರು. ಶಿವರಾಮ ಜಾನಬಾ ಕಾಂಬಳೆ ಇವರು 1 ಜುಲೈ 1908ರಂದು 'ಸೋಮವಂಶೀಯ ಮಿತ್ರ' ಎಂಬ ಮಾಸಪತ್ರಿಕೆಯನ್ನು ಆರಂಭಿಸಿದರು. ಮುರಳಿ ಮತ್ತು ಜೋಗಿತಿಯವರ ಸಮಸ್ಯೆಗಳನ್ನು ಬಯಲಿಗೆಳೆದರು. ಅದರಂತೆ ದೇವದಾಸಿಯರ ವಿವಾಹದ ಸಲುವಾಗಿ ಮುಂದಾಳುತನ ವಹಿಸಿದರು. ತಮಿಳುನಾಡಿನಲ್ಲಿ ಪೆರಿಯಾರ ರಾಮಸ್ವಾಮಿಯವರು ಅಸ್ಪೃಶ್ಯತಾ ನಿರ್ಮೂಲನೆಯ ಚಳುವಳಿಯನ್ನು ಆರಂಭಿಸಿದರು.

ಮಹರ್ಷಿ ವಿಠ್ಠಲ ರಾಮಜಿ ಶಿಂದೆಯವರು ದಲಿತರ ಪ್ರಗತಿಗಾಗಿ 1906ರಲ್ಲಿ 'ಡಿಪ್ರೆಸ್ಡ್ ಕ್ಲಾಸೆಸ್ ಮಿಶನ್' ಎಂಬ ಸಂಸ್ಥೆಯನ್ನು ಆರಂಭಿಸಿದರು. ದಲಿತರನ್ನು ಸ್ವಾಭಿಮಾನಿ, ಸುಶಿಕ್ಷಿತ ಮತ್ತು ಉದ್ಯಮಶೀಲರನ್ನಾಗಿ ಮಾಡುವುದು ಅವರ ಕಾರ್ಯದ ಮಹತ್ವದ ಭಾಗವಾಗಿತ್ತು ಹಾಗೂ ಉಚ್ಚ ವರ್ಣೀಯರ ಮನದಲ್ಲಿಯ ದಲಿತರ ಬಗೆಗಿನ ಭ್ರಾಮಕ ತಿಳುವಳಿಕೆಯನ್ನು ನಷ್ಟಪಡಿಸುವುದು ಆ ಕಾರ್ಯದ ಎರಡನೆಯ ಭಾಗವಾಗಿತ್ತು. ಅದಕ್ಕಾಗಿ ಅವರು ಮುಂಬಯಿಯ ಪರಳ ಮತ್ತು ದೇವನಾರ ಭಾಗಗಳಲ್ಲಿ ಮರಾಠಿ ಶಾಲೆ ಮತ್ತು ಉದ್ಯೋಗಶಾಲೆಗಳನ್ನು ಆರಂಭಿಸಿದರು. ಅವರು ಪುಣೆಯ ಪರ್ವತಿ ಮಂದಿರದಲ್ಲಿ ಪ್ರವೇಶ ಸತ್ಯಾಗ್ರಹ, ದಲಿತರ ಕೃಷಿ ಪರಿಷತ್ತು ಸಂಯುಕ್ತ ಮತಕ್ಷೇತ್ರ ಯೋಜನೆ ಇತ್ಯಾದಿಗಳನ್ನು ಕುರಿತು ದಲಿತ ವರ್ಗದ ಹಿತದ ದೃಷ್ಟಿಯಿಂದ ಸಕ್ರಿಯವಾಗಿ ಭಾಗವಹಿಸುತ್ತಿದ್ದರು.



ಮಹರ್ಷಿ ವಿಠ್ಠಲ ರಾಮಜಿ ಶಿಂದೆ

ರಾಜರ್ಷಿ ಶಾಹೂ ಮಹಾರಾಜರು ಡಾ. ಬಾಬಾಸಾಹೇಬ ಅಂಬೇಡಕರರ ನೇತೃತ್ವಕ್ಕೆ ಬೆಂಬಲ ನೀಡಿದರು. ಅವರ ಕಾಲದಲ್ಲಿ ಆರಂಭವಾದ ಬ್ರಾಹ್ಮಣೇತರ ಚಳುವಳಿಯ ನೇತೃತ್ವವನ್ನು ಅವರು ವಹಿಸಿದರು. ರಾಜರ್ಷಿ ಶಾಹೂ ಮಹಾರಾಜರು ಕೊಲ್ಹಾಪೂರ ಸಂಸ್ಥಾನದಲ್ಲಿ ಮೀಸಲಾತಿಯ ಕ್ರಾಂತಿಕಾರಿ ಜಾಹೀರುನಾಮೆಯನ್ನು ಹೊರಡಿಸಿದರು. ಉಚಿತ ಮತ್ತು ಕಡ್ಡಾಯದ ಪ್ರಾಥಮಿಕ ಶಿಕ್ಷಣದ ಕಾನೂನು ಮಾಡಿದರು. ಅವರು ಜಾತಿಭೇದ ನಿರ್ಮೂಲನೆಗಾಗಿ ಗಣನೀಯ ಕಾರ್ಯ ಮಾಡಿದರು. ರೋಟೀಬಂದಿ, ಬೇಟೀಬಂದಿ ಮತ್ತು ವ್ಯವಸಾಯ ಬಂದಿ ಎಂಬ ಮೂರು ನಿರ್ಬಂಧಗಳು ಜಾತಿ ವ್ಯವಸ್ಥೆಯಲ್ಲಿದ್ದವು. ಈ ಸಂದರ್ಭದಲ್ಲಿ ಸಭೆ, ಪರಿಷತ್ತುಗಳ ಮೂಲಕ ದಲಿತ ಜನರ ಕೈಯಿಂದ ಅನ್ನವನ್ನು ಸ್ವೀಕರಿಸಿ ಶಾಹೂ ಮಹಾರಾಜರು ರೋಟೀಬಂದಿಯನ್ನು ಬಹಿರಂಗವಾಗಿ ವಿರೋಧಿಸಿದರು. ಬೇಟೀಬಂದಿಯ ನಿರ್ಬಂಧವನ್ನು ಸಮಾಜದಲ್ಲಿ ಎಲ್ಲಿಯ ವರೆಗೆ ಪಾಲಿಸಲಾಗುತ್ತದೆಯೋ ಅಲ್ಲಿಯ ವರೆಗೆ ಜಾತಿಭೇದವು ಸಮೂಲ ನಷ್ಟವಾಗಲಾರದು ಎಂಬುದು ಶಾಹೂ ಮಹಾರಾಜರ ಊಹೆಯಾಗಿತ್ತು. ಅವರು ತಮ್ಮ ಸಂಸ್ಥಾನದಲ್ಲಿ ಅಂತರಜಾತೀಯ ವಿವಾಹಕ್ಕೆ ಕಾನೂನುಬದ್ಧ ಮಾನ್ಯತೆ ನೀಡುವ ಕಾಯ್ದೆಯನ್ನು ಮಂಜೂರು ಮಾಡಿದರು. 22 ಫೆಬ್ರುವರಿ 1918ರಂದು ಕೊಲ್ಹಾಪೂರ ಸರಕಾರದ ಗ್ಯಾಝೆಟ್‌ನಲ್ಲಿ ಜಾಹೀರುನಾಮೆಯು ಪ್ರಸಿದ್ಧವಾಗಿ ಸಂಸ್ಥಾನದಲ್ಲಿಯ 'ಬಲೂತೆದಾರಿ ಪದ್ಧತಿ'ಯನ್ನು ನಷ್ಟಪಡಿಸಲಾಯಿತು. ಯಾವುದೇ ವ್ಯವಸಾಯವನ್ನು ಯಾರಿಗೂ ಮಾಡುವ ಅನುಮತಿಯನ್ನು ನೀಡಲಾಯಿತು. ಶಾಹೂ ಮಹಾರಾಜರು ವ್ಯವಸಾಯ ಸ್ವಾತಂತ್ರ್ಯವನ್ನು ನೀಡಿ ಒಂದು ಪ್ರಕಾರದ ಸಾಮಾಜಿಕ ಗುಲಾಮಗಿರಿಯಿಂದ ಜನರನ್ನು ಮುಕ್ತಗೊಳಿಸಿದರು.



ರಾಜರ್ಷಿ ಶಾಹೂ ಮಹಾರಾಜ



ಠಕ್ಕರ ಬಪ್ಪಾ

ದಕ್ಷಿಣ ಭಾರತದಲ್ಲಿ ಜಸ್ಟಿಸ ಪಕ್ಷವು ಸಾಮಾಜಿಕ ಸಮತೆಗಾಗಿ ಅಮೂಲ್ಯವಾದ ಕಾರ್ಯ ಮಾಡಿದರು. ಮಹಾತ್ಮಾ ಗಾಂಧಿಯವರು ಅಸ್ಪೃಶ್ಯತೆಯ ಸಮಸ್ಯೆಯನ್ನು ಕೈಗೆತ್ತಿಕೊಂಡು ಅದನ್ನು ಕಾಂಗ್ರೆಸ ಪಕ್ಷದ ವೇದಿಕೆಯ ಮೇಲೆ ಮಂಡಿಸಿದರು. ಯೆರವಡಾ ಸೆರೆಮನೆಯಲ್ಲಿರುವಾಗ ಸನಾತನ ಹಿಂದೂ ಪಂಡಿತರ ಜೊತೆ ವಾದಿಸಿ ಅಸ್ಪೃಶ್ಯತೆಗೆ ಶಾಸ್ತ್ರಾಧಾರವಿಲ್ಲವೆಂದು ಪ್ರತಿಪಾದಿಸಿದರು. ಅವರು ಹರಿಜನ ಸೇವಕ ಸಂಘಕ್ಕೆ ಪ್ರೇರಣೆ ನೀಡಿದರು. ಅವರಿಂದ ಪ್ರೇರಣೆಯನ್ನು ಪಡೆದು ಅಮೃತಲಾಲ ವಿಠ್ಠಲದಾಸ ಠಕ್ಕರ ಉರ್ಫ್ ಠಕ್ಕ ಬಪ್ಪಾ, ಅಪ್ಪಾಸಾಹೇಬ ಪಟವರ್ಧನ ಮುಂತಾದ ಕಾರ್ಯಕರ್ತರು ಸಮತೆಯ ಕಾರ್ಯದಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡರು.

ಡಾ. ಬಾಬಾಸಾಹೇಬ ಅಂಬೇಡಕರರ ನೇತೃತ್ವದಲ್ಲಿ ದಲಿತರ ಸಂಘರ್ಷ ಆರಂಭವಾಯಿತು. ಸ್ವಾತಂತ್ರ್ಯ, ಸಮತೆ ಮತ್ತು ಬಂಧುತ್ವ ಈ ತತ್ವಗಳ ಮೇಲೆ ಸಮಾಜದ ನಿರ್ಮಿತಿ ಮಾಡುವುದು ಡಾ. ಅಂಬೇಡಕರರ ಧ್ಯೇಯವಾಗಿತ್ತು. ಜಾತಿ ಸಂಸ್ಥೆಯು ಸಮೂಲ ನಷ್ಟವಾಗದ ಹೊರತು ದಲಿತರ ಮೇಲಿನ ಅನ್ಯಾಯ ಮತ್ತು ವಿಷಮತೆ ಕೊನೆಗೊಳ್ಳಲಾರದು ಎಂಬ ಭರವಸೆ ಅವರಿಗಿತ್ತು. ಸಾಮಾಜಿಕ ಸಮತೆಯು ದಲಿತರ ಹಕ್ಕಾಗಿದೆ ಎಂಬುದು ಅವರ ನಂಬಿಕೆಯಾಗಿತ್ತು. ಸ್ವಾಭಿಮಾನದ ಮೇಲೆ ಆಧಾರಿತವಾದ ಚಳುವಳಿ ಮಾಡುವುದು ಅವರ ವಿಚಾರವಾಗಿತ್ತು. ಈ ನಿಲುವಿನಿಂದಾಗಿ ಅವರು ಜುಲೈ 1924ರಲ್ಲಿ 'ಬಹಿಷ್ಕೃತ ಹಿತಕಾರಿಣಿ ಸಭೆ'ಯನ್ನು ಸ್ಥಾಪಿಸಿದರು. ಅವರು ತಮ್ಮ ಅನುಯಾಯಿಗಳಿಗೆ 'ಕಲಿಯಿರಿ, ಸಂಘಟಿತರಾಗಿರಿ ಮತ್ತು ಸಂಘರ್ಷ ಮಾಡಿರಿ' ಎಂಬ ಸ್ಫೂರ್ತಿದಾಯಕ ಸಂದೇಶವನ್ನು ನೀಡಿದರು.

ಸಾರ್ವಜನಿಕ ಜಲಾಶಯಗಳನ್ನು ಅಸ್ಪೃಶ್ಯರಿಗಾಗಿ ಮುಕ್ತಗೊಳಿಸುವ ಮಸೂದೆಯನ್ನು ಬಾಬಾಸಾಹೇಬ ಬೋಲೆಯವರು ಮುಂಬಯಿ ಪ್ರಾಂತದ ಶಾಸಕಾಂಗದಲ್ಲಿ ಪಾಸು ಮಾಡಿಕೊಂಡಿದ್ದರು. ಹೀಗಿದ್ದರೂ ಪ್ರತ್ಯಕ್ಷದಲ್ಲಿ ದಲಿತರಿಗಾಗಿ ಜಲಾಶಯಗಳು ಮುಕ್ತವಾಗಲಿಲ್ಲ. ಆದ್ದರಿಂದ ಡಾ. ಬಾಬಾಸಾಹೇಬ ಅಂಬೇಡಕರ ಮತ್ತು ಅವರ ಅನುಯಾಯಿಗಳು ಮಹಾಡದಲ್ಲಿ ಚವದಾರ ಕೆರೆಯ ಬಳಿ ಸತ್ಯಾಗ್ರಹ ಮಾಡಿದರು. ಅವರು ವಿಷಮತೆಯನ್ನು ಪುರಸ್ಕರಿಸುವ 'ಮನುಸ್ಮೃತಿ' ಗ್ರಂಥವನ್ನು ಸುಟ್ಟು ಹಾಕಿದರು. ನಾಶಿಕದ ಕಾಳಾರಾಮ ಮಂದಿರದಲ್ಲಿ ದಲಿತರಿಗೆ ಪ್ರವೇಶ ದೊರೆಯಬೇಕೆಂದು 1930ರಲ್ಲಿ ಅವರು ಸತ್ಯಾಗ್ರಹವನ್ನು ಆರಂಭಿಸಿದರು. ಈ ಸತ್ಯಾಗ್ರಹದ ನೇತೃತ್ವವನ್ನು ಕರ್ಮವೀರ ದಾದಾಸಾಹೇಬ ಗಾಯಕವಾಡ ಇವರು ವಹಿಸಿದ್ದರು.

ವರ್ತಮಾನ ಪತ್ರಗಳು ಡಾ. ಬಾಬಾಸಾಹೇಬ ಅಂಬೇಡಕರರ ಚಳುವಳಿಯ ಅವಿಭಾಜ್ಯ ಅಂಗಗಳಾಗಿದ್ದವು. ಸಮಾಜದಲ್ಲಿ ಜಾಗೃತಿಯನ್ನುಂಟು ಮಾಡಲು ಮತ್ತು ದಲಿತರ ದುಃಖವನ್ನು ಸಮಾಜಕ್ಕೆ ತೋರಿಸಿಕೊಡಲು ಡಾ. ಬಾಬಾಸಾಹೇಬ ಅಂಬೇಡಕರರು 'ಮೂಕನಾಯಕ' 'ಬಹಿಷ್ಕೃತ



ಮಹಾಡದ ಚವದಾರ ಕೆರೆಯ ಸತ್ಯಾಗ್ರಹ

ಭಾರತ, 'ಜನತಾ' 'ಸಮತಾ' ಎಂಬ ವರ್ತಮಾನ ಪತ್ರಗಳನ್ನು ಆರಂಭಿಸಿದರು.

ಡಾ. ಬಾಬಾಸಾಹೇಬ ಅಂಬೇಡಕರರು 'ಸ್ವತಂತ್ರ ಮಜೂರ ಪಕ್ಷ'ವನ್ನು ಸ್ಥಾಪಿಸಿದರು. ಕಾರ್ಮಿಕರ ಹಿತವನ್ನು ಬಯಸದ ಕಾನೂನುಗಳನ್ನು ಶಾಸಕಾಂಗದಲ್ಲಿ ವಿರೋಧಿಸಿದರು. ದಲಿತರ ಸಮಸ್ಯೆಗಳನ್ನು ಪ್ರಭಾವಶಾಲಿಯಾಗಿ ಮಂಡಿಸಲು ಅವರು 1942ರಲ್ಲಿ 'ಶೆಡ್ಯೂಲ್ಡ್ ಕಾಸ್ಟ ಫೆಡರೇಶನ್' ಸ್ಥಾಪಿಸಿದರು. ಆಧುನಿಕ ಭಾರತದಲ್ಲಿ ಸಮತೆಯ ಮೇಲೆ ಆಧಾರಿತವಾದ ಸಮಾಜವನ್ನು ನಿರ್ಮಿಸುವ ಕಾರ್ಯದಲ್ಲಿ ಡಾ. ಬಾಬಾಸಾಹೇಬ ಅಂಬೇಡಕರರು ಭಾರತೀಯ ಸಂವಿಧಾನದ ಮುಖಾಂತರ ಮಹತ್ವದ ಕೊಡುಗೆಯನ್ನು ನೀಡಿದರು. 1956ರಲ್ಲಿ ನಾಗಪೂರದಲ್ಲಿ ಅವರು ತಮ್ಮ ಅಸಂಖ್ಯ ಅನುಯಾಯಿಗಳೊಂದಿಗೆ ಮಾನವತೆಯನ್ನು ಮತ್ತು ಸಮಾನತೆಯನ್ನು ಪುರಸ್ಕರಿಸುವ ಬೌದ್ಧ ಧರ್ಮವನ್ನು ಸ್ವೀಕರಿಸಿದರು.

ಆಧುನಿಕ ಭಾರತದ ನಿರ್ಮಾಣ ಕಾರ್ಯದಲ್ಲಿ ಸಮತೆಯ ಸಲುವಾಗಿ ಮಾಡಿದ ಹೋರಾಟಕ್ಕೆ ಮಹತ್ವದ ಸ್ಥಾನವಿದೆ.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ದುಕೊಂಡು ಕೆಳಗಿನ ವಾಕ್ಯಗಳನ್ನು ಪುನಃ ಬರೆಯಿರಿ.**

(ಲಾಲ ಲಜಪತರಾಯ, ಸಾನೆ ಗುರೂಜಿ, ರಖಮಾಬಾಯಿ ಜನಾರ್ದನ ಸಾವೆ)

(1) ರಾಜಕೋಟ ಎಂಬಲ್ಲಿ ರೆಡ್‌ಕ್ರಾಸ್ ಸೊಸೈಟಿಯ ಶಾಖೆಯನ್ನು ........................ ಇವರು ಆರಂಭಿಸಿದರು.

(2) ........................ ಇವರು ಅಮಳನೇರ ಗಿರಣಿ ಕಾರ್ಮಿಕ ಯುನಿಯನ್ನಿನ ಅಧ್ಯಕ್ಷರಾಗಿದ್ದರು.

(3) ........................ ಇವರು ಆಯ್‌ಟಕದ ಮೊದಲನೆಯ ಅಧಿವೇಶನದ ಅಧ್ಯಕ್ಷರಾಗಿದ್ದರು.

**2. ಟಿಪ್ಪಣಿ ಬರೆಯಿರಿ.**

(1) ಮಹರ್ಷಿ ವಿಠ್ಠಲ ರಾಮಜಿ ಶಿಂದೆಯವರ ಸಾಮಾಜಿಕ ಕಾರ್ಯಗಳು.

(2) ರಾಜರ್ಷಿ ಶಾಹೂ ಮಹಾರಾಜರು ಕೊಲ್ಹಾಪೂರ ಸಂಸ್ಥಾನದಲ್ಲಿ ಮಾಡಿದ ಸುಧಾರಣೆಗಳು.

**3. ಕೆಳಗಿನ ವಿಧಾನಗಳನ್ನು ಕಾರಣ ಸಹಿತ ಸ್ಪಷ್ಟಪಡಿಸಿರಿ.**

(1) ಸರಕಾರವು ಸಾಮ್ಯವಾದಿ ಚಳುವಳಿಯನ್ನು ಹತ್ತಿಕ್ಕಬೇಕೆಂದು ನಿರ್ಧರಿಸಿತು.

(2) ಡಾ. ಬಾಬಾಸಾಹೇಬ ಅಂಬೇಡಕರ ಇವರು ಮೂಕನಾಯಕ, ಬಹಿಷ್ಕೃತ ಭಾರತ ಮುಂತಾದ ವರ್ತಮಾನ ಪತ್ರಗಳನ್ನು ಆರಂಭಿಸಿದರು.

(3) ರಾಷ್ಟ್ರವ್ಯಾಪಿ ಕಾರ್ಮಿಕ ಸಂಘಟನೆಗಳ ಅವಶ್ಯಕತೆ ಉಂಟಾಗತೊಡಗಿತು.

**4. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ಆಧುನಿಕ ಭಾರತದ ನಿರ್ಮಾಣ ಕಾರ್ಯದಲ್ಲಿ ಸಮತೆಯ ಸಲುವಾಗಿ ಮಾಡಿದ ಹೋರಾಟವು ಏಕೆ ಮಹತ್ವದ್ದಾಗಿದೆ?

(2) ಪೂರ್ವ ಖಾನದೇಶದಲ್ಲಿ ಸಾನೆ ಗುರೂಜಿಯವರು ಮಾಡಿದ ಕಾರ್ಯಗಳನ್ನು ಬರೆಯಿರಿ.

(3) ಕಾರ್ಮಿಕರ ಹೋರಾಟಗಳು ರಾಷ್ಟ್ರೀಯ ಚಳುವಳಿಗೆ ಹೇಗೆ ಪೂರಕವಾದವು?

(4) ಸ್ತ್ರೀಯರ ಬಗೆಗಿನ ಸುಧಾರಣಾ ಚಳುವಳಿಯ ಸ್ವರೂಪವನ್ನು ಸ್ಪಷ್ಟಪಡಿಸಿರಿ.

### ಉಪಕ್ರಮ

(1) ಡಾ. ಆನಂದಿಬಾಯಿ ಜೋಶಿಯವರ ಜೀವನವನ್ನು ಕುರಿತ ಪುಸ್ತಕವನ್ನು ಓದಿರಿ.

(2) ರಾಜರ್ಷಿ ಶಾಹೂ ಮಹಾರಾಜ ಇವರ ಜೀವನ ಚರಿತ್ರೆಯನ್ನು ಓದಿರಿ.

AH1H76

# 12. ಸ್ವಾತಂತ್ರ್ಯ ಪ್ರಾಪ್ತಿ

ಎರಡನೆಯ ಮಹಾಯುದ್ಧದ ಕಾಲದಲ್ಲಿ ಭಾರತದ ಸ್ವಾತಂತ್ರ್ಯ ಹೋರಾಟವು ವ್ಯಾಪಕವಾಗಿತ್ತು. ಭಾರತದ ಸ್ವಾತಂತ್ರ್ಯದ ಬೇಡಿಕೆಯ ಆವೇಶವು ಹೆಚ್ಚುತ್ತಿತ್ತು. ಇದನ್ನು ಗಂಭೀರವಾಗಿ ಪರಿಗಣಿಸುದರ ಅವಶ್ಯಕತೆಯಿದೆ ಎಂಬುದರ ಅರಿವು ಬ್ರಿಟಿಶ ಆಡಳಿತಗಾರರಿಗೆ ಆಯಿತು. ಆ ದೃಷ್ಟಿಯಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವ ಸಲುವಾಗಿ ಬ್ರಿಟಿಶ ಸರಕಾರವು ವಿವಿಧ ಯೋಜನೆಗಳನ್ನು ಸಿದ್ಧಗೊಳಿಸತೊಡಗಿತು.

ಧರ್ಮನಿರಪೇಕ್ಷತೆಯ ತತ್ವದ ಆಧಾರದ ಮೇಲೆ ರಾಷ್ಟ್ರೀಯ ಸಭೆಯ ಸ್ಥಾಪನೆಯಾಗಿತ್ತು. ರಾಷ್ಟ್ರೀಯ ಆಂದೋಲನದಲ್ಲಿ ಎಲ್ಲ ಜಾತಿ, ಧರ್ಮಗಳ ಜನರು ಭಾಗವಹಿಸಿದ್ದರು. ಈ ಚಳುವಳಿಯನ್ನು ದುರ್ಬಲಗೊಳಿಸುವ ಸಲುವಾಗಿ ಬ್ರಿಟಿಶರು 'ವಿಭಜಿಸಿ ಆಳು' ಎಂಬ ನೀತಿಯನ್ನು ಅನುಸರಿಸಿದರು. ಅದರ ಪರಿಣಾಮವಾಗಿ 'ಮುಸ್ಲಿಮ ಲೀಗ' ಸ್ಥಾಪಿಸಲ್ಪಟ್ಟಿತು.

1930ರಲ್ಲಿ ಡಾ. ಮುಹಮ್ಮದ ಇಕ್ಬಾಲ ಎಂಬ ಪ್ರಸಿದ್ಧ ಕವಿಯು ಸ್ವತಂತ್ರ ಮುಸ್ಲಿಮ ರಾಷ್ಟ್ರದ ವಿಚಾರವನ್ನು ಮಂಡಿಸಿದನು. ಮುಂದೆ ಚೌಧರಿ ರಹಮತ ಅಲಿ ಇವರು ಪಾಕಿಸ್ತಾನದ ಕಲ್ಪನೆಯನ್ನು ಮಂಡಿಸಿದರು. ಬ್ಯಾರಿಸ್ಟರ ಮಹಮ್ಮದ ಅಲಿ ಜೀನಾ ಇವರು ದ್ವಿರಾಷ್ಟ್ರ ಸಿದ್ಧಾಂತವನ್ನು ಮಂಡಿಸಿ ಪಾಕಿಸ್ತಾನ ಎಂಬ ಸ್ವತಂತ್ರ ಮುಸ್ಲಿಮ ರಾಷ್ಟ್ರದ ಬೇಡಿಕೆಯನ್ನು ಮಾಡಿದರು. ರಾಷ್ಟ್ರೀಯ ಸಭೆಯು ಕೇವಲ ಹಿಂದುಗಳ ಸಂಘಟನೆಯಾಗಿದೆ. ಅದರಿಂದ ಮುಸಲ್ಮಾನರಿಗೆ ಯಾವ ಲಾಭವೂ ಆಗಲಾರದು ಎಂಬ ಪ್ರಚಾರವನ್ನು ಬ್ಯಾ. ಜೀನಾ ಮತ್ತು ಮುಸ್ಲಿಮ ಲೀಗ್‌ನವರು ಆರಂಭಿಸಿದರು.

**ವೆವೆಲ್ ಯೋಜನೆ :** ಭಾರತದ ವೈಸರಾಯ ಲಾರ್ಡ್ ವೆವೆಲ್ ಇವರು ಜೂನ 1945ರಲ್ಲಿ ಒಂದು ಯೋಜನೆಯನ್ನು ತಯಾರಿಸಿದರು. ಈ ಯೋಜನೆಯಲ್ಲಿ ವಿವಿಧ ಏರ್ಪಾಟುಗಳಿದ್ದವು. ಅವುಗಳಲ್ಲಿ ಕೇಂದ್ರೀಯ ಮತ್ತು ಪ್ರಾಂತೀಯ ಶಾಸನ ಸಭೆಗಳಲ್ಲಿಯ ಮುಸ್ಲಿಮ, ದಲಿತ ಮತ್ತು ಅಲ್ಪಸಂಖ್ಯಾತರಿಗೆ ಯೋಗ್ಯ ಪ್ರತಿನಿಧಿತ್ವವನ್ನು ನೀಡಲಾಗುವುದು, ವೈಸರಾಯನ ಕಾರ್ಯನಿರ್ವಾಹಕ ಮಂಡಳದಲ್ಲಿ ಹಿಂದೂ ಮತ್ತು ಮುಸ್ಲಿಮ ಸದಸ್ಯರ ಸಂಖ್ಯೆಯು ಸಮಾನವಾಗಿರುವುದು, ಇಂಥ ಕೆಲವು ಪ್ರಮುಖ ಏರ್ಪಾಟುಗಳಿದ್ದವು. ಈ ಯೋಜನೆಯ ಬಗೆಗೆ ವಿಚಾರ ಮಾಡುವ ಸಲುವಾಗಿ ಸಿಮ್ಲಾ ಎಂಬಲ್ಲಿ ಭಾರತದಲ್ಲಿಯ ಪ್ರಮುಖ ರಾಜಕೀಯ ಪಕ್ಷಗಳ ಸಭೆಯನ್ನು ಆಯೋಜಿಸಲಾಗಿತ್ತು. ವೈಸರಾಯನ ಕಾರ್ಯ ನಿರ್ವಾಹಕ ಮಂಡಳದಲ್ಲಿಯ ಮುಸ್ಲಿಮ ಪ್ರತಿನಿಧಿಗಳ ಹೆಸರುಗಳನ್ನು ಸೂಚಿಸುವ ಅಧಿಕಾರವು ಕೇವಲ ಮುಸ್ಲಿಮ ಲೀಗ್‌ಗೆ ಮಾತ್ರ ಇರಬೇಕು ಎಂದು ಬ್ಯಾರಿಸ್ಟರ ಜೀನಾ ಆಗ್ರಹ ಮಾಡಿದರು. ರಾಷ್ಟ್ರೀಯ ಸಭೆಯು ಅದನ್ನು ವಿರೋಧಿಸಿತು. ಅದರಿಂದಾಗಿ ವೆವೆಲ್ ಯೋಜನೆಯು ಯಶಸ್ವಿಯಾಗಲಿಲ್ಲ.


**ತ್ರಿಮಂತ್ರಿ ಯೋಜನೆ :** ಎರಡನೆಯ ಮಹಾಯುದ್ಧದ ಸಮಾಪ್ತಿಯ ನಂತರ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಲು ಬ್ರಿಟಿಶ ಆಡಳಿತಾಧಿಕಾರಿಗಳು ಅನುಕೂಲತೆಯನ್ನು ತೋರಿಸಿದರು. ಬ್ರಿಟಿಶ ಪ್ರಧಾನ ಮಂತ್ರಿ ಆ್ಯಟ್ಲಿ ಇವರು ಪಾರ್ಲಿಮೆಂಟಿನಲ್ಲಿ ಭಾರತದ ಬಗೆಗಿನ ಧೋರಣೆಯನ್ನು ಸ್ಪಷ್ಟಪಡಿಸಿದರು. ಅದಕ್ಕನುಗುಣವಾಗಿ ಭಾರತೀಯರ ಸಂವಿಧಾನವನ್ನು ಸಿದ್ಧಪಡಿಸುವ ಭಾರತೀಯರ ಅಧಿಕಾರವನ್ನು ಮನ್ನಿಸಲಾಯಿತು. ಅಲ್ಪ ಸಂಖ್ಯಾತರ ಸಮಸ್ಯೆಯು ಭಾರತದ ಸ್ವಾತಂತ್ರ್ಯಕ್ಕೆ ಅಡೆತಡೆಯಾಗಲಾರದು ಎಂಬುದನ್ನು ಸ್ಪಷ್ಟಪಡಿಸಲಾಯಿತು. ಮಾರ್ಚ 1946ರಲ್ಲಿ ಪ್ಯಾಥಿಕ್ ಲಾರೆನ್ಸ್, ಸ್ಟಾಫರ್ಡ ಕ್ರಿಪ್ಸ್ ಮತ್ತು ಎ.ವ್ಹಿ. ಅಲೆಕ್ಸಾಂಡರ ಈ ಬ್ರಿಟಿಶ ಮಂತ್ರಿಗಳ ನಿಯೋಗವು ಭಾರತದ ಬಗೆಗಿನ ಇಂಗ್ಲಂಡಿನ ಯೋಜನೆಯನ್ನು ಭಾರತೀಯ ಮುಖಂಡರ ಮುಂದೆ ಮಂಡಿಸಿತು. ಅದಕ್ಕೆ ತ್ರಿಮಂತ್ರಿ ಯೋಜನೆ ಎನ್ನುತ್ತಾರೆ.

ಈ ಯೋಜನೆಯಲ್ಲಿಯ ಕೆಲವು ಏರ್ಪಾಟುಗಳು ರಾಷ್ಟ್ರೀಯ ಸಭೆಗೆ ಮಾನ್ಯವಿರಲಿಲ್ಲ. ಅದರಂತೆ ಮುಸ್ಲಿಮರ ಸ್ವತಂತ್ರ ರಾಜ್ಯವನ್ನು ಸ್ಥಾಪಿಸುವ ಏರ್ಪಾಟು ಈ ಯೋಜನೆಯಲ್ಲಿರಲಿಲ್ಲ. ಆದ್ದರಿಂದ ಮುಸ್ಲಿಮ ಲೀಗ ಕೂಡ ಅಸಂತುಷ್ಟವಾಗಿತ್ತು. ಇದರಿಂದಾಗಿ ತ್ರಿಮಂತ್ರಿ ಯೋಜನೆಯು ಸಂಪೂರ್ಣವಾಗಿ ಮಾನ್ಯವಾಗಲಿಲ್ಲ.

**ನೇರ ಕಾರ್ಯಾಚರಣೆಯ ದಿನ :** ಪಾಕಿಸ್ತಾನದ ಬೇಡಿಕೆಯು ಪೂರ್ಣವಾಗದಿರುವುದನ್ನು ಕಂಡು ಮುಸ್ಲಿಮ ಲೀಗ ಇದು ನೇರ ಕಾರ್ಯಾಚರಣೆ ಮಾಡಬೇಕೆಂದು ನಿರ್ಧರಿಸಿತು. ಅದಕ್ಕನುಸಾರವಾಗಿ 16 ಅಗಸ್ಟ 1946 ಈ ದಿನವನ್ನು ನೇರ ಕಾರ್ಯಾಚರಣೆಯ ದಿನವೆಂದು ಆಚರಿಸುವುದಾಗಿ ಮುಸ್ಲಿಮ ಲೀಗ ಜಾಹೀರು ಪಡಿಸಿತು. ಈ ದಿನ ಮುಸ್ಲಿಮ ಲೀಗ್‌ನ ಅನುಯಾಯಿಗಳು ಹಿಂಸಾತ್ಮಕ ಮಾರ್ಗವನ್ನು ಅನುಸರಿಸಿದರು. ದೇಶದ ವಿವಿಧ ಸ್ಥಳಗಳಲ್ಲಿ ಹಿಂದೂ-ಮುಸ್ಲಿಮ ದಂಗೆಗಳಾದವು. ಬಂಗಾಲ ಪ್ರಾಂತದ ನೋಆಖಾಲಿ ಭಾಗದಲ್ಲಿ ಭೀಷಣ ಹತ್ಯಾಕಾಂಡ ನಡೆಯಿತು. ಈ ಹಿಂಸಾಚಾರವನ್ನು ತಡೆಗಟ್ಟಲು ಗಾಂಧೀಜಿಯವರು ತಮ್ಮ ಜೀವದ ಹಂಗುದೊರೆದು ಅಲ್ಲಿಗೆ ಹೋದರು. ಅಲ್ಲಿ ಶಾಂತತೆಯನ್ನು ಸ್ಥಾಪಿಸುವ ಸಲುವಾಗಿ ಅವರು ಶಕ್ತಿ ಮೀರಿ ಪ್ರಯತ್ನಿಸಿದರು.

**ಹಂಗಾಮಿ ಸರಕಾರದ ಸ್ಥಾಪನೆ :** ದೇಶದಲ್ಲಿ ಹಿಂಸಾಚಾರದ ಜ್ವಾಲೆ ಪ್ರಜ್ವಲಿಸುತ್ತಿರುವಾಗ ವೈಸರಾಯ ವೆವೆಲ್ ಇವರು ಹಂಗಾಮಿ ಸರಕಾರದ ಸ್ಥಾಪನೆ ಮಾಡಿದರು. ಪಂ. ಜವಾಹರಲಾಲ ನೆಹರೂ ಇವರು ಈ ಸರಕಾರದ ಪ್ರಮುಖರಾಗಿದ್ದರು. ಹಂಗಾಮಿ ಸರಕಾರದಲ್ಲಿ ಸೇರಿಕೊಳ್ಳದಿರುವ ನಿರ್ಣಯವನ್ನು ಆರಂಭದ ಕಾಲದಲ್ಲಿ ಮುಸ್ಲಿಮ ಲೀಗ ಕೈಕೊಂಡಿತ್ತು. ಕೆಲವು ಸಮಯದ ನಂತರ ಮುಸ್ಲಿಮ ಲೀಗ ಹಂಗಾಮಿ ಸರಕಾರದಲ್ಲಿ ಸೇರ್ಪಡೆಯಾಯಿತು. ಆದರೆ ಮುಸ್ಲಿಮ ಲೀಗ ಮುಖಂಡರು ತಡೆಯೊಡ್ಡುವ ನಿಲುವನ್ನು ತಳೆದಿದ್ದರಿಂದ ಹಂಗಾಮಿ ಸರಕಾರದ ಆಡಳಿತವು ಸುಗಮವಾಗಿ ಸಾಗಲಿಲ್ಲ.

**ಮೌಂಟಬ್ಯಾಟನ್ ಯೋಜನೆ :** ಜೂನ 1948ಕ್ಕಿಂತ ಮೊದಲು ಇಂಗ್ಲಂಡ ಭಾರತದ ಮೇಲಿನ ತಮ್ಮ ಅಧಿಕಾರವನ್ನು ಬಿಟ್ಟು ಕೊಡುವುದು ಎಂದು ಇಂಗ್ಲಂಡಿನ ಪ್ರಧಾನ ಮಂತ್ರಿ ಆ್ಯಟ್ಲಿಯವರು ಘೋಷಣೆ ಮಾಡಿದರು. ಭಾರತದಲ್ಲಿಯ ಆಡಳಿತದ ಹಸ್ತಾಂತರದ ಹಿನ್ನೆಲೆಯಲ್ಲಿ ಲಾರ್ಡ್ ಮೌಂಟಬ್ಯಾಟನ್‌ರನ್ನು ಭಾರತದ ವೈಸರಾಯರೆಂದು ನೇಮಕ ಮಾಡಲಾಯಿತು. ಲಾರ್ಡ್ ಮೌಂಟಬ್ಯಾಟನ್‌ರು ಭಾರತದಲ್ಲಿಯ ಪ್ರಮುಖ ಮುಖಂಡರೊಡನೆ ವಿಚಾರ ವಿನಿಮಯ ಮಾಡಿದರು. ಆನಂತರ ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳನ್ನು ನಿರ್ಮಿಸುವ ಯೋಜನೆಯನ್ನು ಅವರು ಸಿದ್ಧಗೊಳಿಸಿದರು. ವಿಭಜನೆಗೆ ರಾಷ್ಟ್ರೀಯ ಸಭೆಯ ವಿರೋಧವಿತ್ತು. ದೇಶದ ಐಕ್ಯತೆಯು



ರಾಷ್ಟ್ರೀಯ ಸಭೆಯ ನಿಲುವಿನ ಮೂಲ ಆಧಾರವಾಗಿತ್ತು; ಆದರೆ ಮುಸ್ಲಿಮ ಲೀಗ ಪಾಕಿಸ್ತಾನದ ನಿರ್ಮಿತಿಗಾಗಿ ಹಟ ಹಿಡಿಯಿತು. ಹೀಗಾಗಿ ವಿಭಜನೆಯ ಹೊರತು ಬೇರೆ ಪರ್ಯಾಯವವೇ ಉಳಿಯಲಿಲ್ಲ. ರಾಷ್ಟ್ರೀಯ ಸಭೆಯು ಬೇರೆ ಉಪಾಯ ಕಾಣದೆ ವಿಭಜನೆಯ ನಿರ್ಣಯಕ್ಕೆ ಒಪ್ಪಿಗೆ ನೀಡಿತು.

**ಭಾರತದ ಸ್ವಾತಂತ್ರ್ಯದ ಕಾಯ್ದೆ :** ಮೌಂಟಬ್ಯಾಟನ್ ಯೋಜನೆಯ ಆಧಾರದ ಮೇಲಿಂದ 18 ಜುಲೈ 1947ರಂದು ಬ್ರಿಟಿಶ ಪಾರ್ಲಿಮೆಂಟು ಭಾರತದ ಸ್ವಾತಂತ್ರ್ಯದ ಕಾಯ್ದೆಯನ್ನು ಪಾಸು ಮಾಡಿತು. 15 ಅಗಸ್ಟ 1947ರಂದು ಭಾರತ ಮತ್ತು ಪಾಕಿಸ್ತಾನಗಳೆಂಬ ಎರಡು ಸ್ವತಂತ್ರ ರಾಷ್ಟ್ರಗಳು ಅಸ್ತಿತ್ವದಲ್ಲಿ ಬರುವವು. ಆ ನಂತರ ಅವುಗಳ ಮೇಲೆ ಬ್ರಿಟಿಶ ಪಾರ್ಲಿಮೆಂಟಿನ ಯಾವ ಅಧಿಕಾರವೂ ಉಳಿಯಲಾರದು. ಸಂಸ್ಥಾನಗಳ ಮೇಲಿನ ಬ್ರಿಟಿಶರ ಸ್ವಾಮಿತ್ವವು ಮುಕ್ತಾಯಗೊಳ್ಳುವುದು. ಅವು ಭಾರತ ಅಥವಾ ಪಾಕಿಸ್ತಾನದಲ್ಲಿ ಸೇರ್ಪಡೆಯಾಗಬಹುದು ಇಲ್ಲವೆ ಸ್ವತಂತ್ರವಾಗಿರಬಹುದು ಎಂಬ ಏರ್ಪಾಟುಗಳನ್ನು ಈ ಕಾಯ್ದೆಯಲ್ಲಿ ಮಾಡಲಾಯಿತು.

**ಸ್ವಾತಂತ್ರ್ಯ ಪ್ರಾಪ್ತಿ :** ಭಾರತೀಯ ಸ್ವಾತಂತ್ರ್ಯದ ಕಾಯ್ದೆಗನುಗುಣವಾಗಿ 15 ಅಗಸ್ಟ 1947ರಂದು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಲಾಯಿತು. 14 ಅಗಸ್ಟ 1947ರ ಮಧ್ಯರಾತ್ರಿ ದಿಲ್ಲಿಯ ಸಂಸತ್ ಭವನದ ಸಭಾಗೃಹದಲ್ಲಿ ಘಟನಾ ಸಮಿತಿಯ ಸಭೆ ನಡೆದಿತ್ತು. ಮಧ್ಯರಾತ್ರಿ ಹನ್ನೆರಡು ಗಂಟೆಯಾಯಿತು ಹಾಗೂ ಭಾರತದ ಪಾರತಂತ್ರ್ಯ ಕೊನೆಗೊಂಡಿತು. ಬ್ರಿಟಿಶರ ಯುನಿಯನ್ ಜಾಕ್ ಧ್ವಜವನ್ನು ಕೆಳಗಿಳಿಸಲಾಯಿತು. ಅದರ ಸ್ಥಾನದಲ್ಲಿ ಭಾರತದ ತ್ರಿವರ್ಣ ಧ್ವಜವನ್ನು ಹಾರಿಸಲಾಯಿತು. ಒಂದು ನೂರಾ ಐವತ್ತು ವರ್ಷಗಳ ಗುಲಾಮಗಿರಿಯಿಂದ ಭಾರತ ಸ್ವತಂತ್ರವಾಯಿತು.

ಸ್ವಾತಂತ್ರ್ಯಪ್ರಾಪ್ತಿಯ ಆನಂದವು ಪರಿಪೂರ್ಣವಾಗಿರಲಿಲ್ಲ. ದೇಶದ ವಿಭಜನೆಯಾಯಿತು. ಆ ಸಮಯದಲ್ಲಾದ ಭೀಕರ ಹಿಂಸಾಚಾರಗಳಿಂದಾಗಿ ಭಾರತೀಯರು ದುಃಖಿತರಾಗಿದ್ದರು. ಸ್ವಾತಂತ್ರ್ಯೋತ್ಸವದಲ್ಲಿ ಪಾಲ್ಗೊಳ್ಳದೇ ಗಾಂಧೀಜಿಯವರು ಬಂಗಾಲದಲ್ಲಿ ಜೀವದ ಪರಿವೆಯಿಲ್ಲದೆ ಪ್ರಯತ್ನಿಸುತ್ತಿದ್ದರು. ಭಾರತಕ್ಕೆ ಸ್ವಾತಂತ್ರ್ಯ ದೊರೆತ ಕೇವಲ ಆರು ತಿಂಗಳಲ್ಲಿ 30 ಜನೇವರಿ 1948ರಂದು ನಥುರಾಮ ಗೋಡಸೆ ಇವನು ಗಾಂಧೀಜಿಯವರನ್ನು ಅಮಾನುಷವಾಗಿ ಕೊಲೆಗೈದನು. ಹಿಂದೂ ಮುಸ್ಲಿಮ ಐಕ್ಯತೆಯನ್ನು ಕಾಪಾಡಲು ಗಾಂಧೀಜಿಯವರು ಹಗಲು ರಾತ್ರಿ ಶ್ರಮಿಸಿದರು ಹಾಗೂ ಅದಕ್ಕಾಗಿ ತಮ್ಮ ಪ್ರಾಣವನ್ನು ತೆತ್ತರು.

AHAS8T

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) .......... ಇವರು ಹಂಗಾಮಿ ಸರಕಾರದ ಪ್ರಮುಖರಾಗಿದ್ದರು.

(ಅ) ವಲ್ಲಭಭಾಯಿ ಪಟೇಲ (ಬ) ಮಹಾತ್ಮಾ ಗಾಂಧಿ
(ಕ) ಪಂ.ಜವಾಹರಲಾಲ ನೆಹರೂ (ಡ) ಬ್ಯಾ.ಜೀನಾ

(2) ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳನ್ನು ನಿರ್ಮಿಸುವ ಯೋಜನೆಯನ್ನು ......... ಇವರು ಸಿದ್ಧಗೊಳಿಸಿದರು.

(ಅ) ಲಾರ್ಡ್ ವೆವೆಲ್ (ಬ) ಸ್ಟಾಫರ್ಡ್ ಕ್ರಿಪ್ಸ
(ಕ) ಲಾರ್ಡ್ ಮೌಂಟಬ್ಯಾಟನ್ (ಡ) ಪ್ಯಾಥಿಕ್ ಲಾರೆನ್ಸ್

**2. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

(1) ಬ್ಯಾ.ಜೀನಾ ಇವರು ಯಾವ ಬೇಡಿಕೆಯ ಆಗ್ರಹ ಮಾಡಿದರು?

(2) ತ್ರಿಮಂತ್ರಿ ಯೋಜನೆಯಲ್ಲಿದ್ದ ಮಂತ್ರಿಗಳ ಹೆಸರು ಬರೆಯಿರಿ.

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ರಾಷ್ಟ್ರೀಯ ಸಭೆಯು ವಿಭಜನೆಗೆ ಒಪ್ಪಿಗೆ ನೀಡಿತು.

(2) ಹಂಗಾಮಿ ಸರಕಾರದ ಆಡಳಿತವು ಸುಗಮವಾಗಿ ಸಾಗಲಿಲ್ಲ.

(3) ವೆವೆಲ್ ಯೋಜನೆಯು ಯಶಸ್ವಿಯಾಗಲಿಲ್ಲ.

**4. ಕೆಳಗೆ ಕೊಟ್ಟ ಕಾಲ ರೇಷೆಯ ಮೇಲೆ ಘಟನಾಕ್ರಮವನ್ನು ಬರೆಯಿರಿ.**

| 1945 | 1946 | 1947 | 1948 |
|---|---|---|---|
| | | | |

**5. ಕೆಳಗಿನ ಪ್ರಶ್ನೆಗಳಿಗೆ ಸವಿಸ್ತಾರ ಉತ್ತರ ಬರೆಯಿರಿ.**

(1) ಬ್ರಿಟಿಶರು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವ ಸಲುವಾಗಿ ಏಕೆ ಸಿದ್ಧರಾದರು?

(2) ಮೌಂಟಬ್ಯಾಟನ್ ಯೋಜನೆಯನ್ನು ಕುರಿತು ಮಾಹಿತಿ ಬರೆಯಿರಿ.

(3) 16 ಅಗಸ್ಟ 1946 ಈ ದಿನವನ್ನು ನೇರ ಕಾರ್ಯಾಚರಣೆಯ ದಿನವೆಂದು ಆಚರಿಸುವುದಾಗಿ ಮುಸ್ಲಿಮ ಲೀಗ್ ಏಕೆ ಜಾಹೀರು ಪಡಿಸಿತು? ಅದರಿಂದ ಯಾವ ಪರಿಣಾಮಗಳಾದವು?

**ಉಪಕ್ರಮ**

ಭಾರತಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ಜನಸಾಮಾನ್ಯರ ಪ್ರತಿಕ್ರಿಯೆ ಏನಿತ್ತು ಎಂಬುದರ ಬಗ್ಗೆ ವಿವಿಧ ಸಂದರ್ಭ ಗ್ರಂಥ ಹಾಗೂ ಇಂಟರ್ನೆಟ್ ಸಹಾಯದಿಂದ ಮಾಹಿತಿ ಪಡೆಯಿರಿ.

# 13. ಸ್ವಾತಂತ್ರ್ಯ ಹೋರಾಟದ ಪರಿಪೂರ್ಣತೆ

ಭಾರತವು ಸ್ವತಂತ್ರವಾದರೂ ಸ್ವಾತಂತ್ರ್ಯದ ಹೋರಾಟವು ಇನ್ನೂ ಮುಗಿದಿರಲಿಲ್ಲ. ಭಾರತದಲ್ಲಿ ಅನೇಕ ಸಂಸ್ಥಾನಗಳು ಇದ್ದವು. ಸಂಸ್ಥಾನಗಳಿಗೆ ಭಾರತದಲ್ಲಿ ಸೇರ್ಪಡೆಯಾಗುವ ಇಲ್ಲವೆ ಸ್ವತಂತ್ರವಾಗಿರುವ ಹಕ್ಕು ದೊರಕಿತ್ತು. ಅದರಿಂದಾಗಿ ಅಖಂಡ ಭಾರತದ ರಾಷ್ಟ್ರೀಯ ಸಭೆಯ ಕನಸು ಅಪೂರ್ಣವಾಗಿ ಉಳಿದಿತ್ತು. ಸಂಸ್ಥಾನಗಳು ಸ್ವತಂತ್ರವಾಗಿ ಉಳಿದದ್ದರಿಂದ ಭಾರತವು ಅನೇಕ ತುಂಡುಗಳಾಗಿ ವಿಭಜಿಸಲ್ಪಡುವುದಿತ್ತು. ಪೋರ್ತುಗೀಜ ಮತ್ತು ಫ್ರೆಂಚ ಆಡಳಿತಗಳು ಭಾರತದ ಕೆಲವು ಪ್ರದೇಶಗಳಲ್ಲಿಯ ಅಧಿಕಾರವನ್ನು ಬಿಟ್ಟು ಕೊಟ್ಟಿರಲಿಲ್ಲ. ಆದರೆ ಈ ಸಮಸ್ಯೆಯನ್ನು ಭಾರತವು ಧೈರ್ಯದಿಂದ ಬಗೆಹರಿಸಿತು. ಅದರ ಮಾಹಿತಿಯನ್ನು ನಾವು ಈ ಪಾಠದಲ್ಲಿ ಪಡೆಯೋಣ.


**ಭಾರತದಲ್ಲಿ ಸಂಸ್ಥಾನಗಳ ವಿಲೀನೀಕರಣ :** ಭಾರತದಲ್ಲಿ ಚಿಕ್ಕ-ದೊಡ್ಡ ಆರು ನೂರಕ್ಕಿಂತ ಹೆಚ್ಚು ಸಂಸ್ಥಾನಗಳು ಇದ್ದವು. ಅಸಹಕಾರ ಚಳುವಳಿಯ ಪ್ರಭಾವದಿಂದ ಸಂಸ್ಥಾನಗಳಲ್ಲಿ ರಾಜಕೀಯ ಜಾಗೃತಿ ಆರಂಭವಾಗಿತ್ತು. ಸಂಸ್ಥಾನಗಳಲ್ಲಿ ಪ್ರಜಾ ಮಂಡಳಗಳು ಸ್ಥಾಪನೆಯಾಗ ತೊಡಗಿದವು. ಪ್ರಜಾ ಮಂಡಳಗಳೆಂದರೆ ಸಂಸ್ಥಾನಗಳಲ್ಲಿಯ ಪ್ರಜೆಗಳ ಹಿತದ ಸಲುವಾಗಿ ಮತ್ತು ಅವರಿಗೆ ರಾಜಕೀಯ ಹಕ್ಕುಗಳನ್ನು ದೊರಕಿಸಿಕೊಡುವುದಕ್ಕಾಗಿ ಶ್ರಮಿಸುವ ಜನರ ಸಂಸ್ಥೆಗಳಾಗಿದ್ದವು. 1927ರಲ್ಲಿ ಇಂಥ ಪ್ರಜಾಮಂಡಳಗಳಿಂದ ಕೂಡಿದ ಒಂದು ಅಖಿಲ ಭಾರತೀಯ ಪ್ರಜಾಪರಿಷತ್ತಿನ ಸ್ಥಾಪನೆ ಮಾಡಲಾಯಿತು. ಅದರಿಂದಾಗಿ ಸಂಸ್ಥಾನಗಳಲ್ಲಿಯ ಚಳುವಳಿಗೆ ಚಾಲನೆ ದೊರಕಿತು. ಭಾರತವು ಸ್ವತಂತ್ರವಾದ ಮೇಲೆ ಈ ಸಂಸ್ಥಾನಗಳ ವಿಲೀನೀಕರಣದ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಭಾರತದ ಆಗಿನ ಗೃಹಮಂತ್ರಿ ಸರದಾರ ವಲ್ಲಭಭಾಯಿ ಪಟೇಲರು ಅತ್ಯಂತ ಮುತ್ಸದ್ದಿತನದಿಂದ ಮಾರ್ಗ ಶೋಧಿಸಿದರು. ಅವರು ಸಂಸ್ಥಾನಿಕರಲ್ಲಿ ವಿಶ್ವಾಸವನ್ನು ಮೂಡಿಸಿ ಎಲ್ಲರಿಗೂ ಒಪ್ಪಿಗೆಯಾಗುವಂತಹ 'ಕಾರ್ಯ ಯೋಜನೆಯನ್ನು ತಯಾರಿಸಿದರು.


ಸರದಾರ ವಲ್ಲಭಭಾಯಿ ಪಟೇಲ

ಭಾರತದಲ್ಲಿ ವಿಲೀನವಾಗುವುದು ಹೇಗೆ ಸಂಸ್ಥಾನಿಕರ ಹಿತದ್ದಾಗಿದೆಯೆಂಬುದನ್ನು ಸರದಾರ ಪಟೇಲರು ಸಂಸ್ಥಾನಿಕರಿಗೆ ಮನದಟ್ಟು ಮಾಡಿಕೊಟ್ಟರು. ಅವರ ಈ ವಿನಂತಿಗೆ ಸಂಸ್ಥಾನಿಕರು ಸ್ಪಂದಿಸಿದರು. ಜುನಾಗಡ, ಹೈದರಾಬಾದ ಮತ್ತು ಕಾಶ್ಮೀರ ಈ ಸಂಸ್ಥಾನಗಳನ್ನು ಹೊರತುಪಡಿಸಿ ಉಳಿದೆಲ್ಲ ಸಂಸ್ಥಾನಗಳು ಭಾರತದಲ್ಲಿ ವಿಲೀನವಾದವು. ಸಂಸ್ಥಾನಗಳ ವಿಲೀನೀಕರಣದ ಸಮಸ್ಯೆಯನ್ನು ಸರದಾರ ಪಟೇಲರು ಕಠೋರ ನಿರ್ಣಯ ತೆಗೆದುಕೊಂಡು ಬಗೆಹರಿಸಿದರು.

**ಜುನಾಗಡದ ವಿಲೀನೀಕರಣ :** ಜುನಾಗಡ ಇದು ಸೌರಾಷ್ಟ್ರದಲ್ಲಿಯ ಒಂದು ಸಂಸ್ಥಾನವಾಗಿತ್ತು. ಅಲ್ಲಿಯ ಪ್ರಜೆಗಳಿಗೆ ಭಾರತದಲ್ಲಿ ವಿಲೀನವಾಗಬೇಕಾಗಿತ್ತು. ಜುನಾಗಡದ ನವಾಬನು ಮಾತ್ರ ಪಾಕಿಸ್ತಾನದಲ್ಲಿ ಸೇರ್ಪಡೆಯಾಗುವ ವಿಚಾರದಲ್ಲಿದ್ದನು. ಅವನ ಈ ನಿರ್ಣಯವನ್ನು ಪ್ರಜೆಗಳು ಪ್ರಖರವಾಗಿ ವಿರೋಧಿಸಿದರು. ಆಗ ನವಾಬನು ಪಾಕಿಸ್ತಾನಕ್ಕೆ ಹೊರಟು ಹೋದನು. ಆ ನಂತರ ಫೆಬ್ರುವರಿ 1948ರಲ್ಲಿ ಜುನಾಗಡ ಭಾರತದಲ್ಲಿ ವಿಲೀನವಾಯಿತು.

**ಹೈದರಾಬಾದ ಮುಕ್ತಿಸಂಗ್ರಾಮ :** ಹೈದರಾಬಾದ ಇದು ಭಾರತದಲ್ಲಿಯ ಅತ್ಯಂತ ದೊಡ್ಡ ಸಂಸ್ಥಾನವಾಗಿತ್ತು. ಅದರಲ್ಲಿ ತೆಲುಗು, ಕನ್ನಡ ಮತ್ತು ಮರಾಠಿ ಭಾಷೆಯ ಪ್ರಾಂತಗಳಿದ್ದವು. ಅಲ್ಲಿ ನಿಜಾಮನ ಏಕಚಕ್ರಾಧಿಪತ್ಯವಿತ್ತು. ಅಲ್ಲಿ ನಾಗರಿಕ ಮತ್ತು ರಾಜಕೀಯ ಹಕ್ಕುಗಳ ಅಭಾವವಿತ್ತು. ತಮ್ಮ ಹಕ್ಕುಗಳನ್ನು ಪಡೆಯುವ ಸಲುವಾಗಿ ಹೈದರಾಬಾದ ಸಂಸ್ಥಾನದ ಪ್ರಜೆಗಳು ತೆಲಂಗಣ ಭಾದಲ್ಲಿ ಆಂಧ್ರ ಪರಿಷತ್ತು, ಮರಾಠವಾಡಾ ಪ್ರದೇಶದಲ್ಲಿ ಮಹಾರಾಷ್ಟ್ರ ಪರಿಷತ್ತು ಮತ್ತು ಕರ್ನಾಟಕ ಭಾಗದಲ್ಲಿ ಕರ್ನಾಟಕ ಪರಿಷತ್ತು, ಈ ಸಂಸ್ಥೆಗಳನ್ನು ಸ್ಥಾಪಿಸಿದರು. 1938ರಲ್ಲಿ ಸ್ವಾಮಿ ರಾಮಾನಂದ ತೀರ್ಥ ಇವರು ಹೈದರಾಬಾದ ಸ್ಟೇಟ ಕಾಂಗ್ರೆಸ್‌ನ ಸ್ಥಾಪನೆ ಮಾಡಿದರು. ನಿಜಾಮನು ಈ ಸಂಘಟನೆಯ ಮೇಲೆ ನಿರ್ಬಂಧ ಹೇರಿದನು. ಹೈದರಾಬಾದ ಸ್ಟೇಟ ಕಾಂಗ್ರೆಸ್ಸಿಗೆ ಮಾನ್ಯತೆಯನ್ನು ದೊರಕಿಸುವ ಸಲುವಾಗಿ ಮತ್ತು ಪ್ರಜಾಪ್ರಭುತ್ವದ ಹಕ್ಕುಗಳಿಗಾಗಿ ಹೋರಾಟ ಆರಂಭವಾಯಿತು. ಈ ಹೋರಾಟದ ನೇತೃತ್ವವನ್ನು ಶೂರ ಸೇನಾನಿಯಾದ ಸ್ವಾಮಿ ರಾಮಾನಂದ ತೀರ್ಥರು ಮಾಡಿದರು. ಅವರಿಗೆ ನಾರಾಯಣ ರೆಡ್ಡಿ, ಸಿರಾಝು-ಉಲ್-ಹಸನ ಮತ್ತು ತಿರಮಿಜಿ ಇವರ ಸಹಕಾರ ಲಭಿಸಿತು. ಪಿ.ವ್ಹಿ. ನರಸಿಂಹರಾವ ಮತ್ತು ಗೋವಿಂದಭಾಯಿ ಶ್ರಾಫ ಇವರು ಸ್ವಾಮೀಜಿಯವರ ನಿಷ್ಠಾವಂತ ಅನುಯಾಯಿಗಳಾಗಿದ್ದರು.


ಸ್ವಾಮಿ ರಾಮಾನಂದ ತೀರ್ಥ

ಜುಲೈ 1947ರಲ್ಲಿ ಹೈದರಾಬಾದ ಸ್ಟೇಟ ಕಾಂಗ್ರೆಸ್ಸು ಹೈದರಾಬಾದ್ ಸಂಸ್ಥಾನವನ್ನು ಭಾರತದಲ್ಲಿ ವಿಲೀನಗೊಳಿಸಬೇಕು ಎಂಬ ಠರಾವನ್ನು ಮಾಡಿತು ಆದರೆ ನಿಜಾಮನು ಭಾರತ ವಿರೋಧಿ ಧೋರಣೆಯನ್ನು

ಸ್ವೀಕರಿಸಿದನು. ಅವನು ಹೈದರಾಬಾದ ಸಂಸ್ಥಾನವನ್ನು ಪಾಕಿಸ್ತಾನದಲ್ಲಿ ವಿಲೀನಗೊಳಿಸುವ ಚಟುವಟಿಕೆಗಳನ್ನು ಆರಂಭಿಸಿದನು. ಭಾರತದಲ್ಲಿ ವಿಲೀನವಾಗುವ ಸಂಸ್ಥಾನದಲ್ಲಿಯ ಪ್ರಜೆಗಳ ಬೇಡಿಕೆಯನ್ನು ತಳ್ಳಿ ಹಾಕುವ ಸಲುವಾಗಿ ನಿಜಾಮನ ಸಹಕಾರಿಯಾದ ಕಾಸೀಮ ರಝ್ವಿ ಈತನು 'ರಝಾಕಾರ' ಎಂಬ ಹೆಸರಿನ ಸಂಘಟನೆಯನ್ನು ಸ್ಥಾಪಿಸಿದನು. ಕಾಸೀಮ ರಝ್ವಿ ಮತ್ತು ಅವನ ಸಂಗಡಿಗರು ಹಿಂದುಗಳ ಮೇಲಷ್ಟೇ ಅಲ್ಲ, ಪ್ರಜಾಪ್ರಭುತ್ವ ಚಳುವಳಿಗೆ ಬೆಂಬಲ ನೀಡುವ ಮುಸ್ಲಿಮರ ಮೇಲೆಯೂ ಅತ್ಯಾಚಾರ ಮಾಡಿದರು. ಹೀಗಾಗಿ ಎಲ್ಲೆಡೆ ಜನಮತವು ಪ್ರಕ್ಷುಬ್ಧವಾಗತೊಡಗಿತು. ಭಾರತ ಸರಕಾರವು ನಿಜಾಮನೊಂದಿಗೆ ಸಾಮೋಪಚಾರದಿಂದ ಮಾತುಕತೆಯನ್ನಾಡುವ ಪ್ರಯತ್ನ ಮಾಡುತ್ತಿತ್ತು. ಆದರೆ ನಿಜಾಮನು ಅದಕ್ಕೆ ಸ್ಪಂದಿಸುತ್ತಿರಲಿಲ್ಲ. ಕೊನೆಗೆ ಭಾರತ ಸರಕಾರವು 13 ಸಪ್ಟಂಬರ 1948ರಂದು ನಿಜಾಮನ ವಿರುದ್ಧ ಪೋಲೀಸ ಕಾರ್ಯಾಚರಣೆಯನ್ನು ಆರಂಭಿಸಿತು. ಇದಕ್ಕೆ 'ಆಪರೇಶನ್ ಪೋಲೊ' ಎಂಬ ಸಾಂಕೇತಿಕ ಹೆಸರು ಇತ್ತು. ಕೊನೆಗೆ 17 ಸಪ್ಟಂಬರ 1948ರಂದು ನಿಜಾಮನು ಶರಣಾಗತನಾದನು. ಹೈದರಾಬಾದ ಸಂಸ್ಥಾನವು ಭಾರತದಲ್ಲಿ ವಿಲೀನವಾಯಿತು. ಸಂಸ್ಥಾನದ ಪ್ರಜೆಗಳ ಹೋರಾಟವು ಯಶಸ್ವಿಯಾಯಿತು. ಈ ಹೋರಾಟದಲ್ಲಿ ಆರ್ಯ ಸಮಾಜವು ವಿಶೇಷ ಕೊಡುಗೆಯನ್ನು ನೀಡಿತು.

**ಹೈದರಾಬಾದ ಮುಕ್ತಿ ಸಂಗ್ರಾಮದಲ್ಲಿ ಮರಾಠವಾಡಾದ ಕೊಡುಗೆ :** ಈ ಹೋರಾಟದಲ್ಲಿ ಸ್ವಾಮಿ ರಾಮಾನಂದ ತೀರ್ಥ, ಬಾಬಾಸಾಹೇಬ ಪರಾಂಜಪೆ, ಗೋವಿಂದಭಾಯಿ ಶ್ರಾಫ, ಅನಂತ ಭಾಲೇರಾವ, ಆಶಾತಾಯಿ ವಾಘಮಾರೆ, ಮಾಣಿಕಚಂದ ಪಹಾಡೆ ಮುಂತಾದವರು ಅಮೂಲ್ಯ ಕೊಡುಗೆಯನ್ನು ನೀಡಿದರು.

'ವಂದೇ ಮಾತರಂ' ಚಳುವಳಿಯ ಮೂಲಕ ವಿದ್ಯಾರ್ಥಿಗಳು ಹೈದರಾಬಾದ ಮುಕ್ತಿಸಂಗ್ರಾಮದಲ್ಲಿ ಭಾಗವಹಿಸಿದರು. ಅದರಂತೆ ಹೈದರಾಬಾದ ಮುಕ್ತಿ ಸಂಗ್ರಾಮದಲ್ಲಿ ವೇದಪ್ರಕಾಶ, ಶ್ಯಾಮಲಾಲ, ಗೋವಿಂದ ಪಾನಸರೆ, ಬಹಿರ್ಜಿ ಶಿಂದೆ, ಶ್ರೀಧರ ವರ್ತಕ, ಜನಾರ್ಧನ ಮಾಮಾ, ಶೋಯೆಬ ಉಲ್ಲಾ ಖಾನ ಮುಂತಾದವರು ಹುತಾತ್ಮರಾದರು. ಅವರ ಬಲಿದಾನವು ಭಾರತೀಯರಿಗೆ ಪ್ರೇರಣಾದಾಯಕವಾಗಿದೆ. ಇದರ ಮೇಲಿಂದ ಹೈದರಾಬಾದ ಮುಕ್ತಿ ಸಂಗ್ರಾಮದಲ್ಲಿ ಮರಾಠವಾಡಾದ ಮುಖಂಡರ ಹಾಗೂ ಜನತೆಯ ಸಿಂಹಪಾಲು ಇತ್ತೆಂಬುದು ಗಮನಕ್ಕೆ ಬರುತ್ತದೆ.

17 ಸಪ್ಟಂಬರ ಈ ಹೈದರಾಬಾದ ಮುಕ್ತಿ ಸಂಗ್ರಾಮದ ದಿನವನ್ನು ಮರಾಠವಾಡಾದಲ್ಲಿ 'ಮರಾಠವಾಡಾ ಮುಕ್ತಿದಿನ'ವೆಂದು ಆಚರಿಸಲಾಗುತ್ತದೆ. ಸ್ವತಂತ್ರ ಭಾರತದಲ್ಲಿ 15 ಅಗಷ್ಟ 1947ರಂದು ಮರಾಠವಾಡಾದ ಸಮಾವೇಶವಾಗಿರಲಿಲ್ಲ, ಈ ಪ್ರದೇಶವನ್ನು 1948ರಲ್ಲಿ ಜನತೆಯ ಸ್ಫೂರ್ತಿದಾಯಕ ಹೋರಾಟದ ನಂತರ ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸಲಾಯಿತು.

**ಕಾಶ್ಮೀರ ಸಮಸ್ಯೆ :** ಕಾಶ್ಮೀರ ಸಂಸ್ಥಾನದ ರಾಜನಾಗಿದ್ದ ಹರಿಸಿಂಗನು ಸ್ವತಂತ್ರವಾಗಿರಲು ನಿರ್ಧರಿಸಿದ್ದನು. ಕಾಶ್ಮೀರವನ್ನು ಪಾಕಿಸ್ತಾನದಲ್ಲಿ ಸೇರ್ಪಡೆ ಮಾಡಿಕೊಳ್ಳಬೇಕೆಂಬುದು ಪಾಕಿಸ್ತಾನದ ವಿಚಾರವಿತ್ತು. ಅದಕ್ಕಾಗಿ ಪಾಕಿಸ್ತಾನವು ಹರಿಸಿಂಗನ ಮೇಲೆ ಒತ್ತಾಯ ಮಾಡಲಾರಂಭಿಸಿತು. ಅಕ್ಟೋಬರ 1947ರಲ್ಲಿ ಪಾಕಿಸ್ತಾನದ ಪ್ರಚೋದನೆಯಿಂದ ಸಶಸ್ತ್ರ ಆಕ್ರಮಣಕಾರರು ಕಾಶ್ಮೀರದ ಮೇಲೆ ದಾಳಿ ಮಾಡಿದರು. ಆಗ ಹರಿಸಿಂಗನು ಭಾರತದಲ್ಲಿ ವಿಲೀನವಾಗುವ ಒಪ್ಪಂದದ ಮೇಲೆ ಸಹಿ ಹಾಕಿದನು. ಈ ರೀತಿ ಕಾಶ್ಮೀರವು ಭಾರತದಲ್ಲಿ ವಿಲೀನವಾದ ನಂತರಕಾಶ್ಮೀರದ ರಕ್ಷಣೆಗಾಗಿ ಭಾರತೀಯ ಸೈನ್ಯವನ್ನು ಕಳುಹಿಸಲಾಯಿತು ಸೈನ್ಯವು ಕಾಶ್ಮೀರದ ಬಹು ದೊಡ್ಡ ಭಾಗವನ್ನು ಆಕ್ರಮಣಕಾರರಿಂದ ಮರಳಿ ಪಡೆಯಿತು. ಕೆಲವು ಭಾಗ ಮಾತ್ರ ಪಾಕಿಸ್ತಾನದ ವಶದಲ್ಲಿ ಉಳಿಯಿತು.

**ಫ್ರೆಂಚ್ ವಸಾಹತುಗಳ ವಿಲಿನೀಕರಣ :** ಭಾರತವು ಸ್ವತಂತ್ರವಾದ ನಂತರವೂ ಚಂದ್ರನಗರ, ಪುದುಚ್ಚೇರಿ, ಕಾರಿಕಲ್, ಮಾಹೆ ಮತ್ತು ಯಾಣಮ್ ಈ ಪ್ರದೇಶಗಳ ಮೇಲೆ ಫ್ರಾನ್ಸಿನ ಅಧಿಪತ್ಯವಿತ್ತು. ಅಲ್ಲಿಯ ಭಾರತೀಯ ನಿವಾಸಿಗಳು ಭಾರತದಲ್ಲಿ ವಿಲೀನರಾಗಲು ಉತ್ಸುಕರಾಗಿದ್ದರು. ಈ ಪ್ರದೇಶಗಳು ಭಾರತದ ಘಟಕವಾಗಿದ್ದರಿಂದ ಅವುಗಳನ್ನು ಭಾರತಕ್ಕೆ ಒಪ್ಪಿಸಬೇಕೆಂಬ ಬೇಡಿಕೆಯನ್ನು ಭಾರತ ಸರಕಾರವು ಮಾಡಿತು.

ಫ್ರಾನ್ಸ 1949ರಲ್ಲಿ ಚಂದ್ರನಗರದಲ್ಲಿ ಸಾರ್ವಜನಿಕ ಅಭಿಪ್ರಾಯವನ್ನು ಸಂಗ್ರಹಿಸಿತು. ಅಲ್ಲಿಯ ಜನರು ಭಾರತದ ಪರವಾಗಿ ತಮ್ಮ ಅಭಿಪ್ರಾಯ ನೀಡಿದರು. ಚಂದ್ರನಗರವನ್ನು ಭಾರತಕ್ಕೆ ಸ್ವಾಧೀನಪಡಿಸಲಾಯಿತು. ಆ ನಂತರ ಫ್ರಾನ್ಸ ಭಾರತದ ಇತರ ಪ್ರದೇಶಗಳನ್ನೂ ಭಾರತ ಸರಕಾರದ ಕೈಗೆ ಒಪ್ಪಿಸಿತು.


ಡಾ. ಟಿ. ಬಿ. ಕುನ್ಹಾ

**ಗೋವಾ ಮುಕ್ತಿಗಾಗಿ ಹೋರಾಟ :** ಪೋರ್ತುಗಾಲ ಮಾತ್ರ ತನ್ನ ವಶದಲ್ಲಿದ್ದ ಭಾರತೀಯ ಪ್ರದೇಶಗಳನ್ನು ಭಾರತದ ಸ್ವಾಧೀನ ಪಡಿಸಲು ನಿರಾಕರಿಸಿತು. ಆ ಪ್ರದೇಶಗಳನ್ನು ಪಡೆದುಕೊಳ್ಳಲು ಭಾರತೀಯರಿಗೆ ಹೋರಾಟ ಮಾಡಬೇಕಾಯಿತು. ಈ ಹೋರಾಟದಲ್ಲಿ ಡಾ. ಟಿ. ಬಿ. ಕುನ್ಹಾ ಇವರು ಮುಂಚೂಣಿಯಲ್ಲಿದ್ದರು. ಅವರು ಪೋರ್ತುಗೀಜ ಸರಕಾರದ ವಿರುದ್ಧ ಜನರಲ್ಲಿ ಜಾಗೃತಿಯನ್ನುಂಟು ಮಾಡುವ ಕಾರ್ಯ ಮಾಡಿದರು. ಅವರು ಪೋರ್ತುಗೀಜರ ವಿರುದ್ಧ ಹೋರಾಡುವ ಉದ್ದೇಶದಿಂದ ಗೋವಾ ಕಾಂಗ್ರೆಸ್ ಸಮಿತಿಯ ಸ್ಥಾಪನೆ

ಮಾಡಿದರು. ಮುಂದೆ 1945ರಲ್ಲಿ ಡಾ. ಕುನ್ಹಾ ಇವರು ಮುಂಬಯಿಯಲ್ಲಿ 'ಗೋವಾ ಯುಥ ಲೀಗ' ಎಂಬ ಸಂಘಟನೆಯನ್ನು ಸ್ಥಾಪಿಸಿದರು. 1946ರಲ್ಲಿ ಅವರು ಗೋವಾದಲ್ಲಿ ಹೋಗಿ ಭಾಷಣ ಪ್ರತಿಬಂಧದ ಆಜ್ಞೆಯನ್ನು ಉಲ್ಲಂಘಿಸಿದರು. ಅದಕ್ಕಾಗಿ ಡಾ. ಕುನ್ಹಾರಿಗೆ ಎಂಟು ವರ್ಷಗಳ ಸೆರೆಮನೆವಾಸದ ಶಿಕ್ಷೆಯನ್ನು ವಿಧಿಸಲಾಯಿತು. ಕ್ರಿ.ಶ. 1946ರಲ್ಲಿಯೇ ಡಾ. ರಾಮ ಮನೋಹರ ಲೋಹಿಯಾ ಇವರು ಗೋವಾ ಮುಕ್ತಿಗಾಗಿ ಸತ್ಯಾಗ್ರಹದ ಹೋರಾಟವನ್ನು ಆರಂಭಿಸಿದರು. ಅವರು ಪ್ರತಿಬಂಧಾತ್ಮಕ ಆಜ್ಞೆಯನ್ನು ಮುರಿದು ಗೋವಾದ ಮಡಗಾವ ಎಂಬಲ್ಲಿ ಭಾಷಣ ಮಾಡಿದರು. ಅದಕ್ಕಾಗಿ ಪೋರ್ತುಗೀಜ ಸರಕಾರವು ಅವರನ್ನು ಗಡಿಪಾರು ಮಾಡಿತು.

ಇದೇ ಸಮಯದಲ್ಲಿ ಗುಜರಾತದಲ್ಲಿಯ ದಾದರಾ ಮತ್ತು ನಗರ ಹವೇಲಿಗಳಲ್ಲಿಯ ಪೋರ್ತುಗೀಜ ವಸಾಹತುಗಳನ್ನು ಮುಕ್ತಗೊಳಿಸುವ ಸಲುವಾಗಿ 'ಆಝಾದ ಗೋಮಂತಕ' ದಳದ ಸ್ಥಾಪನೆ ಮಾಡಲಾಯಿತು. 2 ಅಗಷ್ಟ 1954ರಂದು ಈ ದಳದ ತರುಣರು ಸಶಸ್ತ್ರ ಆಕ್ರಮಣ ಮಾಡಿ ದಾದರಾ ಮತ್ತು ನಗರ ಹವೇಲಿಗಳ ಪ್ರದೇಶವನ್ನು ಪೋರ್ತುಗೀಜ ಅಧಿಪತ್ಯದಿಂದ ಮುಕ್ತಗೊಳಿಸಿದರು. ಈ ಆಕ್ರಮಣದಲ್ಲಿ ವಿಶ್ವನಾಥ ಲವಂದೆ, ರಾಜಾಭಾವೂ ವಾಕಣಕರ, ಸುಧೀರ ಫಡಕೆ, ನಾನಾ ಸಾಹೇಬ ಕಾಜರೇಕರ ಮುಂತಾದವರು ಭಾಗವಹಿಸಿದ್ದರು.

1954ರಲ್ಲಿ ಗೋವಾ ಮುಕ್ತಿ ಸಮಿತಿಯನ್ನು ಸ್ಥಾಪಿಸಲಾಯಿತು. ಈ ಸಮಿತಿಯು ಮಹಾರಾಷ್ಟ್ರದಿಂದ ಸತ್ಯಾಗ್ರಹಿಗಳ ಅನೇಕ ತಂಡಗಳನ್ನು ಗೋವಾಕ್ಕೆ ಕಳುಹಿಸಿತು. ಅದರಲ್ಲಿ ನಾ.ಗ. ಗೋರೆ, ಸೇನಾಪತಿ ಬಾಪಟ, ಪೀಟರ ಅಲ್ವಾರಿಸ, ಮಹಾದೇವ ಶಾಸ್ತ್ರಿ ಜೋಶಿ ಹಾಗೂ ಅವರ ಪತ್ನಿ ಸುಧಾತಾಯಿ ಮುಂತಾದವರ ಸಹಭಾಗಿತ್ವವಿತ್ತು. ಮೋಹನ ರಾನಡೆ ಇವರು ಗೋವಾ ಮುಕ್ತಿ ಆಂದೋಲನದಲ್ಲಿಯ ಅಗ್ರಗಣ್ಯ ಮುಖಂಡರಾಗಿದ್ದರು. ಪೋರ್ತುಗೀಜ ಆಡಳಿತಗಾರರು ಸತ್ಯಾಗ್ರಹಿಗಳ ಮೇಲೆ ಅಪರಿಮಿತ ಅನ್ಯಾಯ ಅತ್ಯಾಚಾರ ಮಾಡಿದರು. ಇದರಿಂದಾಗಿ ಭಾರತದಲ್ಲಿಯ ಜನಮತವು ಅಧಿಕ ಪ್ರಕ್ಷುಬ್ಧವಾಯಿತು.

ಗೋವಾದಲ್ಲಿಯ ಸ್ವಾತಂತ್ರ್ಯ ಹೋರಾಟವು ಉಗ್ರರೂಪವನ್ನು ಧರಿಸಿತು. ಭಾರತ ಸರಕಾರವು ಪೋರ್ತುಗೀಜ ಸರಕಾರದೊಡನೆ ಸಾಮೋಪಚಾರದಿಂದ ಮಾತುಕತೆ ನಡೆಸಿತ್ತು. ಆದರೆ ಅದಕ್ಕೆ ಪ್ರತಿಕ್ರಿಯೆ ದೊರೆಯಲಿಲ್ಲ. ಕೊನೆಗೆ ಭಾರತ ಸರಕಾರವು ಬೇರೆ ಉಪಾಯವನ್ನು ಕಾಣದೆ ಸೈನಿಕ ಕಾರ್ಯಾಚರಣೆ ಮಾಡುವ ನಿರ್ಣಯವನ್ನು ಕೈಕೊಂಡಿತು. ಡಿಸೆಂಬರ 1961ರಲ್ಲಿ ಭಾರತೀಯ ಸೈನ್ಯವು ಗೋವಾವನ್ನು ಪ್ರವೇಶಿಸಿತು. ಅಲ್ಪಾವಧಿಯಲ್ಲಿಯೇ ಪೋರ್ತುಗೀಜ ಸೈನ್ಯವು ಶರಣಾಗತಿಯನ್ನು ಸ್ವೀಕರಿಸಿತು. 19 ಡಿಸೆಂಬರ 1961ರಂದು ಗೋವಾ ಪೋರ್ತುಗೀಜರ ವರ್ಚಸ್ಸಿನಿಂದ ಮುಕ್ತವಾಯಿತು. ಭಾರತದ ಭೂಮಿಯಿಂದ ಸಾಮ್ರಾಜ್ಯವಾದದ ಸಂಪೂರ್ಣ ಉಚ್ಚಾಟನೆಯಾಯಿತು. ಭಾರತದ ಸ್ವಾತಂತ್ರ್ಯ ಹೋರಾಟವು ನಿಜವಾದ ಅರ್ಥದಲ್ಲಿ ಪರಿಪೂರ್ಣವಾಯಿತು.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ಭಾರತದಲ್ಲಿ ಚಿಕ್ಕ - ದೊಡ್ಡ ಆರು ನೂರಕ್ಕಿಂತ ಹೆಚ್ಚು ........... ಇದ್ದವು.

(ಅ) ರಾಜ್ಯಗಳು (ಬ) ಹಳ್ಳಿಗಳು (ಕ) ಸಂಸ್ಥಾನಗಳು (ಡ) ಪಟ್ಟಣಗಳು

(2) ಜುನಾಗಡ, .......... ಮತ್ತು ಕಾಶ್ಮೀರ ಈ ಸಂಸ್ಥಾನಗಳನ್ನು ಹೊರತುಪಡಿಸಿ ಉಳಿದೆಲ್ಲ ಸಂಸ್ಥಾನಗಳು ಭಾರತದಲ್ಲಿ ವಿಲೀನವಾದವು.

(ಅ) ಔಂಧ (ಬ) ಝಾಶಿ (ಕ) ವಡೋದರಾ (ಡ) ಹೈದರಾಬಾದ

**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಜುನಾಗಡವು ಭಾರತದಲ್ಲಿ ವಿಲೀನವಾಯಿತು.

(2) ಭಾರತ ಸರಕಾರವು ನಿಜಾಮನ ವಿರುದ್ಧ ಪೋಲೀಸ ಕಾರ್ಯಾಚರಣೆ ಆರಂಭಿಸಿತು.

(3) ಹರಿಸಿಂಗನು ಭಾರತದಲ್ಲಿ ವಿಲೀನವಾಗುವ ಒಪ್ಪಂದದ ಮೇಲೆ ಸಹಿ ಹಾಕಿದನು.

**3. ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ಸಂಸ್ಥಾನಗಳ ವಿಲಿನೀಕರಣದಲ್ಲಿಯ ಸರದಾರ ವಲ್ಲಭಭಾಯಿ ಪಟೇಲರ ಕೊಡುಗೆಯನ್ನು ಸ್ಪಷ್ಟಪಡಿಸಿರಿ.

(2) ಹೈದರಾಬಾದ ಮುಕ್ತಿ ಸಂಗ್ರಾಮದಲ್ಲಿಯ ಸ್ವಾಮಿ ರಾಮಾನಂದ ತೀರ್ಥರ ಕೊಡುಗೆಯನ್ನು ಸ್ಪಷ್ಟಪಡಿಸಿರಿ.

**ಉಪಕ್ರಮ**

'ಹೈದರಾಬಾದ ಮುಕ್ತಿ ಸಂಗ್ರಾಮ' ಈ ವಿಷಯವನ್ನು ಕುರಿತು ಚಿತ್ರ ಮತ್ತು ಮಾಹಿತಿ ಸಂಗ್ರಹಿಸಿರಿ. ಇತಿಹಾಸದ ಕೋಣೆಯಲ್ಲಿ ಅದರ ಮೇಲೆ ಆಧಾರಿತ ಕೋಷ್ಟಕಗಳ ಪ್ರದರ್ಶನವನ್ನು ಆಯೋಜಿಸಿರಿ.

AWJNAG

# 14. ಮಹಾರಾಷ್ಟ್ರ ರಾಜ್ಯದ ನಿರ್ಮಿತಿ

ಭಾರತಕ್ಕೆ ಸ್ವಾತಂತ್ರ್ಯ ದೊರೆತ ನಂತರ ಭಾಷಾವಾರು ಪ್ರಾಂತರಚನೆಯ ಬೇಡಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಮಾಡಲಾಗುತ್ತಿತ್ತು. ಮಹಾರಾಷ್ಟ್ರದಲ್ಲಿಯೂ ಮರಾಠಿ ಭಾಷಿಕ ರಾಜ್ಯದ ಬೇಡಿಕೆಯನ್ನು ಮಾಡುವ 'ಸಂಯುಕ್ತ ಮಹಾರಾಷ್ಟ್ರ ಚಳುವಳಿ'ಯು ಕ್ರಿ.ಶ. 1946ರಿಂದ ಆರಂಭವಾಯಿತು. ಅನೇಕ ಸ್ಥಿತ್ಯಂತರಗಳಿಂದ ಈ ಚಳುವಳಿಯು ಮುನ್ನಡೆದು ಕೊನೆಗೆ 1 ಮೇ 1960ರಂದು ಮಹಾರಾಷ್ಟ್ರ ರಾಜ್ಯದ ನಿರ್ಮಿತಿಯಾಯಿತು.

**ಹಿನ್ನೆಲೆ :** ಮರಾಠಿ ಭಾಷಿಕ ಜನರ ಏಕೀಕರಣದ ವಿಚಾರವನ್ನು ಇಪ್ಪತ್ತನೆಯ ಶತಮಾನದ ಆರಂಭದಿಂದ ಅನೇಕ ವಿದ್ವಾಂಸರು ವ್ಯಕ್ತಪಡಿಸಲು ಆರಂಭಿಸಿದರು. 1911ರಲ್ಲಿ ಬ್ರಿಟಿಶ ಸರಕಾರವು ಬಂಗಾಲದ ವಿಭಜನೆಯನ್ನು ರದ್ದುಪಡಿಸಬೇಕಾಯಿತು. ಅದರ ಹಿನ್ನೆಲೆಯಲ್ಲಿ ನ.ಚಿಂ. ಕೇಳಕರ ಅವರು 'ಮರಾಠಿ ಭಾಷೆಯನ್ನು ಮಾತನಾಡುವವರ ಸರ್ವ ಜನಸಂಖ್ಯೆಯು ಒಂದೇ ಆಡಳಿತದ ಆಧೀನದಲ್ಲಿ ಇರಬೇಕು', ಎಂದು ಬರೆಯರು. ಲೋಕಮಾನ್ಯ ಟಿಳಕರು 1915ರಲ್ಲಿ ಭಾಷಾವಾರು ಪ್ರಾಂತ ರಚನೆಯ ಬೇಡಿಕೆ ಮಾಡಿದ್ದರು. ಆದರೆ ಆ ಕಾಲದಲ್ಲಿ ಭಾರತದ ಸ್ವಾತಂತ್ರ್ಯದ ಪ್ರಶ್ನೆಯು ಅಧಿಕ ಮಹತ್ವದ್ದಾಗಿರುವುದರಿಂದ ಈ ಪ್ರಶ್ನೆಯು ಹಿಂದೆ ಬಿದ್ದಿತು.

12 ಮೇ 1946ರಂದು ಬೆಳಗಾವಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದಲ್ಲಿ ಸಂಯುಕ್ತ ಮಹಾರಾಷ್ಟ್ರದ ಸಂದರ್ಭದಲ್ಲಿಯ ಮಹತ್ವದ ಠರಾವನ್ನು ಪಾಸು ಮಾಡಲಾಯಿತು.

**ಸಂಯುಕ್ತ ಮಹಾರಾಷ್ಟ್ರ ಪರಿಷತ್ತು :** ಜುಲೈ 28ರಂದು ಮುಂಬಯಿಯಲ್ಲಿ ಶಂಕರರಾವ ದೇವ ಇವರ ಅಧ್ಯಕ್ಷತೆಯಲ್ಲಿ 'ಮಹಾರಾಷ್ಟ್ರ ಏಕೀಕರಣ ಪರಿಷತ್ತು' ಜರುಗಿತು. ಮರಾಠಿ ಭಾಷಿಕ ಪ್ರದೇಶಗಳ ಒಂದು ಪ್ರಾಂತವನ್ನು ಮಾಡಬೇಕು. ಇದರಲ್ಲಿ ಮುಂಬಯಿ, ಮಧ್ಯ ಪ್ರಾಂತದಲ್ಲಿಯ ಮರಾಠಿ ಭಾಷಿಕ ಅದೇ ರೀತಿ ಮರಾಠವಾಡಾ ಮತ್ತು ಗೋಮಾಂತರ ಈ ಮರಾಠಿ ಭಾಗಗಳ ಸಮಾವೇಶ ಮಾಡಬೇಕು, ಎಂಬ ಠರಾವನ್ನು ಈ ಪರಿಷತ್ತು ಮಂಜೂರು ಮಾಡಿತು.

**ದಾರ ಕಮೀಶನ್ :** ಘಟನಾ ಸಮಿತಿಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ ಇವರು 17 ಜೂನ 1948ರಂದು ನ್ಯಾಯಾಧೀಶ ಎಸ್. ಕೆ. ದಾರ ಇವರ ಅಧ್ಯಕ್ಷತೆಯಲ್ಲಿ ಭಾಷಾವಾರು ಪ್ರಾಂತ ರಚನೆಯ ಸಲುವಾಗಿ 'ದಾರ ಕಮೀಶನ್'ನ ಸ್ಥಾಪನೆ ಮಾಡಿದರು. 10 ಡಿಸೆಂಬರ 1948ರಂದು 'ದಾರ ಕಮೀಶನ್ನಿನ' ವರದಿ ಪ್ರಸಿದ್ಧವಾಯಿತು. ಆದರೆ ಅದರಿಂದ ಸಮಸ್ಯೆ ಬಗೆಹರಿಯಲಿಲ್ಲ.

**ಜೆ.ವ್ಹಿ.ಪಿ. ಸಮಿತಿ (ತ್ರಿಸದಸ್ಯ ಸಮಿತಿ) :** ಭಾಷಾವಾರು ಪ್ರಾಂತರಚನೆಯನ್ನು ನಿರ್ಮಾಣ ಮಾಡುವ ಪರಿಸ್ಥಿತಿಯ ಅಭ್ಯಾಸ ಮಾಡುವ ಸಲುವಾಗಿ ಕಾಂಗ್ರೆಸ್ಸು 29 ಡಿಸೆಂಬರ 1948ರಂದು ಒಂದು ಸಮಿತಿಯನ್ನು ನೇಮಿಸಿತು. ಇದರಲ್ಲಿ ಪಂ. ಜವಾಹರಲಾಲ ನೆಹರೂ, ವಲ್ಲಭಭಾಯಿ ಪಟೇಲ ಮತ್ತು ಪಟ್ಟಾಭಿ ಸೀತಾರಾಮಯ್ಯಾ ಇವರ ಸಮಾವೇಶವಿತ್ತು. ಈ ಮೂವರು ಸದಸ್ಯರ ಆದ್ಯಾಕ್ಷರದ ಮೇಲಿಂದ ಈ ಸಮಿತಿಯು ಜೆ.ವ್ಹಿ.ಪಿ. ಸಮಿತಿ ಎಂದು ಗುರುತಿಸಲ್ಪಡುತ್ತದೆ. ಈ ಸಮಿತಿಯು ತನ್ನ ವರದಿಯಲ್ಲಿ ಭಾಷಾವಾರು ಪ್ರಾಂತ ರಚನೆಯು ಕಾಂಗ್ರೆಸ್ಸಿಗೆ ತತ್ವತಃ ಒಪ್ಪಿಗೆಯಿದೆ. ಆದರೆ ಇದು ಯೋಗ್ಯ ಸಮಯವಲ್ಲ ಎಂಬ ಶಿಫಾರಸು ಮಾಡಿತು. ಈ ವರದಿಯ ವಿರುದ್ಧ ಮಹಾರಾಷ್ಟ್ರದ ತುಂಬೆಲ್ಲ ತೀವ್ರ ಪ್ರತಿಕ್ರಿಯೆಗಳು ಮೂಡಿದವು. ಅದೇ ಸಮಯದಲ್ಲಿ ಜನಜಾಗೃತಿಗಾಗಿ ಸೇನಾಪತಿ ಬಾಪಟ ಇವರು ಪ್ರಭಾತ ಫೇರಿಗಳನ್ನು ತೆಗೆದರು.

ಆಚಾರ್ಯ ಅತ್ರೆಯವರು ಮುಂಬಯಿ ಮಹಾನಗರ ಪಾಲಿಕೆಯಲ್ಲಿ ಮುಂಬಯಿ ಸಹಿತ ಸಂಯುಕ್ತ ಮಹಾರಾಷ್ಟ್ರದ ಠರಾವನ್ನು ಮಂಡಿಸಿದರು. ಅದು 50 ವಿರುದ್ಧ 35 ಮತಗಳಿಂದ ಮಂಜೂರಾಯಿತು. ಇದರಿಂದಾಗಿ ಮುಂಬಯಿಯು ಮಹಾರಾಷ್ಟ್ರದಲ್ಲಿರಬೇಕು ಎಂಬ ಜನತೆಯ ಇಚ್ಛೆಯ ಸಿದ್ಧವಾಯಿತು.

**ರಾಜ್ಯ ಪುನರ್ರಚನಾ ಆಯೋಗ :** ಭಾರತ ಸರಕಾರವು ನ್ಯಾಯಮೂರ್ತಿ ಎಸ್. ಫಾಜಲ ಅಲಿಯವರ ಅಧ್ಯಕ್ಷತೆಯಲ್ಲಿ 29 ಡಿಸೆಂಬರ 1953ರಂದು 'ರಾಜ್ಯ ಪುನರ್ರಚನಾ ಆಯೋಗ'ವನ್ನು ಸ್ಥಾಪಿಸಿತು. ಈ ಆಯೋಗವು 10 ಅಕ್ಟೋಬರ 1955 ರಂದು ತನ್ನ ವರದಿಯನ್ನು ಸಾದರಪಡಿಸಿತು. ಈ ವರದಿಯಲ್ಲಿ ಮುಂಬಯಿಯ ದ್ವಿಭಾಷಿಕ ರಾಜ್ಯ ನಿರ್ಮಾಣ ಮಾಡಬೇಕು ಎಂದು ಶಿಫಾರಸು ಮಾಡಲಾಯಿತು.

**ನಾಗಪೂರ ಕರಾರು :** ಸರ್ವ ಮರಾಠಿ ಭಾಷಿಕ ಜನತೆಯ ಒಂದು ರಾಜ್ಯವನ್ನು ಸ್ಥಾಪಿಸುವ ಸಲುವಾಗಿ 1953ರಲ್ಲಿ ನಾಗಪೂರ ಕರಾರು ಆಯಿತು. ಈ ಕರಾರಿನ ಪ್ರಕಾರ ಪಶ್ಚಿಮ ಮಹಾರಾಷ್ಟ್ರ ಮತ್ತು ವಿದರ್ಭ ಮರಾಠವಾಡಾವನ್ನೊಳಗೊಂಡ ಸಂಯುಕ್ತ ಮಹಾರಾಷ್ಟ್ರದ ನಿರ್ಮಿತಿಯಾಯಿತು. ಸಂವಿಧಾನದಲ್ಲಿಯ 1956ರ ತಿದ್ದುಪಡಿಗನುಗುಣವಾಗಿ 371(2) ಈ ಕಲಮಿನ ಸಮಾವೇಶವನ್ನು ಸಂವಿಧಾನದಲ್ಲಿ ಮಾಡಲಾಯಿತು. ಅದೇ ರೀತಿ ವಿಕಾಸ ಕಾರ್ಯಗಳಿಗಾಗಿ ಸಮನ್ಯಾಯ ನಿಧಿ, ತಾಂತ್ರಿಕ ಮತ್ತು ವ್ಯಾವಸಾಯಿಕ ಶಿಕ್ಷಣಕ್ಕಾಗಿ ಸಾಕಷ್ಟು ನಿಧಿ, ಆಯಾ ಭಾಗದಲ್ಲಿಯ ಜನಸಂಖ್ಯೆಯ ಪ್ರಮಾಣದಲ್ಲಿ ರಾಜ್ಯ ಸರಕಾರದ ಸೇವೆಯಲ್ಲಿ

ನೌಕರಿಗಳ ಅವಕಾಶ ಮತ್ತು ಮಹಾರಾಷ್ಟ್ರ ವಿಧಾನಸಭೆಯ ವರ್ಷದಲ್ಲಿ ಒಂದು ಅಧಿವೇಶನವನ್ನು ನಾಗಪೂರದಲ್ಲಿ ನಡೆಸುವುದು ಇತ್ಯಾದಿಗಳ ಭರವಸೆಯನ್ನು ನಾಗಪೂರ ಕರಾರಿನಲ್ಲಿ ನೀಡಲಾಯಿತು.

ಮರಾಠಿ ಭಾಷಿಕರಿಗಾಗಿ ಮುಂಬಯಿಯನ್ನೊಳಗೊಂಡ ಮಹಾರಾಷ್ಟ್ರದ ನಿರ್ಮಿತಿಯಾಗಬೇಕು ಎಂಬುದರ ಸಲುವಾಗಿ ಸಂಘರ್ಷ ಆರಂಭವಾಗಿತ್ತು. ಮುಂಬಯಿಯ ಕಾಮಗಾರ ಮೈದಾನದಲ್ಲಿ ಬೃಹತ್ ಸಭೆ ಜರುಗಿತು. ಆ ಸಮಯದಲ್ಲಿ ಶಂಕರರಾವ ದೇವ ಅವರು, ''ಮಹಾರಾಷ್ಟ್ರದಿಂದ ಮುಂಬಯಿಯನ್ನು ಬೇರ್ಪಡಿಸುವುದಕ್ಕೆ ನಾವು ಪ್ರಾಣವನ್ನು ಪಣಕ್ಕಿಟ್ಟು ವಿರೋಧಿಸೋಣ'' ಎಂದು ಹೇಳಿದರು. ಜನತೆಯ ಭಾವನೆಗಳಿಗೆ ಮತ್ತು ಬೇಡಿಕೆಗಳಿಗೆ ಜನ ಆಂದೋಲನದ ಸ್ವರೂಪ ಬರತೊಡಗಿತು. ಅದರಲ್ಲಿ ಮಹಿಳೆಯರೂ ಸ್ವಯಂ ಪ್ರೇರಿತರಾಗಿ ಭಾಗವಹಿಸತೊಡಗಿದರು. ಸುಮತಿ ಬಾಯಿ ಗೋರೆ, ಇಸ್ಮತ ಚುಗತಾಯಿ, ದುರ್ಗಾ ಭಾಗವತ, ತಾರಾ ರೆಡ್ಡಿ, ಚಾರುಶೀಲಾ ಗುಪ್ತೆ, ಕಮಲಾತಾಯಿ ಮೋರೆ, ಸುಲತಾನಾ ಜೋಹಾರಿ ಮುಂತಾದ ಅನೇಕ ಮಹಿಳೆಯರು ಆಂದೋಲನದಲ್ಲಿ ಭಾಗವಹಿಸಿದರು.

7 ನವಂಬರ 1955ರಂದು ಕಾರ್ಮಿಕರ ಸಭೆ ಜರುಗಿತು. ಅದರಲ್ಲಿ ವಿವಿಧ ಕಾರ್ಮಿಕ ಸಂಸ್ಥೆಗಳು, ಕಮ್ಯುನಿಸ್ಟ, ಪ್ರಜಾ ಸಮಾಜವಾದಿ, ಸಮಾಜವಾದಿ, ಶೇತಕರಿ ಕಾಮಗಾರ ಪಕ್ಷ, ಜನಸಂಘ ಇತ್ಯಾದಿ ಅನೇಕ ರಾಜಕೀಯ ಪಕ್ಷಗಳು ಭಾಗವಹಿಸಿದವು. ಕಾಮ್ರೇಡ ಶ್ರೀಪಾದ ಅಮೃತ ಡಾಂಗೆಯವರು ಅಧ್ಯಕ್ಷ ಸ್ಥಾನ ವಹಿಸಿದ್ದರು. ಮುಂಬಯಿ ವಿದರ್ಭಗಳನ್ನೊಳಗೊಂಡ ಸಂಯುಕ್ತ ಮಹಾರಾಷ್ಟ್ರವಾಗಬೇಕು ಎಂಬ ಠರಾವನ್ನು ಎಸ್.ಎಮ್. ಜೋಶಿಯವರು ಈ ಅಧಿವೇಶನದಲ್ಲಿ ಮಂಡಿಸಿದರು.

**ಪ್ರತ್ಯಕ್ಷ ಸಂಘರ್ಷಕ್ಕೆ ಆರಂಭ :** ಮರಾಠಿ ಭಾಷಿಕ ಜನರಲ್ಲಿ ಅಸಂತೋಷವು ಹೆಚ್ಚುತ್ತ ನಡೆದಿತ್ತು. ಸೇನಾಪತಿ ಬಾಪಟ ಇವರ ನೇತೃತ್ವದಲ್ಲಿ ವಿಧಾನ ಸಭೆಗೆ ಬೃಹತ್ ಮೋರ್ಚಾ ಹೊರಟಿತು. ಆಗ ಮೋರಾರಜಿ ದೇಸಾಯಿಯವರು ಮುಖ್ಯ ಮಂತ್ರಿಯಾಗಿದ್ದರು. ಸರಕಾರವು ನಿಷೇಧಾಜ್ಞೆಯನ್ನು ಹೊರಡಿಸಿತು. ಪೋಲೀಸರು ಮೋರ್ಚಾದ ಮೇಲೆ ಲಾಠಿ ಪ್ರಹಾರ, ಅಶ್ರುವಾಯುಗಳ ಬಳಕೆ ಮಾಡಿದರು. ಅದೇ ದಿನ ಸಾಯಂಕಾಲದಲ್ಲಿ ಕಾಮಗಾರ ಮೈದಾನದಲ್ಲಿ ಸುಮಾರು 50 ಸಾವಿರ ಜನರ ಉಪಸ್ಥಿತಿಯಲ್ಲಿ ಜಾಹೀರು ಸಭೆ ನಡೆಯಿತು. ಅದಕ್ಕೆ ಕಾಮ್ರೇಡ ಡಾಂಗೆಯವರು ಮಾರ್ಗದರ್ಶನ ಮಾಡಿದರು. ಸಂಯುಕ್ತ ಮಹಾರಾಷ್ಟ್ರದ ಬೇಡಿಕೆಯ ಹೋರಾಟವನ್ನು ತೀವ್ರಗೊಳಿಸಲು 21 ನವಂಬರ 1955ರಂದು ಒಂದು ದಿನದ ಲಾಕ್ಷಣಿಕ ಮುಷ್ಕರವನ್ನು ಮಾಡುವ ನಿರ್ಣಯವನ್ನು ಕೈಕೊಳ್ಳಲಾಯಿತು.

**ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಸ್ಥಾಪನೆ :** ಮರಾಠಿ ಭಾಷಿಕ ಜನತೆಯ ಸಂಯುಕ್ತ ಮಹಾರಾಷ್ಟ್ರದ ಬೇಡಿಕೆಯ



ಪ್ರ. ಕೆ. ಅತ್ರೆ

ಸಮಸ್ಯೆಯು ತೊಡಕಿನದಾಗುತ್ತ ಹೋಯಿತು. ರಾಜ್ಯದ ತುಂಬೆಲ್ಲ ಅಸಂತೋಷವು ಕುದಿಯುತ್ತಿತ್ತು. 6 ಫೆಬ್ರುವರಿ 1956ರಂದು ಕೇಶವರಾವ ಜೇಧೆಯವರ ಅಧ್ಯಕ್ಷತೆಯಲ್ಲಿ ಪುಣೆಯ ಟಿಳಕ ಸ್ಮಾರಕ ಮಂದಿರದಲ್ಲಿ ಸಭೆ ಜರುಗಿತು. ಇದರಲ್ಲಿ ಸಮಿತಿಯು ತನ್ನ ಕಾರ್ಯ ನಿರ್ವಾಹಕ ಮಂಡಳಿಯನ್ನು ಜಾಹೀರುಪಡಿಸಿತು. ಅದಕ್ಕನುಸಾರವಾಗಿ ಕಾಮ್ರೇಡ ಶ್ರೀಪಾದ ಅಮೃತ ಡಾಂಗೆಯವರು ಅಧ್ಯಕ್ಷರಾಗಿ, ಡಾ. ತ್ರ್ಯಂ. ರಾ. ನರವಣೆಯವರು ಉಪಾಧ್ಯಕ್ಷರಾಗಿ ಹಾಗೂ ಎಸ್.ಎಮ್. ಜೋಶಿಯವರು ಸಚಿವರಾಗಿ ಆಯ್ಕೆಯಾದರು. ಸಮಿತಿಯ ಸ್ಥಾಪನೆ ಮಾಡುವುದರಲ್ಲಿ ಗ. ತ್ರ್ಯಂ. ಮಾಡಖೋಲಕರ, ಆಚಾರ್ಯ ಪ್ರ.ಕೆ. ಅತ್ರೆ, ಮಧು ದಂಡವತೆ, ಪ್ರಬೋಧನಕಾರ ಕೇಶವ ಠಾಕರೆ, ಯ.ಕೃ. ಸೋವನಿಯವರು ಮಹತ್ವದ ಪಾತ್ರವನ್ನು ವಹಿಸಿದರು. ಇವರ ಜೊತೆಗೆ ಸೇನಾಪತಿ ಬಾಪಟ, ಕ್ರಾಂತಿಸಿಂಹ, ನಾನಾ ಪಾಟೀಲ, ಲಾಲಜಿ ಪೇಂಡಸೆ, ಅಹಿಲ್ಯಾಬಾಯಿ ರಾಂಗಣೇಕರ ಇವರು ಸಂಯುಕ್ತ ಮಹಾರಾಷ್ಟ್ರ ಚಳುವಳಿಯಲ್ಲಿ ಅಮೂಲ್ಯ ಕೊಡುಗೆಯನ್ನು ನೀಡಿದರು. ಆಂದೋಲನವನ್ನು ಮಹಾರಾಷ್ಟ್ರದ ಹಳ್ಳಿ ಹಳ್ಳಿಗಳವರೆಗೆ ತಲುಪಿಸಿದರು.



ಎಸ್.ಎಮ್. ಜೋಶಿ



ಪ್ರಬೋಧನಕಾರ ಠಾಕರೆ

ಯಾವಾಗ ಮುಂಬಯಿ ಮಹಾರಾಷ್ಟ್ರಕ್ಕೆ ದೊರೆಯಲಾರದು ಎಂಬುದು ಸ್ಪಷ್ಟವಾಯಿತೋ ಆಗ ಪ್ರಚಂಡ ಜನ ಆಂದೋಲನ ಆರಂಭವಾಯಿತು. ಈ ಚಳುವಳಿಯಲ್ಲಿ ರಾಜ್ಯ ಸರಕಾರವು ಮಾಡಿದ ಗೋಲೀಬಾರಿನಲ್ಲಿ 106 ಜನರು ಹುತಾತ್ಮರಾದರು. ಮುಂದೆ ಸಂಯುಕ್ತ ಮಹಾರಾಷ್ಟ್ರದ ನಿರ್ಮಿತಿಯ ಸಲುವಾಗಿ ಹುತಾತ್ಮರಾದ ಈ 106 ಸುಪುತ್ರರ 'ಹುತಾತ್ಮಾ ಸ್ಮಾರಕ'ಗಳನ್ನು ಮುಂಬಯಿಯ ಫ್ಲೋರಾ ಫೌಂಟನ್ ಹತ್ತಿರ ನಿಲ್ಲಿಸಲಾಗಿದೆ.

1 ನವಂಬರ 1956ರಂದು ದ್ವಿ-ಭಾಷಿಕ ಮುಂಬಯಿ ರಾಜ್ಯವು ಅಸ್ತಿತ್ವದಲ್ಲಿ ಬಂದಿತು. ಆ ನಂತರ 1957ರಲ್ಲಿ

## ಗೊತ್ತಿದೆಯೇ ನಿಮಗೆ?


ಲೋಕಶಾಹೀರ ಅಣ್ಣಾಭಾವೂ ಸಾಠೆ


ಶಾಹೀರ ಅಮರ ಶೇಖ


ಶಾಹೀರ ದ.ನಾ. ಗವಾಣಕರ

**ಮರಾಠಿ ವರ್ತಮಾನ ಪತ್ರಗಳ ಮತ್ತು ಶಾಹೀರರ ಕಾರ್ಯಗಳು :** ಈ ಆಂದೋಲನದಲ್ಲಿ ವರ್ತಮಾನ ಪತ್ರಗಳ ಪಾತ್ರ ಮಹತ್ವದ್ದಾಗಿತ್ತು. ಪ್ರಬೋಧನ, ಕೇಸರಿ, ಸಕಾಳ, ನವಾಕಾಳ, ನವಯುಗ, ಪ್ರಭಾತ ಇತ್ಯಾದಿ ಅನೇಕ ವರ್ತಮಾನ ಪತ್ರಗಳು ಜನಜಾಗೃತಿಯ ಕಾರ್ಯ ಮಾಡಿದವು. ಸಂಯುಕ್ತ ಮಹಾರಾಷ್ಟ್ರ ಆಂದೋಲನದಲ್ಲಿ ಆಚಾರ್ಯ ಅತ್ರೆಯವರ 'ಮರಾಠಾ' ವರ್ತಮಾನ ಪತ್ರವು ವೈಶಿಷ್ಟ್ಯಪೂರ್ಣ ಕಾರ್ಯ ಮಾಡಿತು. ಬಾಳಾಸಾಹೇಬ ಠಾಕರೆಯವರು 'ಮಾವಳಾ' ಎಂಬ ಉಪನಾಮದಿಂದ ವ್ಯಂಗ ಚಿತ್ರಗಳನ್ನು ತೆಗೆದು ಜನ ಆಂದೋಲನವನ್ನು ವ್ಯಾಪಕಗೊಳಿಸಿದರು.

ಲೋಕಶಾಹೀರ ಅಣ್ಣಾಭಾವೂ ಸಾಠೆ, ಶಾಹೀರ ಅಮರ ಶೇಖ ಮತ್ತು ಶಾಹೀರ ದ.ನಾ. ಗವಾಣಕರ ಇವರು ತಮ್ಮ ಬರವಣಿಗೆಯಿಂದ ದೊಡ್ಡ ಪ್ರಮಾಣದಲ್ಲಿ ಜನ ಜಾಗೃತಿ ಮಾಡಿದರು.

ಲೋಕಸಭೆ, ವಿಧಾನ ಸಭೆ ಮತ್ತು ಮುಂಬಯಿ ಮಹಾನಗರ ಪಾಲಿಕೆಯ ಚುನಾವಣೆಗಳಾದವು. ಅದರಲ್ಲಿ ಸಂಯುಕ್ತ ಮಹಾರಾಷ್ಟ್ರ ಸಮಿತಿಗೆ ದೊಡ್ಡ ಪ್ರಮಾಣದಲ್ಲಿ ಯಶಸ್ಸು ದೊರಕಿತು. ಈ ಫಲಿತಾಂಶದ ಮೇಲಿಂದ ಮತದಾರರು ದ್ವಿಭಾಷಿಕರ ವಿರುದ್ಧ ಮತ್ತು ಸಂಯುಕ್ತ ಮಹಾರಾಷ್ಟ್ರದ ಪರವಾಗಿ ಇದ್ದಾರೆಂಬುದು ಸ್ಪಷ್ಟವಾಯಿತು.

ಪ್ರತಾಪಗಡದ ಮೇಲಿನ ಛತ್ರಪತಿ ಶಿವಾಜಿ ಮಹಾರಾಜರ ಅಶ್ವಾರೂಢ ಪುತ್ಥಳಿಯ ಅನಾವರಣವು ಪ್ರಧಾನಮಂತ್ರಿ ಪಂ. ಜವಾಹರಲಾಲ ನೆಹರೂ ಇವರ ಹಸ್ತಗಳಿಂದ 30 ನವಂಬರ 1957ರಂದು ಆಗುವುದಿತ್ತು. ಆ ಸಮಯದಲ್ಲಿ ಸಂಯುಕ್ತ ಮಹಾರಾಷ್ಟ್ರ ಸಮಿತಿಯು ಭಾಯಿ ಮಾಧವರಾವ ಬಾಗಲ ಇವರ ನೇತೃತ್ವದಲ್ಲಿ ಪ್ರಚಂಡ ಮೋರ್ಚಾ ತೆಗೆಯಿತು. ಆಗ ಎಸ್.ಎಮ್. ಜೋಶಿ, ನಾ.ಗ. ಗೋರೆ, ಜಯಂತರಾವ ಟಿಳಕ, ಪ್ರ.ಕೆ. ಅತ್ರೆ, ಉದ್ಧವರಾವ ಪಾಟೀಲ ಇತ್ಯಾದಿ ಮುಖಂಡರು ಉಪಸ್ಥಿತರಿದ್ದರು. ಸಮಿತಿಯು ಪಸರಣಿ ಘಟ್ಟ ಮತ್ತು ಪೋಲಾದಪೂರ ಹತ್ತಿರ ತೀವ್ರ ನಿದರ್ಶನಗಳನ್ನು ಮಾಡಿತು. ಪಂ. ನೆಹರೂ ಅವರಿಗೆ ಮರಾಠಿ ಭಾಷಿಕರ ಭಾವನೆಗಳ ಮತ್ತು ಪರಿಸ್ಥಿತಿಯ ಅರಿವನ್ನು ಮಾಡಿಕೊಡುವಲ್ಲಿ ಸಮಿತಿಯು ಯಶಸ್ವಿಯಾಯಿತು.


ಉದ್ಧವರಾವ ಪಾಟೀಲ

ಸಂಯುಕ್ತ ಮಹಾರಾಷ್ಟ್ರ ಸಮಿತಿಯ ನೇತೃತ್ವದಲ್ಲಿಯ ಆಂದೋಲನದಿಂದಾಗಿ ಕೇಂದ್ರ ಸರಕಾರವು ಮಹಾರಾಷ್ಟ್ರ ನಿರ್ಮಿತಿಗೆ ಅನುಕೂಲತೆಯನ್ನು ತೋರಿಸಿತು. ಈ ಪ್ರಸಂಗದಲ್ಲಿ ಕಾಂಗ್ರೆಸ್ ಅಧ್ಯಕ್ಷರಾದ ಇಂದಿರಾ ಗಾಂಧೀಯವರು ಕೂಡ ಸಂಯುಕ್ತ ಮಹಾರಾಷ್ಟ್ರ ನಿರ್ಮಿತಿಗೆ ಬೆಂಬಲ ನೀಡಿದರು. ಮಹಾರಾಷ್ಟ್ರ ಮತ್ತು ಗುಜರಾತ ಈ ಎರಡು ಭಾಷಿಕ ಪ್ರಾಂತಗಳ ರಚನೆಗೆ ಕೇಂದ್ರ ಸರಕಾರವು ಅನುಮತಿ ನೀಡಿತು. ಎಪ್ರಿಲ 1960ರಲ್ಲಿ ಸಂಸತ್ತು ಮುಂಬಯಿ ಪುನರ್ರಚನಾ ಕಾಯ್ದೆ ಮಂಜೂರು ಮಾಡಿತು. ಈ ಕಾಯ್ದೆಗನುಸಾರವಾಗಿ 1 ಮೇ 1960 ರಂದು ಮಹಾರಾಷ್ಟ್ರ ರಾಜ್ಯದ ನಿರ್ಮಿತಿಯಾಯಿತು.

1 ಮೇ 1960ರಂದು ಬೆಳಗಿನ ಜಾವ ರಾಜಭವನದಲ್ಲಾದ ವಿಶೇಷ ಸಮಾರಂಭದಲ್ಲಿ ಪಂಡಿತ ನೆಹರೂರವರು ಕಾರ್ಮಿಕ ದಿನದಂದು ಮಹಾರಾಷ್ಟ್ರ ರಾಜ್ಯದ ಅಧಿಕೃತ ಘೋಷಣೆಯನ್ನು ಮಾಡಿದರು. ಮಹಾರಾಷ್ಟ್ರದ ಪ್ರಥಮ ಮುಖ್ಯಮಂತ್ರಿಯಾಗಿ ಯಶವಂತರಾವ ಚವ್ಹಾಣ ಇವರು ಜವಾಬ್ದಾರಿಯನ್ನು ಸ್ವೀಕರಿಸಿದರು.


ಯಶವಂತರಾವ ಚವ್ಹಾಣ

# ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) 1 ಮೇ 1960ರಂದು ........... ರಾಜ್ಯದ ನಿರ್ಮಿತಿಯಾಯಿತು.

(ಅ) ಗೋವಾ (ಬ) ಕರ್ನಾಟಕ

(ಕ) ಆಂಧ್ರ ಪ್ರದೇಶ (ಡ) ಮಹಾರಾಷ್ಟ್ರ

(2) ಮುಂಬಯಿ ಮಹಾನಗರ ಪಾಲಿಕೆಯಲ್ಲಿ ಮುಂಬಯಿಸಹಿತ ಸಂಯುಕ್ತ ಮಹಾರಾಷ್ಟ್ರದ ಠರಾವನ್ನು .......... ಇವರು ಮಂಡಿಸಿದರು.

(ಅ) ಗ.ತ್ರ್ಯಂ ಮಾಡಖೋಲಕರ (ಬ) ಆಚಾರ್ಯ ಅತ್ರೆ

(ಕ) ದ.ವಾ. ಪೋತದಾರ (ಡ) ಶಂಕರರಾವ ದೇವ

(3) ಮಹಾರಾಷ್ಟ್ರ ಪ್ರಥಮ ಮುಖ್ಯಮಂತ್ರಿಯಾಗಿ .......... ಇವರು ಜವಾಬ್ದಾರಿಯನ್ನು ಸ್ವೀಕರಿಸಿದರು.

(ಅ) ಯಶವಂತರಾವ ಚವ್ಹಾಣ (ಬ) ಪೃಥ್ವಿರಾಜ ಚವ್ಹಾಣ

(ಕ) ಶಂಕರರಾವ ಚವ್ಹಾಣ (ಡ) ವಿಲಾಸರಾವ ದೇಶಮುಖ

**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಸ್ಥಾಪನೆ ಮಾಡಲಾಯಿತು.


(2) ಸಂಯುಕ್ತ ಮಹಾರಾಷ್ಟ್ರದ ಹೋರಾಟದಲ್ಲಿ ವರ್ತಮಾನ ಪತ್ರಗಳ ಪಾತ್ರ ಮಹತ್ವದ್ದಾಗಿತ್ತು.

**3. ಟಿಪ್ಪಣಿ ಬರೆಯಿರಿ.**

(1) ಸಂಯುಕ್ತ ಮಹಾರಾಷ್ಟ್ರ ಪರಿಷತ್ತು.

(2) ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಕೊಡುಗೆ

**4. ಕೆಳಗಿನ ಕಲ್ಪನಾ ಚಿತ್ರವನ್ನು ಪೂರ್ಣಮಾಡಿರಿ.**




**ಉಪಕ್ರಮ**

ಮಹಾರಾಷ್ಟ್ರದ ನಿರ್ಮಿತಿಯ ಸಲುವಾಗಿ ಮಹತ್ವದ ಕೊಡುಗೆಯನ್ನು ನೀಡಿದ ವ್ಯಕ್ತಿಗಳ ಮಾಹಿತಿಯನ್ನು ಪಡೆಯಿರಿ ಹಾಗೂ ಶಿಕ್ಷಕರ ಸಹಾಯದಿಂದ ಅದರ ಮೇಲೆ ಆಧಾರಿತ ಪ್ರಾಜೆಕ್ಟ್ ತಯಾರಿಸಿರಿ.

AHTJC4

# ನಾಗರಿಕ ಶಾಸ್ತ್ರ

## (ಸಂಸದೀಯ ಸರಕಾರ ಪದ್ಧತಿ)

### ಅನುಕ್ರಮಣಿಕೆ


| ಅ.ಕ್ರ. | ಪಾಠದ ಹೆಸರು ................................ | ಪುಟ |
|---|---|---|
| 1. | ಸಂಸದೀಯ ಸರಕಾರ ಪದ್ಧತಿಯ ಪರಿಚಯ ..... | 68 |
| 2. | ಭಾರತದ ಸಂಸತ್ತು......................... | 71 |
| 3. | ಕೇಂದ್ರೀಯ ಕಾರ್ಯಾಂಗ................... | 75 |
| 4. | ಭಾರತದಲ್ಲಿಯ ನ್ಯಾಯಾಂಗ ವ್ಯವಸ್ಥೆ.......... | 79 |
| 5. | ರಾಜ್ಯ ಸರಕಾರ ........................... | 83 |
| 6. | ನೌಕರಶಾಹಿ ............................... | 86 |

# ಅಧ್ಯಯನ ನಿಷ್ಪತ್ತಿ

| ಸೂಚಿಸಿದ ಶೈಕ್ಷಣಿಕ ಪ್ರಕ್ರಿಯೆಗಳು | ಅಧ್ಯಯನ ನಿಷ್ಪತ್ತಿ |
|---|---|
| **ವೈಯಕ್ತಿಕವಾಗಿ/ಅಧ್ಯಯನಾರ್ಥಿಗೆ ಜೊತೆಯಾಗಿ/ಗುಂಪಿನಲ್ಲಿ ಅಧ್ಯಯನದ ಅವಕಾಶ ವನ್ನು ನೀಡುವುದು ಮತ್ತು ಅವನನ್ನು ಕೆಳಗಿನ ಸಂಗತಿಗಳಿಗಾಗಿ ಪ್ರವೃತ್ತಗೊಳಿಸುವುದು**<br>• ಸಂವಿಧಾನ, ಸಂಸತ್ತು, ನ್ಯಾಯಾಂಗ, ಸೀಮಾಂತೀಕರಣ ಇಲ್ಲವೆ ಅಂಚು ಬಿಡುವುದು (marginalization) ಇತ್ಯಾದಿ ಕಲ್ಪನೆಗಳ ಬಗೆಗಿನ ಚರ್ಚೆಯಲ್ಲಿ ಭಾಗವಹಿಸುವುದು.<br>• ಭಾರತೀಯ ಸಂವಿಧಾನದ ಮಹತ್ವ, ಪ್ರಸ್ತಾವನೆ, ಸಂಸದೀಯ ಸರಕಾರ ಪದ್ಧತಿ, ಅಧಿಕಾರ ವಿಭಜನೆ, ಒಕ್ಕೂಟ ರಾಜ್ಯ ವಾದಗಳ ಮೇಲೆ ರೇಖಾಚಿತ್ರ ಮತ್ತು ಚಿತ್ರಗಳೊಂದಿಗೆ ಭಿತ್ತಿಚಿತ್ರಗಳನ್ನು ತಯಾರಿಸುವುದು ಮತ್ತು ಲಿಖಿತ/ಮೌಖಿಕವಾಗಿ ಸಾದರ ಪಡಿಸುವುದು.<br>• ವರ್ಗದಲ್ಲಿ/ಶಾಲೆಯಲ್ಲಿ/ಮನೆಯಲ್ಲಿ/ಸಮಾಜದಲ್ಲಿ ಸ್ವಾತಂತ್ರ್ಯ, ಸಮತೆ ಮತ್ತು ಬಂಧುತ್ವ ಈ ತತ್ವಗಳನ್ನು ಹೇಗೆ ಆಚರಿಸಲಾಗುತ್ತದೆ. ಎಂಬುದರ ಕುರಿತು ವಾದ ವಿವಾದ ಮಾಡುವುದು.<br>• ರಾಜ್ಯದ/ಕೇಂದ್ರಾಡಳಿತ ಪ್ರದೇಶಗಳ ಲೋಕಸಭಾ ಮತಕ್ಷೇತ್ರಗಳ ನಕಾಶೆಗಳ ನಿರೀಕ್ಷಣೆ ಮಾಡುವುದು.<br>• ಮಕ್ಕಳ ಸಂಸತ್ತು ಮತ್ತು ಅಣಕು ಸಂಸತ್ತು ಆಚಾರಸಂಹಿತೆಯೊಂದಿಗೆ ಅಣಕು ಚುನಾವಣೆಗಳನ್ನು ಆಯೋಜಿಸುವುದು.<br>• ತಮ್ಮ ಪರಿಸರದಲ್ಲಿಯ/ನೆರೆಮನೆಯಲ್ಲಿಯ ನೋಂದಣಿಯಾದ ಮತದಾರರ ಯಾದಿಯನ್ನು ತಯಾರಿಸುವುದು.<br>• ತಮ್ಮ ಪರಿಸರದಲ್ಲಿ ಮತದಾನದ ಮಹತ್ವವನ್ನು ಕುರಿತು ಜಾಗೃತಿ ಆಂದೋಲನವನ್ನು ಆಯೋಜಿಸುವುದು.<br>• ತಮ್ಮ ಮತಕ್ಷೇತ್ರದಲ್ಲಿಯ ಜನತೆಯ ಪ್ರತಿನಿಧಿಗಳು ಕೈಕೊಂಡ ಸಾರ್ವಜನಿಕ ಕಾರ್ಯದ ಬಗ್ಗೆ ತಿಳಿದುಕೊಳ್ಳುವುದು.<br>• ಪ್ರಾಥಮಿಕ ಮಾಹಿತಿ ವರದಿ (FIR)ಯಲ್ಲಿಯ ಆಶಯವನ್ನು ಪರೀಕ್ಷಿಸುವುದು.<br>• ಹಕ್ಕುದಾರರಿಗೆ ನ್ಯಾಯ ದೊರೆಯುವುದರಲ್ಲಿಯ ನ್ಯಾಯಾಧೀಶರ ಪಾತ್ರ-ಇದರ ಮೇಲೆ ವಿಸ್ತೃತ ಮತ್ತು ಚಿಕಿತ್ಸಕ ಲೇಖನಗಳ ಮುಖಾಂತರ ಸ್ವ-ಅಭಿಪ್ರಾಯ ಅಭಿವ್ಯಕ್ತಿಯ ಅವಕಾಶ ನೀಡುವುದು.<br>• ವಿಶೇಷತ: ಸ್ತ್ರೀಯರು, ಪರಿಶಿಷ್ಟ ಜಾತಿ ಮತ್ತು ಪಂಗಡಗಳು, ಸಂಚಾರಿ ಮತ್ತು ವಿಮುಕ್ತ ಪಂಗಡಗಳು, ಧಾರ್ಮಿಕ ಮತ್ತು ಭಾಷಿಕ ಅಲ್ಪ ಸಂಖ್ಯಾತರು, ವಿಕಲಚೇತನರು, ವಿಶೇಷ ಅವಶ್ಯಕತೆಯಿರುವ ಮಕ್ಕಳು, ಇತರ ವಂಚಿತ ಗುಂಪುಗಳು-ಇವರ ಮಾನವೀ ಹಕ್ಕುಗಳ ಉಲ್ಲಂಘನೆ, ಸಂರಕ್ಷಣೆ ಮತ್ತು ಪ್ರಚಾರ ಇವುಗಳನ್ನು ಕುರಿತು ಗುಂಪು ಚರ್ಚೆಯನ್ನು ಆಯೋಜಿಸುವುದು.<br>• ಬಾಲ ಕಾರ್ಮಿಕರು, ಮಕ್ಕಳ ಹಕ್ಕು ಮತ್ತು ಭಾರತದಲ್ಲಿಯ ಫೌಜದಾರಿ ನ್ಯಾಯವ್ಯವಸ್ಥೆಗಳ ಮೇಲಿನ ಭೂಮಿಕಾಪಾಲನೆ.<br>• ಸಾರ್ವಜನಿಕ ಸೌಲಭ್ಯಗಳು ಮತ್ತು ನೀರಿನ, ಆರೋಗ್ಯ, ಸೌಕರ್ಯಗಳ, ವಿದ್ಯುಚ್ಛಕ್ತಿಯ ಲಭ್ಯತೆಗಳಲ್ಲಿರುವ ವಿಷಮತೆ ಇವುಗಳ ವಿಷಯದಲ್ಲಿ ಸಹಕಾರಿ ಅಭ್ಯಾಸಕರೊಡನೆ ಅನುಭವಗಳ ಕೊಡು-ಕೊಳ್ಳುವಿಕೆಗೆ ಅವಕಾಶ ನೀಡುವುದು.<br>• ಸಾರ್ವಜನಿಕ ಸೌಕರ್ಯಗಳನ್ನು ಪೂರೈಸುವಲ್ಲಿ ಸರಕಾರವು ಹೇಗೆ ಹೊಣೆಗಾರವಾಗಿದೆಯೆಂಬುದನ್ನು ಕುರಿತು ವಾದ-ವಿವಾದವನ್ನು ಆಯೋಜಿಸುವುದು. | **ಅಧ್ಯಯನಾರ್ಥಿ**<br>08.73H.14 ಭಾರತದ ಸಂವಿಧಾನದ ಸಂದರ್ಭದಲ್ಲಿ ತಮ್ಮ ಪ್ರದೇಶದಲ್ಲಿಯ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳ ಅನ್ವಯಾರ್ಥ ಹಚ್ಚುತ್ತಾರೆ.<br>08.73H.15 ಘಟಕರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರ ಇವುಗಳಲ್ಲಿ ವ್ಯತ್ಯಾಸ ಮಾಡುತ್ತಾರೆ.<br>08.73H.16 ಲೋಕಸಭೆಯ ಚುನಾವಣಾ ಪ್ರಕ್ರಿಯೆಯ ವರ್ಣನೆ ಮಾಡುತ್ತಾರೆ.<br>08.73H.17 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಲೋಕ ಸಭೆಯ ಮತಕ್ಷೇತ್ರ ನಕಾಶೆಯಲ್ಲಿ ತಮ್ಮ ಸ್ವಂತದ ಮತಕ್ಷೇತ್ರದ ಸ್ಥಾನವನ್ನು ನಿರ್ಧರಿಸಿ ಸ್ಥಾನಿಕ ಜನತೆಯ ಪ್ರತಿನಿಧಿಗಳ ಹೆಸರುಗಳನ್ನು ಬರೆಯುತ್ತಾರೆ.<br>08.73H.18 ಕಾಯ್ದೆ ನಿರ್ಮಿತಿಯ ಪ್ರಕ್ರಿಯೆಯ ವರ್ಣನೆ ಮಾಡುತ್ತಾರೆ. (ಉದಾ., ಮನೆಮಾರಿಗೆ ಹಿಂಸಾಚಾರದಿಂದ ಸಂರಕ್ಷಣೆ ನೀಡುವ ಕಾಯ್ದೆ, ಮಾಹಿತಿ ಅಧಿಕಾರದ ಕಾಯ್ದೆ, ಶಿಕ್ಷಣದ ಹಕ್ಕಿನ ಕಾಯ್ದೆ ಇತ್ಯಾದಿ)<br>08.73H.19 ಕೆಲವು ಮಹತ್ವದ ನ್ಯಾಯಾಲಯದ ನಿರ್ಣಯಗಳನ್ನು ಹೇಳಿ ಅವುಗಳ-ಆಧಾರದ ಮೇಲಿಂದ ಭಾರತದಲ್ಲಿಯ ನ್ಯಾಯಾಂಗ ವ್ಯವಸ್ಥೆಯ ಕಾರ್ಯಗಳನ್ನು ಸ್ಪಷ್ಟಪಡಿಸುತ್ತಾರೆ.<br>08.73H.20 'ಪ್ರಥಮ ಮಾಹಿತಿ ವರದಿ'ಯನ್ನು ಹೇಗೆ ದಾಖಲು ಮಾಡಲಾಗುತ್ತದೆಯೆಂಬುದರ ಪ್ರಾತ್ಯಕ್ಷಿಕವನ್ನು ತೋರಿಸುತ್ತಾರೆ.<br>08.73H.21 ತಮ್ಮ ಪ್ರದೇಶದಲ್ಲಿಯ ದುರ್ಬಲ ಸಮಾಜ ಘಟಕಗಳು ಪರಿಘದ ಹೊರಗೆ ಏಕೆ ಇರಬೇಕಾಗುತ್ತದೆಯೆಂಬುದರ ಕಾರಣಗಳ ಮತ್ತು ಪರಿಣಾಮಗಳ ವಿಶ್ಲೇಷಣೆ ಮಾಡುತ್ತಾರೆ.<br>08.73H.22 ನೀರು, ಸಾರ್ವಜನಿಕ ಸ್ವಚ್ಛತೆ, ರಸ್ತೆ, ವಿದ್ಯುಚ್ಛಕ್ತಿ ಮುಂತಾದ ಸಾರ್ವಜನಿಕ ಸೌಕರ್ಯಗಳನ್ನು ಪೂರೈಸುವುದರಲ್ಲಿಯ ಸರಕಾರದ ಪಾತ್ರವನ್ನು ಗುರುತಿಸುತ್ತಾರೆ. ಹಾಗೂ ಈ ಸೇವೆಗಳ ಲಭ್ಯತೆಯನ್ನು ಗಮನಿಸುತ್ತಾರೆ.<br>08.73H.23 ಮಹಾರಾಷ್ಟ್ರದಲ್ಲಿಯ ಸರಕಾರದ ಸ್ವರೂಪವನ್ನು ಸ್ಪಷ್ಟಪಡಿಸುತ್ತಾರೆ. |

# 1. ಸಂಸದೀಯ ಸರಕಾರ ಪದ್ಧತಿಯ ಪರಿಚಯ

ಭಾರತದ ಸಂವಿಧಾನದಲ್ಲಿ ಎಂಥ ಪ್ರಕಾರದ ಆಡಳಿತ ವ್ಯವಸ್ಥೆ ಅಥವಾ ಆಡಳಿತ ಪದ್ಧತಿಯನ್ನು ನಮೂದಿಸಲಾಗಿದೆ ಎಂಬುದರ ಅಭ್ಯಾಸವನ್ನು ನಾವು ಈ ಪಾಠದಲ್ಲಿ ಮಾಡುವವರಿದ್ದೇವೆ.

**ಈ ಪ್ರಶ್ನೆಗಳು ನಿಮಗೂ ಬಿದ್ದಿವೆಯೇ?**

- ಸಂಸದೀಯ ಸರಕಾರ ಪದ್ಧತಿ ಎಂದರೇನು?
- ಭಾರತಕ್ಕೆ ಪ್ರಧಾನ ಮಂತ್ರಿಗಳಿದ್ದಾರೆ, ಆದರೆ ಅಮೇರಿಕೆಗೆ ಪ್ರಧಾನ ಮಂತ್ರಿಗಳು ಏಕಿಲ್ಲ?
- ಸಂಸದೀಯ ಸರಕಾರ ಪದ್ಧತಿ ಮತ್ತು ಅಧ್ಯಕ್ಷೀಯ ಸರಕಾರ ಪದ್ಧತಿ ಇವುಗಳಲ್ಲಿ ಏನು ವ್ಯತ್ಯಾಸವಿದೆ?

ಮೇಲೆ ಉಲ್ಲೇಖಿಸಲಾದ ಕೆಲವು ಪ್ರಶ್ನೆಗಳಿಂದ ನಮ್ಮ ಗಮನಕ್ಕೆ ಬರುವ ಸಂಗತಿಯೇನೆಂದರೆ ಪ್ರತಿಯೊಂದು ದೇಶದಲ್ಲಿಯ ಸರಕಾರ ಪದ್ಧತಿಯ ಸ್ವರೂಪವು ಭಿನ್ನವಾಗಿರುತ್ತದೆ. ವಿವಿಧ ಪ್ರಕಾರದ ಸರಕಾರ ಪದ್ಧತಿಗಳ ಸ್ವರೂಪವನ್ನು ತಿಳಿದು ಕೊಳ್ಳುವ ಮೊದಲು ನಾವು ಸರಕಾರದ ಪ್ರಮುಖ ಶಾಖೆಗಳ ಮಾಹಿತಿಯನ್ನು ಸ್ವಲ್ಪದರಲ್ಲಿ ಪಡೆಯೋಣ.

ಇದರಲ್ಲಿಯ ಶಾಸಕಾಂಗವು ಕಾಯ್ದೆಗಳ ನಿರ್ಮಿತಿಯ ಕಾರ್ಯ ಮಾಡುತ್ತದೆ. ಕಾರ್ಯಾಂಗವು ಆ ಕಾಯ್ದೆಗಳನ್ನು ಪ್ರತ್ಯಕ್ಷ ಜಾರಿಗೊಳಿಸುತ್ತದೆ. ನ್ಯಾಯಾಂಗವು ನ್ಯಾಯದಾನದ ಕಾರ್ಯ ಮಾಡುತ್ತದೆ. ಈ ಮೂರೂ ಶಾಖೆಗಳ ಕಾರ್ಯಗಳು, ಅವುಗಳ ಅಧಿಕಾರ ಕ್ಷೇತ್ರ ಹಾಗೂ ಅವುಗಳ ಮೇಲಿನ ಮಿತಿಗಳು ಮೂರೂ ಶಾಖೆಗಳ ನಡುವಣ ಪರಸ್ಪರ ಸಂಬಂಧ ಇವುಗಳನ್ನು ಸಂಸತ್ತು ನಿರ್ಧರಿಸುತ್ತದೆ. ಈ ಸಂಬಂಧಗಳು ಯಾವ ಪ್ರಕಾರದ್ದಿರುತ್ತವೆಯೆಂಬುದರ ಮೇಲಿಂದ ಸರಕಾರದ ಸ್ವರೂಪವು ನಿರ್ಧಾರವಾಗುತ್ತದೆ.

ಸರಕಾರ ಪದ್ಧತಿಯ ಪ್ರಮುಖ ಎರಡು ಪ್ರಕಾರಗಳು ಇವುಗಳ ಮೇಲಿಂದ ನಿರ್ಮಾಣವಾದದ್ದು ಕಂಡುಬರುತ್ತದೆ. (1) ಸಂಸದೀಯ ಸರಕಾರ ಪದ್ಧತಿ (2) ಅಧ್ಯಕ್ಷೀಯ ಸರಕಾರ ಪದ್ಧತಿ

## ಸಂಸದೀಯ ಸರಕಾರ ಪದ್ಧತಿ

ಸಂಸದೀಯ ಸರಕಾರ ಪದ್ಧತಿಯು ಪ್ರಾಮುಖ್ಯವಾಗಿ ಇಂಗ್ಲಂಡಿನಲ್ಲಿ ವಿಕಸಿತವಾಯಿತು. ಇಂಗ್ಲಂಡಿನಲ್ಲಿ ಅಲಿಖಿತ ಸಂವಿಧಾನವಿದ್ದು ಇಂದು ಕೂಡ ಅಲ್ಲಿಯ ಸಾಕಷ್ಟು ರಾಜ್ಯಾಡಳಿತವು ರೂಢ ಸಂಕೇತಗಳ ಆಧಾರದ ಮೇಲೆ ನಡೆಯುತ್ತದೆ. 'ಪಾರ್ಲಿಮೆಂಟು' ಹೀಗೆಯೇ ಅಲ್ಲಿ ಉತ್ಕ್ರಾಂತಿ ಹೊಂದಿದ ಸಂಸ್ಥೆಯಾಗಿದೆ. ಪಾರ್ಲಿಮೆಂಟಿನ ಮೇಲೆ ಆಧಾರಿತ ಪಾರ್ಲಿಮೆಂಟರಿ (Parliamentary) ಸರಕಾರ ಪದ್ಧತಿಯು ಇಂಗ್ಲಂಡಿನ ಕೊಡುಗೆಯೆಂದು ತಿಳಿಯಲಾಗುತ್ತದೆ. ಭಾರತದಲ್ಲಿ ಈ ಸರಕಾರ ಪದ್ಧತಿಯನ್ನು ಸಂಸದೀಯ ಸರಕಾರ ಪದ್ಧತಿ ಎಂದು ನಾವು ಸ್ವೀಕರಿಸಿದ್ದೇವೆ. ನಿಶ್ಚಿತವಾಗಿಯೂ ಇಂಗ್ಲಂಡಿನಲ್ಲಿಯ ಪಾರ್ಲಿಮೆಂಟರಿ ಸರಕಾರ ಪದ್ಧತಿ ಮತ್ತು ಭಾರತದಲ್ಲಿಯ ಸಂಸದೀಯ ಸರಕಾರ ಪದ್ಧತಿಗಳಲ್ಲಿ ವ್ಯಾಪಕ ಅರ್ಥದಲ್ಲಿ ಸಾಮ್ಯಕಂಡುಬರುತ್ತದೆ. ಆದರೆ ಸಂಸ್ಥಾತ್ಮಕ ಆಶಯದ ದೃಷ್ಟಿಯಿಂದ ಭಾರತೀಯ ಸರಕಾರ ಪದ್ಧತಿಯು ಭಿನ್ನವಾಗಿದೆ. ಭಾರತದ ಸಂಸದೀಯ ಸರಕಾರ ಪದ್ಧತಿಯ ಕೆಳಗಿನ ವೈಶಿಷ್ಟ್ಯಗಳನ್ನು ತಿಳಿದುಕೊಳ್ಳೋಣ.

ಸಂಸದೀಯ ಸರಕಾರ ಪದ್ಧತಿಯು ರಾಜ್ಯಾಡಳಿತದ ಒಂದು ಪದ್ಧತಿಯಾಗಿದೆ. ಕೇಂದ್ರಿಯ ಆಡಳಿತ ವ್ಯವಸ್ಥೆಯ ಶಾಸಕಾಂಗಕ್ಕೆ ಸಂಸತ್ತು ಎಂದು ಕರೆಯಲಾಗುತ್ತದೆ. ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆಗಳು ಕೂಡಿ ಸಂಸತ್ತು ನಿರ್ಮಾಣವಾಗುತ್ತದೆ.

- ಸಂಸತ್ತಿನ ಲೋಕಸಭೆಯಲ್ಲಿಯ ಪ್ರತಿನಿಧಿಗಳು ಜನರಿಂದ ನೇರವಾಗಿ ಆಯ್ಕೆಯಾಗುತ್ತಾರೆ. ಈ ಸದನದಲ್ಲಿಯ ಸದಸ್ಯರ ಸಂಖ್ಯೆಯು ನಿಶ್ಚಿತವಾಗಿರುತ್ತದೆ.
- ನಿರ್ದಿಷ್ಟ ಕಾಲಾವಧಿಯ ನಂತರ ಲೋಕಸಭೆಯ ಚುನಾವಣೆಗಳಾಗುತ್ತವೆ. ಈ ಚುನಾವಣೆಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳು ಸ್ಪರ್ಧಿಸುತ್ತವೆ. ಅದರಲ್ಲಿ ಯಾವ ರಾಜಕೀಯ ಪಕ್ಷಕ್ಕೆ ಅರ್ಧಕ್ಕಿಂತ ಹೆಚ್ಚು ಸ್ಥಾನಗಳು ದೊರೆಯುತ್ತವೆಯೋ, ಅದನ್ನು ಬಹುಮತವುಳ್ಳ ಪಕ್ಷವೆಂದು ತಿಳಿಯಲಾಗುತ್ತದೆ. ಬಹುಮತವುಳ್ಳ ಪಕ್ಷವು ಸರಕಾರವನ್ನು ರಚಿಸುತ್ತದೆ.
- ಕೆಲವೊಮ್ಮೆ ಯಾವುದೇ ಒಂದು ಪಕ್ಷಕ್ಕೆ ಈ ರೀತಿ ಸ್ಪಷ್ಟ ಬಹುಮತ ದೊರೆಯುವುದಿಲ್ಲ. ಇಂಥ ಸಮಯದಲ್ಲಿ ಕೆಲವು ಪಕ್ಷಗಳು ಒಂದೆಡೆ ಬಂದು ತಮ್ಮ ಬಹುಮತವನ್ನು ಸಿದ್ಧಪಡಿಸುತ್ತವೆ ಹಾಗೂ ಅವುಗಳು ಸರಕಾರವನ್ನು ಸ್ಥಾಪನೆ ಮಾಡಬಹುದು. ಇದಕ್ಕೆ ಸಮ್ಮಿಶ್ರ ಸರಕಾರ ಎನ್ನುತ್ತಾರೆ.
- ಈ ರೀತಿ ಜನರಿಂದ ಆರಿಸಿ ಬಂದ ಪ್ರತಿನಿಧಿಗಳು ಶಾಸಕಾಂಗದ ಸದಸ್ಯರಾಗುತ್ತಾರೆ ಹಾಗೂ ಬಹುಮತವನ್ನು ಹೊಂದಿದ ಪಕ್ಷವು ತನ್ನ ಸರಕಾರವನ್ನು ಸ್ಥಾಪಿಸಬಲ್ಲದು.
- ಈ ಬಹುಮತವುಳ್ಳ ಪಕ್ಷದ ಮುಖಂಡನು ಪ್ರಧಾನ ಮಂತ್ರಿಯಾಗುತ್ತಾನೆ ಹಾಗೂ ಅವನು ತನ್ನ ಕೆಲವು ಸಹಕಾರಿಗಳನ್ನು ಮಂತ್ರಿ ಸ್ಥಾನಕ್ಕಾಗಿ ಆಯ್ಕೆ ಮಾಡುತ್ತಾನೆ.

- ಪ್ರಧಾನಮಂತ್ರಿ ಮತ್ತು ಅವನು ಆಯ್ಕೆಮಾಡಿದ ಮಂತ್ರಿಮಂಡಳವು (ಸಚಿವ ಸಂಪುಟವು) ಸಂಸದೀಯ ಸರಕಾರ ಪದ್ಧತಿಯಲ್ಲಿಯ ಕಾರ್ಯಾಂಗವಾಗಿರುತ್ತದೆ. ಸಂಸದೀಯ ಸರಕಾರ ಪದ್ಧತಿಯಲ್ಲಿಯ ಕಾರ್ಯಾಂಗದ ಮೇಲೆ ಇಬ್ಬಗೆಯ ಜವಾಬ್ದಾರಿಯಿರುತ್ತದೆ. (1) ಕಾರ್ಯಾಂಗವು ಕಾಯ್ದೆಗಳನ್ನು ಜಾರಿಯಲ್ಲಿ ತರಬೇಕಾಗುತ್ತದೆ (2) ಮಂತ್ರಿಗಳು ಶಾಸಕಾಂಗದ ಸದಸ್ಯರೂ ಇರುತ್ತಾರೆ. ಆದ್ದರಿಂದ ಅವರಿಗೆ ಶಾಸಕಾಂಗಕ್ಕೆ ಸಂಬಂಧಿತ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ.

ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳವು ತಮ್ಮ ಎಲ್ಲ ಕೃತಿ ಮತ್ತು ಧೋರಣೆಗಳಿಗಾಗಿ ಪುನಃ ಶಾಸಕಾಂಗಕ್ಕೇನೆ ಜವಾಬ್ದಾರರಾಗಿರುತ್ತಾರೆ. ಇದರ ಅರ್ಥವೇನೆಂದರೆ ಮಂತ್ರಿ ಮಂಡಳವು ಶಾಸಕಾಂಗದ ಜೊತೆಗೆ ರಾಜ್ಯಾಡಳಿತ ಮಾಡಬೇಕಾಗುತ್ತದೆ. ಆದ್ದರಿಂದಲೇ ಸಂಸದೀಯ ಸರಕಾರ ಪದ್ಧತಿಗೆ 'ಜವಾಬ್ದಾರ ಸರಕಾರ ಪದ್ಧತಿ' ಎನ್ನುತ್ತಾರೆ. ಅದೇ ರೀತಿ ಸಾಮೂಹಿಕ ಜವಾಬ್ದಾರಿಯು ಸಂಸದೀಯ ಸರಕಾರ ಪದ್ಧತಿಯ ಮತ್ತೊಂದು ಅದ್ವಿತೀಯ ವೈಶಿಷ್ಟ್ಯವಾಗಿದೆ. ಯಾವುದೊಂದು ಖಾತೆಯ ನಿರ್ಣಯವನ್ನು ಇಡೀ ರಾಜ್ಯದ ನಿರ್ಣಯವೆಂದು ತಿಳಿಯಲಾಗುತ್ತದೆ. ಈ ನಿರ್ಣಯದ ಜವಾಬ್ದಾರಿಯು ಸಂಪೂರ್ಣ ಮಂತ್ರಿಮಂಡಳದ್ದಾಗಿರುತ್ತದೆ. ಅದನ್ನು ಹೇಗೆ ಆಚರಣೆಯಲ್ಲಿ ತರಲಾಗುತ್ತದೆಂಬುದನ್ನು ನಾವು ಸೋದಾಹರಣವಾಗಿ ಮುಂದಿನ ಎರಡು ಪಾಠಗಳಲ್ಲಿ ನೋಡುವವರಿದ್ದೇವೆ.

ಸಂಸದೀಯ ಸರಕಾರ ಪದ್ಧತಿಯಲ್ಲಿ ಕಾರ್ಯಾಂಗವು ಶಾಸಕಾಂಗದ ವಿಶ್ವಾಸದ ಮೇಲೆ ಅವಲಂಬಿಸಿರುತ್ತದೆ. ಇದರರ್ಥ ಎಲ್ಲಿಯ ವರೆಗೆ ಕಾರ್ಯಾಂಗಕ್ಕೆ ಶಾಸಕಾಂಗದ ಬೆಂಬಲವಿರುತ್ತದೆಯೋ ಅಥವಾ ಸಮ್ಮತಿ ಇರುತ್ತದೆಯೋ ಅಲ್ಲಿಯ ವರೆಗೆ ಮಾತ್ರ ಕಾರ್ಯಾಂಗವು ಅಂದರೆ ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳವು ಅಧಿಕಾರದಲ್ಲಿರುತ್ತದೆ. ತನ್ನ ಇಚ್ಛೆಗೆ ಅನುಸಾರವಾಗಿ ಕಾರ್ಯಾಂಗವು ಕಾರ್ಯ ಮಾಡುತ್ತಿಲ್ಲ ಎಂದು ಶಾಸಕಾಂಗಕ್ಕೆ ಅಥವಾ ಸಂಸತ್ತಿಗೆ ಅನಿಸಿದರೆ ಆಗ ಸಂಸತ್ತು ಅವಿಶ್ವಾಸದ ಗೊತ್ತುವಳಿಯನ್ನು ಮಂಡಿಸಿ ಕಾರ್ಯಾಂಗವನ್ನು ಅಧಿಕಾರದಿಂದ ದೂರ ಮಾಡುತ್ತದೆ. ಅವಿಶ್ವಾಸದ ಗೊತ್ತುವಳಿಯು ನಿಯಂತ್ರಣದ ಒಂದು ಪ್ರಭಾವಶಾಲಿ ಸಾಧನವಾಗಿದೆ.

ಸಂಸದೀಯ ಸರಕಾರ ಪದ್ಧತಿಯಲ್ಲಿ ಸಂಸತ್ತು ಅಥವಾ ಶಾಸಕಾಂಗವು ಶ್ರೇಷ್ಠವಾಗಿರುತ್ತದೆ. ಜನರು ಆರಿಸಿ ಕಳುಹಿಸಿದ ಪ್ರತಿನಿಧಿಗಳು ಸಾಮಾನ್ಯ ಜನತೆಯ ಅಪೇಕ್ಷೆಗಳನ್ನು ಸಂಸತ್ತಿನಲ್ಲಿ ವ್ಯಕ್ತಪಡಿಸುತ್ತಾರೆ. ಜನಹಿತಕ್ಕಾಗಿ ಏನನ್ನು ಮಾಡಬೇಕು ಎಂಬುದನ್ನು ಸಂಸತ್ತು ನಿರ್ಧರಿಸುತ್ತದೆ. ಅದು ಜನತೆಯ ಪ್ರತಿನಿಧಿಗಳ ಸದನವಾಗಿರುವುದರಿಂದ ಮತ್ತು ಜನತೆಯ ಸರ್ವಶ್ರೇಷ್ಠ ಅಧಿಕಾರವನ್ನು ವ್ಯಕ್ತ ಮಾಡುತ್ತಿರುವುದರಿಂದ ಸಂಸತ್ತಿನ ದರ್ಜೆಯು ಶ್ರೇಷ್ಠವಾಗಿರುತ್ತದೆ.

## ಸಂಸದೀಯ ಸರಕಾರ ಪದ್ಧತಿಯನ್ನು ನಾವು ಏಕೆ ಸ್ವೀಕರಿಸಿದೆವು?

ಭಾರತವು ಸಂಸದೀಯ ಸರಕಾರ ಪದ್ಧತಿಯನ್ನು ಸ್ವೀಕರಿಸುವುದರ ಹಿಂದೆ ಕೆಲವು ಕಾರಣಗಳಿವೆ. ಬ್ರಿಟಿಶ ಆಡಳಿತದ ಕಾಲದಲ್ಲಿಯೇ ಭಾರತದಲ್ಲಿ ಸಂಸದೀಯ ಸಂಸ್ಥೆಗಳ ನಿರ್ಮಿತಿಯಾಗಿತ್ತು. ಬ್ರಿಟಿಶರು ಈ ಪದ್ಧತಿಯಿಂದ ರಾಜ್ಯಾಡಳಿತವನ್ನು ಮಾಡಲು ಆರಂಭಿಸಿದ್ದರು. ಸಂಸದೀಯ ಸರಕಾರ ಪದ್ಧತಿ ಕೂಡ ಭಾರತದ ಸ್ವಾತಂತ್ರ್ಯ ಹೋರಾಟದ ಒಂದು ಆವಿಷ್ಕರಣವಾಗಿದೆ. ಅದರಿಂದಾಗಿ ಭಾರತೀಯರಿಗೆ ಈ ಪದ್ಧತಿಯ ಪರಿಚಯವಾಗಿತ್ತು. ಘಟನಾ ಸಮಿತಿಯಲ್ಲಿ ಈ ಪದ್ಧತಿಯನ್ನು ಕುರಿತು ಸಾಕಷ್ಟು ಚರ್ಚೆಯೂ ಆಯಿತು. ಸಂವಿಧಾನಕರ್ತರು ಈ ಪದ್ಧತಿಯಲ್ಲಿ ಭಾರತೀಯ ಪರಿಸ್ಥಿತಿಗೆ ಅನುಕೂಲವಾಗುವಂತಹ ಬದಲಾವಣೆಗಳನ್ನು ಮಾಡಿದರು.

ಸಂಸದೀಯ ಸರಕಾರ ಪದ್ಧತಿಯಲ್ಲಿ ಚರ್ಚೆ, ವಿಚಾರ ವಿನಿಮಯಗಳಿಗೆ ಸಾಕಷ್ಟು ಅವಕಾಶವಿರುತ್ತದೆ. ಸಾರ್ವಜನಿಕ ಹಿತದ ಪ್ರಶ್ನೆಗಳ ಮೇಲೆ ಸಂಸತ್ತಿನಲ್ಲಿ ಚರ್ಚೆಯಾಗುತ್ತದೆ. ಈ ಚರ್ಚೆಯಲ್ಲಿ ವಿರೋಧಿ ಪಕ್ಷದ ಸದಸ್ಯರು ಕೂಡ ಭಾಗವಹಿಸುತ್ತಾರೆ. ಯೋಗ್ಯ ವಿಷಯದಲ್ಲಿ ಸರಕಾರಕ್ಕೆ ಸಹಕಾರ ನೀಡುವುದು, ಧೋರಣೆಗಳಲ್ಲಿಯ ಇಲ್ಲವೆ ಕಾಯ್ದೆಗಳಲ್ಲಿಯ ದೋಷಗಳನ್ನು ತೋರಿಸಿ ಕೊಡುವುದು, ಅಭ್ಯಾಸಪೂರ್ಣ ರೀತಿಯಿಂದ ಪ್ರಶ್ನೆಗಳನ್ನು ಮಂಡಿಸುವುದು ಇತ್ಯಾದಿ ಕಾರ್ಯಗಳನ್ನು ವಿರೋಧಿ ಪಕ್ಷಗಳು ಮಾಡುತ್ತವೆ. ಇದರಿಂದಾಗಿ ಸಂಸತ್ತಿಗೆ ದೋಷರಹಿತ ಕಾಯ್ದೆಗಳನ್ನು ಮಾಡಲು ಸಾಧ್ಯವಾಗುತ್ತದೆ.

## ಅಧ್ಯಕ್ಷೀಯ ಸರಕಾರ ಪದ್ಧತಿ

ರಾಜ್ಯಾಡಳಿತದ ಇನ್ನೊಂದು ಪದ್ಧತಿಯೆಂದು ನಾವು ಅಧ್ಯಕ್ಷೀಯ ಸರಕಾರ ಪದ್ಧತಿಯ ಉಲ್ಲೇಖ ಮಾಡಬಹುದು. ಇಂಥ ಆಡಳಿತದ ಪದ್ಧತಿಯು ಅಮೇರಿಕಾ ದೇಶದಲ್ಲಿ ಇದೆ. ಈ ಪದ್ಧತಿಯು ಸಂಸದೀಯ ಸರಕಾರ ಪದ್ಧತಿಗಿಂತ ಭಿನ್ನವಾಗಿದೆ. ಶಾಸಕಾಂಗದಿಂದ ಕಾರ್ಯಾಂಗವು ಅಲಿಪ್ತವಾಗಿರುವ ಹಾಗೂ ಯಾವುದರಲ್ಲಿ ಕಾರ್ಯಾಂಗ ಪ್ರಮುಖನು (ರಾಷ್ಟ್ರಾಧ್ಯಕ್ಷನು) ಜನರಿಂದ ನೇರವಾಗಿ ಆರಿಸಲ್ಪಡುತ್ತಾನೋ ಆ ಪದ್ಧತಿಯೇ ಅಧ್ಯಕ್ಷೀಯ ಸರಕಾರ ಪದ್ಧತಿ ಹೌದು. ಸರಕಾರದ ಮೂರೂ ಶಾಖೆಗಳು ಈ ಪದ್ಧತಿಯಲ್ಲಿ ಪರಸ್ಪರ ಸ್ವತಂತ್ರವಾಗಿರುತ್ತವೆ. ಆದರೆ ಅವುಗಳ ಕಾರ್ಯದಲ್ಲಿ ಸುಸೂತ್ರತೆ ಬರುವಷ್ಟರ ಮಟ್ಟಿಗೆ ಅವುಗಳಲ್ಲಿ ಸಂಬಂಧವೂ ಇರುತ್ತದೆ. ಅಮೇರಿಕೆಯು ಅಧ್ಯಕ್ಷೀಯ ಸರಕಾರ ಪದ್ಧತಿಯನ್ನು ಅನುಸರಿಸಿದೆ. ಈ ಸರಕಾರ ಪದ್ಧತಿಯ ಕೆಲವು ವೈಶಿಷ್ಟ್ಯಗಳು ಕೆಳಗಿನಂತಿವೆ.

- ಅಧ್ಯಕ್ಷೀಯ ಸರಕಾರ ಪದ್ಧತಿಯಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗಗಳು ನೇರವಾಗಿ ಪರಸ್ಪರರ ಮೇಲೆ ಅವಲಂಬಿಸಿರುವುದಿಲ್ಲ. ಶಾಸಕಾಂಗದ ಎರಡೂ ಸದನಗಳು ಮತ್ತು ರಾಷ್ಟ್ರಾಧ್ಯಕ್ಷರು ಜನರಿಂದ ಚುನಾಯಿತರಾಗುತ್ತಾರೆ. ರಾಷ್ಟ್ರಾಧ್ಯಕ್ಷರು ಕಾರ್ಯಾಂಗ ಪ್ರಮುಖರಾಗಿರುತ್ತಾರೆ ಮತ್ತು ಅವರ ಕೈಯಲ್ಲಿ ಕಾಯ್ದೆಗಳನ್ನು ಜಾರಿಯಲ್ಲಿ ತರುವುದನ್ನು ಹಿಡಿದು ಇತರ ಅನೇಕ ಅಧಿಕಾರಗಳು ಇರುತ್ತವೆ.
- ಅಧ್ಯಕ್ಷೀಯ ಸರಕಾರ ಪದ್ಧತಿಯಲ್ಲಿಯೂ ಇಂಥ ಪ್ರಕಾರದ ರಚನೆಯಿದ್ದರೂ ಕೂಡ ಶಾಸಕಾಂಗ ಮತ್ತು ಕಾರ್ಯಾಂಗಗಳು ಪರಸ್ಪರರ ಮೇಲೆ ನಿಯಂತ್ರಣವನ್ನಿಡುತ್ತವೆ. ಪರಸ್ಪರರ ಮೇಲಿನ ನಿಯಂತ್ರಣದಿಂದಾಗಿ ಜವಾಬ್ದಾರ ಪದ್ಧತಿಯಿಂದ ರಾಜ್ಯಾಡಳಿತವು ಸಾಗಬಲ್ಲದು.

ಸಂಸದೀಯ ಮತ್ತು ಅಧ್ಯಕ್ಷೀಯ ಸರಕಾರ ಪದ್ಧತಿಗಳಲ್ಲದೆ ಇತರ ಕೆಲವು ಸರಕಾರ ಪದ್ಧತಿಗಳನ್ನು ಫ್ರಾನ್ಸ, ಸ್ವಿತ್ಝರ್ಲಂಡ, ಜರ್ಮನಿ ಮುಂತಾದ ದೇಶಗಳಲ್ಲಿ ಅನುಸರಿಸಲಾಗುತ್ತದೆ. ವಿವಿಧ ದೇಶಗಳು ತಮ್ಮ ಪರಿಸ್ಥಿತಿಗೆ ಅನುರೂಪವಾದ ಸರಕಾರ ಪದ್ಧತಿಯನ್ನು ಅನುಸರಿಸುವುದು ಕಂಡುಬರುತ್ತದೆ.

ಮುಂದಿನ ಪಾಠದಲ್ಲಿ ನಾವು ಭಾರತದ ಸಂಸತ್ತಿನ ರಚನೆ, ಕಾರ್ಯ ಪದ್ಧತಿ ಮತ್ತು ಅದರ ಪಾತ್ರಗಳ ವಿಚಾರ ಮಾಡುವವರಿದ್ದೇವೆ.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ಸಂಸದೀಯ ಸರಕಾರ ಪದ್ಧತಿಯು ......... ವಿಕಸಿತವಾಯಿತು.

(ಅ) ಇಂಗ್ಲಂಡಿನಲ್ಲಿ (ಬ) ಫ್ರಾನ್ಸನಲ್ಲಿ

(ಕ) ಅಮೇರಿಕಾದಲ್ಲಿ (ಡ) ನೇಪಾಳದಲ್ಲಿ

(2) ಅಧ್ಯಕ್ಷೀಯ ಸರಕಾರ ಪದ್ಧತಿಯಲ್ಲಿ ......... ಇವರು ಕಾರ್ಯಾಂಗ ಪ್ರಮುಖರಿರುತ್ತಾರೆ.

(ಅ) ಪ್ರಧಾನಮಂತ್ರಿ (ಬ) ಲೋಕಸಭಾ ಅಧ್ಯಕ್ಷರು

(ಕ) ರಾಷ್ಟ್ರಾಧ್ಯಕ್ಷರು (ಡ) ರಾಜ್ಯಪಾಲರು

**2. ಕೆಳಗಿನ ಕೋಷ್ಟಕದಲ್ಲಿಯ ಮಾಹಿತಿಯನ್ನು ಪೂರ್ಣಮಾಡಿರಿ.**

| ಅ. ನಂ. | ಅಂಗದ ಹೆಸರು | ಕಾರ್ಯಗಳು |
|---|---|---|
| 1. | ಶಾಸಕಾಂಗ | |
| 2. | ಕಾರ್ಯಾಂಗ | |
| 3. | ನ್ಯಾಯಾಂಗ | |

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ಭಾರತವು ಸಂಸದೀಯ ಸರಕಾರ ಪದ್ಧತಿಯನ್ನು ಸ್ವೀಕರಿಸಿತು.

(2) ಸಂಸದೀಯ ಸರಕಾರ ಪದ್ಧತಿಯಲ್ಲಿ ಚರ್ಚೆ ಮತ್ತು ವಿಚಾರ ವಿನಿಮಯಗಳು ಮಹತ್ವದ್ದಾಗಿರುತ್ತವೆ.

**4. ಕೆಳಗಿನ ಪ್ರಶ್ನೆಗಳಿಗೆ 25ರಿಂದ 30 ಶಬ್ದಗಳಲ್ಲಿ ಉತ್ತರ ಬರೆಯಿರಿ.**

(1) ಜವಾಬ್ದಾರ ಸರಕಾರ ಪದ್ಧತಿ ಎಂದರೇನು?

(2) ಅಧ್ಯಕ್ಷೀಯ ಸರಕಾರ ಪದ್ಧತಿಯ ವೈಶಿಷ್ಟ್ಯಗಳನ್ನು ಸ್ಪಷ್ಟಪಡಿಸಿರಿ.

**5. ವಿರೋಧಿ ಪಕ್ಷಗಳ ಪಾತ್ರವು ಏಕೆ ಮಹತ್ವದ್ದಾಗಿರುತ್ತದೆ? ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವನ್ನು ಬರೆಯಿರಿ.**

### ಉಪಕ್ರಮ

ದೂರದರ್ಶನದ ರಾಷ್ಟ್ರೀಯ ವಾಹಿನಿಯ ಮೇಲಿನ ಲೋಕಸಭೆ ಮತ್ತು ರಾಜ್ಯಸಭೆಯ ಕಾರ್ಯಕಲಾಪಗಳ ನೇರ ಪ್ರಸಾರಣೆಯನ್ನು ನೋಡಿ ಅದರ ನಿರೀಕ್ಷಣೆಗಳನ್ನು ಬರೆಯಿರಿ.

AX3FDR

# 2. ಭಾರತದ ಸಂಸತ್ತು



ಸಂಸತ್, ಭವನ, ಹೊಸ ದಿಲ್ಲಿ

ಸಂಸದೀಯ ಸರಕಾರ ಪದ್ಧತಿಯಲ್ಲಿ ಸಂಸತ್ತು ಮಹತ್ವದ್ದಾಗಿರುತ್ತದೆಯೆಂಬುದನ್ನು ನಾವು ನೋಡಿದೆವು. ಪ್ರಸ್ತುತ ಪಾಠದಲ್ಲಿ ಭಾರತದ ಸಂಸತ್ತಿನ ವಿಚಾರವನ್ನು ಮಾಡುವುದಿದೆ.

ಭಾರತದ ಸಂಸತ್ತಿನ ನಿರ್ಮಿತಿಯನ್ನು ಸಂವಿಧಾನವು ಮಾಡಿದೆ. ರಾಷ್ಟ್ರ ಮಟ್ಟದಲ್ಲಿಯ ಅಂದರೆ ಕೇಂದ್ರ ಸರಕಾರದ ಶಾಸಕಾಂಗಕ್ಕೆ 'ಸಂಸತ್ತು' ಎಂದು ಕರೆಯಲಾಗುತ್ತದೆ. ಅದಕ್ಕನುಸಾರವಾಗಿ ಸಂಸತ್ತಿನಲ್ಲಿ ರಾಷ್ಟ್ರಪತಿ, ಲೋಕಸಭೆ ಮತ್ತು ರಾಜ್ಯಸಭೆ ಇವುಗಳ ಸಮಾವೇಶವಿರುತ್ತದೆ. ರಾಷ್ಟ್ರಪತಿಗಳು ಭಾರತದ ಸಂಸತ್ತಿನ ಅವಿಭಾಜ್ಯ ಘಟಕ (ಅಂಗ) ವಾಗಿರುತ್ತಾರೆ.

**ಹುಡುಕಿರಿ ನೋಡೋಣ!**

ಘಟಕ ರಾಜ್ಯಗಳಿಗೆ ಅವುಗಳ ಜನಸಂಖ್ಯೆಯ ಪ್ರಮಾಣದಲ್ಲಿ ಲೋಕಸಭೆಯ ಸ್ಥಾನಗಳು ದೊರೆಯುತ್ತವೆ. ಚುನಾವಣೆಯ ಸಲುವಾಗಿ ಪ್ರತಿಯೊಂದು ಘಟಕ ರಾಜ್ಯವನ್ನು ಭೌಗೋಲಿಕ ಮತಕ್ಷೇತ್ರಗಳಲ್ಲಿ ವಿಭಜನೆ ಮಾಡಲಾಗುತ್ತದೆ. ಮತಕ್ಷೇತ್ರಗಳ ಜನಸಂಖ್ಯೆಯು ಸಾಮಾನ್ಯವಾಗಿ ಸಮಾನವಾಗಿರುತ್ತದೆ. ವಿವಿಧ ಘಟಕ ರಾಜ್ಯಗಳಿಗೆ ಲೋಕಸಭೆಯಲ್ಲಿ ಎಷ್ಟು ಸ್ಥಾನಗಳಿವೆಯೆಂಬುದನ್ನು ಇಂಟರ್ನೆಟ್ ಸಹಾಯದಿಂದ ಹುಡುಕಿರಿ. ಉದಾ.,

ಮಹಾರಾಷ್ಟ್ರ : 48

ಗುಜರಾತ :

ಮಧ್ಯಪ್ರದೇಶ :

ಉತ್ತರ ಪ್ರದೇಶ :

ಗೋವಾ :

ಆದರೆ ಅವರಿಗೆ ಸಂಸತ್ತಿನ ಸದನಗಳಲ್ಲಿ ಉಪಸ್ಥಿತರಿದ್ದು ವಿಚಾರ ವಿನಿಮಯದಲ್ಲಿ ಭಾಗವಹಿಸಲು ಬರುವುದಿಲ್ಲ.

ಸಂಸತ್ತಿನ ಎರಡು ಸದನಗಳಿಗೆ ಲೋಕಸಭೆ ಮತ್ತು ರಾಜ್ಯಸಭೆ ಎಂದು ಕರೆಯಲಾಗುತ್ತದೆ.

**ಲೋಕಸಭೆ :** ಭಾರತೀಯ ಸಂಸತ್ತಿನ ಕನಿಷ್ಠ ಹಾಗೂ ಪ್ರಥಮ ಸದನವೆಂದರೆ ಲೋಕಸಭೆ. ಲೋಕಸಭೆಯು ಜನರಿಂದ ನೇರವಾಗಿ ಆಯ್ಕೆಯಾಗುವ ಸಂಸತ್ತಿನ ಸದನವಾಗಿದೆ. ಆದ್ದರಿಂದ ಲೋಕಸಭೆಗೆ ಪ್ರಥಮ ಸದನ (ಸಭಾಗೃಹ) ಎಂದೂ ಕರೆಯುತ್ತಾರೆ. ಲೋಕಸಭೆಯ ಚುನಾವಣೆಗಾಗಿ ಭೌಗೋಲಿಕ ಮತಕ್ಷೇತ್ರಗಳನ್ನು ನಿರ್ಮಿಸಲಾಗಿದೆ. ಲೋಕಸಭೆಯ ಕಾಲಾವಧಿಯು ಐದು ವರ್ಷ ಇರುತ್ತದೆ. ಐದು ವರ್ಷಕ್ಕೊಮ್ಮೆ ಲೋಕಸಭೆಯ ಚುನಾವಣೆಗಳಾಗುತ್ತವೆ. ಈ ಚುನಾವಣೆಗಳು ಸಾರ್ವತ್ರಿಕ ಚುನಾವಣೆಗಳೆಂದು ಗುರುತಿಸಲ್ಪಡುತ್ತವೆ. ಕೆಲವೊಮ್ಮೆ ಐದು ವರ್ಷಗಳ ಕಾಲಾವಧಿ ಪೂರ್ಣವಾಗುವ ಮೊದಲೇ ಲೋಕಸಭೆಯು ವಿಸರ್ಜಿತವಾದ ಕೆಲವು ಉದಾಹರಣೆಗಳಿವೆ. ಇಂತಹ ಸಮಯದಲ್ಲಿ ನಡೆಸಲಾದ ಚುನಾವಣೆಗಳಿಗೆ ಮಧ್ಯಾವಧಿ ಚುನಾವಣೆಗಳು ಎನ್ನುವರು.

ಲೋಕಸಭೆಯು ದೇಶದಲ್ಲಿಯ ಜನತೆಯ ಪ್ರತಿನಿಧಿತ್ವ ಮಾಡುವ ಸದನವಾಗಿದೆ. ಲೋಕಸಭೆಯ ಸದಸ್ಯರ ಸಂಖ್ಯೆಯು ಸಂವಿಧಾನಕ್ಕನುಸಾರವಾಗಿ ಗರಿಷ್ಠ 552 ಇರುತ್ತದೆ. ನಮ್ಮ ದೇಶದಲ್ಲಿಯ ಸಮಾಜದ ಎಲ್ಲ ಘಟಕಗಳಿಗೆ ಪ್ರತಿನಿಧಿತ್ವ ದೊರೆಯಬೇಕೆಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಮೀಸಲಾತಿಯನ್ನು ನೀಡಲಾಗಿದೆ. ಅದರಂತೆ ಆಂಗ್ಲೋ ಇಂಡಿಯನ್ ಸಮಾಜಕ್ಕೆ ಸಾಕಷ್ಟು ಪ್ರತಿನಿಧಿತ್ವ ದೊರೆತಿರದಿದ್ದರೆ ಆ ಸಮಾಜದ ಇಬ್ಬರು ಪ್ರತಿನಿಧಿಗಳನ್ನು ರಾಷ್ಟ್ರಪತಿಗಳು ನೇಮಕ ಮಾಡಬಹುದು.

**ರಾಜ್ಯಸಭೆ :** ರಾಜ್ಯಸಭೆಯು ಭಾರತೀಯ ಸಂಸತ್ತಿನ ವರಿಷ್ಠ ಹಾಗೂ ದ್ವಿತೀಯ ಸದನವಾಗಿದೆ. ಭಾರತದ ಸಂಸತ್ತಿನ ರಾಜ್ಯಸಭೆಯು ಅಪ್ರತ್ಯಕ್ಷವಾಗಿ ಆಯ್ಕೆಯಾಗುವ ಸದನವಾಗಿದೆ. ರಾಜ್ಯಸಭೆಯು ಭಾರತದ ಒಕ್ಕೂಟ ರಾಜ್ಯದಲ್ಲಿಯ 28 ಘಟಕ ರಾಜ್ಯಗಳ ಮತ್ತು 9 ಕೇಂದ್ರಾಡಳಿತ ಪ್ರದೇಶಗಳ ಪ್ರತಿನಿಧಿತ್ವ ಮಾಡುತ್ತದೆ. ಇದರರ್ಥ ರಾಜ್ಯಸಭೆಯಲ್ಲಿ ಘಟಕರಾಜ್ಯದ ಪ್ರತಿನಿಧಿಗಳು ಸದಸ್ಯರೆಂದು ಕೆಲಸ ಮಾಡುತ್ತಾರೆ.



**ಮಾಡಿ ನೋಡಿರಿ.**

**ಮೇರಿ** : ನಾನು ಹತ್ತನೇ ತರಗತಿಯನ್ನು ಪಾಸು ಮಾಡಿದ ನಂತರ ಲೋಕಸಭೆಯ ಚುನಾವಣೆಗೆ ಸ್ಪರ್ಧಿಸಬಹುದೇ?

**ರಾಧಿಕಾ** : ಇಲ್ಲ ! ನೀನು 18 ವರ್ಷದವಳಾದ ಕೂಡಲೇ ಮತದಾನ ಮಾಡಬಹುದು. ಆದರೆ ಚುನಾವಣೆಗೆ ಸ್ಪರ್ಧಿಸಲು ಬರುವುದಿಲ್ಲ.

**ರಣವೀರ** : ಅರೇ, ಲೋಕಸಭೆಯ ಚುನಾವಣೆಗೆ ಸ್ಪರ್ಧಿಸಬೇಕಾದರೆ ವಯಸ್ಸಿನ 25 ವರ್ಷಗಳು ಪೂರ್ಣವಾಗಿರಬೇಕು ಎಂಬುದು ನಿಮಗೆ ಗೊತ್ತಿದೆಯಲ್ಲವೇ?

**ಶಬಾನಾ** : ನಮ್ಮ ನೆರೆಯ ದೇಶದಲ್ಲಿಯ ವ್ಯಕ್ತಿಯು ಲೋಕಸಭೆಯ ಚುನಾವಣೆಗೆ ಸ್ಪರ್ಧಿಸಬೇಕೆಂದು ನಿರ್ಧರಿಸಿದರೆ?

**ಮುಸ್ಕಾನ** : ಅದು ಹೇಗೆ ಸಾಧ್ಯ? ಆ ವ್ಯಕ್ತಿಯು ಭಾರತದ ನಾಗರಿಕನಾಗಿದ್ದಾನೆಯೇ?

**ಪ್ರಣವ** : ನನಗೆ ಕೇರಳದಿಂದ ಚುನಾವಣೆಗೆ ಸ್ಪರ್ಧಿಸುವುದಿದೆ, ಇದಾದರೂ ಸಾಧ್ಯವಿದೆಯೇ?

**ರಾಧಿಕಾ** : ಹೌದು ! ಏಕೆಂದರೆ ಲೋಕಸಭೆಗಾಗಿ ಯಾವುದೇ ರಾಜ್ಯದ ಮತಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಲು ಬರುತ್ತದೆ ಎಂದು ನಮ್ಮ ಶಿಕ್ಷಕರು ಹೇಳಿದರು.

**ಮೃಣಾಲ** : ವಯಸ್ಸು, ನಾಗರಿಕತ್ವಗಳನ್ನು ಕುರಿತ ಅರ್ಹತೆಗಳು ತಿಳಿದವು. ಆದರೆ ಚುನಾವಣೆಗೆ ಸ್ಪರ್ಧಿಸಲು ಯಾರನ್ನು ಅನರ್ಹರೆಂದು ತಿಳಿಯಬೇಕು?

**ಮೇರಿ** : ಅರ್ಹತೆಗಳಂತೆ ಅನರ್ಹತೆಗಳು ಕೂಡ ಇದ್ದೇ ಇರುವವು. ಬನ್ನಿ, ನಾವು ಶಿಕ್ಷಕರಿಂದ ತಿಳಿದುಕೊಳ್ಳೋಣ.

ರಾಜ್ಯಸಭೆಯ ಒಟ್ಟು ಸದಸ್ಯರ ಸಂಖ್ಯೆಯು 250 ಇದೆ. ಅವುಗಳಲ್ಲಿ 238 ಸದಸ್ಯರು ವಿವಿಧ ಘಟಕ ರಾಜ್ಯಗಳಿಂದ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಂದ ಆಯ್ಕೆಯಾಗುತ್ತಾರೆ. ರಾಜ್ಯಸಭೆಯಲ್ಲಿ ಪ್ರತಿಯೊಂದು ಘಟಕ ರಾಜ್ಯದ ಸದಸ್ಯರ ಸಂಖ್ಯೆಯು ಸಮಾನವಾಗಿರುವುದಿಲ್ಲ. ಜನಸಂಖ್ಯೆಯ ಪ್ರಮಾಣದಲ್ಲಿ ಅವುಗಳಿಗೆ ರಾಜ್ಯಸಭೆಯಲ್ಲಿ ಪ್ರತಿನಿಧಿತ್ವವಿರುತ್ತದೆ. ಉಳಿದ 12 ಸದಸ್ಯರ ನೇಮಕಾತಿಯನ್ನು ರಾಷ್ಟ್ರಪತಿಗಳು ಮಾಡುತ್ತಾರೆ. ಸಾಹಿತ್ಯ, ವಿಜ್ಞಾನ, ಕಲೆ, ಕ್ರೀಡೆ ಮತ್ತು ಸಾಮಾಜಿಕ ಕಾರ್ಯ ಇತ್ಯಾದಿ ಕ್ಷೇತ್ರಗಳಲ್ಲಿಯ ಕಾರ್ಯದ ಪ್ರತ್ಯಕ್ಷ ಅನುಭವವಿರುವ ಇಲ್ಲವೆ ಅವುಗಳ ವಿಶೇಷ ಜ್ಞಾನವಿರುವ ವ್ಯಕ್ತಿಗಳಲ್ಲಿಯ ಕೆಲವರನ್ನು ರಾಜ್ಯಸಭೆಗೆ ನೇಮಕ ಮಾಡಲಾಗುತ್ತದೆ. ರಾಜ್ಯಸಭೆಗೆ ಸದಸ್ಯರ ಆಯ್ಕೆಯು ಪ್ರಮಾಣಬದ್ಧ ಪ್ರತಿನಿಧಿತ್ವ ಪದ್ಧತಿಯಿಂದ ಆಗುತ್ತದೆ.

ರಾಜ್ಯಸಭೆಯು ಒಮ್ಮೆಲೇ ಎಂದೂ ವಿಸರ್ಜನೆಯಾಗುವುದಿಲ್ಲ. ಆದ್ದರಿಂದ ಅದನ್ನು ಶಾಶ್ವತವಾದ ಸದನವೆಂದು ತಿಳಿಯಲಾಗುತ್ತದೆ. ಅಂದರೆ ಪ್ರತಿ ಎರಡು ವರ್ಷಕ್ಕೊಮ್ಮೆ ಆರು ವರ್ಷದ ಕಾಲಾವಧಿಯನ್ನು ಪೂರ್ಣ ಮಾಡಿದ ರಾಜ್ಯಸಭೆಯ 1/3ರಷ್ಟು ಸದಸ್ಯರು ನಿವೃತ್ತರಾಗುತ್ತಾರೆ ಹಾಗೂ ಮತ್ತೆ ಅಷ್ಟೇ ಸದಸ್ಯರು ಆಯ್ಕೆಯಾಗುತ್ತಾರೆ. ಹಂತಹಂತವಾಗಿ ಕೆಲವೇ ಸದಸ್ಯರು ನಿವೃತ್ತರಾಗುವುದರಿಂದ ರಾಜ್ಯಸಭೆಯು ಸತತ ಕಾರ್ಯನಿರತವಾಗಿರುತ್ತದೆ. ರಾಜ್ಯಸಭೆಯ ಚುನಾವಣೆಯಲ್ಲಿ ಸ್ಪರ್ಧಿಸುವ ವ್ಯಕ್ತಿಯು ಭಾರತದ ನಾಗರಿಕನಾಗಿರಬೇಕು. ಅವನ ವಯಸ್ಸು 30 ವರ್ಷ ಪೂರ್ಣವಾಗಿರಬೇಕು.

ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರಿಗೆ ಸಂಸದರು (ಎಮ್.ಪಿ.) ಎನ್ನುತ್ತಾರೆ. ಸಂಸದರು (ಎಮ್.ಪಿ.ಗಳು) ತಮ್ಮ ಮತಕ್ಷೇತ್ರದ ಪ್ರಶ್ನೆ ಮತ್ತು ಸಮಸ್ಯೆಗಳನ್ನು ಲೋಕಸಭೆಯಲ್ಲಿ ಮಂಡಿಸಿ ಈ ಪ್ರಶ್ನೆಗಳನ್ನು ಬಿಡಿಸುವ ಪ್ರಯತ್ನ ಮಾಡುತ್ತಾರೆ. ಮತಕ್ಷೇತ್ರದ ವಿಕಾಸಕಾರ್ಯಗಳಿಗಾಗಿ ಅವರಿಗೆ ವಿಕಾಸನಿಧಿಯನ್ನು ಸರಕಾರವು ನೀಡುತ್ತದೆ.

**ಸಂಸತ್ತಿನ ಕಾರ್ಯಗಳು :** ಭಾರತದ ಸಂಸತ್ತಿನ ಎರಡು ಸದನಗಳಾದ ಲೋಕಸಭೆ ಮತ್ತು ರಾಜ್ಯಸಭೆಗಳ ಬಗ್ಗೆ ತಿಳಿದುಕೊಂಡ ನಂತರ ನಾವು ಈಗ ಅವುಗಳ ಕಾರ್ಯಗಳ ಪರಿಶೀಲನೆ ಮಾಡೋಣ.

**ಕಾಯ್ದೆಯ (ಕಾನೂನಿನ) ನಿರ್ಮಿತಿ :** ಜನರ ಹಿತ ಮತ್ತು ಕಲ್ಯಾಣ ಸಾಧಿಸಲ್ಪಡಬೇಕು ಹಾಗೂ ಸಂವಿಧಾನದಲ್ಲಿಯ ಉದ್ದೇಶಗಳನ್ನು ಪ್ರತ್ಯಕ್ಷದಲ್ಲಿ ತರುವ ಸಲುವಾಗಿ ಸಂಸತ್ತು ಅನೇಕ ಹೊಸ ಕಾಯ್ದೆಗಳ ನಿರ್ಮಿತಿ ಮಾಡಬೇಕಾಗುತ್ತದೆ. ಅದರ ಜೊತೆಗೆ ಸಮಯಬಾಹ್ಯವಾದ ಕಾಯ್ದೆಗಳನ್ನು ರದ್ದು ಪಡಿಸಬೇಕಾಗುತ್ತದೆ. ಕೆಲವು ಕಾಯ್ದೆಗಳಲ್ಲಿ ಯೋಗ್ಯ ಬದಲಾವಣೆಗಳನ್ನು ಮಾಡಬೇಕಾಗುತ್ತದೆ. ಕಾಯ್ದೆ ನಿರ್ಮಿತಿಯ ಪ್ರಕ್ರಿಯೆಯನ್ನು ಸಂಸತ್ತೇ ಸ್ಪಷ್ಟಪಡಿಸಿದೆ. ಅದಕ್ಕನುಸಾರವಾಗಿ ಸಂಸತ್ತು ಈ ತನ್ನ ಪ್ರಾಥಮಿಕ ಅಥವಾ ಮುಖ್ಯ ಜವಾಬ್ದಾರಿಯನ್ನು ನಿರ್ವಹಿಸುತ್ತದೆ.

**ಮಂತ್ರಿಮಂಡಳದ ಮೇಲೆ ನಿಯಂತ್ರಣ :** ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳವು ಸಂಸತ್ತಿನೊಳಗಿಂದಲೇ ನಿರ್ಮಾಣವಾಗುತ್ತದೆ ಹಾಗೂ ಅವುಗಳ ಮೇಲೆ ಸಂಸತ್ತಿನ ನಿಯಂತ್ರಣವಿರುತ್ತದೆ. ನಿಯಂತ್ರಣದ ವಿವಿಧ ಮಾರ್ಗಗಳು ಸಂಸತ್ತಿಗೆ ಉಪಲಬ್ಧವಿರುತ್ತವೆ. ಸಂಸತ್ತನ್ನು ಕಡೆಗಣಿಸಿ



**ಹೇಳಿರಿ ನೋಡೋಣ.**

ಕಾಯ್ದೆಗಳು ಸಮಯಬಾಹ್ಯವಾಗಿವೆಯೆಂದು ರದ್ದು ಪಡಿಸಲಾದ ಕಾಯ್ದೆಗಳ ಕೆಲವು ಉದಾಹರಣೆಗಳನ್ನು ನೀವು ಕೊಡಬಲ್ಲಿರಾ? ಉದಾ., ಸಂಸ್ಥಾನಿಕರ ವರ್ಷಾಸನ.

ಮಂತ್ರಿಮಂಡಳವು ಆಡಳಿತವನ್ನು ಮಾಡಲಾರದಂತೆ ನೋಡುವ ಹೊಣೆಗಾರಿಕೆ ಸಂಸತ್ತಿನ ಮೇಲೆ ಇರುತ್ತದೆ.

**ಸಂವಿಧಾನ ತಿದ್ದುಪಡಿ :** ಭಾರತದ ಸಂವಿಧಾನದಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾದರೆ ಸಂಸತ್ತು ಆ ಸಂದರ್ಭದಲ್ಲಿ ನಿರ್ಣಯವನ್ನು ಕೈಕೊಳ್ಳುತ್ತದೆ. ಸಂವಿಧಾನದಲ್ಲಿ ತಿದ್ದುಪಡಿ ಮಾಡುವ ಪ್ರಸ್ತಾಪವು (ಸೂಚನೆಯು) ಮಹತ್ವದ್ದಾಗಿರುತ್ತದೆ. ಅದರ ಅವಶ್ಯಕತೆಯ ಬಗ್ಗೆ ಸಂಸತ್ತು ಚರ್ಚೆಯನ್ನು ಮಾಡಿ ಆ ಪ್ರಸ್ತಾಪವನ್ನು ಸ್ವೀಕರಿಸುವುದೋ ಅಥವಾ ಬೇಡವೋ ಎಂಬುದನ್ನು ನಿರ್ಧರಿಸುತ್ತದೆ. ಭಾರತದ ಸಂವಿಧಾನದಲ್ಲಿಯ ತಿದ್ದು ಪಡಿಯ ಪದ್ಧತಿಗಳು ಕೆಳಗಿನಂತಿವೆ. (1) ಭಾರತದ ಸಂವಿಧಾನದಲ್ಲಿ ಕೆಲವು ನಿಯಮಗಳನ್ನು ಸಂಸತ್ತಿನ ಸಾದಾ ಬಹುಮತದಿಂದ ಬದಲಾಯಿಸಲಾಗುತ್ತದೆ. (2) ಕೆಲವು ನಿಯಮಗಳಿಗೆ ಮಾತ್ರ ಸಂಸತ್ತಿನ ವಿಶೇಷಬಹುಮತದ (2/3) ಅವಶ್ಯಕತೆ ಇರುತ್ತದೆ. (3) ಹಾಗೂ ಕೆಲವು ನಿಯಮಗಳನ್ನು ಸಂಸತ್ತಿನ ವಿಶೇಷ ಬಹುಮತ ಹಾಗೂ ಅರ್ಧಕ್ಕಿಂತ ಹೆಚ್ಚು ಘಟಕ ರಾಜ್ಯಗಳ ಮಾನ್ಯತೆಯಿಂದ ಬದಲಾಯಿಸಲಾಗುತ್ತದೆ.

**ಲೋಕಸಭೆಯ ಅಧ್ಯಕ್ಷರು :** ಲೋಕಸಭೆಯ ಚುನಾವಣೆಗಳಾದ ನಂತರ ಮೊದಲನೆಯ ಅಧಿವೇಶನದಲ್ಲಿ ಲೋಕಸಭೆಯ ಸದಸ್ಯರು ತಮ್ಮಲ್ಲಿಯ ಒಬ್ಬ ನನ್ನು 'ಅಧ್ಯಕ್ಷನೆ'ಂದು ಹಾಗೂ ಇನ್ನೊಬ್ಬನನ್ನು 'ಉಪಾಧ್ಯಕ್ಷನೆ'ಂದೂ ಆಯ್ಕೆ ಮಾಡುತ್ತಾರೆ. ಲೋಕಸಭೆಯ ಕಾರ್ಯಕಲಾಪಗಳು ಲೋಕಸಭಾ ಅಧ್ಯಕ್ಷನ ಮಾರ್ಗದರ್ಶನಕ್ಕನುಸಾರವಾಗಿ ಹಾಗೂ ಅವನ ನಿಯಂತ್ರಣದಲ್ಲಿ ನಡೆಯುತ್ತವೆ.

**ಇದನ್ನು ತಿಳಿದುಕೊಳ್ಳಿರಿ !**

ಲೋಕಸಭೆ ಮತ್ತು ರಾಜ್ಯಸಭೆ ಈ ಎರಡೂ ಸದನಗಳಿಗೆ ಸಮಾನ ಅಧಿಕಾರಗಳಿವೆ. ಆದರೆ ಅದರ ಜೊತೆಗೆ ಕೆಲವು ಅಧಿಕಾರಗಳು ಲೋಕಸಭೆಗೆ ಇವೆ ಆದರೆ ರಾಜ್ಯಸಭೆಗೆ ಇಲ್ಲ. ಉದಾಹರಣೆಗಾಗಿ ತೆರಿಗೆಗಳ ಬಗೆಗಿನ ಪ್ರಸ್ತಾಪಗಳು ಹಣಕ್ಕೆ ಸಂಬಂಧಿತವಾಗಿರುತ್ತವೆ. ಹಣಕ್ಕೆ ಸಂಬಂಧಿತವಾದ ಪ್ರಸ್ತಾಪಗಳನ್ನು 'ಹಣಕಾಸಿನ ಪ್ರಸ್ತಾಪ'ಗಳೆಂದು ತಿಳಿಯಲಾಗುತ್ತದೆ ಹಾಗೂ ಇಂಥ ಎಲ್ಲ ಪ್ರಸ್ತಾಪಗಳು ಕೇವಲ ಲೋಕಸಭೆಯಲ್ಲಿ ಮಂಡಿಸಲ್ಪಡುತ್ತವೆ. ಅಲ್ಲಿಯೇ ಅವು ಮಂಜೂರಾಗುತ್ತವೆ. ರಾಜ್ಯಸಭೆಗೆ ಈ ವಿಷಯದಲ್ಲಿ ತುಂಬಾ ಸೀಮಿತ ಅಧಿಕಾರಗಳಿವೆ.

ಕೆಲವು ಅಧಿಕಾರಗಳು ರಾಜ್ಯಸಭೆಗೆ ಇವೆ ಆದರೆ ಲೋಕಸಭೆಗೆ ಇಲ್ಲ, ಉದಾ., ರಾಜ್ಯಪಟ್ಟಿಯಲ್ಲಿಯ ಯಾವುದೊಂದು ವಿಷಯದಲ್ಲಿ ರಾಷ್ಟ್ರಹಿತದ ದೃಷ್ಟಿಯಿಂದ ಸಂಸತ್ತಿಗೆ ಕಾಯ್ದೆ ಮಾಡಬೇಕೆನಿಸಿದರೆ, ಅಂಥ ಠರಾವನ್ನು ರಾಜ್ಯಸಭೆಯು ಮಂಜೂರು ಮಾಡಬಲ್ಲದು.

ಲೋಕಸಭೆಯು ಭಾರತೀಯ ಜನತೆಯ ಪ್ರತಿನಿಧಿತ್ವ ಮಾಡುತ್ತದೆ ಹಾಗೂ ಅಧ್ಯಕ್ಷರು ಲೋಕಸಭೆಯ ಪ್ರತಿನಿಧಿತ್ವ ಮಾಡುತ್ತಾರೆ. ಅಧ್ಯಕ್ಷ ಸ್ಥಾನಕ್ಕೆ ಆಯ್ಕೆಯಾದ ನಂತರ ಅಧ್ಯಕ್ಷರು ಸಂಪೂರ್ಣ ಸದನದ ಕಾರ್ಯಕಲಾಪಗಳನ್ನು ಅತ್ಯಂತ ನಿಷ್ಪಕ್ಷಪಾತವಾಗಿ ನಡೆಸಬೇಕಾಗುತ್ತದೆ. ಜನತೆಯ ಪ್ರತಿನಿಧಿಗಳೆಂದು ಲೋಕಸಭೆಯ ಸದಸ್ಯರಿಗೆ ಕೆಲವು ಹಕ್ಕುಗಳು ಹಾಗೂ ವಿಶೇಷಾಧಿಕಾರಗಳು ಇರುತ್ತವೆ. ಅವುಗಳ ರಕ್ಷಣೆಯನ್ನು ಅಧ್ಯಕ್ಷರು ಮಾಡುತ್ತಾರೆ. ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸುವುದು, ಸದನದ ಪ್ರತಿಷ್ಠೆಯನ್ನು ಕಾಪಾಡುವುದು, ಕಾರ್ಯಕಲಾಪಗಳ ಬಗೆಗಿನ ನಿಯಮಗಳ ಅರ್ಥವಿವರಣೆ ಮಾಡಿ ಅದಕ್ಕನುಸಾರವಾಗಿ ಅವುಗಳನ್ನು ನಡೆಸುವುದು ಇತ್ಯಾದಿ ಕಾರ್ಯಗಳನ್ನೂ ಅಧ್ಯಕ್ಷರು ಮಾಡಬೇಕಾಗುತ್ತದೆ.

**ರಾಜ್ಯಸಭೆಯ ಸಭಾಪತಿ :** ರಾಜ್ಯಸಭೆಯ ಸಂಪೂರ್ಣ ಕಾರ್ಯಕಲಾಪಗಳನ್ನು ಸಭಾಪತಿಯವರ ನಿಯಂತ್ರಣದಲ್ಲಿ ನಡೆಸಲಾಗುತ್ತದೆ. ಭಾರತದ ಉಪರಾಷ್ಟ್ರಪತಿಗಳು ರಾಜ್ಯಸಭೆಯ ಪದಸಿದ್ಧ ಸಭಾಪತಿಯಾಗಿರುತ್ತಾರೆ. ರಾಜ್ಯಸಭೆಯ ಸಭಾಪತಿಯವರಿಗೂ ಸದನದಲ್ಲಿ ಶಿಸ್ತನ್ನು ಕಾಪಾಡುವುದು, ಚರ್ಚೆ ನಡೆಸುವುದು, ಸದಸ್ಯರಿಗೆ ಮಾತನಾಡಲು ಅವಕಾಶ ನೀಡುವುದು ಇತ್ಯಾದಿ ಕಾರ್ಯಗಳನ್ನು ಮಾಡಬೇಕಾಗುತ್ತದೆ.

## ಸಂಸತ್ತು ಕಾಯ್ದೆಗಳನ್ನು (ಕಾನೂನುಗಳನ್ನು) ಹೇಗೆ ತಯಾರಿಸುತ್ತದೆ?

ನಮ್ಮ ದೇಶದಲ್ಲಿ ಸಂಸತ್ತಿಗೆ ಕಾಯ್ದೆ (ಕಾನೂನು) ಮಾಡುವ ಅಧಿಕಾರವನ್ನು ನೀಡಲಾಗಿದೆ ಕಾಯ್ದೆಗಳನ್ನು ತಯಾರಿಸುವ ಸಲುವಾಗಿ ವಿಶಿಷ್ಟ ಪದ್ಧತಿಯನ್ನು ಅನುಸರಿಸಲಾಗುತ್ತದೆ. ಆ ಪದ್ಧತಿಗೆ 'ಕಾಯ್ದೆ ನಿರ್ಮಿತಿಯ ಪ್ರಕ್ರಿಯೆ' ಎನ್ನುತ್ತಾರೆ. ಕಾಯ್ದೆಯ ಕಚ್ಚಾ ಮಸೂದೆಯನ್ನು ಮೊದಲು ತಯಾರಿಸಲಾಗುತ್ತದೆ. ಈ ಕಚ್ಚಾ ಮಸೂದೆಗೆ ಅಥವಾ ಕರಡು ಪ್ರತಿಗೆ ಕಾಯ್ದೆಯ ಪ್ರಸ್ತಾಪ ಇಲ್ಲವೆ ಮಸೂದೆ ಎಂದು ಕರೆಯಲಾಗುತ್ತದೆ.

ಸಂಸತ್ತಿನ ಸದನಗಳಲ್ಲಿ ಸಾದರ ಪಡಿಸಲಾಗುವ ಮಸೂದೆಗಳು ಮುಖ್ಯವಾಗಿ ಎರಡು ಪ್ರಕಾರದ್ದಿರುತ್ತವೆ, (1) ಹಣಕಾಸಿನ ಮಸೂದೆ (2) ಸಾಮಾನ್ಯ ಮಸೂದೆ.

ಮಸೂದೆಯು ಕಾಯ್ದೆಯಲ್ಲಿ ರೂಪಾಂತರವಾಗಬೇಕಾದರೆ ಅದು ಕೆಳಗಿನ ಪ್ರಕ್ರಿಯೆಗಳನ್ನು ದಾಟ ಬೇಕಾಗುತ್ತದೆ.

**ಪ್ರಥಮ ವಾಚನ :** ಸಂಬಂಧಿತ ಇಲಾಖೆಯ ಮಂತ್ರಿ ಇಲ್ಲವೆ ಸಂಸತ್ತಿನ ಸದಸ್ಯನು ಮಸೂದೆಯನ್ನು ಸಾದರಪಡಿಸುತ್ತಾನೆ. ಮಸೂದೆಯನ್ನು ಮಂಡಿಸುವಾಗ ಅದರ ಸ್ವರೂಪವನ್ನು ಸ್ವಲ್ಪದರಲ್ಲಿ ಸ್ಪಷ್ಟಪಡಿಸುತ್ತಾನೆ. ಇದಕ್ಕೆ ಮಸೂದೆಯ 'ಪ್ರಥಮ ವಾಚನ' ಎನ್ನುತ್ತಾರೆ.

**ದ್ವಿತೀಯ ವಾಚನ :** ದ್ವಿತೀಯ ವಾಚನದ ಎರಡು ಹಂತಗಳಿರುತ್ತವೆ ಪ್ರಥಮ ಹಂತದಲ್ಲಿ ಮಸೂದೆಯ ಉದ್ದೇಶಗಳ ಮೇಲೆ ಚರ್ಚೆಯಾಗುತ್ತದೆ. ಸದನದಲ್ಲಿಯ ಸದಸ್ಯರು ಮಸೂದೆಯನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆ. ಮಸೂದೆಯ ಸಮರ್ಥಕರು ಮಸೂದೆಯ ಪರವಾಗಿ ತಮ್ಮ ವಿಚಾರಗಳನ್ನು ವ್ಯಕ್ತಪಡಿಸುತ್ತಾರೆ. ವಿರೋಧಕರು ಮಸೂದೆಯಲ್ಲಿಯ ನ್ಯೂನತೆಗಳನ್ನು ಮತ್ತು ದೋಷಗಳನ್ನು ಸ್ಪಷ್ಟಪಡಿಸುತ್ತಾರೆ. ಸದನದಲ್ಲಿ ಮಸೂದೆಯನ್ನು ಕುರಿತು ಚರ್ಚೆಯಾದ ನಂತರ ಅವಶ್ಯಕತೆಯೆನಿಸಿದರೆ ಆ ಮಸೂದೆಯನ್ನು ಸದನದ ಒಂದು ಸಮಿತಿಯ ಕಡೆಗೆ ಕಳುಹಿಸಲಾಗುತ್ತದೆ. ಮಸೂದೆಯು ದೋಷರಹಿತವಾಗಬೇಕೆಂದು ಸೂಚನೆ ಮತ್ತು ತಿದ್ದುಪಡಿಗಳನ್ನು ಸೂಚಿಸುವ ವರದಿಯನ್ನು ಸಮಿತಿಯು ಸದನಕ್ಕೆ ಕಳುಹಿಸುತ್ತದೆ.

ಆ ನಂತರ ದ್ವಿತೀಯ ವಾಚನದ ದ್ವಿತೀಯ ಹಂತವು ಆರಂಭವಾಗುತ್ತದೆ. ಈ ಹಂತದಲ್ಲಿ ಮಸೂದೆಯನ್ನು ಕುರಿತು ಕಲಮುಗಳಿಗನುಸಾರ ಚರ್ಚೆಯಾಗುತ್ತದೆ. ಸದಸ್ಯರು ತಿದ್ದುಪಡಿಗಳನ್ನು ಸೂಚಿಸಬಹುದು. ಆ ನಂತರ ಸದನದಲ್ಲಿ ಅದರ ಮೇಲೆ ಮತದಾನ ತೆಗೆದುಕೊಳ್ಳಲಾಗುತ್ತದೆ.

**ತೃತೀಯ ವಾಚನ :** ತೃತೀಯ ವಾಚನದ ಸಮಯದಲ್ಲಿ ಮಸೂದೆಯ ಮೇಲೆ ಪುನಃ ಸ್ವಲ್ಪದರಲ್ಲಿ ಚರ್ಚೆಯಾಗುತ್ತದೆ. ಮಸೂದೆಯನ್ನು ಮಂಜೂರು ಮಾಡುವ ಠರಾವಿನ ಮೇಲೆ ಮತದಾನವಾಗುತ್ತದೆ. ಮಸೂದೆಗೆ ಅವಶ್ಯಕ ಬಹುಮತದಿಂದ ಮಂಜೂರಿ ದೊರಕಿದರೆ ಸದನವು ಮಸೂದೆಯನ್ನು ಸಮ್ಮತಿಸಿತು ಎಂದು ತಿಳಿಯಲಾಗುತ್ತದೆ.

- ಸಂಸತ್ತಿನ ಎರಡನೆಯ ಸದನದಲ್ಲಿಯೂ ಮಸೂದೆಯು ಮೇಲಿನ ಎಲ್ಲ ಪ್ರಕ್ರಿಯೆಗಳನ್ನು ದಾಟುತ್ತದೆ. ಎರಡೂ ಸದನಗಳು ಮಸೂದೆಗೆ ಸಮ್ಮತಿ ನೀಡಿದ ನಂತರ ಅದನ್ನು ರಾಷ್ಟ್ರಪತಿಗಳ ಸಮ್ಮತಿಗಾಗಿ ಕಳುಹಿಸಲಾಗುತ್ತದೆ.
- ಕೇಂದ್ರದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮಸೂದೆಯನ್ನು ಕುರಿತು ಭಿನ್ನಾಭಿಪ್ರಾಯವುಂಟಾದರೆ ಎರಡೂ ಸದನಗಳ ಸಂಯುಕ್ತ ಅಧಿವೇಶನದಲ್ಲಿ ಮಸೂದೆಯ ಭವಿತವ್ಯ ನಿರ್ಧಾರವಾಗುತ್ತದೆ.

ರಾಷ್ಟ್ರಪತಿಗಳ ಸಮ್ಮತಿದರ್ಶಕ ಅಂಕಿತವಾದ ನಂತರ ಮಸೂದೆಯು ಕಾಯ್ದೆಯಾಗಿ ರೂಪಾಂತರ ಹೊಂದುತ್ತದೆ ಹಾಗೂ ಕಾಯ್ದೆ ನಿರ್ಮಿತಿಯಾಗುತ್ತದೆ.

**ಇದನ್ನೂ ತಿಳಿದುಕೊಳ್ಳಿರಿ.**

- ಪ್ರತಿವರ್ಷ ಫೆಬ್ರುವರಿ ತಿಂಗಳಲ್ಲಿ ಅರ್ಥ ಮಂತ್ರಿಗಳು ದೇಶದ ಮುಂಗಡ ಪತ್ರವನ್ನು ಲೋಕಸಭೆಯಲ್ಲಿ ಮಂಡಿಸುತ್ತಾರೆ.
- ರಾಜ್ಯಗಳ ಶಾಸಕಾಂಗಗಳಲ್ಲಿಯೂ ಕಾಯ್ದೆ ಮಾಡುವಾಗ ಸಂಸತ್ತಿನಂತೆಯೇ ಪದ್ಧತಿಯನ್ನು ಸ್ವೀಕರಿಸಲಾಗುತ್ತದೆ. ರಾಜ್ಯ ಶಾಸಕಾಂಗಗಳು ಮಂಜೂರು ಮಾಡಿದ ಮಸೂದೆಯ ಮೇಲೆ ರಾಜ್ಯಪಾಲರ ಸಮ್ಮತಿದರ್ಶಕ ಅಂಕಿತವಾದ ಕೂಡಲೆ ಮಸೂದೆಯು ಕಾಯ್ದೆಯಾಗುತ್ತದೆ.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ......... ಪದ್ಧತಿಯಿಂದ ಲೋಕಸಭೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಕಳುಹಿಸಲಾಗುತ್ತದೆ.
(ಅ) ಭೌಗೋಲಿಕ ಮತಕ್ಷೇತ್ರ (ಬ) ಧಾರ್ಮಿಕ ಮತಕ್ಷೇತ್ರ (ಕ) ಸ್ಥಾನಿಕ ಸ್ವರಾಜ್ಯ ಸಂಸ್ಥೆಯ ಮತಕ್ಷೇತ್ರ (ಡ) ಪ್ರಮಾಣಬದ್ಧ ಪ್ರತಿನಿಧಿತ್ವ

(2) ಭಾರತದ .......... ರಾಜ್ಯಸಭೆಯ ಪದಸಿದ್ಧ ಸಭಾಪತಿಯಾಗಿರುತ್ತಾರೆ.
(ಅ) ರಾಷ್ಟ್ರಪತಿಗಳು (ಬ) ಉಪರಾಷ್ಟ್ರಪತಿಗಳು
(ಕ) ಪ್ರಧಾನ ಮಂತ್ರಿಗಳು (ಡ) ಮುಖ್ಯ ನ್ಯಾಯಾಧೀಶರು

**2. ಹುಡುಕಿರಿ ಹಾಗೂ ಬರೆಯಿರಿ.**

(1) ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರನ್ನು ಈ ಹೆಸರಿನಿಂದ ಕರೆಯುತ್ತಾರೆ. ............
(2) ಕಾಯ್ದೆ ನಿರ್ಮಿತಿಯ ಜವಾಬ್ದಾರಿಯು ಇವರದಾಗಿದೆ. ............. .

**3. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ರಾಜ್ಯಸಭೆಯು ಶಾಶ್ವತ ಸದನವಾಗಿದೆ.
(2) ಲೋಕಸಭೆಗೆ ಪ್ರಥಮ ಸದನವೆನ್ನುತ್ತಾರೆ.

**4. ಕೆಳಗಿನ ಪ್ರಶ್ನೆಗಳಿಗೆ 25ರಿಂದ 30 ಶಬ್ದಗಳಲ್ಲಿ ಉತ್ತರ ಬರೆಯಿರಿ.**

(1) ಲೋಕಸಭೆಯ ಸದಸ್ಯರ ಆಯ್ಕೆ ಹೇಗೆ ಆಗುತ್ತದೆ.
(2) ಲೋಕಸಭೆಯ ಅಧ್ಯಕ್ಷರ ಕಾರ್ಯಗಳನ್ನು ಸ್ಪಷ್ಟಪಡಿಸಿರಿ.

**5. ಕಾಯ್ದೆ ನಿರ್ಮಿತಿಯ ಪ್ರಕ್ರಿಯೆಯಲ್ಲಿಯ ಹಂತಗಳನ್ನು ಸ್ಪಷ್ಟಪಡಿಸಿರಿ.**

**ಉಪಕ್ರಮ**


ರಾಜ್ಯಸಭೆಗೆ 12 ಸದಸ್ಯರ ನೇಮಕಾತಿಯನ್ನು ರಾಷ್ಟ್ರಪತಿ ಮಾಡುತ್ತಾರೆ. ಈ ಸದಸ್ಯರ ಆಯ್ಕೆ ಮಾಡುವಾಗ ಯಾವ ಮಾನದಂಡಗಳಿರುವವು ಎಂಬುದರ ಮಾಹಿತಿಯನ್ನು ಪಡೆಯಿರಿ.

AXCBFE

# 3. ಕೇಂದ್ರೀಯ ಕಾರ್ಯಾಂಗ

ಹಿಂದಿನ ಪಾಠದಲ್ಲಿ ನಾವು ಕೇಂದ್ರ ಮಟ್ಟದಲ್ಲಿಯ ಶಾಸಕಾಂಗದ ಅಂದರೆ ಸಂಸತ್ತಿನ ರಚನೆ ಹಾಗೂ ಕಾರ್ಯಪ್ರಣಾಲಿಯನ್ನು ತಿಳಿದುಕೊಂಡೆವು. ಈ ಪಾಠದಲ್ಲಿ ನಾವು ಕೇಂದ್ರೀಯ ಕಾರ್ಯಾಂಗದ ಅಭ್ಯಾಸ ಮಾಡುವವರಿದ್ದೇವೆ.

**ಒಕ್ಕೂಟ ಸರಕಾರದ ರಚನೆ :** ಒಕ್ಕೂಟ ಸರಕಾರ ಎಂದರೆ ಕೇಂದ್ರ ಸರಕಾರ. ಒಕ್ಕೂಟ ಸರಕಾರದ ಮೂರು ಅಂಗಗಳಿವೆ.




ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಇವು ಸರಕಾರದ ಮೂರು ಶಾಖೆಗಳಿರುತ್ತವೆ ಹಾಗೂ ಜನಹಿತವನ್ನು ಲಕ್ಷದಲ್ಲಿಟ್ಟುಕೊಂಡು ಜನತೆಯ ಕಲ್ಯಾಣಕ್ಕಾಗಿ ಅವು ಕಾರ್ಯಮಾಡುತ್ತವೆಯೆಂಬುದು ನಿಮಗೆ ಗೊತ್ತಿದೆ. ಸಂಸದೀಯ ಸರಕಾರ ಪದ್ಧತಿಯಲ್ಲಿ ಕಾರ್ಯಾಂಗವು ಶಾಸಕಾಂಗದ ಭಾಗವಾಗಿರುತ್ತದೆ ಹಾಗೂ ಅದು ಶಾಸಕಾಂಗಕ್ಕೇನೆ

> **ರಮಾ :** ರಾಷ್ಟ್ರಪತಿಗಳು ನಾಮಮಾತ್ರ ಪ್ರಮುಖರಾಗಿದ್ದು ಪ್ರಧಾನ ಮಂತ್ರಿಗಳು ಕಾರ್ಯಾಂಗ ಪ್ರಮುಖರಾಗಿದ್ದಾರೆ. ಈ ಎರಡೂ ಸ್ಥಾನದಲ್ಲಿರುವ ವ್ಯಕ್ತಿಗಳಲ್ಲಿ ಯಾವ ಪ್ರಕಾರದ ಸಂಬಂಧಗಳಿರಬಹುದು?
>
> **ವಿದ್ಯಾ :** ಪ್ರಧಾನ ಮಂತ್ರಿಗಳು ರಾಷ್ಟ್ರಪತಿಗಳನ್ನು ನಿಯಮಿತವಾಗಿ ಭೇಟಿಯಾಗುತ್ತಾರೆ ಹಾಗೂ ರಾಜ್ಯಾಡಳಿತವನ್ನು ಹೇಗೆ ಮಾಡುತ್ತಿದ್ದಾರೆಂಬುದರ ಬಗ್ಗೆ ಮಾಹಿತಿ ನೀಡುತ್ತಾರೆಂದು ನನಗನಿಸುತ್ತದೆ.
>
> ಹೌದು! ಇದು ಸರಿಯಾಗಿದೆ. ದೇಶದ ರಾಜ್ಯಾಡಳಿತ ಹಾಗೂ ಹೊಸ ಹೊಸ ಕಾಯ್ದೆಗಳು , ಧೋರಣೆಗಳು ಇವುಗಳ ಮಾಹಿತಿಯನ್ನು ಪ್ರಧಾನ ಮಂತ್ರಿಗಳು ರಾಷ್ಟ್ರಪತಿಗಳಿಗೆ ನೀಡುತ್ತಿರುತ್ತಾರೆ. ಪ್ರಾಯಶ : ಇಂಥ ಮಾಹಿತಿಯನ್ನು ಪಡೆ ಯುವ ಅಧಿಕಾರ ರಾಷ್ಟ್ರಪತಿಗಳಿಗಿದೆ.

ಜವಾಬ್ದಾರವಾಗಿರುತ್ತದೆ. ಈ ಕಾರ್ಯಾಂಗದಲ್ಲಿ ಯಾರ ಸಮಾವೇಶ ವಿರುತ್ತದೆ, ಸಂವಿಧಾನದಲ್ಲಿ ಅದನ್ನು ಕುರಿತು ಯಾವ ಏರ್ಪಾಟುಗಳಿವೆ. ಕಾರ್ಯಾಂಗವು ಜನರ ಹಿತದ ಸಲುವಾಗಿ ಧೋರಣೆಗಳನ್ನು ಹೇಗೆ ರೂಪಿಸುತ್ತದೆ ಇತ್ಯಾದಿ ವಿಷಯಗಳನ್ನು ಕಾರ್ಯಾಂಗವನ್ನು ತಿಳಿದುಕೊಳ್ಳುವಾಗ ನಾವು ಮಾಹಿತಿ ಮಾಡಿಕೊಳ್ಳುವವರಿದ್ದೇವೆ.

ಭಾರತದ ಕೇಂದ್ರೀಯ ಕಾರ್ಯಾಂಗದಲ್ಲಿ ರಾಷ್ಟ್ರಪತಿ, ಪ್ರಧಾನಮಂತ್ರಿ ಮತ್ತು ಮಂತ್ರಿಮಂಡಳಗಳ ಸಮಾವೇಶವಾಗುತ್ತದೆ.

**ರಾಷ್ಟ್ರಪತಿ :** ಭಾರತದ ಸಂವಿಧಾನದಲ್ಲಿಯ ಏರ್ಪಾಟಿಗನುಸಾರವಾಗಿ ರಾಷ್ಟ್ರಪತಿಗಳು ಸರ್ವೋಚ್ಚ ರಾಷ್ಟ್ರಪ್ರಮುಖರಾಗಿದ್ದಾರೆ. ರಾಷ್ಟ್ರಪತಿಗಳ ಸ್ಥಾನವು ಅತ್ಯಂತ ಗೌರವದ ಹಾಗೂ ಪ್ರತಿಷ್ಠೆಯದ್ದಾಗಿದ್ದು ಅವರು ಭಾರತೀಯ ಪ್ರಜಾಸತ್ತಾತ್ಮಕ ಗಣರಾಜ್ಯದ ಪ್ರತಿನಿಧಿತ್ವ ಮಾಡುತ್ತಾರೆ. ಸಂವಿಧಾನವು ದೇಶದ ಸಂಪೂರ್ಣ ಕಾರ್ಯಾಂಗದ ಅಧಿಕಾರಗಳನ್ನು ರಾಷ್ಟ್ರಪತಿಗಳಿಗೆ ನೀಡಿದೆ. ದೇಶದ ಆಡಳಿತವು ರಾಷ್ಟ್ರಪತಿಗಳ ಹೆಸರಿನಲ್ಲಿ ನಡೆಯುತ್ತದೆ. ಹೀಗಿದ್ದರೂ ಪ್ರತ್ಯಕ್ಷ ವ್ಯವಹಾರದಲ್ಲಿ ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳವು ರಾಜ್ಯಾಡಳಿತವನ್ನು ಮಾಡುತ್ತದೆ. ಆದ್ದರಿಂದಲೆ ರಾಷ್ಟ್ರಪತಿಗಳು ನಾಮಮಾತ್ರ ಸಂವಿಧಾನಾತ್ಮಕ ಪ್ರಮುಖರಾಗಿದ್ದಾರೆ ಹಾಗೂ ಪ್ರಧಾನಮಂತ್ರಿಗಳು ಕಾರ್ಯಾಂಗ ಪ್ರಮುಖರಾಗಿದ್ದಾರೆ.

**ರಾಷ್ಟ್ರಪತಿಗಳ ಆಯ್ಕೆ :** ರಾಷ್ಟ್ರಪತಿಗಳ ಆಯ್ಕೆಯು ಭಾರತೀಯ ಜನತೆಯಿಂದ ಅಪ್ರತ್ಯಕ್ಷವಾಗಿ ಆಗುತ್ತದೆ. ಭಾರತದಲ್ಲಿಯ ಸರ್ವಸಾಮಾನ್ಯ ಮತದಾರರು ರಾಷ್ಟ್ರಪತಿಗಳನ್ನು ನೇರವಾಗಿ ಆಯ್ಕೆಮಾಡುವುದಿಲ್ಲ. ಆದರೆ ಅವರು ಆಯ್ಕೆ ಮಾಡಿದ ಸಂಸತ್ತಿನ ಸದಸ್ಯರ ಕಡೆಯಿಂದ ಮತ್ತು ವಿಧಾನ ಸಭೆಯ ಸದಸ್ಯರ ಕಡೆಯಿಂದ ರಾಷ್ಟ್ರಪತಿಗಳು ಆಯ್ಕೆಯಾಗುತ್ತಾರೆ. ಸಂಸತ್ತಿನ ಸದಸ್ಯರ ಮತ್ತು ವಿಧಾನಸಭೆಗಳ ಸದಸ್ಯರ ಈ ಗುಂಪಿಗೆ ನಿರ್ವಾಚನ ಮಂಡಳ ಎಂದು ಕರೆಯುತ್ತಾರೆ.

ರಾಷ್ಟ್ರಪತಿಗಳ ಅಧಿಕಾರಾವಧಿ 5 ವರ್ಷ ಇರುತ್ತದೆ. ರಾಷ್ಟ್ರಪತಿ ಸ್ಥಾನಕ್ಕೆ ಚುನಾವಣೆಗೆ ಸ್ಪರ್ಧಿಸುವ ವ್ಯಕ್ತಿಗಳು ಭಾರತದ ನಾಗರಿಕರಾಗಿರಬೇಕು ಅವರ ವಯಸ್ಸು 35 ವರ್ಷ ಪೂರ್ಣವಾಗಿರಬೇಕು. ರಾಷ್ಟ್ರಪತಿ ಸ್ಥಾನಕ್ಕೆ ಆಯ್ಕೆಯಾದ ವ್ಯಕ್ತಿಯು ಅಧಿಕಾರ ಗ್ರಹಣ ಮಾಡುವಾಗ ಪ್ರಮಾಣ ವಚನ ಸ್ವೀಕರಿಸಬೇಕಾಗುತ್ತದೆ. ಅದಕ್ಕನುಸಾರವಾಗಿ ಸಂವಿಧಾನದ ರಕ್ಷಣೆ ಮಾಡುವ ಹಾಗೂ ಸಂವಿಧಾನಕ್ಕನುಸಾರವಾಗಿ ರಾಜ್ಯಾಡಳಿತ ನಡೆಯುತ್ತಿದೆಯೋ ಇಲ್ಲವೋ ಎಂಬುದನ್ನು

ನೋಡುವ ಜವಾಬ್ದಾರಿಯು ರಾಷ್ಟ್ರಪತಿಗಳ ಮೇಲಿರುತ್ತದೆ. ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳವು ನೀಡಿದ ಸಲಹೆಯ ಪ್ರಕಾರ ರಾಷ್ಟ್ರಪತಿಗಳು ರಾಜ್ಯಾಡಳಿತ ಮಾಡುತ್ತಾರೆ.

ಸಂವಿಧಾನದ ರಕ್ಷಣೆ ಮಾಡುವ ಜವಾಬ್ದಾರಿಯು ರಾಷ್ಟ್ರಪತಿಗಳ ಮೇಲಿರುತ್ತದೆ. ಆದರೆ ಅವರ ಯಾವುದೊಂದು ವರ್ತನೆಯು ಸಂವಿಧಾನ ಭಂಗ ಮಾಡುತ್ತಿದ್ದರೆ ರಾಷ್ಟ್ರಪತಿಗಳನ್ನು ಅವರ ಸ್ಥಾನದಿಂದ ದೂರ ಮಾಡುವ ಅಧಿಕಾರವು ಸಂಸತ್ತಿಗೆ ಇರುತ್ತದೆ. ಈ ಪ್ರಕ್ರಿಯೆಗೆ 'ಮಹಾಭಿಯೋಗ' ಪ್ರಕ್ರಿಯೆ ಎನ್ನುತ್ತಾರೆ. ರಾಷ್ಟ್ರಪತಿಗಳ ಕಡೆಯಿಂದ ಸಂವಿಧಾನದ ಭಂಗವಾಗಿದ್ದರೆ ಆ ರೀತಿಯ ದೋಷಾರೋಪಣೆಯನ್ನು ಯಾವುದೇ ಒಂದು ಸದನವು ಮಾಡುತ್ತದೆ ಹಾಗೂ ಆ ದೋಷಾರೋಪಣೆಯ ವಿಚಾರಣೆಯನ್ನು ಎರಡನೆಯ ಸದನವು ಮಾಡುತ್ತದೆ. ಎರಡೂ ಸದನಗಳ ವಿಶೇಷ ಬಹುಮತದಿಂದ (2/3) ಗೊತ್ತುವಳಿಯು ಸಮ್ಮತವಾಗುವುದು ಅವಶ್ಯಕವಾಗಿರುತ್ತದೆ. ಆನಂತರ ರಾಷ್ಟ್ರಪತಿಗಳು ಪದಚ್ಯುತರಾಗುತ್ತದೆ.

**ರಾಷ್ಟ್ರಪತಿಗಳ ಕಾರ್ಯಗಳು ಮತ್ತು ಅಧಿಕಾರಗಳು :** ಸಂವಿಧಾನವು ರಾಷ್ಟ್ರಪತಿಗಳಿಗೆ ಅನೇಕ ಕಾರ್ಯಗಳನ್ನು ನೀಡಿದೆ. ಅವುಗಳಲ್ಲಿಯ ಕೆಲವು ಕಾರ್ಯಗಳು ಕೆಳಗಿನಂತಿವೆ.

(1) ಸಂಸತ್ತಿನ ಅಧಿವೇಶನಗಳನ್ನು ಕರೆಯುವುದು, ಸ್ಥಗಿತಗೊಳಿಸುವುದು, ಸಂಸತ್ತಿಗೆ ಸಂದೇಶಗಳನ್ನು ಕಳಿಸುವುದು, ಲೋಕಸಭೆಯನ್ನು ಅದರ ಕಾಲಾವಧಿಯ ನಂತರ ಇಲ್ಲವೆ ಕಾಲಾವಧಿಗಿಂತ ಮೊದಲು ವಿಸರ್ಜಿತಗೊಳಿಸುವುದು ಮುಂತಾದ ಎಲ್ಲ ಅಧಿಕಾರಗಳು ರಾಷ್ಟ್ರಪತಿಗಳಿಗೆ ಇರುತ್ತವೆ.

(2) ಲೋಕಸಭೆ ಮತ್ತು ರಾಜ್ಯಸಭೆಗಳು ಪಾಸು ಮಾಡಿದ ಮಸೂದೆಗಳಿಗೆ ರಾಷ್ಟ್ರಪತಿಗಳ ಅಂಕಿತ ಅವಶ್ಯಕವಾಗಿರುತ್ತದೆ. ಅವರ ಅಂಕಿತವಿಲ್ಲದೆ ಮಸೂದೆಯು ಕಾಯ್ದೆಯಾಗಲಾರದು.

(3) ಪ್ರಧಾನ ಮಂತ್ರಿಗಳ ನೇಮಕಾತಿಯನ್ನು ರಾಷ್ಟ್ರಪತಿಗಳು ಮಾಡುತ್ತಾರೆ. ಹಾಗೂ ಅವರು ಸೂಚಿಸಿದ ವ್ಯಕ್ತಿಗಳನ್ನು ಮಂತ್ರಿ ಸ್ಥಾನಕ್ಕೆ ರಾಷ್ಟ್ರಪತಿಗಳ ನೇಮಕವನ್ನು ಮಾಡುತ್ತಾರೆ.

(4) ಸರ್ವೋಚ್ಚ ನ್ಯಾಯಾಲಯದ ಮತ್ತು ಉಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಗಳು ಮಾಡುತ್ತಾರೆ. ಅದೇ ರೀತಿ ಸರ್ವ ರಾಜ್ಯಗಳ ರಾಜ್ಯಪಾಲರು, ಮುಖ್ಯ ಚುನಾವಣಾ ಆಯುಕ್ತರು ಹಾಗೂ ಅನ್ಯ ಮಹತ್ವದ ಸ್ಥಾನದಲ್ಲಿಯ ವ್ಯಕ್ತಿಗಳ ನೇಮಕವನ್ನು ರಾಷ್ಟ್ರಪತಿಗಳು ಮಾಡುತ್ತಾರೆ.

(5) ರಾಷ್ಟ್ರಪತಿಗಳು ಸಂರಕ್ಷಣ ದಳಗಳ ಮಹಾದಂಡನಾಯಕರಾಗಿರುತ್ತಾರೆ. ಯುದ್ಧ ಮತ್ತು ಶಾಂತತೆ ಇವುಗಳನ್ನು ಕುರಿತು ನಿರ್ಣಯಗಳನ್ನು ರಾಷ್ಟ್ರಪತಿಗಳು ಕೈಕೊಳ್ಳುತ್ತಾರೆ.

(6) ರಾಷ್ಟ್ರಪತಿಗಳಿಗೆ ಕೆಲವು ನ್ಯಾಯಾಂಗ ವಿಷಯದ ಅಧಿಕಾರಗಳೂ ಇರುತ್ತವೆ. ಉದಾ., ಯಾವುದೊಬ್ಬ ವ್ಯಕ್ತಿಯ ಶಿಕ್ಷೆಯನ್ನು ಕಡಿಮೆ ಮಾಡುವುದು, ಶಿಕ್ಷೆಯ ತೀವ್ರತೆಯನ್ನು ಕಡಿಮೆ ಮಾಡುವುದು ಇಲ್ಲವೆ ಅಪವಾದಾತ್ಮಕ ಪರಿಸ್ಥಿತಿಯಲ್ಲಿ ಮಾನವತೆಯ ದೃಷ್ಟಿಕೋನದಿಂದ ಶಿಕ್ಷೆಯನ್ನು ಕಡಿಮೆ ಮಾಡುವ ಅಥವಾ ರದ್ದು ಪಡಿಸುವ ಅಧಿಕಾರವು ರಾಷ್ಟ್ರಪತಿಗಳಿಗಿದೆ.

(7) ದೇಶದಲ್ಲಿ ಸಂಕಟಕಾಲದ ಪರಿಸ್ಥಿತಿ ನಿರ್ಮಾಣವಾದರೆ ತುರ್ತು ಪರಿಸ್ಥಿತಿಯನ್ನು ಜಾಹೀರುಪಡಿಸುವ ಅಧಿಕಾರವು ರಾಷ್ಟ್ರಪತಿಗಳಿಗಿದೆ. ಸಂವಿಧಾನದಲ್ಲಿ ಮೂರು ಪ್ರಕಾರದ ತುರ್ತು ಪರಿಸ್ಥಿತಿಯನ್ನು ಕೊಡಲಾಗಿದೆ. (1) ರಾಷ್ಟ್ರೀಯ ತುರ್ತು ಪರಿಸ್ಥಿತಿ (2) ಘಟಕ ರಾಜ್ಯಗಳಲ್ಲಿಯ ತುರ್ತು ಪರಿಸ್ಥಿತಿ ಇಲ್ಲವೆ ರಾಷ್ಟ್ರಪತಿ ಆಡಳಿತ (3) ಆರ್ಥಿಕ ತುರ್ತು ಪರಿಸ್ಥಿತಿ.

ರಾಷ್ಟ್ರಪತಿಗಳ ಅನುಪಸ್ಥಿತಿಯಲ್ಲಿ ಅವರ ಕಾರ್ಯಗಳನ್ನು ಉಪರಾಷ್ಟ್ರಪತಿಗಳು ನಿರ್ವಹಿಸುತ್ತಾರೆ. ಉಪರಾಷ್ಟ್ರಪತಿಗಳ ಆಯ್ಕೆಯನ್ನು ಸಂಸತ್ತಿನ ಉಭಯ ಸದನಗಳ ಸದಸ್ಯರು ಮಾಡುತ್ತಾರೆ.



**ಮಾಡಿ ನೋಡಿರಿ.**

ರಾಷ್ಟ್ರಪತಿಗಳು ಸ್ವೀಕರಿಸುವ ಪ್ರಮಾಣ ವಚನದ ಕರಡು ಪ್ರತಿಯನ್ನು ಪಡೆಯಿರಿ. ಶಿಕ್ಷಕರ ಸಹಾಯದಿಂದ ಅದರಲ್ಲಿಯ ಆಶಯವನ್ನು ತಿಳಿದುಕೊಳ್ಳಿರಿ.

**ಪ್ರಧಾನ ಮಂತ್ರಿ ಮತ್ತು ಮಂತ್ರಿ ಮಂಡಳ :** ರಾಷ್ಟ್ರಪತಿಗಳು ಸಂವಿಧಾನಾತ್ಮಕ ಪ್ರಮುಖರಾಗಿರುತ್ತಾರೆ ಅವರ ಕೈಯಲ್ಲಿ ನಾಮಮಾತ್ರ ಅಧಿಕಾರಗಳಿರುತ್ತವೆ ಹಾಗೂ ಪ್ರತ್ಯಕ್ಷದಲ್ಲಿ ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳವು ರಾಜ್ಯಾಡಳಿತವನ್ನು ನಡೆಸುತ್ತದೆ ಎಂಬುದು ನಿಮಗೆ ಗೊತ್ತಿದೆ. ಪ್ರಧಾನ ಮಂತ್ರಿಗಳು ಯಾವ ಕಾರ್ಯಗಳನ್ನು ಮಾಡುತ್ತಾರೆ ಹಾಗೂ ಯಾವ ಹೊಣೆಗಾರಿಕೆಯನ್ನು ನಿರ್ವಹಿಸುತ್ತಾರೆಂಬುದನ್ನು ನೋಡೋಣ.

ಚುನಾವಣೆಯಲ್ಲಿ ಬಹುಮತ ಪಡೆದ ಪಕ್ಷವು ತನ್ನ ಮುಖಂಡನನ್ನು ಪ್ರಧಾನಮಂತ್ರಿಯನ್ನಾಗಿ ಆಯ್ಕೆ ಮಾಡುವುದಾಗಿ ನಿರ್ಧರಿಸುತ್ತದೆ. ಅದೇ ಪಕ್ಷದಲ್ಲಿಯ ಪ್ರಧಾನಮಂತ್ರಿಗಳ ವಿಶ್ವಾಸಿ ಸಹಕಾರಿಗಳ ಸಮಾವೇಶವು ಪ್ರಧಾನಮಂತ್ರಿಗಳ ಮಂತ್ರಿಮಂಡಳದಲ್ಲಿ ಆಗುತ್ತದೆ. ಪ್ರಧಾನಮಂತ್ರಿ ಮತ್ತು ಇತರ ಮಂತ್ರಿಗಳು ಸಂಸತ್ತಿನ ಸದಸ್ಯರಾಗಿರುವುದು ಅವಶ್ಯಕವಾಗಿರುತ್ತದೆ. ಇಲ್ಲದಿದ್ದರೆ ಅವರು ಆರು ತಿಂಗಳೊಳಗಾಗಿ ಸಂಸತ್ತಿನ ಸದಸ್ಯತ್ವವನ್ನು ಪಡೆಯ ಬೇಕಾಗುತ್ತದೆ. ನಿಜವಾದ ಅರ್ಥದಲ್ಲಿ ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳವು ರಾಜ್ಯಾಡಳಿತವನ್ನು ಮಾಡುತ್ತಿರುತ್ತದೆ. ಇದರರ್ಥ ರಾಜ್ಯಾಡಳಿತದ ನಿಜವಾದ ಅಧಿಕಾರವು ಪ್ರಧಾನಮಂತ್ರಿ ಮತ್ತು ಅವರ ಮಂತ್ರಿಮಂಡಳದ ಕೈಯಲ್ಲಿ ಇರುತ್ತದೆ.

## ಪ್ರಧಾನ ಮಂತ್ರಿಯ ಕಾರ್ಯಗಳು

(1) ಪ್ರಧಾನಮಂತ್ರಿಗಳಿಗೆ ಎಲ್ಲಕ್ಕೂ ಮೊದಲು ತಮ್ಮ ಮಂತ್ರಿಮಂಡಳವನ್ನು ನಿರ್ಮಿಸಬೇಕಾಗುತ್ತದೆ. ಮಂತ್ರಿಗಳ ಆಯ್ಕೆ ಮಾಡುವಾಗ ಪ್ರಧಾನಮಂತ್ರಿಗಳು ತಮ್ಮ ಪಕ್ಷದಲ್ಲಿಯ ವಿಶ್ವಾಸಿ ಸಹಕಾರಿಗಳಿಗೆ ಪ್ರಾಧಾನ್ಯ ನೀಡುತ್ತಾರೆ. ಆದರೆ ಅದರ ಜೊತೆಗೆ ಆಡಳಿತದ ಅನುಭವ, ರಾಜ್ಯಾಡಳಿತದ ಕೌಶಲ್ಯ, ದಕ್ಷತೆ, ವಿಷಯದಲ್ಲಿಯ ಜ್ಞಾನ ಇವುಗಳ ವಿಚಾರವನ್ನೂ ಮಾಡಬೇಕಾಗುತ್ತದೆ.

(2) ಮಂತ್ರಿಮಂಡಳದಲ್ಲಿ ಯಾರ ಯಾರ ಸಮಾವೇಶ ಮಾಡಬೇಕೆಂಬುದು ನಿರ್ಧಾರವಾದ ನಂತರ ಅವರಲ್ಲಿ ಖಾತೆಗಳನ್ನು ಹಂಚುವ ಕಾರ್ಯವನ್ನು ಪ್ರಧಾನಮಂತ್ರಿಗಳು ಮಾಡುತ್ತಾರೆ.

(3) ಪ್ರಧಾನಮಂತ್ರಿಗಳು ಮಂತ್ರಿಮಂಡಳದ ನೇತೃತ್ವ ಮಾಡುತ್ತಾರೆ. ಮಂತ್ರಿಮಂಡಳದ ಸರ್ವ ಸಭೆಗಳು ಪ್ರಧಾನಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯುತ್ತವೆ.

(4) ಖಾತೆಗಳ ಹಂಚಿಕೆಯಾದ ನಂತರ ವಿವಿಧ ಖಾತೆಗಳಲ್ಲಿ ಸುಸೂತ್ರತೆಯನ್ನು ಕಾಪಾಡುವುದು, ಖಾತೆಗಳಲ್ಲಿ ಪರಸ್ಪರ ಸಹಕಾರವನ್ನು ಹೆಚ್ಚಿಸುವುದು, ಖಾತೆಗಳ ಆಡಳಿತವು ದಕ್ಷತೆಯಿಂದ ನಡೆಯುತ್ತಿದೆಯೋ ಅಥವಾ ಇಲ್ಲವೋ ಎಂಬುದನ್ನು ನೋಡುವುದು ಇತ್ಯಾದಿ ಕಾರ್ಯಗಳನ್ನು ಪ್ರಧಾನಮಂತ್ರಿಗಳು ಮಾಡಬೇಕಾಗುತ್ತದೆ.

(5) ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ದೇಶದ ಘನತೆಯನ್ನು ಹೆಚ್ಚಿಸಲು ಜಾಗತಿಕ ಜನಮತವು ನಮಗೆ ಅನುಕೂಲವಾಗುವಂತೆ ಪ್ರಯತ್ನಿಸುವುದು, ದೇಶದಲ್ಲಿಯ ಜನತೆಗೆ ಭರವಸೆಯನ್ನು ನೀಡುವುದು, ಸಂಕಟ ಕಾಲದಲ್ಲಿ ಸಂಕಟಗ್ರಸ್ತರ ಬೆಂಗಾವಲಾಗಿ ನಿಲ್ಲುವುದು ಇತ್ಯಾದಿ ಜವಾಬ್ದಾರಿಗಳನ್ನು ಪ್ರಧಾನಮಂತ್ರಿಗಳು ನಿರ್ವಹಿಸುತ್ತಾರೆ.



### ಗೊತ್ತಿದೆಯೇ ನಿಮಗೆ?

ನೀವು ಜಂಬೋ ಮಂತ್ರಿಮಂಡಳ ಎಂಬ ಶಬ್ದವನ್ನು ಕೇಳಿದ್ದೀರಾ?

ಇದರ ಅರ್ಥ ತುಂಬಾ ದೊಡ್ಡ ಮಂತ್ರಿಮಂಡಳ. ನಮ್ಮ ದೇಶದಲ್ಲಿ ಮಂತ್ರಿಮಂಡಳದ ಆಕಾರವನ್ನು ದೊಡ್ಡದಾಗಿಡುವುದರ ಕಡೆಗೆ ಒಲವು ಇತ್ತು. ಮಂತ್ರಿಮಂಡಳವು ಸೀಮಿತ ಆಕಾರ ಮಾನವುಳ್ಳದ್ದಾಗಿರಬೇಕು ಎನ್ನುವ ಸಲುವಾಗಿ ಸಂವಿಧಾನದಲ್ಲಿ ತಿದ್ದುಪಡಿ ಮಾಡಲಾಯಿತು. ಅದಕ್ಕನುಸಾರವಾಗಿ ಮಂತ್ರಿಮಂಡಳದ ಸಂಖ್ಯೆಯು ಲೋಕಸಭೆಯ ಒಟ್ಟು ಸದಸ್ಯ ಸಂಖ್ಯೆಯ ಪ್ರತಿಶತ 15ಕ್ಕಿಂತ ಅಧಿಕವಾಗಿರಲಾರದು ಎಂದು ನಿಶ್ಚಿತ ಪಡಿಸಲಾಯಿತು.

## ಮಂತ್ರಿಮಂಡಳದ ಕಾರ್ಯಗಳು

(1) ಸಂಸದೀಯ ಸರಕಾರ ಪದ್ಧತಿಯಲ್ಲಿ ಮಂತ್ರಿಮಂಡಳವು ಕಾಯ್ದೆ ನಿರ್ಮಿತಿಯಲ್ಲಿ ನೇತೃತ್ವ ವಹಿಸುತ್ತದೆ. ಅದರ ಕರಡು ಪ್ರತಿಯನ್ನು ತಯಾರಿಸಿ ಅದರ ಮೇಲೆ ಚರ್ಚೆ ಮಾಡುತ್ತದೆ ಹಾಗೂ ನಂತರ ಅದನ್ನು ಸಂಸತ್ತಿನ ಸದನದಲ್ಲಿ ಮಂಡಿಸಲಾಗುತ್ತದೆ. ಮಂತ್ರಿ ಮಂಡಳವು ಎಲ್ಲ ಮಹತ್ವದ ಪ್ರಶ್ನೆಗಳನ್ನು ಕುರಿತು ಚರ್ಚೆ ಮಾಡಿ ನಿರ್ಣಯವನ್ನು ಕೈಕೊಳ್ಳುತ್ತದೆ.

(2) ಶಿಕ್ಷಣ, ಕೃಷಿ, ಕೈಗಾರಿಕೆ, ಆರೋಗ್ಯ, ವಿದೇಶ ವ್ಯವಹಾರಗಳಂತಹ ಅನೇಕ ವಿಷಯಗಳನ್ನು ಕುರಿತು ಮಂತ್ರಿಮಂಡಳವು ಒಂದು ನಿಶ್ಚಿತ ಧೋರಣೆಯನ್ನು ಇಲ್ಲವೆ ಕಾರ್ಯದ ದಿಶೆಯನ್ನು ನಿರ್ಧರಿಸಬೇಕಾಗುತ್ತದೆ. ಮಂತ್ರಿಮಂಡಳವು ನಿರ್ಧರಿಸಿದ ಧೋರಣೆಯ ಬಗ್ಗೆ ಸಂಸತ್ತಿನ ವಿಶ್ವಾಸ ಪಡೆಯ ಬೇಕಾಗುತ್ತದೆ. ಅದಕ್ಕಾಗಿ ಮಂತ್ರಿಮಂಡಳದಲ್ಲಿಯ ಮಂತ್ರಿಗಳು ತಮ್ಮ ತಮ್ಮ ಖಾತೆಯ ಧೋರಣೆಗಳನ್ನು ಸಂಸತ್ತಿನಲ್ಲಿ ಮಂಡಿಸಿ ಅದರ ಮೇಲೆ ಚರ್ಚೆಯನ್ನು ನಡೆಸಿ ಸಂಸತ್ತಿನಿಂದ ಅದನ್ನು ಮಂಜೂರು ಮಾಡಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ.

(3) ಮಂತ್ರಿಮಂಡಳದ ಮುಖ್ಯ ಜವಾಬ್ದಾರಿಯು ಧೋರಣೆಗಳನ್ನು ಜಾರಿಗೊಳಿಸುವುದಾಗಿರುತ್ತದೆ. ಧೋರಣೆಗಳಿಗೆ ಇಲ್ಲವೆ ಮಸೂದೆಗಳಿಗೆ ಸಂಸತ್ತು ಮಾನ್ಯತೆ ನೀಡಿದ ನಂತರ ಮಂತ್ರಿಮಂಡಳವು ಅವುಗಳನ್ನು ಜಾರಿಯಲ್ಲಿ ತರುತ್ತದೆ.

## ಸಂಸತ್ತು ಮಂತ್ರಿಮಂಡಳದ ಮೇಲೆ ಹೇಗೆ ನಿಯಂತ್ರಣವನ್ನಿಡುತ್ತದೆ?

ಸಂಸದೀಯ ಸರಕಾರ ಪದ್ಧತಿಯಲ್ಲಿ ಮಂತ್ರಿಮಂಡಳದ ಮೇಲೆ ಸಂಸತ್ತು ನಿಯಂತ್ರಣವಿಡುವ ಕಾಯ್ದೆಗಳ ಇಲ್ಲವೆ ಧೋರಣೆಗಳ ನಿರ್ಮಿತಿ, ಅವುಗಳನ್ನು ಜಾರಿಗೊಳಿಸುವುದು ಹಾಗೂ ಆ ನಂತರದ ಕಾಲದಲ್ಲಿಯೂ ಸಂಸತ್ತು ಮಂತ್ರಿಮಂಡಳದ ಮೇಲೆ ನಿಯಂತ್ರಣವನ್ನಿಡುತ್ತದೆ. ಈ ನಿಯಂತ್ರಣದ ಕೆಲವು ಮಾರ್ಗಗಳು ಕೆಳಗಿನಂತಿವೆ.

**(1) ಚರ್ಚೆ ಮತ್ತು ವಿಚಾರ ವಿನಿಮಯ :** ಕಾಯ್ದೆ ನಿರ್ಮಿತಿಯ ಕಾಲದಲ್ಲಿ ಸಂಸತ್ತಿನ ಸದಸ್ಯರು ಚರ್ಚೆ ಮತ್ತು ವಿಚಾರ ವಿನಿಮಯ ಮಾಡಿ ಮಂತ್ರಿಮಂಡಳಕ್ಕೆ ಧೋರಣೆಗಳಲ್ಲಿಯ ಅಥವಾ ಕಾಯ್ದೆಗಳಲ್ಲಿಯ ಕೊರತೆಗಳನ್ನು ತೋರಿಸಿಕೊಡುತ್ತಾರೆ. ಕಾಯ್ದೆಯು ದೋಷರಹಿತವಾಗುವ ದೃಷ್ಟಿಯಿಂದ ಈ ಚರ್ಚೆಯು ತುಂಬಾ ಮಹತ್ವದ್ದಾಗಿರುತ್ತದೆ.

**(2) ಪ್ರಶ್ನೋತ್ತರಗಳು :** ಸಂಸತ್ತಿನ ಅಧಿವೇಶನ ನಡೆದಾಗ ಕಾರ್ಯಕಲಾಪಗಳ ಆರಂಭವು ಸಂಸತ್ ಸದಸ್ಯರು ಕೇಳಿದ ಪ್ರಶ್ನೆಗಳಿಂದ ಆಗುತ್ತದೆ. ಈ ಪ್ರಶ್ನೆಗಳಿಗೆ ಸಂಬಂಧಿತ ಮಂತ್ರಿಗಳು ಸಮಾಧಾನಕಾರಕ ಉತ್ತರಗಳನ್ನು

ಕೊಡಬೇಕಾಗುತ್ತದೆ. ಪ್ರಶ್ನೋತ್ತರಗಳು ಮಂತ್ರಿಮಂಡಳದ ಮೇಲೆ ನಿಯಂತ್ರಣವನ್ನಿಡುವ ಒಂದು ಅತ್ಯಂತ ಪ್ರಭಾವಶಾಲಿ ಮಾರ್ಗವಾಗಿದೆ. ಈ ಸಮಯದಲ್ಲಿ ಸರಕಾರವನ್ನು ಟೀಕಿಸುವುದು, ತಮ್ಮ ವಿವಿಧ ಸಮಸ್ಯೆಗಳನ್ನು ಕುರಿತು ಪ್ರಶ್ನೆಗಳನ್ನು ಮಂಡಿಸುವುದು ಇತ್ಯಾದಿ ನಡೆಯುತ್ತವೆ. ಮಂತ್ರಿಗಳ ಉತ್ತರದಿಂದ ಸಮಾಧಾನವಾಗದಿದ್ದರೆ ವಾದಗಳು ಸಂಭವಿಸಬಹುದು. ತಮ್ಮ ನಿಷೇಧವನ್ನು ವ್ಯಕ್ತಪಡಿಸಲು ಕೆಲವೊಮ್ಮೆ ಸಂಸತ್ತಿನ ಸದಸ್ಯರು ಸಭಾತ್ಯಾಗ ಮಾಡುತ್ತಾರೆ ಇಲ್ಲವೆ ಘೋಷಣೆಗಳನ್ನು ಕೂಗುತ್ತ ಸಭಾಗೃಹದ ಮಧ್ಯಭಾಗದಲ್ಲಿ ಸೇರುತ್ತಾರೆ.

**(3) ಶೂನ್ಯ ಪ್ರಹರ :** ಅಧಿವೇಶನ ಕಾಲದಲ್ಲಿ ಮಧ್ಯಾಹ್ನ 12ರ ಸಮಯವನ್ನು ಶೂನ್ಯ ಪ್ರಹರವೆಂದು ಗುರುತಿಸಲಾಗುತ್ತದೆ. ಈ ಸಮಯದಲ್ಲಿ ಸಾರ್ವಜನಿಕ ದೃಷ್ಟಿಯಿಂದ ಮಹತ್ವದ ಯಾವುದೇ ಪ್ರಶ್ನೆಗಳನ್ನು ಕುರಿತು ಚರ್ಚೆ ಮಾಡಲಾಗುತ್ತದೆ.

**(4) ಅವಿಶ್ವಾಸದ ಗೊತ್ತುವಳಿ :** ಇದು ಮಂತ್ರಿಮಂಡಳದ ಮೇಲೆ ನಿಯಂತ್ರಣವನ್ನಿಡುವ ಒಂದು ಅತ್ಯಂತ ಪ್ರಭಾವಶಾಲಿ ಮಾರ್ಗವಾಗಿದೆ. ಲೋಕಸಭೆಯಲ್ಲಿ ಎಲ್ಲಿಯ ವರೆಗೆ ಬಹುಮತವಿರುತ್ತದೆಯೋ ಅಲ್ಲಿಯ ವರೆಗೆ ಸರಕಾರವು ಕಾರ್ಯ ನಿರ್ವಹಿಸಬಲ್ಲದು. ಈ ಬಹುಮತವನ್ನು ಸಂಸತ್ತಿನ ಸದಸ್ಯರು ಹಿಂತೆಗೆದುಕೊಂಡರೆ ಸರಕಾರವು ಅಥವಾ ಮಂತ್ರಿಮಂಡಳವು ಅಧಿಕಾರದಲ್ಲಿ ಉಳಿಯಲಾರದು. 'ಮಂತ್ರಿಮಂಡಳದ ಮೇಲೆ ನಮ್ಮ ವಿಶ್ವಾಸವಿಲ್ಲ' ಎಂದು ಹೇಳಿ ಸಂಸತ್ತಿನ ಸದಸ್ಯರು ಅವಿಶ್ವಾಸದ ಗೊತ್ತುವಳಿಯನ್ನು ಮಂಡಿಸಬಲ್ಲರು. ಅದು ಬಹುಮತದಿಂದ ಮಂಜೂರಾದರೆ ಮಂತ್ರಿಮಂಡಳವು ರಾಜೀನಾಮೆ ನೀಡಬೇಕಾಗುತ್ತದೆ.

**ಹೇಳಿರಿ ನೋಡೋಣ.**

ಸಂಸತ್ತಿನ ಸದಸ್ಯರಿಗೆ ಚರ್ಚೆಯಲ್ಲಿ ಪ್ರಭಾವಶಾಲಿಯಾಗಿ ಭಾಗವಹಿಸಬೇಕಾದರೆ ಏನು ಮಾಡಬೇಕು?

ಕಾರ್ಯಾಂಗದ ನಿಯಂತ್ರಣದಲ್ಲಿ ದೊಡ್ಡ ನೌಕರಶಾಹಿ ಇರುತ್ತದೆ. ನೌಕರ ಶಾಹಿಯ ರಚನೆಯ ಅಭ್ಯಾಸವನ್ನು ನಾವು ಆರನೆಯ ಪಾಠದಲ್ಲಿ ಮಾಡುವವರಿದ್ದೇವೆ.

## ಅಭ್ಯಾಸ

**1. ಯೋಗ್ಯ ಪರ್ಯಾಯಗಳನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ಭಾರತದಲ್ಲಿ ಕಾರ್ಯಾಂಗದ ಅಧಿಕಾರವು .........ಗಳ ಕೈಯಲ್ಲಿ ಇರುತ್ತದೆ.
(ರಾಷ್ಟ್ರಪತಿ, ಪ್ರಧಾನ ಮಂತ್ರಿ, ಸಭಾಪತಿ)

(2) ರಾಷ್ಟ್ರಪತಿಗಳ ಅಧಿಕಾರಾವಧಿ ....... ವರ್ಷ ಇರುತ್ತದೆ.
(ಮೂರು, ನಾಲ್ಕು, ಐದು)

(3) ಮಂತ್ರಿ ಮಂಡಳದ ನೇತೃತ್ವವನ್ನು .......... ಮಾಡುತ್ತಾರೆ.
(ಪಕ್ಷಪ್ರಮುಖರು, ಪ್ರಧಾನಮಂತ್ರಿ, ರಾಷ್ಟ್ರಪತಿ)

**2. ಗುರುತಿಸಿರಿ ಮತ್ತು ಬರೆಯಿರಿ.**

(1) ರಾಷ್ಟ್ರಪತಿ, ಪ್ರಧಾನಮಂತ್ರಿ, ಮಂತ್ರಿಮಂಡಳ – ಇವು ಯಾವ ಅಂಗದಲ್ಲಿ ಸಮಾವೇಶವಾಗುತ್ತವೆಯೋ ಆ ಅಂಗದ ಹೆಸರು ----

(2) ಅಧಿವೇಶನ ಕಾಲದಲ್ಲಿ ಮಧ್ಯಾಹ್ನ 12ರ ಸಮಯವು ಈ ಹೆಸರಿನಿಂದ ಗುರುತಿಸಲ್ಪಡುತ್ತದೆ ----

**3. ಕೆಳಗಿನ ಕಲ್ಪನೆಗಳನ್ನು ನಿಮ್ಮ ಶಬ್ದಗಳಲ್ಲಿ ಬರೆಯಿರಿ.**

(1) ಮಹಾಭಿಯೋಗ ಪ್ರಕ್ರಿಯೆ (2) ಅವಿಶ್ವಾಸದ ಗೊತ್ತುವಳಿ
(3) ಜಂಬೋ ಮಂತ್ರಿಮಂಡಳ

**4. ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ಮಂತ್ರಿಮಂಡಳದ ಕಾರ್ಯಗಳನ್ನು ಸ್ಪಷ್ಟಪಡಿಸಿರಿ.

(2) ಸಂಸತ್ತು ಮಂತ್ರಿಮಂಡಳದ ಮೇಲೆ ಹೇಗೆ ನಿಯಂತ್ರಣವನ್ನಿಡುತ್ತದೆ?

**5. ಕೆಳಗಿನ ಕಲ್ಪನಾ ಚಿತ್ರವನ್ನು ಪೂರ್ಣಮಾಡಿರಿ.**

ಭಾರತದ ರಾಷ್ಟ್ರಪತಿಯವರ ಕಾರ್ಯಗಳು

................
................

**ಉಪಕ್ರಮ**

(1) ಒಂದು ವೇಳೆ ನೀವು ಪ್ರಧಾನಮಂತ್ರಿಯಾದರೆ ಯಾವ ಕಾರ್ಯಗಳಿಗೆ ಪ್ರಥಮ ಪ್ರಾಧಾನ್ಯ ನೀಡುವಿರಿ? ಪ್ರಾಧಾನ್ಯ ಕ್ರಮಕ್ಕನುಸಾರವಾಗಿ ಪಟ್ಟಿಯನ್ನು ತಯಾರಿಸಿ ವರ್ಗದಲ್ಲಿ ಸಾದರಪಡಿಸಿರಿ.

(2) ಭಾರತದ ರಾಷ್ಟ್ರಪತಿಗಳ ಚಿತ್ರ ಹಾಗೂ ಮಾಹಿತಿಯನ್ನು ಪಡೆಯಿರಿ.

AXL7H2

# 4. ಭಾರತದಲ್ಲಿಯ ನ್ಯಾಯಾಂಗ ವ್ಯವಸ್ಥೆ

ಶಾಸಕಾಂಗ ಮತ್ತು ಕಾರ್ಯಾಂಗಗಳ ಜೊತೆಗೆ ನ್ಯಾಯಾಂಗವು ಕೂಡ ಸರಕಾರದ ಒಂದು ಮಹತ್ವದ ಅಂಗವಾಗಿದೆ. ಶಾಸಕಾಂಗವು ಕಾಯ್ದೆಗಳನ್ನು ನಿರ್ಮಿಸುತ್ತದೆ. ಕಾರ್ಯಾಂಗವು ಅವುಗಳನ್ನು ಜಾರಿಗೆ ತರುತ್ತದೆ ಹಾಗೂ ನ್ಯಾಯಾಂಗವು ನ್ಯಾಯದಾನ ಮಾಡುತ್ತದೆ. ಅದರಿಂದ ಸಮಾಜದಲ್ಲಿಯ ಅನ್ಯಾಯವು ದೂರವಾಗಿ ಸಾಮಾಜಿಕ ಸ್ವಾಸ್ಥ್ಯವು ಹೇಗೆ ಪ್ರಾಪ್ತವಾಗುತ್ತದೆಂಬುದರ ವಿಚಾರವನ್ನು ನಾವು ಮಾಡುವವರಿದ್ದೇವೆ. ಅದಕ್ಕೂ ಮೊದಲು ನಾವು ನ್ಯಾಯದಾನದ ಅವಶ್ಯಕತೆ ಏಕಿರುತ್ತದೆ ಎಂಬುದನ್ನು ತಿಳಿದುಕೊಳ್ಳೋಣ.

ವ್ಯಕ್ತಿ-ವ್ಯಕ್ತಿಗಳಲ್ಲಿ ಅಭಿಪ್ರಾಯ, ವಿಚಾರ, ದೃಷ್ಟಿಕೋನ, ತಿಳುವಳಿಕೆ, ಶ್ರದ್ಧೆ, ಸಂಸ್ಕೃತಿ ಇತ್ಯಾದಿಗಳ ವಿಷಯದಲ್ಲಿ ವ್ಯತ್ಯಾಸವಿರುತ್ತದೆ. ಸಹಿಷ್ಣುತೆಯನ್ನು ಪಾಲಿಸಿದರೆ ಈ ವಿಷಯಗಳಿಂದ ಸಂಘರ್ಷ ನಿರ್ಮಾಣವಾಗುವುದಿಲ್ಲ. ಆದರೆ ಭಿನ್ನಾಭಿಪ್ರಾಯವು ಪರಮಾವಧಿಯನ್ನು ತಲುಪಿದರೆ ಅದರಿಂದ ಸಂಘರ್ಷ ನಿರ್ಮಾಣವಾಗುತ್ತವೆ ಹಾಗೂ ಅವುಗಳ ನಿವಾರಣೆಯು ಕಾಯ್ದೆಯ ಆಧಾರದಿಂದ ಮತ್ತು ನಿಷ್ಪಕ್ಷಪಾತ ದೃಷ್ಟಿಯಿಂದ ಆಗುವ ಅವಶ್ಯಕತೆ ಇರುತ್ತದೆ. ಅದರ ಸಲುವಾಗಿ ನ್ಯಾಯಾಂಗದಂತಹ ನಿಸ್ಪೃಹ ವ್ಯವಸ್ಥೆಯು ಅವಶ್ಯಕವಾಗಿರುತ್ತದೆ.

- ವ್ಯಕ್ತಿ ಮತ್ತು ಸರಕಾರಗಳಲ್ಲಿಯೂ ಹಿತಸಂಬಂಧಗಳ ವಿಷಯವಾಗಿ ಸಂಘರ್ಷಗಳು ನಿರ್ಮಾಣವಾಗಬಹುದು. ಸರಕಾರದ ಯಾವುದೊಂದು ನಿರ್ಣಯ ಅಥವಾ ಕಾಯ್ದೆಯು ಜನರಿಗೆ ಅನ್ಯಾಯಕಾರಕವೆನಿಸಬಹುದು ಹಾಗೂ ಅದರ ವಿರುದ್ಧ ನ್ಯಾಯಾಲಯದಲ್ಲಿ ಮನವಿ ಮಾಡಲು ಬರುತ್ತದೆ.
- ಸಂವಿಧಾನದಲ್ಲಿಯ ಸಾಮಾಜಿಕ ನ್ಯಾಯ ಮತ್ತು ಸಮಾನತೆ ಈ ಉದ್ದೇಶಗಳನ್ನು ಪ್ರತ್ಯಕ್ಷ ವ್ಯವಹಾರದಲ್ಲಿ ತರುವ ಸಲುವಾಗಿ ಸರಕಾರವು ಪ್ರಯತ್ನ ಮಾಡುವಂತೆ ನ್ಯಾಯಾಂಗವು ಕೂಡ ಕೆಲವು ಮೊಕದ್ದಮೆಗಳ ತೀರ್ಪುಗಳ ಮೂಲಕ ಅಥವಾ ಕ್ರಿಯಾಶೀಲ ನಿಲುವನ್ನು ತಳೆದು ಸರಕಾರಕ್ಕೆ ಬೆಂಬಲ ನೀಡಬಹುದು. ಸಮಾಜದಲ್ಲಿಯ ದುರ್ಬಲ ಘಟಕಗಳು, ಮಹಿಳೆಯರು, ಬಾಲಕರು, ವಿಕಲಚೇತನರು ಹಾಗೂ ತೃತೀಯ ಪಂಥೀಯರು, (transgender) ಮುಂತಾದ ಸಮಾಜ ಘಟಕಗಳು ಮುಖ್ಯ ಪ್ರವಾಹದಲ್ಲಿ ಬರುವಂತೆ ನ್ಯಾಯಾಲಯವು ಪ್ರಯತ್ನ ಮಾಡುವುದು.
- ಸ್ವಾತಂತ್ರ್ಯ, ಸಮತೆ, ನ್ಯಾಯ ಮತ್ತು ಪ್ರಜಾಪ್ರಭುತ್ವ ಇವುಗಳ ಲಾಭಗಳು ಯಾವಾಗ ಸಾಮಾನ್ಯ ಮನುಷ್ಯನಿಗೆ ದೊರೆಯುತ್ತವೆಯೋ ಆಗ ಪ್ರಜಾಪ್ರಭುತ್ವದ ವ್ಯಾಪ್ತಿ ಮತ್ತು ಆಳ ಹೆಚ್ಚುತ್ತದೆ. ಪ್ರಜಾಪ್ರಭುತ್ವವು ಬಲಾಢ್ಯವಾಗಲು ಈ ಸಂಗತಿಯು ಅವಶ್ಯಕವಾಗಿದೆ.
- ಕಾಯ್ದೆಯ ಅಧಿರಾಜ್ಯವು ನ್ಯಾಯಾಂಗದಿಂದಾಗಿ ಸುರಕ್ಷಿತವಾಗಿ ಉಳಿಯುತ್ತದೆ. ಬಡವ - ಶ್ರೀಮಂತ, ಪ್ರಗತಿಶೀಲ-ಅಪ್ರಗತಿಶೀಲ, ಸ್ತ್ರೀ ಪುರುಷ ಇವರೆಲ್ಲರಿಗೂ ಕಾಯ್ದೆಯು ಸಮಾನ ರೀತಿಯಿಂದ ಅನ್ವಯಿಸುತ್ತದೆಯೆಂಬುದು ನ್ಯಾಯದಾನದಿಂದ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.
- ನ್ಯಾಯದಾನದ ಮೂಲಕ ನಾಗರಿಕರ ಹಕ್ಕುಗಳ ಸಂರಕ್ಷಣೆಯಾಗುತ್ತದೆ. ಕಾಯ್ದೆಗನುಸಾರವಾಗಿ ತಂಟೆಗಳ ನಿವಾರಣೆಯಾಗುತ್ತದೆ ಹಾಗೂ ಯಾವುದೇ ಗುಂಪಿನ ಹಾಗೂ ವ್ಯಕ್ತಿಯ ದಬ್ಬಾಳಿಕೆ ಇಲ್ಲವೆ ಸರ್ವಾಧಿಕಾರತ್ವವು ನಿರ್ಮಾಣವಾಗಲು ಪ್ರತಿಬಂಧ ಉಂಟಾಗುತ್ತದೆ.

**ನ್ಯಾಯಾಂಗದ ರಚನೆ :** ಭಾರತವು ಒಕ್ಕೂಟ ರಾಜ್ಯವಾಗಿದೆ. ಕೇಂದ್ರ ಸರಕಾರ ಹಾಗೂ ಘಟಕ ರಾಜ್ಯಗಳಿಗೆ ಸ್ವತಂತ್ರ ಶಾಸಕಾಂಗ ಮತ್ತು ಕಾರ್ಯಾಂಗಗಳಿವೆ. ಆದರೆ ನ್ಯಾಯಾಂಗ ಮಾತ್ರ ಸಂಪೂರ್ಣ ದೇಶಕ್ಕಾಗಿ ಒಂದೇ ಇದೆ. ಅದರಲ್ಲಿ ಕೇಂದ್ರ ಮತ್ತು ಘಟಕರಾಜ್ಯಗಳೆಂಬ ಸ್ವತಂತ್ರ ವಿಂಗಡಣೆಯಿಲ್ಲ. ಇದರರ್ಥ ಭಾರತದಲ್ಲಿಯ ನ್ಯಾಯಾಂಗ ವ್ಯವಸ್ಥೆಯು ಏಕಾತ್ಮಕ ಸ್ವರೂಪದ್ದಾಗಿದೆ. ಈ ನ್ಯಾಯಾಂಗ ವ್ಯವಸ್ಥೆಯ ಶಿರೋಭಾಗದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವಿದ್ದು ಅದರ ಕೆಳಗೆ ಉಚ್ಚ ನ್ಯಾಯಾಲಯಗಳಿವೆ. ಉಚ್ಚ ನ್ಯಾಯಾಲಯಗಳ ನಿಯಂತ್ರಣದಲ್ಲಿ ಜಿಲ್ಲಾ ನ್ಯಾಯಾಲಯಗಳು ಹಾಗೂ ಅದರ ನಂತರ ಕನಿಷ್ಟ ನ್ಯಾಯಾಲಯ - ಈ ರೀತಿಯ ರಚನೆಯಿದೆ.

**ಸರ್ವೋಚ್ಚ ನ್ಯಾಯಾಲಯ :** ಭಾರತದ ಮುಖ್ಯ ನ್ಯಾಯಾಧೀಶರು ಸರ್ವೋಚ್ಚ ನ್ಯಾಯಾಲಯದ ಪ್ರಮುಖರಾಗಿರುತ್ತಾರೆ. ಭಾರತದ ಮುಖ್ಯ ನ್ಯಾಯಾಧೀಶರ ಹಾಗೂ ಅನ್ಯ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಗಳು ಮಾಡುತ್ತಾರೆ. ಸರ್ವೋಚ್ಚ ನ್ಯಾಯಾಲಯದಲ್ಲಿಯ ಅತ್ಯಂತ ಹಿರಿಯ ನ್ಯಾಯಾಧೀಶರನ್ನು 'ಮುಖ್ಯ ನ್ಯಾಯಾಧೀಶ'ರನ್ನಾಗಿ ನೇಮಕ ಮಾಡಬೇಕು ಎಂಬ ಸಂಕೇತವಿದೆ.

ನ್ಯಾಯದಾನದ ಕಾರ್ಯವು ಯಾರದೇ ಒತ್ತಡದ ಕೆಳಗೆ ಆಗಬಾರದು. ನ್ಯಾಯಾಧೀಶರಿಗೆ ನಿರ್ಭಯವಾಗಿ ನ್ಯಾಯದಾನ ಮಾಡಲು ಬರಬೇಕೆನ್ನುವ ಸಲುವಾಗಿ ನ್ಯಾಯಾಂಗವನ್ನು ಸ್ವತಂತ್ರವಾಗಿಡುವ ಪ್ರಯತ್ನ ಮಾಡಲಾಗುತ್ತದೆ. ಅದರ ಸಲುವಾಗಿ ನಮ್ಮ ಸಂವಿಧಾನವು ಕೆಳಗಿನ ಏರ್ಪಾಟುಗಳನ್ನು ಮಾಡಿದೆ.



ಭಾರತದ ಸರ್ವೋಚ್ಚ ನ್ಯಾಯಾಲಯ, ಹೊಸ ದಿಲ್ಲಿ

- ನ್ಯಾಯಾಧೀಶರ ಅರ್ಹತೆಗಳನ್ನು ಸಂವಿಧಾನವು ಸ್ಪಷ್ಟಪಡಿಸಿದೆ. ನಿಷ್ಣಾತ ಕಾನೂನು ತಜ್ಞರಾಗಿರುವ ಉಚ್ಚನ್ಯಾಯಾಲಯದಲ್ಲಿ ನ್ಯಾಯಾಧೀಶರೆಂದು ಕೆಲಸ ಮಾಡಿದ ಇಲ್ಲವೆ ವಕೀಲರೆಂದು ಕೆಲಸ ಮಾಡಿದ ಅನುಭವವಿರುವ ವ್ಯಕ್ತಿಯನ್ನು ಅರ್ಹರೆಂದು ತಿಳಿಯಲಾಗುತ್ತದೆ.
- ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಗಳು ಮಾಡುತ್ತಾರೆ. ಅದರಿಂದಾಗಿ ರಾಜಕೀಯ ಒತ್ತಡವನ್ನು ದೂರವಿಡಲು ಬರುತ್ತದೆ.
- ನ್ಯಾಯಾಧೀಶರಿಗೆ ಸೇವೆಯ ಭರವಸೆ ಇರುತ್ತದೆ. ಕ್ಷುಲ್ಲಕ ಕಾರಣಗಳಿಗಾಗಿ ಅಥವಾ ರಾಜಕೀಯ ಉದ್ದೇಶದಿಂದ ಅವರನ್ನು ಪದಚ್ಯುತಗೊಳಿಸಲು ಬರುವುದಿಲ್ಲ. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರು ವಯಸ್ಸಿನ 65 ವರ್ಷ ಪೂರ್ಣವಾದ ಮೇಲೆ ಹಾಗೂ ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ವಯಸ್ಸಿನ 62 ವರ್ಷ ಪೂರ್ಣವಾದ ಮೇಲೆ ನಿವೃತ್ತರಾಗುತ್ತಾರೆ.
- ನ್ಯಾಯಾಧೀಶರ ವೇತನವನ್ನು ಭಾರತದ ಸಂಚಿತ ನಿಧಿಯೊಳಗಿಂದ ನೀಡಲಾಗುತ್ತದೆ, ಅದರ ಬಗ್ಗೆ ಸಂಸತ್ತಿನಲ್ಲಿ ಚರ್ಚೆಯಾಗುವುದಿಲ್ಲ.
- ನ್ಯಾಯಾಧೀಶರ ಕೃತಿ ಮತ್ತು ತೀರ್ಪುಗಳ ಮೇಲೆ ವೈಯಕ್ತಿಕ ಟೀಕೆ ಮಾಡಲು ಬರುವುದಿಲ್ಲ. ನ್ಯಾಯಾಲಯದ ಅವಮಾನ ಮಾಡುವುದು ಕೂಡ ಅಪರಾಧವಾಗಿದ್ದು ಅದಕ್ಕಾಗಿ ಶಿಕ್ಷೆಯಾಗುತ್ತದೆ. ಈ ಏರ್ಪಾಟುಗಳಿಂದಾಗಿ ಅಯೋಗ್ಯ ಟೀಕೆಯಿಂದ ನ್ಯಾಯಾಧೀಶರಿಗೆ ಸಂರಕ್ಷಣೆ ದೊರೆಯುತ್ತದಲ್ಲದೆ ಅದರ ಜೊತೆಗೆ ನ್ಯಾಯಾಂಗದ ಸ್ವಾತಂತ್ರ್ಯವೂ ಅಬಾಧಿತವಾಗಿ ಉಳಿಯುತ್ತದೆ.
- ನ್ಯಾಯಾಧೀಶರ ವರ್ತನೆಯನ್ನು ಕುರಿತು ಸಂಸತ್ತಿನಲ್ಲಿ ಚರ್ಚೆ ಮಾಡಲು ಬರುವುದಿಲ್ಲ. ಆದರೆ ನ್ಯಾಯಾಧೀಶರನ್ನು ಪದಚ್ಯುತಗೊಳಿಸುವ ಹಾಗೂ ಅದಕ್ಕಾಗಿ ಮಹಾಭಿಯೋಗ ಪ್ರಕ್ರಿಯೆಯನ್ನು ನಡೆಸುವ ಅಧಿಕಾರ ಸಂಸತ್ತಿಗೆ ಇದೆ.

**ನ್ಯಾಯಾಲಯದ ಕ್ರಿಯಾಶೀಲತೆ :** ನ್ಯಾಯಾಲಯದ ಕಡೆಗೆ ತಂಟೆಗಳು ಹೋದರೆ ನ್ಯಾಯಾಲಯವು ಅವುಗಳನ್ನು ಬಗೆಹರಿಸುತ್ತದೆ. ಇದು ನ್ಯಾಯಾಲಯದ ಪರಂಪರಾಗತ ಪ್ರತಿಮೆಯಾಗಿದೆ. ಕಳೆದ ಕೆಲವು ದಶಕಗಳಿಂದ ನ್ಯಾಯಾಲಯದ ಈ ಪ್ರತಿಮೆಯಲ್ಲಿ ಬದಲಾವಣೆಯಾಗಿದ್ದು ನ್ಯಾಯಾಲಯವು ಕ್ರಿಯಾಶೀಲವಾಗಿದೆ. ಇದರರ್ಥ ನ್ಯಾಯಾಲಯವು ಈಗ ಸಂವಿಧಾನದಲ್ಲಿಯ ನ್ಯಾಯ ಮತ್ತು ಸಮತೆಯ ಉದ್ದೇಶಗಳನ್ನು ಪೂರ್ಣ ಮಾಡುವ ಸಲುವಾಗಿ ಮುಂದೆ ಬರುತ್ತಿದೆ. ಸಮಾಜದಲ್ಲಿಯ ದುರ್ಬಲ ಘಟಕಗಳು, ಮಹಿಳೆಯರು, ಆದಿವಾಸಿಗಳು, ಕಾರ್ಮಿಕರು, ರೈತರು, ಮಕ್ಕಳು ಮುಂತಾದವರಿಗೆ ಕಾಯ್ದೆಯ ಸಂರಕ್ಷಣೆ ನೀಡುವ ಪ್ರಯತ್ನವನ್ನು ನ್ಯಾಯಾಲಯವು ಮಾಡಿದೆ. ಅದರ ಸಲುವಾಗಿ ಜನಹಿತಾರ್ಥ ಮನವಿಗಳು ಮಹತ್ವದ್ದಾಗಿವೆ.

**ಸರ್ವೋಚ್ಚ ನ್ಯಾಯಾಲಯದ ಕಾರ್ಯಗಳು**

* ಒಕ್ಕೂಟ ರಾಜ್ಯದ ನ್ಯಾಯಾಲಯ ಎಂಬ ಹಿನ್ನೆಲೆಯಲ್ಲಿ ಕೇಂದ್ರ ಸರಕಾರ ಮತ್ತು ಘಟಕ ರಾಜ್ಯಗಳ ನಡುವಿನ, ಘಟಕ ರಾಜ್ಯ ಮತ್ತು ಘಟಕ ರಾಜ್ಯಗಳ ನಡುವಿನ, ಕೇಂದ್ರ ಸರಕಾರ ಮತ್ತು ಘಟಕರಾಜ್ಯಗಳ ವಿರುದ್ಧ ಬೇರೆ ಘಟಕ ರಾಜ್ಯಗಳ ನಡುವಿನ ತಂಟೆಗಳನ್ನು ಬಗೆಹರಿಸುವುದು.
* ನಾಗರಿಕರ ಮೂಲಭೂತ ಹಕ್ಕುಗಳ ರಕ್ಷಣೆ ಮಾಡುವುದು, ಅದರ ಸಲುವಾಗಿ ಆದೇಶ ನೀಡುವುದು.
* ಕನಿಷ್ಟ ನ್ಯಾಯಾಲಯಗಳು ನೀಡಿದ ತೀರ್ಪುಗಳ ಪುನರ್ವಿಚಾರ ಮಾಡುವುದು, ತನ್ನ ತೀರ್ಪುಗಳ ಪುನರ್ವಿಚಾರವನ್ನೂ ಮಾಡುವುದು.
* ಸಾರ್ವಜನಿಕ ದೃಷ್ಟಿಯಲ್ಲಿ ಮಹತ್ವದ ಪ್ರಶ್ನೆಗಳಲ್ಲಿಯ ಕಾನೂನಿನ ಅಂಗವನ್ನು ತಿಳಿದುಕೊಳ್ಳುವ ಸಲುವಾಗಿ ರಾಷ್ಟ್ರಪತಿಗಳು ಸಲಹೆಯನ್ನು ಕೇಳಿದರೆ ಅವರಿಗೆ ಸಲಹೆ ನೀಡುವುದು.



**ಹೇಳಿರಿ ನೋಡೋಣ.**

ರಾಷ್ಟ್ರಪತಿಗಳು ಕೆಲವೊಂದು ಮಹತ್ವದ ಸಾರ್ವಜನಿಕ ಪ್ರಶ್ನೆಗಳ ಮೇಲೆ ಸರ್ವೋಚ್ಚ ನ್ಯಾಯಾಲಯದ ಸಲಹೆಯನ್ನು ಏಕೆ ಬೇಡುತ್ತಾರೆ?

**ಪರಿಚ್ಛೇದವನ್ನು ಓದಿರಿ ಮತ್ತು ಬರೆಯಿರಿ.**

**ನ್ಯಾಯಾಂಗ ಮರುಪರಿಶೀಲನೆ :** ಸಂವಿಧಾನದ ಸಂರಕ್ಷಣೆ ಮಾಡುವುದು ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ಮಹತ್ವದ ಜವಾಬ್ದಾರಿಯಾಗಿದೆ. ಸಂವಿಧಾನವು ದೇಶದ ಮೂಲಭೂತ ಕಾನೂನಾಗಿರುತ್ತದೆ ಎಂಬುದು ನಿಮಗೆ ಗೊತ್ತಿದೆ. ಈ ಕಾನೂನಿನ ಭಂಗವಾಗುವಂತಹ ಅಥವಾ ಅದರ ವಿರೋಧಿ ಕಾನೂನನ್ನು (ಕಾಯ್ದೆಯನ್ನು) ಸಂಸತ್ತಿಗೆ ಮಾಡಲು ಬರುವುದಿಲ್ಲ. ಕಾರ್ಯಾಂಗದ ಪ್ರತಿಯೊಂದು ಧೋರಣೆ ಹಾಗೂ ಕೃತಿಯು ಕೂಡ ಸಂವಿಧಾನದ ಜೊತೆ ಸುಸಂಗತವಾಗಿರಬೇಕಾಗುತ್ತದೆ. ಸಂಸತ್ತಿನ ಯಾವುದೊಂದು ಕಾನೂನು ಅಥವಾ ಕಾರ್ಯಾಂಗದ ಯಾವುದೊಂದು ಕೃತಿಯು ಸಂವಿಧಾನದಲ್ಲಿಯ ನಿಯಮಗಳನ್ನು ಉಲ್ಲಂಘಿಸುತ್ತಿದ್ದರೆ ಆ ಕಾನೂನನ್ನು ಅಥವಾ ಕೃತಿಯನ್ನು ನ್ಯಾಯಾಲಯವು ಕಾನೂನುಬಾಹಿರವೆಂದು ನಿರ್ಧರಿಸುತ್ತದೆ ಹಾಗೂ ಅದನ್ನು ರದ್ದುಪಡಿಸುತ್ತದೆ. ನ್ಯಾಯಾಲಯದ ಈ ಅಧಿಕಾರಕ್ಕೆ ನ್ಯಾಯಾಂಗ ಮರುಪರಿಶೀಲನೆ ಅಧಿಕಾರ ಎನ್ನುತ್ತಾರೆ.

**ಈ ಉದಾಹರಣೆಯನ್ನು ನೋಡಿರಿ.**

ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ನ್ಯಾಯಾಲಯವು ಅವರ ಆಸ್ತಿ ಮತ್ತು ಉತ್ಪನ್ನ ಹಾಗೂ ಶೈಕ್ಷಣಿಕ ಅರ್ಹತೆ ಇವುಗಳನ್ನು ಕುರಿತು ಮಾಹಿತಿಯನ್ನು ಪ್ರತಿಜ್ಞಾಪತ್ರದ ಮೂಲಕ ನೀಡಲು ಹೇಳಿತ್ತು. ಅಭ್ಯರ್ಥಿಗಳ ಬಗೆಗಿನ ನಿಜವಾದ ಮಾಹಿತಿಯ ಆಧಾರದಿಂದ ಮತದಾರರಿಗೆ ಮತದಾನ ಮಾಡಲು ಬರಬೇಕು ಎಂಬುದು ಅದರ ಹಿಂದಿನ ಉದ್ದೇಶವಾಗಿತ್ತು. ನಮ್ಮ ಚುನಾವಣಾ ಪ್ರಕ್ರಿಯೆಯನ್ನು ಅಧಿಕ ಪಾರದರ್ಶಕವನ್ನಾಗಿ ಮಾಡುವ ಪ್ರಯತ್ನವಲ್ಲವೇ ಇದು?

ಈ ಸಂದರ್ಭದಲ್ಲಿ ನ್ಯಾಯಾಲಯದ ಇನ್ನೂ ಕೆಲವು ಆದೇಶಗಳಿವೆಯೇ? ಇದರ ಬಗ್ಗೆ ಮಾಹಿತಿಯನ್ನು ತಿಳಿದುಕೊಳ್ಳಿರಿ.

ಜನಹಿತಾರ್ಥ ಮನವಿ ಎಂದರೆ ಸಾರ್ವಜನಿಕ ಪ್ರಶ್ನೆಗಳನ್ನು ಬಿಡಿಸುವ ಸಲುವಾಗಿ ಪ್ರಯತ್ನಶೀಲವಿರುವ ನಾಗರಿಕರು, ಸಾಮಾಜಿಕ ಸಂಘಟನೆಗಳು ಇಲ್ಲವೆ ಸರಕಾರೇತರ ಸಂಘಟನೆಗಳು ಸಂಪೂರ್ಣ ಜನತೆಯ ವತಿಯಿಂದ ನ್ಯಾಯಾಲಯದಲ್ಲಿ ದಾಖಲು ಮಾಡಿದ ಮನವಿಗಳ ಮೇಲೆ ನ್ಯಾಯಾಲಯವು ಅದರ ಮೇಲೆ ವಿಚಾರ ಮಾಡಿ ತೀರ್ಪು ನೀಡುತ್ತದೆ.

**ಉಚ್ಚ ನ್ಯಾಯಾಲಯ :** ಭಾರತದ ಕೇಂದ್ರಾಡಳಿತದಲ್ಲಿಯ ಪ್ರತಿಯೊಂದು ಘಟಕ ರಾಜ್ಯಕ್ಕೆ ಒಂದು ಉಚ್ಚ ನ್ಯಾಯಾಲಯವನ್ನು ಸ್ಥಾಪಿಸುವ ಅಧಿಕಾರವನ್ನು ಸಂಸತ್ತಿಗೆ ನೀಡಲಾಗಿದೆ. ಈಗ ನಮ್ಮ ದೇಶದಲ್ಲಿ 24 ಉಚ್ಚ ನ್ಯಾಯಾಲಯಗಳಿವೆ.

ಉಚ್ಚ ನ್ಯಾಯಾಲಯದಲ್ಲಿ ಒಬ್ಬ ಮುಖ್ಯ ನ್ಯಾಯಾಧೀಶರು ಹಾಗೂ ಇತರ ಕೆಲವು ನ್ಯಾಯಾಧೀಶರು ಇರುತ್ತಾರೆ.

ಉಚ್ಚ ನ್ಯಾಯಾಲಯದಲ್ಲಿಯ ಎಲ್ಲ ನ್ಯಾಯಾಧೀಶರ ನೇಮಕಾತಿಯನ್ನು ರಾಷ್ಟ್ರಪತಿಗಳು ಮಾಡುತ್ತಾರೆ.



**ಮಾಡಿ ನೋಡಿರಿ.**

ಮುಂಬಯಿ ಉಚ್ಚ ನ್ಯಾಯಾಲಯವು ಮಹಾರಾಷ್ಟ್ರ ಮತ್ತು ಗೋವಾ ಈ ಎರಡು ರಾಜ್ಯಗಳಿಗಾಗಿ ಹಾಗೂ ದಾದರಾ ನಗರ ಹವೇಲಿ ಮತ್ತು ದೀವ-ದಮಣ ಈ ಕೇಂದ್ರಾಡಳಿತ ಪ್ರದೇಶಗಳಿಗಾಗಿ ಇದೆ. ಒಂದಕ್ಕಿಂತ ಹೆಚ್ಚು ರಾಜ್ಯಗಳ ಸಲುವಾಗಿ ಇರುವ ಉಚ್ಚ ನ್ಯಾಯಾಲಯಗಳ ಇನ್ನೂ ಎರಡು ಉದಾಹರಣೆಗಳನ್ನು ಹುಡುಕಿರಿ.

**ಉಚ್ಚ ನ್ಯಾಯಾಲಯದ ಕಾರ್ಯಗಳು**

* ತನ್ನ ಅಧಿಕಾರ ಕ್ಷೇತ್ರದಲ್ಲಿಯ ಕನಿಷ್ಟ ನ್ಯಾಯಾಲಯಗಳ ಮೇಲೆ ನಿಯಂತ್ರಣವನ್ನಿಡುವ ಮತ್ತು ಮೇಲ್ವಿಚಾರಣೆ ಮಾಡುವ ಅಧಿಕಾರ.
* ಮೂಲಭೂತ ಹಕ್ಕುಗಳ ಸಂರಕ್ಷಣೆಗಾಗಿ ಆದೇಶ ನೀಡುವ ಅಧಿಕಾರ.
* ಜಿಲ್ಲಾ ನ್ಯಾಯಾಲಯಗಳಲ್ಲಿಯ ನ್ಯಾಯಾಧೀಶರ ನೇಮಕಾತಿ ಮಾಡುವಾಗ ರಾಜ್ಯಪಾಲರು ಉಚ್ಚ ನ್ಯಾಯಾಲಯದ ಸಲಹೆಯನ್ನು ಪಡೆಯುತ್ತಾರೆ.

**ಜಿಲ್ಲಾ ಮತ್ತು ಕನಿಷ್ಟ ನ್ಯಾಯಾಲಯಗಳು :** ಯಾವ ನ್ಯಾಯ ಸಂಸ್ಥೆಗಳ ಜೊತೆ ಯಾವಾಗಲೂ ಜನರ ಸಂಬಂಧ ಬರುತ್ತದೆಯೋ ಅವು ಜಿಲ್ಲಾ ಮತ್ತು ತಾಲೂಕಾ ಮಟ್ಟದಲ್ಲಿಯ ನ್ಯಾಯಾಲಯಗಳಾಗಿವೆ. ಪ್ರತಿಯೊಂದು ಜಿಲ್ಲಾ ನ್ಯಾಯಾಲಯದಲ್ಲಿ ಒಬ್ಬ ಜಿಲ್ಲಾ ನ್ಯಾಯಾಧೀಶನಿರುತ್ತಾನೆ.

**ಭಾರತದಲ್ಲಿಯ ಕಾಯ್ದೆ ಪದ್ಧತಿಯ ಶಾಖೆಗಳು :** ಕಾಯ್ದೆ ಪದ್ಧತಿಯಲ್ಲಿ ಎರಡು ಪ್ರಮುಖ ಶಾಖೆಗಳಿವೆ.

(1) ದಿವಾಣಿ ಕಾಯ್ದೆ (2) ಫೌಜದಾರಿ ಕಾಯ್ದೆ

**ದಿವಾಣಿ ಕಾಯ್ದೆ :** ವ್ಯಕ್ತಿಯ ಹಕ್ಕುಗಳ ಮೇಲೆ ಗಂಡಾಂತರವನ್ನು ತರುವ ತಂಟೆಗಳು ಈ ಕಾಯ್ದೆಯ ಕಕ್ಷೆಯಲ್ಲಿ ಬರುತ್ತವೆ. ಉದಾ., ಭೂಮಿಗೆ ಸಂಬಂಧಿಸಿದ

ತಂಟೆಗಳು, ಬಾಡಿಗೆಕರಾರು, ವಿವಾಹ ವಿಚ್ಛೇದನ, ಇತ್ಯಾದಿ. ಸಂಬಂಧಿತ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದ ನಂತರ ನ್ಯಾಯಾಲಯವು ಅದರ ಮೇಲೆ ತೀರ್ಪು ನೀಡುತ್ತದೆ.

**ಫೌಜದಾರಿ ಕಾಯ್ದೆ :** ಗಂಭೀರ ಸ್ವರೂಪದ ಅಪರಾಧಗಳನ್ನು ಫೌಜದಾರಿ ಕಾಯ್ದೆಯ ಆಧಾರದಿಂದ ಬಗೆಹರಿಸಲಾಗುತ್ತದೆ. ಉದಾ., ಕಳವು, ಮನೆಗೆ ಕನ್ನ ಹಾಕುವುದು, ವರದಕ್ಷಿಣೆಗಾಗಿ ಕಾಡುವುದು, ಕೊಲೆ, ಇತ್ಯಾದಿ. ಈ ಅಪರಾಧಗಳ ವಿಷಯದಲ್ಲಿ ಮೊದಲು ಪೋಲಿಸರ ಕಡೆಗೆ ಪ್ರಥಮ ಮಾಹಿತಿಯ ವರದಿಯನ್ನು (ಎಫ್‌ಐಆರ್) ದಾಖಲು ಮಾಡಲಾಗುತ್ತದೆ. ಪೋಲೀಸರು ಅದರ ತನಿಖೆ ಮಾಡುತ್ತಾರೆ ಹಾಗೂ ನಂತರ ಕೋರ್ಟಿನಲ್ಲಿ ಖಟ್ಲೆ ದಾಖಲಾಗುತ್ತದೆ. ಅಪರಾಧವು ಸಿದ್ಧವಾದರೆ ಶಿಕ್ಷೆಯ ಸ್ವರೂಪ ಕೂಡ ಗಂಭೀರವಾಗಿರುತ್ತದೆ.

ದೇಶದ ಪ್ರಗತಿಗೆ ಭಾರತದಲ್ಲಿಯ ನ್ಯಾಯಾಂಗ ವ್ಯವಸ್ಥೆಯು ಮಹಾನ್ ಕೊಡುಗೆಯನ್ನು ನೀಡಿದೆ. ಜನಸಾಮಾನ್ಯರ ಮನದಲ್ಲಿಯೂ ನ್ಯಾಯಾಂಗ ವ್ಯವಸ್ಥೆಯ ಬಗ್ಗೆ ಗೌರವವಿದ್ದು ಅದರ ಮೇಲೆ ವಿಶ್ವಾಸವಿದೆ. ಭಾರತದಲ್ಲಿಯ ನ್ಯಾಯಾಂಗ ವ್ಯವಸ್ಥೆಯು ವ್ಯಕ್ತಿ ಸ್ವಾತಂತ್ರ್ಯದ, ಒಕ್ಕೂಟ ರಾಜ್ಯದ ಹಾಗೂ ಸಂವಿಧಾನದ ಸಂರಕ್ಷಣೆಯನ್ನು ಮಾಡಿದೆ. ಭಾರತದಲ್ಲಿಯ ಪ್ರಜಾಪ್ರಭುತ್ವವನ್ನು ಬಲಾಢ್ಯವನ್ನಾಗಿ ಮಾಡುವುದರಲ್ಲಿ ನ್ಯಾಯಾಲಯದ ಸಿಂಹಪಾಲು ಇದೆ.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ......... ಕಾಯ್ದೆಗಳನ್ನು ನಿರ್ಮಿಸುತ್ತದೆ.
(ಅ) ಶಾಸಕಾಂಗವು (ಬ) ಮಂತ್ರಿಮಂಡಳವು
(ಕ) ನ್ಯಾಯಾಂಗವು (ಡ) ಕಾರ್ಯಾಂಗವು

(2) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನೇಮಕಾತಿಯನ್ನು ......... ಮಾಡುತ್ತಾರೆ.
(ಅ) ಪ್ರಧಾನ ಮಂತ್ರಿಗಳು (ಬ) ರಾಷ್ಟ್ರಪತಿಗಳು
(ಕ) ಗೃಹಮಂತ್ರಿಗಳು (ಡ) ಮುಖ್ಯ ನ್ಯಾಯಾಧೀಶರು

**2. ಕಲ್ಪನೆಗಳನ್ನು ಸ್ಪಷ್ಟಪಡಿಸಿರಿ.**

(1) ನ್ಯಾಯಾಂಗ ಮರುಪರಿಶೀಲನೆ
(2) ಜನಹಿತಾರ್ಥ ಮನವಿ


**3. ಟಿಪ್ಪಣಿ ಬರೆಯಿರಿ.**

(1) ದಿವಾಣಿ ಮತ್ತು ಫೌಜದಾರಿ ಕಾಯ್ದೆ
(2) ನ್ಯಾಯಾಲಯದ ಕ್ರಿಯಾಶೀಲತೆ

**4. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ಸಮಾಜದಲ್ಲಿ ಕಾಯ್ದೆಯ ಅವಶ್ಯಕತೆ ಏಕೆ ಇರುತ್ತದೆ?
(2) ಸರ್ವೋಚ್ಚ ನ್ಯಾಯಾಲಯದ ಕಾರ್ಯಗಳನ್ನು ಸ್ಪಷ್ಟಪಡಿಸಿರಿ.
(3) ಭಾರತದಲ್ಲಿ ನ್ಯಾಯಾಂಗವನ್ನು ಸ್ವತಂತ್ರವಾಗಿಡುವ ಸಲುವಾಗಿ ಯಾವ ಏರ್ಪಾಟುಗಳನ್ನು ಮಾಡಲಾಗಿದೆ?

**5. ಕೆಳಗಿನ ಕೋಷ್ಟಕವನ್ನು ಪೂರ್ಣಮಾಡಿರಿ.**




**ಉಪಕ್ರಮ**

(1) ನಿಮ್ಮ ಶಾಲೆಯಲ್ಲಿ 'ಅಣಕು ನ್ಯಾಯಾಲಯ'ವನ್ನು ಆಯೋಜಿಸಿ ವಿವಿಧ ಜನಹಿತಾರ್ಥ ಮನವಿಗಳ ಪ್ರಶ್ನೆಗಳನ್ನು ತಯಾರಿಸಿರಿ ಹಾಗೂ ಅವುಗಳನ್ನು ಅಣಕು ನ್ಯಾಯಾಲಯದಲ್ಲಿ ಕೇಳಿರಿ.

(2) ಶಿಕ್ಷಕರ ಸಹಾಯದಿಂದ ಪ್ರಥಮ ಮಾಹಿತಿ ವರದಿಯನ್ನು (FIR) ಹೇಗೆ ದಾಖಲು ಮಾಡಬೇಕೆಂಬುದರ ಪ್ರಕ್ರಿಯೆಯನ್ನು ಹತ್ತಿರದ ಪೋಲೀಸ ಚೌಕಿಗೆ ಭೇಟಿ ನೀಡಿ ತಿಳಿದುಕೊಳ್ಳಿರಿ.

# 5. ರಾಜ್ಯ ಸರಕಾರ

ಹಿಂದಿನ ಪಾಠದ ವರೆಗೆ ನಾವು ಒಕ್ಕೂಟ ಸರಕಾರದ ಸಂಸತ್ತಿನ ಮತ್ತು ಕಾರ್ಯಾಂಗದ ಸ್ವರೂಪವನ್ನು ತಿಳಿದುಕೊಂಡೆವು. ಭಾರತದಲ್ಲಿಯ ಏಕಾತ್ಮಕ ನ್ಯಾಯಾಂಗ ವ್ಯವಸ್ಥೆಯ ಪರಿಚಯವನ್ನೂ ಮಾಡಿಕೊಂಡೆವು. ಈ ಪಾಠದಲ್ಲಿ ನಾವು ಘಟಕ ರಾಜ್ಯಗಳ ಅಥವಾ ರಾಜ್ಯ ಸರಕಾರಗಳ ಮಾಹಿತಿಯನ್ನು ಪಡೆಯುವವರಿದ್ದೇವೆ.

ಒಕ್ಕೂಟ ರಾಜ್ಯ ವ್ಯವಸ್ಥೆಯಲ್ಲಿ ಎರಡು ಮಟ್ಟಗಳಲ್ಲಿ ಸರಕಾರಗಳು ಕಾರ್ಯನಿರತವಾಗಿರುತ್ತವೆ. ರಾಷ್ಟ್ರೀಯ ಮಟ್ಟದಲ್ಲಿ ಕೇಂದ್ರ ಸರಕಾರ ಹಾಗೂ ಪ್ರಾದೇಶಿಕ ಮಟ್ಟದಲ್ಲಿ ರಾಜ್ಯ ಸರಕಾರವು ಕಾರ್ಯ ಮಾಡುತ್ತದೆ. ಭಾರತದಲ್ಲಿ 28 ಘಟಕ ರಾಜ್ಯಗಳಿದ್ದು ಅವುಗಳ ಆಡಳಿತವನ್ನು ಅಲ್ಲಿಯ ರಾಜ್ಯ ಸರಕಾರವು ಮಾಡುತ್ತದೆ.

ಹಿನ್ನೆಲೆ : ಭಾರತದ ಭೌಗೋಲಿಕ ವಿಸ್ತಾರವು ವಿಶಾಲವಾಗಿದೆ. ಹಾಗೂ ಜನಸಂಖ್ಯೆಯ ಸ್ವರೂಪವು ಕೂಡ ವೈವಿಧ್ಯಮಯವಾಗಿದೆ. ಭಾಷೆ, ಧರ್ಮ, ರೂಢಿ ಪರಂಪರೆಗಳು ಮತ್ತು ಪ್ರಾದೇಶಿಕ ಸ್ವರೂಪ ಇವುಗಳಲ್ಲಿ ವಿವಿಧತೆಯಿದೆ. ಇಂಥ ಸಮಯದಲ್ಲಿ ಒಂದೇ ಕೇಂದ್ರಿಯ ಸ್ಥಾನದಿಂದ ಆಡಳಿತವನ್ನು ನಡೆಸುವುದು ಅನುಕೂಲಕರವಾಗುವುದಿಲ್ಲವೆಂಬುದನ್ನು ಯೋಚಿಸಿ ಸಂವಿಧಾನವು ಭಾರತಕ್ಕಾಗಿ ಒಕ್ಕೂಟ ರಾಜ್ಯ ವ್ಯವಸ್ಥೆಯನ್ನು ಸ್ವೀಕರಿಸಿತು. ಭಾಷೆಯ ಆಧಾರದ ಮೇಲೆ ಘಟಕ ರಾಜ್ಯಗಳ ನಿರ್ಮಿತಿ ಮಾಡುವುದನ್ನು ನಿರ್ಧರಿಸಲಾಯಿತು. ಅದಕ್ಕನುಸಾರವಾಗಿ ಭಾಷಾವಾರು ಪ್ರಾಂತರಚನೆಯಾಯಿತು.

ಭಾರತದಲ್ಲಿಯ ಎಲ್ಲ ಘಟಕರಾಜ್ಯಗಳ ಸರಕಾರದ ವ್ಯವಸ್ಥೆಯ ರಾಜಕೀಯ ಸ್ವರೂಪವು ಸಮಾನವಾಗಿದೆ. ಜಮ್ಮು ಮತ್ತು ಕಾಶ್ಮೀರ ಮಾತ್ರ ಅದಕ್ಕೆ ಅಪವಾದವಾಗಿದೆ. ಮಹಾರಾಷ್ಟ್ರದ ಸಂದರ್ಭದಲ್ಲಿ ನಾವು ಘಟಕರಾಜ್ಯದಲ್ಲಿಯ ಸರಕಾರದ ಸ್ವರೂಪವನ್ನು ತಿಳಿದುಕೊಳ್ಳೋಣ.



**ಗೊತ್ತಿದೆಯೇ ನಿಮಗೆ?**

ಭಾರತದಲ್ಲಿ 28 ಘಟಕ ರಾಜ್ಯಗಳಿದ್ದರೂ ವಿಧಾನ ಸಭೆಗಳ ಸಂಖ್ಯೆ 31 ಇದೆ. ಏಕೆಂದರೆ ದಿಲ್ಲಿ, ಪುದುಚ್ಚೇರಿ ಹಾಗೂ ಜಮ್ಮು ಮತ್ತು ಕಾಶ್ಮೀರ ಈ ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಧಾನ ಸಭೆಗಳು ಅಸ್ತಿತ್ವದಲ್ಲಿವೆ

**ರಾಜ್ಯಸರಕಾರದ ಶಾಸಕಾಂಗ :** ಕೇಂದ್ರಮಟ್ಟದಲ್ಲಿಯ ಸಂಸತ್ತಿನ ಹಾಗೆ ರಾಜ್ಯ ಸರಕಾರದ ಮಟ್ಟದಲ್ಲಿ ಪ್ರತಿಯೊಂದು ರಾಜ್ಯಕ್ಕೆ ಶಾಸಕಾಂಗವಿರುತ್ತದೆ. ಕೇವಲ ಏಳು ರಾಜ್ಯಗಳಲ್ಲಿ ದ್ವಿಸದನ ಶಾಸಕಾಂಗಗಳಿವೆ, ಅವುಗಳಲ್ಲಿ ಮಹಾರಾಷ್ಟ್ರದ ಸಮಾವೇಶವಿದೆ. ರಾಜ್ಯ ಶಾಸಕಾಂಗದ ಸದಸ್ಯರಿಗೆ ಶಾಸಕರು (ಆಮದಾರ) ಎನ್ನುತ್ತಾರೆ.

**ಮಹಾರಾಷ್ಟ್ರದ ಶಾಸಕಾಂಗ :** ಮಹಾರಾಷ್ಟ್ರದಲ್ಲಿ ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಎಂಬ ಎರಡು ಸದನಗಳಿವೆ.



ವಿಧಾನ ಭವನ ಮುಂಬಯಿ

**ವಿಧಾನಸಭೆ :** ಇದು ಮಹಾರಾಷ್ಟ್ರ ಶಾಸಕಾಂಗದ ಪ್ರಥಮ ಸದನವಾಗಿದ್ದು ಇದರ ಸದಸ್ಯರ ಸಂಖ್ಯೆ 288 ಇದೆ. ಅಂಗ್ಲೋ ಇಂಡಿಯನ್ ಸಮಾಜಕ್ಕೆ ಸಾಕಷ್ಟು ಪ್ರತಿನಿಧಿತ್ವ ದೊರೆತಿರದಿದ್ದರೆ ರಾಜ್ಯಪಾಲರು ಆ ಸಮಾಜದಲ್ಲಿಯ ಒಬ್ಬ ಪ್ರತಿನಿಧಿಯನ್ನು ವಿಧಾನಸಭೆಗೆ ನೇಮಕ ಮಾಡುತ್ತಾರೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗಾಗಿ ಕೆಲವು ಸ್ಥಳಗಳು ಮೀಸಲಾಗಿರುತ್ತವೆ. ಚುನಾವಣೆಯ ಸಲುವಾಗಿ ಸಂಪೂರ್ಣ ಮಹಾರಾಷ್ಟ್ರವನ್ನು ಮತಕ್ಷೇತ್ರಗಳಲ್ಲಿ ವಿಭಜಿಸಲಾಗುತ್ತದೆ. ಪ್ರತಿಯೊಂದು ಮತಕ್ಷೇತ್ರದಿಂದ ಒಬ್ಬ ಪ್ರತಿನಿಧಿಯು ಆಯ್ಕೆಯಾಗುತ್ತಾನೆ.

ವಿಧಾನಸಭೆಯ ಕಾಲಾವಧಿಯು ಐದು ವರ್ಷ ಇರುತ್ತದೆ. ಅಪವಾದಾತ್ಮಕ ಪರಿಸ್ಥಿತಿಯಲ್ಲಿ ವಿಧಾನಸಭೆಯ ಕಾಲಾವಧಿಯ ಮೊದಲೇ ಚುನಾವಣೆಗಳು ಆಗಬಹುದು.

ವಯಸ್ಸಿನ 25 ವರ್ಷ ಪೂರ್ಣವಾದ ಹಾಗೂ ಮಹಾರಾಷ್ಟ್ರದಲ್ಲಿ ವಾಸ್ತವ್ಯವಿದ್ದ ಯಾವುದೇ ಭಾರತೀಯ ನಾಗರಿಕನು ವಿಧಾನಸಭೆಯ ಚುನಾವಣೆಯಲ್ಲಿ ಸ್ಪರ್ಧಿಸಬಹುದು.

**ವಿಧಾನಸಭೆಯ ಅಧ್ಯಕ್ಷರು :** ವಿಧಾನಸಭೆಯ ಕಾರ್ಯಕಲಾಪಗಳು ಅಧ್ಯಕ್ಷರ ನಿಯಂತ್ರಣ ಮತ್ತು ಮಾರ್ಗದರ್ಶನದಲ್ಲಿ ನಡೆಯುತ್ತವೆ. ಚುನಾವಣೆಯ ನಂತರ ಹೊಸದಾಗಿ ಅಸ್ತಿತ್ವದಲ್ಲಿ ಬಂದ ವಿಧಾನಸಭೆಯ ಸದಸ್ಯರು ತಮ್ಮಲ್ಲಿಯ ಒಬ್ಬನನ್ನು ಅಧ್ಯಕ್ಷನೆಂದು ಹಾಗೂ ಇನ್ನೊಬ್ಬನನ್ನು ಉಪಾಧ್ಯಕ್ಷನೆಂದು ಆಯ್ಕೆ ಮಾಡುತ್ತಾರೆ. ಸದನದ

ಕಾರ್ಯಕಲಾಪಗಳು ಶಿಸ್ತುಬದ್ಧ ರೀತಿಯಿಂದ ಜರುಗಬೇಕೆಂದು ಕಾರ್ಯಕ್ರಮ ಪತ್ರಿಕೆಯನ್ನು ತಯಾರಿಸುವುದನ್ನು ಹಿಡಿದು ಅಸಂಸದೀಯ ವರ್ತನೆ ಮಾಡುವ ಸದಸ್ಯರನ್ನು ಅಮಾನತ್ತುಗೊಳಿಸುವ ವರೆಗಿನ ಅನೇಕ ಕಾರ್ಯಗಳನ್ನು ಅಧ್ಯಕ್ಷರು ಮಾಡಬೇಕಾಗುತ್ತದೆ. ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಉಪಾಧ್ಯಕ್ಷರು ಈ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ.

ಒಂದು ವರ್ಷದಲ್ಲಿ ಮಹಾರಾಷ್ಟ್ರ ಶಾಸಕಾಂಗದ ಕನಿಷ್ಟ ಮೂರು ಅಧಿವೇಶನಗಳು ನಡೆಯುತ್ತವೆ. ಮುಂಗಡಪತ್ರದ ಮತ್ತು ಮಳೆಗಾಲದ ಅಧಿವೇಶನಗಳು ಮುಂಬಯಿಯಲ್ಲಿ ನಡೆಯುತ್ತವೆ. ಹಾಗೂ ಚಳಿಗಾಲದ ಅಧಿವೇಶನವು ನಾಗಪೂರದಲ್ಲಿ ನಡೆಯುತ್ತದೆ.

**ವಿಧಾನ ಪರಿಷತ್ತು :** ಇದು ಮಹಾರಾಷ್ಟ್ರ ಶಾಸಕಾಂಗದ ದ್ವಿತೀಯ ಸದನವಾಗಿದ್ದು ಇದು ಸಮಾಜದಲ್ಲಿಯ ವಿವಿಧ ಘಟಕಗಳಿಂದ ಅಪ್ರತ್ಯಕ್ಷವಾಗಿ ಆಯ್ಕೆಯಾಗುತ್ತದೆ. ಮಹಾರಾಷ್ಟ್ರ ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆಯು 78 ಇದೆ. ಇದರಲ್ಲಿ ಕಲೆ, ಸಾಹಿತ್ಯ, ವಿಜ್ಞಾನ, ಸಮಾಜ ಸೇವೆ ಮುಂತಾದ ಕ್ಷೇತ್ರಗಳಲ್ಲಿ ಪಾರಂಗತರಾದ ವ್ಯಕ್ತಿಗಳನ್ನು ರಾಜ್ಯಪಾಲರು ನೇಮಕಾತಿ ಮಾಡುತ್ತಾರೆ. ಉಳಿದ ಸದಸ್ಯರು ವಿಧಾನ ಸಭೆ, ಸ್ಥಾನಿಕ ಸ್ವರಾಜ್ಯ ಸಂಸ್ಥೆ, ಶಿಕ್ಷಕ ಮತಕ್ಷೇತ್ರ ಮತ್ತು ಪದವೀಧರ ಮತಕ್ಷೇತ್ರಗಳಿಂದ ಆಯ್ಕೆಯಾಗುತ್ತಾರೆ.

ವಿಧಾನ ಪರಿಷತ್ತು ಸಂಪೂರ್ಣವಾಗಿ ವಿಸರ್ಜಿತವಾಗುವುದಿಲ್ಲ. ಇದರಲ್ಲಿಯ ನಿರ್ದಿಷ್ಟ ಸದಸ್ಯರು ಪ್ರತಿ ಎರಡು ವರ್ಷಕ್ಕೊಮ್ಮೆ ನಿವೃತ್ತರಾಗುತ್ತಾರೆ ಹಾಗೂ ಅಷ್ಟೇ ಸ್ಥಳಗಳಿಗಾಗಿ ಚುನಾವಣೆಗಳು ನಡೆದು ಆ ಸ್ಥಾನಗಳನ್ನು ತುಂಬಲಾಗುತ್ತದೆ. ವಿಧಾನ ಪರಿಷತ್ತಿನ ಕಾರ್ಯಕಲಾಪಗಳು ವಿಧಾನ ಪರಿಷತ್ತಿನ ಸಭಾಪತಿಯ ನಿಯಂತ್ರಣ ಮತ್ತು ಮಾರ್ಗದರ್ಶನದಲ್ಲಿ ನಡೆಯುತ್ತವೆ. ಸಭಾಪತಿಗಳ ಅನುಪಸ್ಥಿತಿಯಲ್ಲಿ ಉಪಸಭಾಪತಿಗಳು ಈ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ.

**ಮಹಾರಾಷ್ಟ್ರದ ಕಾರ್ಯಾಂಗ :** ಮಹಾರಾಷ್ಟ್ರದ ಕಾರ್ಯಾಂಗದಲ್ಲಿ ರಾಜ್ಯಪಾಲರು, ಮುಖ್ಯಮಂತ್ರಿಗಳು ಮತ್ತು ಮಂತ್ರಿಮಂಡಳದ ಸಮಾವೇಶವಾಗುತ್ತದೆ.

**ರಾಜ್ಯಪಾಲರು :** ಕೇಂದ್ರ ಮಟ್ಟದಲ್ಲಿ ಯಾವ ರೀತಿ ರಾಷ್ಟ್ರಪತಿಗಳು ನಾಮಮಾತ್ರ ಪ್ರಮುಖರಾಗಿರುತ್ತಾರೆಯೋ ಅದೇ ರೀತಿ ಘಟಕ ರಾಜ್ಯ ಮಟ್ಟದಲ್ಲಿ ರಾಜ್ಯಪಾಲರು ನಾಮಮಾತ್ರ ಪ್ರಮುಖರಾಗಿರುತ್ತಾರೆ.

ರಾಜ್ಯಪಾಲರ ನೇಮಕಾತಿಯನ್ನು ರಾಷ್ಟ್ರಪತಿಗಳು ಮಾಡುತ್ತಾರೆ. ಹಾಗೂ ರಾಷ್ಟ್ರಪತಿಗಳ ಇಚ್ಛೆ ಇರುವವರೆಗೆ ಅವರು ಅಧಿಕಾರದಲ್ಲಿ ಇರಬಲ್ಲರು. ರಾಜ್ಯಪಾಲರಿಗೂ ಕಾನೂನು ವಿಷಯದ ಕೆಲವು ಮಹತ್ವದ ಅಧಿಕಾರಗಳಿವೆ. ಉದಾ., ವಿಧಾನ ಸಭೆ ಮತ್ತು ವಿಧಾನ ಪರಿಷತ್ತು ಪಾಸು ಮಾಡಿದ ಮಸೂದೆಯು ರಾಜ್ಯಪಾಲರ ಸಹಿಯಾದ ನಂತರವೇ ಕಾನೂನಿನಲ್ಲಿ ರೂಪಾಂತರವಾಗುತ್ತದೆ. ರಾಜ್ಯ ಶಾಸಕಾಂಗದ ಅಧಿವೇಶನಗಳನ್ನು ಕರೆಯುವ ಅಧಿಕಾರವು ರಾಜ್ಯಪಾಲರಿಗಿದೆ. ರಾಜ್ಯ ಶಾಸಕಾಂಗದ ಅಧಿವೇಶನವಿಲ್ಲದಿದ್ದಾಗ ತ್ವರಿತವಾಗಿ ಕಾನೂನು ರಚಿಸುವ ಅವಶ್ಯಕತೆ ನಿರ್ಮಾಣವಾದರೆ ರಾಜ್ಯಪಾಲರು ಸುಗ್ರೀವಾಜ್ಞೆಗಳನ್ನು ಹೊರಡಿಸಬಹುದು..

**ಮುಖ್ಯಮಂತ್ರಿ ಮತ್ತು ಮಂತ್ರಿ ಮಂಡಳ :** ವಿಧಾನಸಭೆಯಲ್ಲಿ ಯಾವ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯುತ್ತದೆಯೋ ಆ ಪಕ್ಷದ ಮುಖಂಡನು ಮುಖ್ಯ ಮಂತ್ರಿಯೆಂದು ಆಯ್ಕೆಯಾಗುತ್ತಾನೆ. ಮುಖ್ಯಮಂತ್ರಿಗಳು ತಮ್ಮ ವಿಶ್ವಾಸಿ ಸಹಕಾರಿಗಳನ್ನು ಮಂತ್ರಿಮಂಡಳದಲ್ಲಿ ಸೇರ್ಪಡೆ ಮಾಡಿಕೊಳ್ಳುತ್ತಾರೆ. ಮುಖ್ಯಮಂತ್ರಿಗಳು ಪ್ರಧಾನ ಮಂತ್ರಿಗಳಂತೆ ಕಾರ್ಯಾಂಗ ಪ್ರಮುಖರಾಗಿರುತ್ತಾರೆ. ರಾಜ್ಯದ ಸಂಪೂರ್ಣ ಆಡಳಿತವು ರಾಜ್ಯಪಾಲರ ಹೆಸರಿನಲ್ಲಿ ನಡೆಯುತ್ತದೆ. ಆದರೆ ಪ್ರತ್ಯಕ್ಷದಲ್ಲಿ ಮಾತ್ರ ರಾಜ್ಯದ ಸಂಪೂರ್ಣ ಆಡಳಿತವನ್ನು ಮುಖ್ಯಮಂತ್ರಿಗಳು ಮಾಡುತ್ತಾರೆ.

### ಮುಖ್ಯಮಂತ್ರಿಗಳ ಕಾರ್ಯಗಳು

**ಮಂತ್ರಿ ಮಂಡಳದ ನಿರ್ಮಿತಿ :** ಬಹುಮತ ಸಿದ್ಧವಾದ ನಂತರ ಮುಖ್ಯಮಂತ್ರಿಗಳು ಪ್ರಥಮವಾಗಿ ತಮ್ಮ ಮಂತ್ರಿಮಂಡಳವನ್ನು ತಯಾರಿಸಬೇಕಾಗುತ್ತದೆ. ಈ ಕೆಲಸವು ಆಹ್ವಾನಾತ್ಮಕವಾಗಿರುತ್ತದೆ. ಏಕೆಂದರೆ ಮಂತ್ರಿಮಂಡಳವು ಹೆಚ್ಚಿಗೆ ಹೆಚ್ಚು ಪ್ರಾತಿನಿಧಿಕವಾಗುವ ಸಲುವಾಗಿ ಎಲ್ಲ ಪ್ರದೇಶಗಳನ್ನು, ವಿವಿಧ ಸಾಮಾಜಿಕ ಘಟಕಗಳನ್ನು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟಪಂಗಡ, ಇತರ ಹಿಂದುಳಿದ ವರ್ಗ, ಮಹಿಳೆಯರು, ಅಲ್ಪಸಂಖ್ಯಾತರು ಇತ್ಯಾದಿ) ಸಮಾವೇಶ ಗೊಳಿಸಬೇಕಾಗುತ್ತದೆ. ಸ್ಪಷ್ಟ ಬಹುಮತವಿರದಿದ್ದರೆ ಕೆಲವು ಪಕ್ಷಗಳು ಒಂದೆಡೆ ಬಂದು ಸರಕಾರವನ್ನು ಸ್ಥಾಪಿಸುತ್ತವೆ. ಇಂಥ ಸಮಯದಲ್ಲಿ ಸರ್ವ ಘಟಕ ಪಕ್ಷಗಳಿಗೆ ಮಂತ್ರಿ ಮಂಡಳದಲ್ಲಿ ಸ್ಥಾನವನ್ನು ನೀಡುವ ಕಠಿಣ ಕಾರ್ಯವನ್ನು ಮುಖ್ಯಮಂತ್ರಿಗಳು ನಿರ್ವಹಿಸುತ್ತಾರೆ.

**ಖಾತೆಗಳ ಹಂಚಿಕೆ :** ಮಂತ್ರಿಮಂಡಳದ ನಿರ್ಮಿತಿ ಮಾಡಿದನಂತರ ಆಯ್ಕೆಮಾಡಿದ ಮಂತ್ರಿಗಳಲ್ಲಿ ಮುಖ್ಯಮಂತ್ರಿಗಳು ಖಾತೆಗಳನ್ನು ಹಂಚಬೇಕಾಗುತ್ತದೆ. ಖಾತೆಗಳನ್ನು ಹಂಚುವಾಗಲೂ ಮಂತ್ರಿಗಳ ರಾಜಕೀಯ ಅನುಭವ, ಆಡಳಿತದ ಕೌಶಲ್ಯ, ಜನಮತದ ಅರಿವು, ನೇತೃತ್ವ ಇತ್ಯಾದಿ ಸಂಗತಿಗಳ ವಿಚಾರ ಮಾಡಬೇಕಾಗುತ್ತದೆ.

**ಖಾತೆಗಳಲ್ಲಿ ಸಮನ್ವಯ :** ಮುಖ್ಯಮಂತ್ರಿ ಹಾಗೂ ಅವರ ಮಂತ್ರಿಮಂಡಳವು ಸಾಮುದಾಯಿಕವಾಗಿ ವಿಧಾನಸಭೆಗೆ ಜವಾಬ್ದಾರರಾಗಿರುವುದರಿಂದ ದಕ್ಷ ಆಡಳಿತದ ಅಂತಿಮ ಜವಾಬ್ದಾರಿ ಮುಖ್ಯಮಂತ್ರಿಗಳ ಮೇಲಿರುತ್ತದೆ. ಖಾತೆ-ಖಾತೆಗಳಲ್ಲಿ ಸಹಕಾರ ಮತ್ತು ಸಮನ್ವಯವಿರದಿದ್ದರೆ

ಅದರ ಪರಿಣಾಮವು ಸರಕಾರದ ಕಾರ್ಯದ ಮೇಲಾಗುತ್ತದೆ. ಆದ್ದರಿಂದ ಮುಖ್ಯಮಂತ್ರಿಗಳಿಗೆ ಖಾತೆಗಳಲ್ಲಿಯ ವಿವಾದಗಳನ್ನು ಬಗೆಹರಿಸಿ ಎಲ್ಲ ಖಾತೆಗಳು ಒಂದೇ ದಿಶೆಯಲ್ಲಿ ಕೆಲಸ ಮಾಡುತ್ತಿವೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಬೇಕಾಗುತ್ತದೆ.

**ರಾಜ್ಯದ ನೇತೃತ್ವ :** ಪ್ರಧಾನಮಂತ್ರಿಗಳು ಯಾವ ರೀತಿ ದೇಶದ ನೇತೃತ್ವವನ್ನು ಮಾಡುತ್ತಾರೆಯೋ ಅದೇ ರೀತಿ ಮುಖ್ಯಮಂತ್ರಿಗಳು ರಾಜ್ಯದ ನೇತೃತ್ವವನ್ನು ಮಾಡುತ್ತಾರೆ. ತಮ್ಮ ರಾಜ್ಯದಲ್ಲಿಯ ಜನರ ಹಿತ, ಅವರ ಸಮಸ್ಯೆಗಳು ಮತ್ತು ಅಡಚಣೆಗಳನ್ನು ಗಮನದಲ್ಲಿರಿಸಿ ಅದಕ್ಕನುಸಾರವಾಗಿ ಮುಖ್ಯಮಂತ್ರಿಗಳು ಹೊಸ ಧೋರಣೆಗಳ ನಿರ್ಮಿತಿ ಮಾಡಬೇಕಾಗುತ್ತದೆ. ರಾಜ್ಯದಲ್ಲಿಯ ಜನರು ಮುಖ್ಯಮಂತ್ರಿಗಳ ಕಡೆಗೆ 'ತಮ್ಮ ಸಮಸ್ಯೆಗಳನ್ನು ಬಗೆಹರಿಸುವ ವ್ಯಕ್ತಿ' ಎಂಬ ದೃಷ್ಟಿಯಿಂದ ನೋಡುತ್ತಿರುತ್ತಾರೆ. ರಾಜ್ಯದ ಸಮಸ್ಯೆಗಳನ್ನು ಕೇಳಿಕೊಂಡು ಅದರ ಮೇಲೆ ಸರಕಾರದ ವತಿಯಿಂದ ಉಪಾಯ ಯೋಜನೆಯ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದರೆ ಜನರಿಗೆ ನೆಮ್ಮದಿ ದೊರೆಯುತ್ತದೆ.

ಮಹಾರಾಷ್ಟ್ರ ರಾಜ್ಯವು ಭಾರತದಲ್ಲಿಯ ಒಂದು ಪ್ರಗತಿಶೀಲ ರಾಜ್ಯವಾಗಿದೆ. ಶಿಕ್ಷಣ, ಉದ್ದಿಮೆ, ಸೇವಾಕ್ಷೇತ್ರ, ಆರೋಗ್ಯ ಸೇವೆ, ಸಾಮಾಜಿಕ ಸುರಕ್ಷತೆ ಇತ್ಯಾದಿಗಳ ವಿಷಯದಲ್ಲಿ ಅದು ಮುಂಚೂಣಿಯಲ್ಲಿದೆ. ಆತಂಕವಾದಿ ಚಟುವಟಿಕೆಗಳು ಮತ್ತು ಕೆಲವು ಭಾಗದಲ್ಲಿಯ ನಕ್ಸಲೀಯ ಚಳುವಳಿ ಇವು ನಮ್ಮ ರಾಜ್ಯದ ಮುಂದಿರುವ ಎರಡು ದೊಡ್ಡ ಆಹ್ವಾನಗಳಾಗಿವೆ.

## ಅಭ್ಯಾಸ

**1. ಕೆಳಗೆ ಕೊಟ್ಟ ಪರ್ಯಾಯಗಳಲ್ಲಿಯ ಯೋಗ್ಯ ಪರ್ಯಾಯವನ್ನು ಆಯ್ಕೆ ಮಾಡಿ ವಾಕ್ಯಗಳನ್ನು ಪುನಃ ಬರೆಯಿರಿ.**

(1) ಮಹಾರಾಷ್ಟ್ರ ಶಾಸಕಾಂಗದ ಚಳಿಗಾಲದ ಅಧಿವೇಶನವು ......... ದಲ್ಲಿ ನಡೆಯುತ್ತದೆ.
(ಅ) ಮುಂಬಯಿ (ಬ) ನಾಗಪೂರ
(ಕ) ಪುಣೆ (ಡ) ಔರಂಗಾಬಾದ

(2) ರಾಜ್ಯಪಾಲರ ನೇಮಕಾತಿಯನ್ನು ......... ಮಾಡುತ್ತಾರೆ.
(ಅ) ಮುಖ್ಯಮಂತ್ರಿಗಳು (ಬ) ಪ್ರಧಾನಮಂತ್ರಿಗಳು
(ಕ) ರಾಷ್ಟ್ರಪತಿಗಳು (ಡ) ಮುಖ್ಯನ್ಯಾಯಾಧೀಶರು

(3) ರಾಜ್ಯ ಶಾಸಕಾಂಗದ ಅಧಿವೇಶನಗಳನ್ನು ಕರೆಯುವ ಅಧಿಕಾರವು ......... ಇದೆ.
(ಅ) ಮುಖ್ಯಮಂತ್ರಿಗಳಿಗೆ (ಬ) ರಾಜ್ಯಪಾಲರಿಗೆ
(ಕ) ರಾಷ್ಟ್ರಪತಿಗಳಿಗೆ (ಡ) ಸಭಾಪತಿಗಳಿಗೆ

**2. ಕೆಳಗಿನ ಕೋಷ್ಟಕವನ್ನು ಪೂರ್ಣ ಮಾಡಿರಿ.**

| ಅ. ಕ್ರ. | ಸದನಗಳು | ಕಾಲಾವಧಿ | ಸದಸ್ಯರ ಸಂಖ್ಯೆ | ಚುನಾವಣೆಯ ಸ್ವರೂಪ | ಪ್ರಮುಖರು |
|---|---|---|---|---|---|
| 1. | ವಿಧಾನಸಭೆ | | | | |
| 2. | ವಿಧಾನ ಪರಿಷತ್ತು | | | | |

**3. ಟಿಪ್ಪಣಿ ಬರೆಯಿರಿ.**

(1) ರಾಜ್ಯಪಾಲರು (2) ಮುಖ್ಯಮಂತ್ರಿಗಳ ಕಾರ್ಯಗಳು

**4. ಕೆಳಗಿನ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಬರೆಯಿರಿ.**

(1) ವಿಧಾನಸಭೆಯ ಅಧ್ಯಕ್ಷರ ಕಾರ್ಯಗಳನ್ನು ಸ್ಪಷ್ಟಪಡಿಸಿರಿ.
(2) ಸಂವಿಧಾನವು ಭಾರತಕ್ಕಾಗಿ ಒಕ್ಕೂಟ ರಾಜ್ಯ ವ್ಯವಸ್ಥೆಯನ್ನು ಏಕೆ ಸ್ವೀಕರಿಸಿತು?
(3) ಖಾತೆಗಳನ್ನು ಹಂಚುವಾಗ ಮುಖ್ಯಮಂತ್ರಿಗಳಿಗೆ ಯಾವ ಸಂಗತಿಗಳ ವಿಚಾರ ಮಾಡಬೇಕಾಗುತ್ತದೆ?

**ಉಪಕ್ರಮ**

ಮಹಾರಾಷ್ಟ್ರ ಸರಕಾರದ ಅಧಿಕೃತ ಸಂಕೇತ ಸ್ಥಳಕ್ಕೆ ಭೇಟಿ ನೀಡಿ ವಿವಿಧ ಮಂತ್ರಿಗಳು ಹಾಗೂ ಅವರ ಖಾತೆಯ (ಇಲಾಖೆಯ) ಆಡಳಿತ ಇವುಗಳ ವಿಷಯವಾಗಿ ಮಾಹಿತಿ ಪಡೆಯಿರಿ.

AY4YKC

# 6. ನೌಕರ ಶಾಹಿ

**ಜಿಲ್ಲಾಧಿಕಾರಿಗಳು ನಿಷೇಧಾಜ್ಞೆಯ ಆದೇಶ ನೀಡಿದರು.**

ಮಹಾನಗರಪಾಲಿಕೆಯ ಆಯುಕ್ತರು ಮುಂಗಡಪತ್ರವನ್ನು ಮಂಡಿಸಿದರು.

ಹಣಕಾಸು ಸಚಿವರ ರಾಜೀನಾಮೆ

**ವಿಭಾಗೀಯ ಆಯುಕ್ತರು ಕಂದಾಯದ ಪರಿಶೀಲನೆ ಮಾಡಲಿದ್ದಾರೆ**

ಮೇಲಿನ ಚೌಕಟ್ಟಿನಲ್ಲಿ ಜಿಲ್ಲಾಧಿಕಾರಿ, ಮಹಾನಗರಪಾಲಿಕೆಯ ಆಯುಕ್ತ, ಹಣಕಾಸು ಸಚಿವ, ವಿಭಾಗೀಯ ಆಯುಕ್ತ ಇಂತಹ ಕೆಲವು ಪದವಿಗಳ ಉಲ್ಲೇಖವಿದೆ. ಇವರು ಸರಕಾರದ ಆಡಳಿತ ವ್ಯವಸ್ಥೆಯಲ್ಲಿಯ ನಾಗರಿಕ ಅಧಿಕಾರಿಗಳಾಗಿರುತ್ತಾರೆ. ಅವರು ಯಾವ ಕಾರ್ಯಗಳನ್ನು ಮಾಡುತ್ತಾರೆಂಬ ಪ್ರಶ್ನೆ ನಿಮಗೆ ಬಿದ್ದಿರಲೇಬೇಕಲ್ಲವೇ?

ಕಾರ್ಯಾಂಗದ ಕಾರ್ಯಗಳನ್ನು ಸ್ಪಷ್ಟಪಡಿಸುವ ಪಾಠದಲ್ಲಿ ಪ್ರಧಾನ ಮಂತ್ರಿ ಮತ್ತು ಅವರ ಮಂತ್ರಿಮಂಡಳವು ಹೊಸ ಕಾಯ್ದೆಯ ಮಸೂದೆಯನ್ನು ತಯಾರಿಸುತ್ತದೆ, ಅದೇ ರೀತಿ ಧೋರಣೆಗಳನ್ನು ನಿರ್ಧರಿಸುತ್ತದೆ. ಸರಕಾರದ ಧೋರಣೆಗಳನ್ನು ಪ್ರತ್ಯಕ್ಷ ಜಾರಿಯಲ್ಲಿ ತರುವ ಹಾಗೂ ಕಾರ್ಯಾಂಗದ ನಿಯಂತ್ರಣದಲ್ಲಿರುವ ಒಂದು ಆಡಳಿತ ವ್ಯವಸ್ಥೆಯು 'ನೌಕರಶಾಹಿ' ಎಂದು ಗುರುತಿಸಲ್ಪಡುತ್ತದೆ. ಈ ಪಾಠದಲ್ಲಿ ನಾವು ನೌಕರಶಾಹಿಯ ಮಹತ್ವವನ್ನು ತಿಳಿದುಕೊಳ್ಳುವವರಿದ್ದೇವೆ.

ಯಾವುದೇ ದೇಶದಲ್ಲಿಯ ಸರಕಾರವು ಎರಡು ಪ್ರಕಾರದ ಮೂಲಭೂತ ಕಾರ್ಯಗಳನ್ನು ನಿರ್ವಹಿಸಬೇಕಾಗುತ್ತದೆ.

(1) ಪರಕೀಯ ಆಕ್ರಮಣದಿಂದ ಮತ್ತು ಅಂತರ್ಗತ ಸುರಕ್ಷತೆಯ ಬಗೆಗಿನ ಗಂಡಾಂತರದಿಂದ ದೇಶದ ಸಂರಕ್ಷಣೆ ಮಾಡಿ ನಾಗರಿಕರನ್ನು ಸುರಕ್ಷಿತವಾಗಿರಿಸುವುದು.

(2) ನಾಗರಿಕರಿಗೆ ತಮ್ಮ ಹಾಗೂ ಸಮಾಜದ ವಿಕಾಸವು ಸಾಧ್ಯವಾಗುವಂತೆ ಅವರಿಗೆ ವಿವಿಧ ಪ್ರಕಾರದ ಸೇವೆಗಳನ್ನು ಪೂರೈಸಿ ಅವರ ದೈನಂದಿನ ಜೀವನವನ್ನು ಹೆಚ್ಚು ಸುಗಮಗೊಳಿಸುವುದು.

ಇವುಗಳಲ್ಲಿಯ ಮೊದಲನೆಯ ಕಾರ್ಯಕ್ಕಾಗಿ ದೇಶದ ಸಂರಕ್ಷಣ ವ್ಯವಸ್ಥೆಯು ಸಿದ್ಧವಾಗಿರುತ್ತದೆ. ಈ ಸೇವೆಗಳು ಅಂತರ್ಗತ ಸುರಕ್ಷತೆಗಾಗಿ ನಾಗರಿಕ ಸೇವೆಗೆ ಸಹಾಯ ಮಾಡುತ್ತವೆ. ಅದರಲ್ಲಿಯ ಸೇವೆಗಳಿಗೆ ನಾವು 'ಸೈನಿಕ ಸೇವೆ' ಎನ್ನುತ್ತೇವೆ.

ಎರಡನೆಯ ಕಾರ್ಯಕ್ಕಾಗಿ, ಆಡಳಿತ ವ್ಯವಸ್ಥೆಯನ್ನು ನಿರ್ಮಿಸಲಾಗುತ್ತದೆ, ಅದಕ್ಕೆ ನಾವು 'ನಾಗರಿಕಸೇವೆ' ಎನ್ನುತ್ತೇವೆ. ನಾಗರಿಕ ಸೇವಕರ ಈ ವಿಶಾಲ ವ್ಯವಸ್ಥೆಗೆ ನೌಕರಶಾಹಿ ಎಂದು ಕರೆಯಲಾಗುತ್ತದೆ.

ಸಂಸದೀಯ ಪ್ರಜಾಪ್ರಭುತ್ವದಲ್ಲಿ ಜನರಿಂದ ಆಯ್ಕೆಯಾದ ಪ್ರತಿನಿಧಿಗಳ ಮತ್ತು ಮಂತ್ರಿಗಳ ಮೇಲೆ ಆಡಳಿತದ ಜವಾಬ್ದಾರಿ ಇರುತ್ತದೆ. ಸರಕಾರದ ಕಾರ್ಯಗಳು ವಿವಿಧ ಖಾತೆಗಳಿಂದ ನಿರ್ವಹಿಸಲ್ಪಡುತ್ತವೆ. ಪ್ರತಿಯೊಂದು ಖಾತೆಗೆ ಒಬ್ಬ ಮಂತ್ರಿ ಇರುತ್ತಾನೆ ಹಾಗೂ ಅವನು ಆ ಖಾತೆಯ ರಾಜಕೀಯ ಪ್ರಮುಖನಾಗಿರುತ್ತಾನೆ. ಜನತೆಯ ಪ್ರತಿನಿಧಿಯಾಗಿರುವುದರಿಂದ ಮಂತ್ರಿಯು ಜನಹಿತಕ್ಕೆ ಪ್ರಾಧಾನ್ಯ ನೀಡಿ ತನ್ನ ಖಾತೆಯ ಆಡಳಿತವನ್ನು ನಡೆಸಬೇಕಾಗುತ್ತದೆ. ಮಂತ್ರಿಯು ಆ ವಿಷಯದಲ್ಲಿಯ ತಜ್ಞನಿರಲಿಕ್ಕಿಲ್ಲ, ಆದರೆ ಅವನಿಗೆ ವ್ಯಾಪಕ ಜನಹಿತವು ಯಾವುದರಲ್ಲಿದೆ ಎಂಬುದರ ಅರಿವು ಇರುತ್ತದೆ. ಮಂತ್ರಿಯ ಖಾತೆಯ ಸಚಿವರು ಅವಶ್ಯಕವಾದ ತಜ್ಞತೆಯನ್ನು ಇಲ್ಲವೆ ಯೋಗ್ಯ ಸಲಹೆಯನ್ನು ನೀಡುತ್ತಾರೆ. ಈ ಸಚಿವರು ನಾಗರಿಕ ಸೇವೆಯಿಂದ ನೇಮಕವಾಗುತ್ತಾರೆ. ಈ ರೀತಿ ಜನರ ಇಚ್ಛೆ ಮತ್ತು ಆಡಳಿತದ ತಜ್ಞತೆ ಇವುಗಳ ಸಮನ್ವಯವನ್ನು ಸಂಸದೀಯ ಪದ್ಧತಿಯಲ್ಲಿ ಸಾಧಿಸಲಾಗುತ್ತದೆ.

## ನೌಕರಶಾಹಿಯ ಸ್ವರೂಪ

- **ಶಾಶ್ವತ ವ್ಯವಸ್ಥೆ:** ಕರವನ್ನು ಸಂಗ್ರಹಿಸುವ, ಪರಿಸರದ ರಕ್ಷಣೆ ಮಾಡುವ, ಕಾಯ್ದೆ ಮತ್ತು ಸುವ್ಯವಸ್ಥೆಯನ್ನು ಕಾಪಾಡುವ, ನಮಗೆ ಸಾಮಾಜಿಕ ಸುರಕ್ಷತೆಯನ್ನು ಒದಗಿಸುವ ನೌಕರಶಾಹಿಯು ತನ್ನ ಕೆಲಸವನ್ನು ನಿರಂತರವಾಗಿ ಮಾಡುತ್ತಿರುತ್ತದೆ. ಇದಕ್ಕೆ ಕಾರಣವೇನೆಂದರೆ ಅದು ಶಾಶ್ವತ ಸ್ವರೂಪದ್ದಾಗಿರುತ್ತದೆ. ಪ್ರತಿಯೊಂದು ಚುನಾವಣೆಯ ನಂತರ ಹೊಸ ಪ್ರಧಾನ ಮಂತ್ರಿ ಮತ್ತು ಮಂತ್ರಿ ಮಂಡಳವು ಅಧಿಕಾರಕ್ಕೆ ಬರಬಹುದು. ಆದರೆ ಅವರ ನಿಯಂತ್ರಣದಲ್ಲಿಯ ನೌಕರಶಾಹಿಯು ಬದಲಾಗುವುದಿಲ್ಲ. ಅದರ ಅಸ್ತಿತ್ವವು ಶಾಶ್ವತ ಸ್ವರೂಪದ್ದಾಗಿರುತ್ತದೆ.

- **ರಾಜಕೀಯ ದೃಷ್ಟಿಯಿಂದ ತಟಸ್ಥ:** ನೌಕರಶಾಹಿಯು ರಾಜಕೀಯ ದೃಷ್ಟಿಯಿಂದ ತಟಸ್ಥವಾಗಿರುತ್ತದೆ. ಇದರ ಅರ್ಥವೇನೆಂದರೆ, ಯಾವುದೇ ಪಕ್ಷದ ಸರಕಾರವು ಅಧಿಕಾರಕ್ಕೆ ಬರಲಿ ಆ ಸರಕಾರದ ಧೋರಣೆಗಳನ್ನು ನೌಕರಶಾಹಿಯು ಅಷ್ಟೇ ದಕ್ಷತೆಯಿಂದ ಮತ್ತು ನಿಷ್ಠೆಯಿಂದ ಜಾರಿಗೆ ತರಬೇಕು. ಆ ಸಂದರ್ಭದಲ್ಲಿ ನಾಗರಿಕ ಸೇವಕರು ರಾಜಕೀಯ ಪಾತ್ರವನ್ನು ವಹಿಸಬಾರದು ಅಥವಾ ತಮ್ಮ ರಾಜಕೀಯ

ವಿಚಾರಕ್ಕನುಸಾರವಾಗಿ ಕೆಲಸ ಮಾಡಬಾರದು. ಯಾವುದೊಂದು ಪಕ್ಷವು ಚುನಾವಣೆಯಲ್ಲಿ ಸೋತುದರಿಂದಾಗಿ ಅಧಿಕಾರದಿಂದ ದೂರವಾಗುತ್ತದೆ ಹಾಗೂ ಬೇರೆ ಪಕ್ಷದ ಸರಕಾರವು ಅಧಿಕಾರಕ್ಕೆ ಬರುತ್ತದೆ. ಹಿಂದಿನ ಸರಕಾರದ ಕೆಲವು ಧೋರಣೆಗಳನ್ನು ನಂತರದ ಸರಕಾರವು ಬದಲಿಸಬಹುದು. ಇಂಥ ಪರಿಸ್ಥಿತಿಯಲ್ಲಿ ನೌಕರಶಾಹಿಯು ತಟಸ್ಥವಾಗಿದ್ದು ತನ್ನ ಜವಾಬ್ದಾರಿಯನ್ನು ನಿರ್ವಹಿಸಬೇಕು.

- **ಅನಾಮಿಕತೆ:** ಅನಾಮಿಕತೆ ಎಂದರೆ ಯಾವುದೊಂದು ಧೋರಣೆಯ ಯಶಾಪಯಶಕ್ಕೆ ನೌಕರಶಾಹಿಯನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡದೆ ಅದರ ಸ್ವರೂಪವನ್ನು ಅನಾಮಿಕವಾಗಿಡುವುದು ಎಂದರ್ಥ. ತಮ್ಮ ಖಾತೆಯ ಆಡಳಿತವನ್ನು ದಕ್ಷತೆಯಿಂದ ನಡೆಸುವುದು ಮಂತ್ರಿಗಳ ಜವಾಬ್ದಾರಿಯಾಗಿರುತ್ತದೆ. ಯಾವುದೊಂದು ಖಾತೆಯ ಆಯೋಗ್ಯ ಆಡಳಿತಕ್ಕೂ ಮಂತ್ರಿಗಳನ್ನೇ ಜವಾಬ್ದಾರರೆಂದು ತಿಳಿಯಲಾಗುತ್ತದೆ. ನಾಗರಿಕ ಸೇವಕರ ಮೇಲೆ ಜಾಹೀರು ರೀತಿಯಿಂದ ಟೀಕೆಯಾಗುವುದಿಲ್ಲ. ಈ ಖಾತೆಯ ದುರ್ವ್ಯವಹಾರಕ್ಕಾಗಿ ಮಂತ್ರಿಗಳನ್ನು ಜವಾಬ್ದಾರರನ್ನಾಗಿ ಮಾಡಲಾಗುತ್ತದೆ. ಈ ಸಂದರ್ಭದಲ್ಲಿಯ ಉತ್ತರದಾಯಿತ್ವವನ್ನು ಮಂತ್ರಿಗಳು ಸ್ವತ: ಸ್ವೀಕರಿಸುತ್ತಾರೆ ಹಾಗೂ ನೌಕರಶಾಹಿಗೆ ಸಂರಕ್ಷಣೆ ನೀಡುತ್ತಾರೆ.

## ಭಾರತದಲ್ಲಿಯ ನೌಕರಶಾಹಿಯ ಮಹತ್ವ

ಭಾರತದಲ್ಲಿಯ ನೌಕರಶಾಹಿಯ ರಚನೆಯು ಅತ್ಯಂತ ವ್ಯಾಪಕ ಮತ್ತು ಜಟಿಲವಾಗಿದೆ. ಸ್ವಾತಂತ್ರ್ಯೋತ್ತರ ಕಾಲದಿಂದ ಉಂಟಾದ ಅನೇಕ ಮಹತ್ವದ ಬದಲಾವಣೆಗಳನ್ನು ಈ ವ್ಯವಸ್ಥೆಯು ಪ್ರಭಾವಶಾಲಿಯಾಗಿ ಜಾರಿಯಲ್ಲಿ ತಂದಿದೆ. ಇಂದು ನಮಗೆ ಕಾಣಿಸುವ ಅನೇಕ ಉತ್ತಮ ಸಾಮಾಜಿಕ ಬದಲಾವಣೆಗಳ ಒಂದು ಕಾರಣವೆಂದರೆ ಭಾರತೀಯ ನೌಕರಶಾಹಿಯು ಧೋರಣೆಗಳನ್ನು ಜಾರಿಗೊಳಿಸುವದರ ಮೂಲಕ ಅವುಗಳನ್ನು ಸಾಮಾನ್ಯ ನಾಗರಿಕರ ವರೆಗೆ ತಲುಪಿಸಿದೆ. ನೌಕರಶಾಹಿಯಿಂದ ರಾಜ್ಯವ್ಯವಸ್ಥೆಗೆ ಸ್ಥೈರ್ಯ ದೊರೆಯುತ್ತದೆ. ನೀರು ಸರಬರಾಜು ಸಾರ್ವಜನಿಕ ಸ್ವಚ್ಛತೆ, ಸಾರಿಗೆ, ಆರೋಗ್ಯ, ಕೃಷಿ ಸುಧಾರಣೆ, ಪ್ರದೂಷಣೆಗೆ ಪ್ರತಿಬಂಧ ಇಂಥ ಅನೇಕ ಸೇವೆಗಳು ನಮಗೆ ಸತತವಾಗಿ ತಡೆಯಿಲ್ಲದೆ ದೊರೆಯುತ್ತಿರುತ್ತವೆ. ಆದರಿಂದಾಗಿ ಸಮುದಾಯದ ದೈನಂದಿನ ಜೀವನಕ್ಕೆ ಸ್ಥೈರ್ಯ ಲಭಿಸುತ್ತದೆ.

ಎರಡನೆಯದಾಗಿ ನೌಕರಶಾಹಿಯೂ ಕೂಡ ಸಮಾಜ ಪರಿವರ್ತನೆಯ ಒಂದು ಸಾಧನವಾಗಿದೆ. ಮಹಿಳೆಯರ ಸಬಲೀಕರಣ, ಮಕ್ಕಳ ಸಂರಕ್ಷಣೆ, ದುರ್ಬಲ ಘಟಕಗಳನ್ನು ಕುರಿತ ಯೋಜನೆಗಳು ಇತ್ಯಾದಿಗಳ ವಿಷಯದಲ್ಲಿ ಸರಕಾರವು ಮಾಡಿದ ಕಾಯ್ದೆಗಳನ್ನು ಜಾರಿಗೊಳಿಸುವ ಕೆಲಸವನ್ನು ನೌಕರಶಾಹಿಯು ಮಾಡುತ್ತದೆ. ಧೋರಣೆಗಳನ್ನು ಜಾರಿಗೊಳಿಸುವುದರಿಂದ ಸಾಮಾಜಿಕ ಬದಲಾವಣೆಗಳು ಉಂಟಾಗುತ್ತವೆ.

ಸಮಾಜವನ್ನು ಪ್ರಜಾಪ್ರಭುತ್ವವಾದಿಯನ್ನಾಗಿ ಮಾಡುವ ಪ್ರಕ್ರಿಯೆಯಲ್ಲಿಯೂ ನೌಕರಶಾಹಿಯು ಮಹತ್ವದ ಪಾತ್ರವನ್ನು ವಹಿಸುತ್ತದೆ. ಮೀಸಲಾತಿಯ ಧೋರಣೆಯನ್ನು ಹಮ್ಮಿಕೊಂಡಿದ್ದರಿಂದ ಅನೇಕ ದುರ್ಲಕ್ಷಿತ ಸಮಾಜ ಘಟಕಗಳು ಮುಖ್ಯ ಪ್ರವಾಹದಲ್ಲಿ ಬಂದಿವೆ. ನಿರ್ಣಯ ಪ್ರಕ್ರಿಯೆಯಲ್ಲಿಯ ಅವರ ಸಹಭಾಗಿತ್ವವೂ ಹೆಚ್ಚಿದೆ. ಆದರಿಂದಾಗಿ ಸಮಾಜವನ್ನು ಪ್ರಜಾಪ್ರಭುತ್ವವಾದಿಯನ್ನಾಗಿ ಮಾಡಲು ಯಾವ ರೀತಿ ಪ್ರಗತಿಪರ ಕಾಯ್ದೆ ಮತ್ತು ಧೋರಣೆಗಳ ಅವಶ್ಯಕತೆ ಇರುತ್ತದೆಯೋ ಅದೇ ರೀತಿ ನೌಕರಶಾಹಿಯ ದಕ್ಷ ಸಹಭಾಗಿತ್ವದ ಅವಶ್ಯಕತೆಯೂ ಇರುತ್ತದೆ.

**ನಾಗರಿಕ ಸೇವೆಗಳ ಪ್ರಕಾರಗಳು:** ಭಾರತದಲ್ಲಿಯ ನಾಗರಿಕ ಸೇವೆಗಳಲ್ಲಿ ಮೂರು ಪ್ರಕಾರಗಳಿವೆ.

**(1) ಅಖಿಲ ಭಾರತೀಯ ಸೇವೆ:** ಇದರಲ್ಲಿ ಭಾರತೀಯ ಆಡಳಿತಾತ್ಮಕ ಸೇವೆ (IAS), ಭಾರತೀಯ ಪೋಲೀಸ ಸೇವೆ (IPS) ಹಾಗೂ ಭಾರತೀಯ ಅರಣ್ಯ ಸೇವೆ (IFS)ಗಳ ಸಮಾವೇಶವಾಗುತ್ತದೆ.

**(2) ಕೇಂದ್ರೀಯ ಸೇವೆ:** ಇದರಲ್ಲಿಯ ಸೇವೆಗಳು ಕೇಂದ್ರ ಸರಕಾರದ ಅಧಿಕಾರ ಕ್ಷೇತ್ರದಲ್ಲಿ ಇರುತ್ತವೆ. ಇದರಲ್ಲಿ ಭಾರತೀಯ ವಿದೇಶಿ ಸೇವೆ (IFS), ಭಾರತೀಯ ಕಂದಾಯ ಸೇವೆ (IRS) ಇತ್ಯಾದಿಗಳ ಸಮಾವೇಶವಾಗುತ್ತದೆ.

**(3) ರಾಜ್ಯಸೇವೆ:** ಇವು ರಾಜ್ಯ ಸರಕಾರದ ಅಧಿಕಾರ ಕ್ಷೇತ್ರದಲ್ಲಿ ಇರುತ್ತವೆ. ಉಪಜಿಲ್ಲಾಧಿಕಾರಿ ಕ್ಷೇತ್ರ ಅಭಿವೃದ್ಧಿ ಅಧಿಕಾರಿ (ಗಟ ವಿಕಾಸ ಅಧಿಕಾರಿ) ತಹಸೀಲುದಾರ ಮುಂತಾದ ಆಡಳಿತಾಧಿಕಾರಿಗಳನ್ನು ಸ್ಪರ್ಧಾ ಪರೀಕ್ಷೆಗಳ ಮುಖಾಂತರ ಆಯ್ಕೆ ಮಾಡಲಾಗುತ್ತದೆ.

ಗುಣಮಟ್ಟ, ಕಾರ್ಯಸಮರ್ಥತೆ ಈ ಮಾನದಂಡಗಳ ಆಧಾರದ ಮೇಲಿಂದ ನಾಗರಿಕ ಸೇವಕರ ಆಯ್ಕೆಯಾಗಬೇಕೆಂದು ಭಾರತದ ಸಂವಿಧಾನವು ಲೋಕಸೇವಾ ಆಯೋಗದಂತಹ ಸ್ವತಂತ್ರ ವ್ಯವಸ್ಥೆಗಳನ್ನು ನಿರ್ಮಿಸಿದೆ.ಕೇಂದ್ರೀಯ ಲೋಕಸೇವಾ ಆಯೋಗವು (UPSC) ಅಖಿಲ ಭಾರತೀಯ ಸೇವೆ ಮತ್ತು ಕೇಂದ್ರೀಯ ಸೇವೆಗಳಿಗಾಗಿ ಸ್ಪರ್ಧಾ ಪರೀಕ್ಷೆಗಳನ್ನು ಆಯೋಜಿಸಿ ಅಭ್ಯರ್ಥಿಗಳ ಆಯ್ಕೆ ಮಾಡುತ್ತದೆ ಹಾಗೂ ಅವರ ನೇಮಕಾತಿಯನ್ನು ಸರಕಾರವು ಮಾಡುತ್ತದೆ. ಮಹಾರಾಷ್ಟ್ರ ಲೋಕಸೇವಾ ಆಯೋಗವು (MPSC) ಮಹಾರಾಷ್ಟ್ರದಲ್ಲಿಯ ನಾಗರಿಕ ಸೇವೆಗಳಿಗಾಗಿ ಸ್ಪರ್ಧಾಪರೀಕ್ಷೆಗಳ ಮೂಲಕ ಅಭ್ಯರ್ಥಿಗಳ ಆಯ್ಕೆ ಮಾಡುತ್ತದೆ ಹಾಗೂ ಅವರ ನೇಮಕಾತಿಯ ಬಗ್ಗೆ ಸರಕಾರಕ್ಕೆ ಶಿಫಾರಸು ಮಾಡುತ್ತದೆ.

ನೌಕರಶಾಹಿ ಮತ್ತು ನಾಗರಿಕ ಸೇವೆಗಳಲ್ಲಿಯೂ ಸಮಾಜದಲ್ಲಿಯ ಸರ್ವ ಘಟಕಗಳಿಗೆ ಅವಕಾಶ ದೊರೆಯಬೇಕೆಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ, ಮಹಿಳೆಯರು, ಇತರ ಹಿಂದುಳಿದ ವರ್ಗ ಹಾಗೂ ವಿಕಲಚೇತನರಿಗೆ ಮೀಸಲಾತಿಯನ್ನು ನೀಡಿ ಸೇವೆಗಳಲ್ಲಿ ಭರ್ತಿಯಾಗುವ ಅವಕಾಶವನ್ನು ನೀಡಲಾಗಿದೆ. ಸಾಮಾಜಿಕ ವಿಷಮತೆಯಿಂದಾಗಿ ದುರ್ಬಲ ಘಟಕಗಳು ನಾಗರಿಕ ಸೇವೆಯಲ್ಲಿಯ ಅವಕಾಶಗಳಿಂದ ವಂಚಿತರಾಗಿ ಉಳಿಯಬಾರದೆಂದು ಈ ಏರ್ಪಾಟು ಮಾಡಲಾಗಿದೆ.

**ಮಂತ್ರಿಗಳು ಮತ್ತು ನಾಗರಿಕ ಸೇವಕರು:** ಮಂತ್ರಿ ಮತ್ತು ಆ ಖಾತೆಯ ನಾಗರಿಕ ಸೇವಕರು ಇಲ್ಲವೆ ಸಚಿವರು, ಉಪಸಚಿವ ಸ್ಥಾನದಲ್ಲಿಯ ವ್ಯಕ್ತಿಗಳು - ಇವರ ನಡುವಣ ಸಂಬಂಧವು ಯಾವ ಪ್ರಕಾರದ್ದಾಗಿರುತ್ತದೆಯೋ ಅದರ ಮೇಲೆಯೂ ಆ ಖಾತೆಯ ಕಾರ್ಯಸಮರ್ಥತೆಯು ಅವಲಂಬಿಸಿರುತ್ತದೆ. ಖಾತೆಯ ವಿಷಯದ ನಿರ್ಣಯವನ್ನು ಮಂತ್ರಿಗಳು ತೆಗೆದು ಕೊಳ್ಳುತ್ತಾರೆ ಆದರೆ ಅವರಿಗೆ ನಿರ್ಣಯವನ್ನು ತೆಗೆದುಕೊಳ್ಳಲು ಅವಶ್ಯಕವಾದ ಎಲ್ಲ ಮಾಹಿತಿಯನ್ನು ನಾಗರಿಕ ಸೇವಕರು ನೀಡುತ್ತಾರೆ. ಮಾಹಿತಿಯ ಮೇಲೆ ನಾಗರಿಕ ಸೇವಕರ ಅರ್ಥಾತ್ ನೌಕರಶಾಹಿಯ ಪೂರ್ಣ ನಿಯಂತ್ರಣವಿರುತ್ತದೆ. ಯಾವುದೊಂದು ಯೋಜನೆಗಾಗಿ ಎಷ್ಟು ಹಣಕಾಸಿನ ಏರ್ಪಾಟು ಉಪಲಬ್ಧವಿದೆಯೆಂಬುದನ್ನು ನಾಗರಿಕ ಸೇವಕರೇ ಹೇಳಬಲ್ಲರು. ಧೋರಣೆಗಳ ಯಶಾಪಯಶದ ಇತಿಹಾಸವು ಅವರಿಗೆ ಗೊತ್ತಿರುತ್ತದೆ. ಅದರಿಂದ ಮಂತ್ರಿಗಳು ದೊಡ್ಡ ಪ್ರಮಾಣದಲ್ಲಿ ನಾಗರಿಕ ಸೇವಕರ ಮೇಲೆ ಅವಲಂಬಿಸಿರುತ್ತಾರೆ. ಮಂತ್ರಿಗಳು ಕೂಡ ನಾಗರಿಕ ಸೇವಕರೊಂದಿಗೆ ಸಂವಾದವನ್ನಿಟ್ಟರೆ ಹಾಗೂ ಪರಸ್ಪರರ ಸಂಬಂಧದಲ್ಲಿ ವಿಶ್ವಾಸ ಮತ್ತು ಪಾರದರ್ಶಕತೆಯಿದ್ದರೆ ಖಾತೆಯ ಆಡಳಿತವು ಸಮರ್ಥವಾಗಿ ನಡೆಯಬಲ್ಲದು.

## ಅಭ್ಯಾಸ

**1. ಕೆಳಗಿನ ವಾಕ್ಯಗಳು ಸರಿ ಅಥವಾ ತಪ್ಪು ಎಂಬುದನ್ನು ಗುರುತಿಸಿ ತಪ್ಪಾದ ವಾಕ್ಯಗಳನ್ನು ತಿದ್ದಿ ಬರೆಯಿರಿ.**

(1) ಸಂಸದೀಯ ಪ್ರಜಾಪ್ರಭುತ್ವದಲ್ಲಿ ಜನರಿಂದ ಆಯ್ಕೆಯಾದ ಪ್ರತಿನಿಧಿ ಮತ್ತು ಮಂತ್ರಿಗಳ ಮೇಲೆ ಆಡಳಿತದ ಜವಾಬ್ದಾರಿಯಿರುತ್ತದೆ.

(2) ಕೇಂದ್ರೀಯ ಲೋಕಸೇವಾ ಆಯೋಗವು (UPSC) ಮಹಾರಾಷ್ಟ್ರದಲ್ಲಿಯ ನಾಗರಿಕ ಸೇವೆಗಳಿಗಾಗಿ ಸ್ಪರ್ಧಾ ಪರೀಕ್ಷೆಯ ಮುಖಾಂತರ ಅಭ್ಯರ್ಥಿಗಳ ಆಯ್ಕೆ ಮಾಡುತ್ತದೆ.

**2. ಕೆಳಗಿನ ವಿಧಾನಗಳನ್ನು ಕಾರಣಸಹಿತ ಸ್ಪಷ್ಟಪಡಿಸಿರಿ.**

(1) ನಾಗರಿಕ ಸೇವೆಗಳಲ್ಲಿಯೂ ಮೀಸಲಾತಿಯ ಧೋರಣೆಯಿದೆ.


(2) ನಾಗರಿಕ ಸೇವಕರು ರಾಜಕೀಯ ದೃಷ್ಟಿಯಿಂದ ತಟಸ್ಥರಾಗಿರುವುದು ಅವಶ್ಯಕವಾಗಿದೆ.

**3. ಕೆಳಗಿನ ಪ್ರಶ್ನೆಗಳಿಗೆ 25ರಿಂದ 30 ಶಬ್ದಗಳಲ್ಲಿ ಉತ್ತರ ಬರೆಯಿರಿ**

(1) ಖಾತೆಯ ಆಡಳಿತವು ಸಮರ್ಥವಾಗಿ ನಡೆಯುವುದರ ಹಿಂದಿನ ಮಂತ್ರಿ ಮತ್ತು ನಾಗರಿಕ ಸೇವಕರ ಪಾತ್ರವನ್ನು ಸ್ಪಷ್ಟಪಡಿಸಿರಿ.

(2) ನೌಕರಶಾಹಿಯಿಂದ ರಾಜ್ಯ ವ್ಯವಸ್ಥೆಗೆ ಸ್ಥೈರ್ಯ ಹೇಗೆ ದೊರೆಯುತ್ತದೆಯೆಂಬುದನ್ನು ಸ್ಪಷ್ಟಪಡಿಸಿರಿ.

**4. ಕೆಳಗಿನ ಕಲ್ಪನಾ ಚಿತ್ರವನ್ನು ಪೂರ್ಣಮಾಡಿರಿ.**




**5. ನೌಕರಶಾಹಿಯ ಸ್ವರೂಪವನ್ನು ಸ್ಪಷ್ಟಪಡಿಸಿರಿ.**


**ಉಪಕ್ರಮ**


ನಿಮ್ಮ ಪರಿಸರದಲ್ಲಿಯ ನಾಗರಿಕ ಸೇವೆಯಲ್ಲಿ ಕಾರ್ಯನಿರತರಾಗಿರುವ ಒಬ್ಬ ಅಧಿಕಾರಿಯ ಸಂದರ್ಶನ ಪಡೆಯುವುದಕ್ಕಾಗಿ ಪ್ರಶ್ನಾವಳಿಯನ್ನು ತಯಾರಿಸಿರಿ ಮತ್ತು ಅವರ ಸಂದರ್ಶನ ಪಡೆಯಿರಿ.


AYDULZ

# छत्रपती शिवाजी महाराज स्मृतिग्रंथ

- सामान्य रयतेच्या कल्याणासाठी स्थापन केलेल्या स्वराज्य स्थापनेची कथा उलगडणारे पुस्तक.
- छत्रपती शिवाजी महाराजांच्या उत्तुंग कार्य व त्यामागची तेवढीच उत्तुंग व उदात्त भूमिका वाचकांसमोर आणणारे प्रेरणादायी वाचन साहित्य.
- इतिहास वाचनासाठी पूरक असे संदर्भ पुस्तक.







- इतिहास वाचनासाठी पूरक अशी संदर्भ पुस्तके.
- निवडक लेखक, इतिहासकारांचे प्रेरणादायी लेख.

**पुस्तक मागणीसाठी www.ebalbharati.in, www.balbharati.in संकेतस्थळावर भेट द्या.**

**साहित्य पाठ्यपुस्तक मंडळाच्या विभागीय भांडारांमध्ये विक्रीसाठी उपलब्ध आहे.**

ebalbharati

विभागीय भांडारे संपर्क क्रमांक : पुणे - ☎ २५६५९४६५, कोल्हापूर- ☎ २४६८५७६, मुंबई (गोरेगाव) - ☎ २८७७१८४२, पनवेल - ☎ २७४६२६४६५, नाशिक - ☎ २३९१५११, औरंगाबाद - ☎ २३३२१७१, नागपूर - ☎ २५४७७१६/२५२३०७८, लातूर - ☎ २२०९३०, अमरावती - ☎ २५३०९६५









ಮಹಾರಾಷ್ಟ್ರ ರಾಜ್ಯ ಪಾಠ್ಯಪುಸ್ತಕ ನಿರ್ಮಿತಿ ಮತ್ತು ಅಭ್ಯಾಸಕ್ರಮ ಸಂಶೋಧನ ಮಂಡಳ, ಪುಣೆ - 4.

इतिहास व नागरिकशास्त्र इ. ८ वी (कन्नड माध्यम )

₹ 42.00